ವೈಸ್ ಛೇರ್ಮನ್ : ಈಗ ಮೇಲ್ಮನೆಯ ಸರ್ಕಾರಿ ಮುಖ್ಯ ಸಚೇತಕರು ಭೋಜನ ಕೂಟಕ್ಕೆ ನಮ್ಮ ಸದನದ ಸದಸ್ಯರನ್ನು ಆಹ್ವಾನಿಸಿದ್ದಾರೆ. ಈಗ ಸದನವನ್ನು ಮಧ್ಯಾಹ್ನ 2-45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

ಸಭೆಯು 1.54 ಗಂಟೆಗೆ ಮುಗಿದು ಮತ್ತೆ ಸದನವು 2-45 ಗಂಟೆಗೆ ಸೇರುವುದು.

ಸದನವು ಪುನಃ ಮಧ್ಯಾಹ್ನ 2 ಗಂಟೆ 45 ನಿಮಿಷಕ್ಕೆ ಸಮಾವೇಶಗೊಂಡಿತು

ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು

7. ಪ್ರಕಟಣೆ

ಅಧ್ಯಕ್ಷರು: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿರುತ್ತದೆ. " ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2006ನೇ ಸಾಲಿನ ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಈ ದಿನ ದಿನಾಂಕ 28.3.06 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆ" ಯೆಂದು ತಿಳಿಸಿರುತ್ತಾರೆ.

ಅಧ್ಯಕ್ಷರು : ಈಗ ರೇವಣ್ಣನವರು ಒಂದು 10 ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು. ನೀವು ಅಪರೂಪಕ್ಕೆ ಮಾತನಾಡುತ್ತಿದ್ದೀರಿ.

8. ವಿತ್ತೀಯ ಕಾರ್ಯಕಲಾಪ.

೨೦೦೬-೦೭ ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರಿದ ಚರ್ಚೆ

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ): ಮಾನ್ಯ ಸಭಾಧ್ಯಕ್ಷರೆ, ೨೦೦೬-೦೭ನೇ ಸಾಲಿನ ಬಜೆಟ್ ಮತ್ತು ಸಪ್ಲಿಮೆಂಟರಿ ಬಜೆಟ್ ಇವೆರಡರ ಬಗ್ಗೆಯೂ ಮಾತನಾಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸಪ್ಲಿಮೆಂಟರಿ ಬಜೆಟ್ ಮುಗಿದುಹೋಯಿತು.

ಶ್ರೀ ಹೆಚ್.ಡಿ.ರೇವಣ್ಣ: ಅದು ಮುಗಿದು ಹೋದರೆ ಬಜೆಟ್ ಮೇಲೆ ಮಾತನಾಡೋಣ, ಅದರಲ್ಲೇ ಬೇಕಾದರೆ, ಸಾಹೇಬರು ಉತ್ತರ ಕೊಡುವಾಗ ಕೊಡಲಿ. ನಮ್ಮದೇನೂ ಅಭ್ಯಂತರವಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಇವೊತ್ತಿನ ದಿವಸ ತಾವು ನಮ್ಮನ್ನ ಗುರ್ತಿಸಿ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ಕೃತಜ್ಞತೆ ಸಲ್ಲಿಸುತ್ತಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಇದು ಅನ್ಯಾಯ ನಮ್ಮನ್ನು ಗುರ್ತಿಸಿದ್ದೀರೆಂದು ನೀವು ಈಗ ಹೇಳುವುದೇ? ರೇವಣ್ಣನವರೇ, ನಿಮ್ಮನ್ನು ಯಾರಾದರೂ ಗುರ್ತಿಸಬೇಕೇ?

ಅಧ್ಯಕ್ಷರುಃ ರೇವಣ್ಣನವರು ಬಹಳ ಅಪರೂಪಕ್ಕೆ ಮಾತನಾಡುತ್ತಾರೆ. ಮಾತನಾಡಲು ನಿಂತಿದ್ದಾರೆ, ಮಾತನಾಡಲಿ. ಮಾತನಾಡುವವರು ಇನ್ನೂ ಬಹಳಷ್ಟು ಸದಸ್ಯರಿದ್ದಾರೆ. ಈಗ 4.30 ಗಂಟೆಗೆ ಉತ್ತರ ಆರಂಭವಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇವೊತ್ತಿನ ದಿವಸ ಸನ್ಮಾನ್ಯ ಯಡಿಯೂರಪ್ಪ ಸಾಹೇಬರ ನೇತೃತ್ವದಲ್ಲಿ ೨೦೦೬-೦೭ನೇ ಸಾಲಿನ ಆಯವ್ಯಯ ಮಂಡಿಸಿರುವುದು ನಿಜಕ್ಕೂ ಸಂತೋಷ. ಯಡಿಯೂರಪ್ಪನವರಿಗೆ ಎಲ್ಲಾ ರೀತಿಯ ಅನುಭವಗಳಿವೆ. ಈ ರಾಜ್ಯದಲ್ಲಿ ಅವರು ಮೂರು ಜನ ಮುಖ್ಯಮಂತ್ರಿಗಳನ್ನು ನೋಡಿದ್ದಾರೆ. ಮತ್ತು ಅತಿ ಹೆಚ್ಚು ಕಾಲ ವಿರೋಧ ಪಕ್ಷದ ನಾಯಕರಾಗಿ ಯಾರಾದರೂ ಸೇವೆ ಸಲ್ಲಿಸಿದ್ದರೆ, ಅದು ಯಡಿಯೂರಪ್ಪನವರು ಮಾತ್ರ ಎಂದರೆ ತಪ್ಪಾಗಲಾರದು. ಅವರು ಏಳು ವರ್ಷಗಳ ಕಾಲ ವಿರೋಧ ಪಕ್ಷದ ನಾಯಕರಾಗಿ, ಮೂರು ಜನ ಮುಖ್ಯಮಂತ್ರಿಗಳಿದ್ದ ಕಾಲದಲ್ಲಿ ಅವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿರುವುದರಿಂದ ಅವರಿಗೆ ಹೆಚ್ಚು ಅನುಭವವಿದೆಯೆಂದು ಈ ಸಂದರ್ಭದಲ್ಲಿ ನಾನು ಭಾವಿಸುತ್ತೇನೆ. ಇವೊತ್ತಿನ ದಿವಸ 2006–07ನೇ ಸಾಲಿನ ಬಜೆಟ್ ಮಂಡಿಸುವಲ್ಲಿ ಯಾವ್ಯಾವ ಇಲಾಖೆಗಳಿವೆಯೋ, ಆ ಇಲಾಖೆಗಳಿಗೆ ಎಷ್ಟೆಷ್ಟು ಬೇಕೋ ಅಷ್ಟನ್ನು ಸಾಧ್ಯವಾದಷ್ಟೂ ಒದಗಿಸುವ ಕೆಲಸವನ್ನು ಅವರು ಮಾಡಿದ್ದಾರೆ. ಆದರೆ, ಕೆಲವನ್ನು ಯಾರ ಮಾರ್ಗದರ್ಶನದಲ್ಲಿ ಅವರು ಮಾಡಿದ್ದಾರೋ ಗೊತ್ತಿಲ್ಲ ಏಕೆಂದರೆ, ಅವರ ಸ್ವಂತ ಅನುಭವದಲ್ಲಿ ಮಾಡಿದ್ದಾರೋ ಅಥವಾ ಅಧಿಕಾರಿಗಳ ಕಡೆಯಿಂದ ಕೆಲವು ಮಾಹಿತಿ ತರಿಸಿಕೊಂಡು ಮಾಡಿದ್ದಾರೋ ಗೊತ್ತಿಲ್ಲ. ಸರ್ಕಾರ ಬಂದು 15–20 ದಿವಸಗಳೇನೋ ಕಳೆದಿದೆ. ಅವರು ಬಜೆಟ್ ಅನ್ನು ಅಧಿಕಾರಿಗಳು ನೀಡಿದ ಮಾಹಿತಿ ಮೇಲೆ ಮಾಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ, ಹಿರಿಯರಾದ ಧರ್ಮಸಿಂಗ್ ಸಾಹೇಬರೂ ಬಜೆಟ್ ಮೇಲೆ ಮಾತನಾಡಿದರು. ಅವರು ಮಾತನಾಡುವ ಸಂದರ್ಭದಲ್ಲಿ ರಾಜಕೀಯವನ್ನೇ ಸ್ವಲ್ಪ ಹೆಚ್ಚಿಗೆ ತೆಗೆದುಕೊಂಡರು. ರಾಜಕೀಯ ಅಂದರೆ, ಕುಮಾರಸ್ವಾಮಿಯವರು ಅಕ್ರಮ ಇದ್ದರು, ಮೊನ್ನೆ ಸಕ್ರಮ ಆದರು ಎಂದರು ಈ ರಾಜ್ಯದಲ್ಲಿ ಯಾರ್ಯಾರು ಅಕ್ರಮ ಆದರು, ಯಾರ್ಯಾರು ಸಕ್ರಮ ಆದರು ಎಂಬುದರ ಬಗ್ಗೆ ಈ ಸಭೆ ಮುಖೇನ ಚರ್ಚೆ ಮಾಡಲು ನಾನು ಹೋಗುವುದಿಲ್ಲ. ಅದರ ಬಗ್ಗೆ ಕಾಲ ಬಂದಾಗ ನಾನು ಹೇಳುತ್ತೇನೆ. ಇವೊತ್ತಿನ ದಿವಸ ಹಿಂದಿನ ಸದನದ ಕಲಾಪ ಹಾಗೂ ಈ ಸದನದ ಕಲಾಪ ನೋಡಿದರೆ, ಈ ಸದನದಲ್ಲಿರುವ ವ್ಯಕ್ತಿಗಳನ್ನು ಬಿಟ್ಟು ಮಾತನಾಡುವುದು ಜಾಸ್ತಿಯಾಗಿ ಬಿಟ್ಟಿದೆ. ಏಕೆಂದರೆ, ಹೊರಗಡೆಯಿಂದ ಬಂದು ಇಲ್ಲಿ ಉತ್ತರಿಸಬೇಕೆಂದರೆ ಅವರು ಈ ಸದನದ ಸದಸ್ಯರಲ್ಲ. ಆದುದರಿಂದ, ದಯಮಾಡಿ ಸಭಾಧ್ಯಕ್ಷರಲ್ಲಿ ನಾನು ಮನವಿ ಮಾಡುವುದಿಷ್ಟೇ: ಸದನದಲ್ಲಿರುವ ಯಾರೇ ಮಾಜಿ ಸದಸ್ಯರಿರಬಹುದು, ಅವರ ಬಗ್ಗೆ ಮಾತನಾಡುವಾಗ ದಯಮಾಡಿ ಅದಕ್ಕೆ ಅವಕಾಶ ಕೊಡಬಾರದೆಂದು ನಾನು ಮನವಿ ಮಾಡುತ್ತೇನೆ. ಅವರು ಇಲ್ಲಿಗೆ ಬಂದು ಉತ್ತರ ಕೊಡುವುದಕ್ಕಾಗುವುದಿಲ್ಲ ಹೊರಗಡೆ ಇದ್ದಾಗ ಬೇಕಾದರೆ ಮಾತನಾಡಲಿ, ನನ್ನದೇನೂ ಅಭ್ಯಂತರವಿಲ್ಲ. ಬೇಕಾದರೆ, ಪ್ರತಿಕೆಯಲ್ಲಿ ಮಾತನಾಡಲಿ, ಬೇರೆ ಸಭೆಯಲ್ಲಿ ಮಾತನಾಡಲಿ. ಅದಕ್ಕೆಲ್ಲಾ ನಾನು ಅಡ್ಡಿಪಡಿಸಲು ಹೋಗುವುದಿಲ್ಲ. ಅದರ ಬಗ್ಗೆ ಈ ವಿಷಯದಲ್ಲಿ ಇಷ್ಟು ಹೇಳಿ ಮುಗಿಸುತ್ತೇನೆ. ಇವೊತ್ತು ಉದಾಹರಣೆಗೆ ಹೇಳುವುದಾದರೆ, ಲೋಕೋಪಯೋಗಿ ಇಲಾಖೆ ಬಗ್ಗೆ ನನ್ನಲ್ಲಿರುವ ಒಂದು ಸಣ್ಣ ಮಾಹಿತಿ ಪ್ರಕಾರ ನಾನು ಈ ಸಭೆಯ ಗಮನಕ್ಕೆ ತರುತ್ತಿದ್ದೇನೆ. ರಾಜ್ಯದಲ್ಲಿ ಇವೊತ್ತು ಸುಮಾರು 30,975 ಕಿಲೋಮೀಟರ್‌ಗಳಷ್ಟು ಎಂ.ಡಿ.ಆರ್. ರಸ್ತೆಗಳಿವೆ. ಈ ರಸ್ತೆಗೆ ಒಂದು ಕಿಲೋಮೀಟರ್‌ಗೆ ಇವೊತ್ತು ಮೇಂಟನೆನ್ಸ್ ಗ್ರಾಂಟ್ ಎಷ್ಟು ಇಟ್ಟಿದ್ದಾರೆಂದರೆ, ಸುಮಾರು 16,265 ರೂಪಾಯಿಗಳು. ಇವೊತ್ತು

ನಾವು I.R.C. Standards ಪ್ರಕ್ಕಾರ ಹೋದರೆ ಒಂದು ಕಿಲೋಮೀಟರ್‌ಗೆ ಸುಮಾರು ಎರಡರಿಂದ ಎರಡೂವರೆ ಲಕ್ಷ ರೂಪಾಯಿಗಳಷ್ಟು ಕೊಟ್ಟಿದ್ದಾರೆ. ನೀವು ಬೇರೆ ರಾಜ್ಯಗಳನ್ನು ನೋಡಿ, ಅಕ್ಕಪಕ್ಕದ ರಾಜ್ಯಗಳನ್ನು ನೋಡಿ. ಆ ರಾಜ್ಯಗಳಲ್ಲಿ ಒಂದು ಕಿಲೋಮೀಟರ್ ಎಂ.ಡಿ.ಆರ್. ರಸ್ತೆ ಮಾಡಬೇಕಾದರೆ ಒಂದು ಲಕ್ಷದಿಂದ ಎರಡು ಲಕ್ಷದವರೆಗೂ ಕೊಟ್ಟಿದ್ದಾರೆ. ಇವೊತ್ತು ೩೦,೯೭೫ ಕಿಲೋಮೀಟರ್‌ಗಳಷ್ಟು ಎಂ.ಡಿ.ಆರ್. ರಸ್ತೆಗಳ ಮೇಂಟನೆನ್ಸ್‌ಗೆ ಕೇವಲ ೧೬,೨೬೫ ರೂಪಾಯಿಗಳನ್ನು ಕೊಟ್ಟರೆ ಯಾವ ರೀತಿ ಮೇಂಟನೆನ್ಸ್ ಆಗುತ್ತದೆಂಬುದನ್ನು ಸನ್ಮಾನ್ಯ ಉಪಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡುತ್ತಿದ್ದೇನೆ. ಇದೊಂದು ಭಾಗ. ಇದಲ್ಲದೆ, ಎರಡನೆಯದಾಗಿ, ಸುಮಾರು ೧೭,೨೨೨ ಕಿಲೋಮೀಟರ್‌ಗಳಷ್ಟು ರಾಜ್ಯ ಹೆದ್ದಾರಿ ಇದೆ. ಈ ರಾಜ್ಯ ಹೆದ್ದಾರಿ ನಿರ್ವಹಣೆಗೆ ಇವೊತ್ತು ಕೇವಲ ೩ ಲಕ್ಷ ರೂಪಾಯಿಗಳಷ್ಟು ಹಣ ಮಾತ್ರ ಕೊಟ್ಟಿದ್ದಾರೆ. ಅದು ಮೂರು ವರ್ಷದ ಮೇಂಟನೆನ್ಸ್‌ಗೆಂದು ಒಟ್ಟು 458 ಕೋಟಿ ರೂಪಾಯಿಗಳನ್ನು ೧೫೦–೧೫೦ ಕೋಟಿ ರೂಪಾಯಿಗಳಂತೆ ಇಟ್ಟಿದ್ದಾರೆ. ಕಳೆದ ವರ್ಷ 150 ಕೋಟಿ, ಈ ವರ್ಷ 150 ಕೋಟಿ ಹಾಗೂ ಮುಂದಿನ ವರ್ಷ 150 ಕೋಟಿ ರೂಪಾಯಿಗಳೆಂದು ಒಟ್ಟು ಸುಮಾರು 450 ಕೋಟಿಗಳಷ್ಟು ಹಣ ಕೊಟ್ಟಿದ್ದಾರೆ. ಹಿಂದೆ ಸಿದ್ಧರಾಮಯ್ಯನವರು ಇದ್ದಂಥ ಕಾಲದಲ್ಲಿ ನಾನು ಮಂತ್ರಿಯಾಗಿದ್ದಾಗ ಅವರ ಸಮ್ಮುಖದಲ್ಲಿ ಒಂದು ಸಭೆ ಮಾಡಿದೆ. ಮತ್ತೆ ಅದಾದ ನಂತರ ಸಿಂಧ್ಯಾ ಸಾಹೇಬರು ಇದ್ದಂಥ ಕಾಲದಲ್ಲೂ ಒಂದು ಸಭೆ ಮಾಡಿದೆವು. ಕಳೆದೆರಡು ವರ್ಷಗಳಿಂದ ರಾಜ್ಯದಲ್ಲಿ ಒಳ್ಳೆಯ ಮಳೆಯಾಗಿದೆ. ಕೆಲವು ಕಡೆ ರಾಜ್ಯ ಹೆದ್ದಾರಿ ರಸ್ತೆ ಎನ್ನುವುದೇ ಕಾಣುವುದಿಲ್ಲ ಇವೊತ್ತು ಮಲೆನಾಡು ಇರಬಹುದು, ಜೀವಿಜಯ ಸಾಹೇಬರು ಇಲ್ಲೇ ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಭಾಗಗಳಿರಬಹುದು, ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳಿರಬಹುದು ಹಾಗೆಯೇ ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಿರಬಹುದು. ಮೈನ್ಸ್‌ಲಾರಿಗಳು ಇವೊತ್ತು ಓಡಾಡುತ್ತವೆ. ಹಿಂದಿನ ಸ್ಟಾಂಡರ್ಡ್‌ಗೆ ಈ ರಾಜ್ಯದ ಹೆದ್ದಾರಿ ಇತ್ತು ಒಂದಾನೊಂದು ಕಾಲದಲ್ಲಿ ರಾಜ್ಯ ಹೆದ್ದಾರಿಯಲ್ಲಿ ದಿನಕ್ಕೆ 3–4 ವೆಹಿಕಲ್ಸ್ ಓಡಾಡುತ್ತಿದ್ದವು. ಇವೊತ್ತು ಒಂದು ದಿವಸಕ್ಕೆ ಎಷ್ಟು ಬಸ್ಸುಗಳು ಹೋಗುತ್ತಿವೆ, ಲಾರಿಗಳು ಎಷ್ಟು ಹೋಗುತ್ತಿವೆ, ಮರಳಿನ ಲಾರಿ ಎಷ್ಟು ಹೋಗುತ್ತಿವೆ, ಗಣಿ ಲಾರಿಗಳು ಎಷ್ಟು ಹೋಗುತ್ತಿವೆ, ಇಂತಹ ಯಾವುದೇ ಮಾಹಿತಿಗಳು ನಮ್ಮಲ್ಲಿಲ್ಲ. ನಮ್ಮ ಇಲಾಖಾಧಿಕಾರಿಗಳೆಲ್ಲರನ್ನೂ ನಾನು ಹಿಂದೆ ಕರೆಸಿದ್ದಾಗ ನನಗೊಂದು ಮಾಹಿತಿಯನ್ನು ಕೊಟ್ಟಿದ್ದರು. ರಾಜ್ಯ ಹೆದ್ದಾರಿಯನ್ನು ನಿರ್ವಹಣೆ ಮಾಡುವುದಕ್ಕೆ ಕನಿಷ್ಠ 1,200 ಕೋಟಿ ರೂಪಾಯಿಗಳಷ್ಟು ಹಣವನ್ನು ಒಂದು ಸಲ ಕೊಟ್ಟರೆ, ನಿರ್ವಹಿಸಬಹುದು. ಆಗ ರಸ್ತೆ 3–4–5 ವರ್ಷ ತಡೆಯುತ್ತದೆ. ಒಂದೇ ಸಲ ನೀವು ಅಷ್ಟು ಕೊಡಿ ಎಂದು ನಾನು ಹೇಳುವುದಿಲ್ಲ. ಯಾವುದು ಇಂಪಾರ್ಟೆಂಟ್ ರಸ್ತೆಗಳಿವೆಯೋ, ಅಂದರೆ ಜಿಲ್ಲಾ ಕೇಂದ್ರಗಳಿಗೆ, ತಾಲ್ಲೂಕು ಕೇಂದ್ರಗಳಿಗೆ ಹೋಗುವ ರಸ್ತೆಗಳು ಯಾವುದಿದೆಯೋ, ಅವುಗಳನ್ನು ನೀವು ದಯಮಾಡಿ ಪತ್ತೆಹಚ್ಚಿ. ಅದಕ್ಕಾದರೂ ಒಂದು ಅನುದಾನ ಕೊಡಿ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಒಂದು ರಾಜ್ಯ ಹೆದ್ದಾರಿ ಈ ಕಡೆ ಇರಬಹುದು, ಐ.ಆರ್.ಸಿ. ಯವರು ಸ್ಟಡಿ ಮಾಡಿರುವ ಪ್ರಕಾರ ನಮ್ಮ ರಾಜ್ಯದಲ್ಲಿರುವುದು ಕೇವಲ ಶೇಕಡ 13.87 ಪರ್ಸೆಂಟ್ ರಷ್ಟು ರಸ್ತೆ ಮಾತ್ರ ಉತ್ತಮವಾಗಿದ್ದು, ಇನ್ನುಳಿದಂತೆ 64 ಪರ್ಸೆಂಟ್ ರಸ್ತೆ ಉತ್ತಮವಾಗಿಲ್ಲವೆಂದು ಅವರು ನೀಡಿರುವ ಮಾಹಿತಿಯಾಗಿದೆ. ಸುಮಾರು 53 ತಾಲ್ಲೂಕು ಕೇಂದ್ರಗಳಿಗೆ

ಇನ್ನೂ ನಾವು ಉತ್ತಮವಾದ ರಸ್ತೆ ಮಾಡುವುದಕ್ಕಾಗುವುದಿಲ್ಲವೆಂದು KSHIP ನಿಂದ ಸ್ಟಡಿ ಮಾಡಿರುವುದನ್ನು ಒಂದು ಕಾರ್ಯಕ್ರಮದಲ್ಲಿ ಇವೊತ್ತು ಹೇಳುತ್ತಿದ್ದಾರೆ. ಇನ್ನೂ 53 ತಾಲ್ಲೂಕುಗಳಿಗೆ ನಾವು ಉತ್ತಮ ರಸ್ತೆಗಳನ್ನು ಕೊಡುವುದಕ್ಕಾಗಿಲ್ಲ. ಇವೊತ್ತು ನಮ್ಮಲ್ಲಿ 3,967 ಕಿಲೋಮೀಟರ್‌ಗಳಷ್ಟು ರಾಷ್ಟ್ರೀಯ ಹೆದ್ದಾರಿ ಇದೆ. KSHIP ಕಡೆಯಿಂದ ಸುಮಾರು 2,381 ಕಿಲೋಮೀಟರ್‌ಗಳಷ್ಟು ರಸ್ತೆಗಳನ್ನು ಮೊದಲ ಹಂತದಲ್ಲಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದೇವೆ. ಅದರಲ್ಲಿ ಸುಮಾರು ಈಗಲೇ ಶೇಕಡ 70 ಭಾಗದಷ್ಟು ಕೆಲಸ ಮುಗಿದಿದೆ. ಇದಲ್ಲದೆ ಇವೊತ್ತು ಸುಮಾರು 3,000 ಕಿಲೋಮೀಟರ್‌ಗಳಷ್ಟು ರಸ್ತೆಯನ್ನು KSHIP ವತಿಯಿಂದ ಈಗಾಗಲೇ ನಾವು ಎರಡನೇ ಹಂತದಲ್ಲಿ ತೆಗೆದುಕೊಂಡು ಮಾಡಿದ್ದೇವೆ. ನಾನು ಅದಕ್ಕೆ ಹೇಳಿದೆ. ನಮಗೆ ಇವೊತ್ತೇ ರೀಪೇಮೆಂಟ್ ಬರುವುದಿಲ್ಲ. ನಮಗೆ ಬರುವುದು 2007 ರಿಂದ ರೀಪೇಮೆಂಟ್ ಬರುತ್ತದೆ. ಕನಿಷ್ಠ 4,500 ಕಿಲೋಮೀಟರ್‌ಗಳನ್ನಾದರೂ ತೆಗೆದುಕೊಳ್ಳಿ ಅವರು ದುಡ್ಡು ಕೊಡುವುದಕ್ಕೆ ರೆಡಿ ಇದ್ದಾರೆ. ಇವೊತ್ತು KSHIP ನಲ್ಲಿ ಇಡೀ ರಾಷ್ಟ್ರದಲ್ಲಿ ಉತ್ತಮವಾಗಿ ಕೆಲಸ ಮಾಡುತ್ತಿದ್ದರೆ ಕರ್ನಾಟಕ ರಾಜ್ಯದಲ್ಲಿ ಅಧಿಕಾರಿಗಳು ಉತ್ತಮವಾಗಿ ಕೆಲಸ ಮಾಡುತಿದ್ದಾರೆಂದು ನಾನಲ್ಲ, ವರ್ಲ್ಡ್ ಬ್ಯಾಂಕ್‌ನಿಂಸ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಇವರಿಗೆ ನಾನೇನೂ ಸರ್ಟಿಫಿಕೇಟ್ ಕೊಡುತ್ತಿಲ್ಲ. ಇದು ನನ್ನ ಸರ್ಟಿಫಿಕೇಶನ್ ಅಲ್ಲ ಇದು ವರ್ಲ್ಡ್ ಬ್ಯಾಂಕ್‌ನವರು ಕೊಟ್ಟಿರುವಂಥ ಸರ್ಟಿಫಿಕೇಟ್. ಇನ್ನು ನಾವು ದುಡ್ಡು ಕೊಡಲು ರೆಡಿ ಇದ್ದೇವೆ, ನೀವು ಕೆಲಸ ಮಾಡಿಸಿ ಎಂದರೆ, ಅದಕ್ಕೆ ಇವೊತ್ತು ಕ್ವೈರಿ. ಇವೊತ್ತು ಯಾವ ರೀತಿ ಕ್ವೈರಿ ಆಗುತ್ತದೆಂದು ನಿಮಗೆ ಗೊತ್ತು ಈಗ ನಾವು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವೆಂದು ಮಾಡಿದ್ದೇವೆ. ಎಷ್ಟು ಮಾಡಿದ್ದೇವೆ? KRDCL ನಲ್ಲಿ 830 ಕಿಲೋಮೀಟರ್‌ಗಳಷ್ಟು ರಸ್ತೆ ತೆಗೆದುಕೊಂಡಿದ್ದೇವೆ. ಒಬ್ಬ ಸೆಕ್ರೆಟರಿ ರ್‍ಯಾಂಕಿಂಗ್ ಆಫೀಸರ್ 830 ಕಿಲೋಮೀಟರ್ ರಸ್ತೆಯನ್ನು ಒಬ್ಬ ಕಾರ್ಯಪಾಲಕ ಅಭಿಯಂತರರಿಗೆ ಕೊಟ್ಟರೆ ಮಾಡುತ್ತಾನೆ. ಅಧಿಕಾರಿಯನ್ನು ಉಪಯೋಗಿಸುವಂಥ ಸನ್ನಿವೇಶಕ್ಕೆ ಇವೊತ್ತು ಸರ್ಕಾರ ಏಕೆ ಚಿಂತನೆ ಮಾಡುತ್ತಿಲ್ಲ? ಯಡಿಯೂರಪ್ಪನವರು ಅಧಿಕಾರ ವಹಿಸಿಕೊಂಡು 60 ದಿವಸಗಳಾಗಿವೆ. ನಾನು ಅವರನ್ನು ದೂಷಿಸುವುದಕ್ಕೆ ಹೋಗುತ್ತಿಲ್ಲ ನಾನು 20 ತಿಂಗಳ ಕಾಲ ಲೋಕೋಪಯೋಗಿ ಸಚಿವನಾಗಿ ಕೆಲಸ ಮಾಡಿದ್ದೇನೆ. ಒಂದೇ ಸಲ ನಾವು ಎಲ್ಲಾ ಮಾಡುತ್ತೇವೆ ಎನ್ನುವ ದೃಷ್ಟಿಯಲ್ಲಿ ನಾನು ಹೇಳುತ್ತಿಲ್ಲ. ಉದಾಹರಣೆಗೆ ಹೇಳುವುದಾದರೆ, ಇವೊತ್ತು ಈ ಪರಿಸ್ಥಿತಿ ಇದೆ. ನಮ್ಮ ರಾಜ್ಯದಲ್ಲಿ ಎಂ.ಡಿ.ಆರ್. ರಸ್ತೆ ಇರಬಹುದು, ಸ್ಟೇಟ್ ಹೈವೇ ಇರಬಹುದು, ರಾಷ್ಟ್ರೀಯ ಹೆದ್ದಾರಿ ಇರಬಹುದು, ಕೆಆರ್‌ಡಿಸಿಎಲ್ ರಸ್ತೆ ಇರಬಹುದು, ಇವೆಲ್ಲಾ ಸೇರಿ 51,804 ಕಿಲೋಮೀಟರ್‌ಗಳಷ್ಟು ರಸ್ತೆ ನಮ್ಮಲ್ಲಿದೆ. ಇವೊತ್ತು ವಿಲೇಜ್ ರೋಡ್ ಒಂದು ಕಡೆ. ಪಂಚಾಯತ್ ಮಟ್ಟದಲ್ಲಿರುವ ರಸ್ತೆಗಳೇ ಬೇರೆ ಇದೆ. ಎಂ.ಡಿ.ಆರ್. ಗೆ ಎಷ್ಟು ಗ್ರಾಂಟ್ ಕೊಟ್ಟಿದ್ದೀರಿ? ಲಾಸ್ಟ್ ಇಯರ್ 80 ಕೋಟಿ ಕೊಟ್ಟರು. ಬಸವರಾಜ ರಾಯರೆಡ್ಡಿಯವರು ಮಾತನಾಡುತ್ತಿದ್ದರುಃ " ನಿಮ್ಮ ಸರ್ಕಾರದ ಸಾಧನೆ ಏನು? ನಮ್ಮ ಐದು ವರ್ಷದ ಸಾಧನೆ ಏನು? ಎಂದು ಕೇಳಿರುವುದಕ್ಕೆ ಐದು ವರ್ಷದ ಹಿಂದೆ ಬಿಟ್ಟುಹೋಗುವಂಥ ಸಂದರ್ಭದಲ್ಲಿ 319 ಕೋಟಿ 3054 ಮತ್ತು ಬಿಲ್ಡಿಂಗ್ಸ್ ನಲ್ಲಿ ಕೊಟ್ಟಂಥದ್ದು ಸಾಧನೆ ಅಲ್ಲವೇ ಸ್ವಾಮಿ? ಲಾಸ್ಟ್ ಇಯರ್ ಸಿದ್ದರಾಮಯ್ಯನವರು ಇದ್ದರು. ಅವರು 235 ಕೋಟಿ ರೂಪಾಯಿಗಳನ್ನು ಅದಕ್ಕೆ ಮೀಸಲಿಟ್ಟಿದ್ದರು. ಅದರಲ್ಲಿ 200 ಕೋಟಿ ಹಣ ತೆಗೆದಿಟ್ಟರು.

2000 ರಿಂದ ಇಲ್ಲಿವರೆಗೆ ಸುಮಾರು 200 ಕೋಟಿ 3054 ಮುಖ್ಯಮಂತ್ರಿಯವರ ಗ್ರಾಮೀಣ ರಸ್ತೆಯಲ್ಲಿ ಪೆಂಡಿಂಗ್ ಇದೆ. ಲಾಸ್ಟ್ ಇಯರ್ ಎಷ್ಟಿತ್ತು? ಇದಕ್ಕೆ 80 ಕೋಟಿ ಇಟ್ಟರು. ಅದರಲ್ಲಿ ನಾನು ಒತ್ತಾಯ ಮಾಡಿ, ಅವೊತ್ತು ಸಿಂಧ್ಯಾರವರು ಮತ್ತೆ ಸುಮಾರು 200 ಕೋಟಿ ರೂಪಾಯಿಗಳನ್ನು ಸಪ್ಲಿಮೆಂಟರಿಯಲ್ಲಿ ಮಾಡಿಸಿಕೊಟ್ಟರು. ಇವೆರಡೂ ಬಿಟ್ಟರೆ, ಈಗ ಹಿಂದಿನ ಸಾಲಿನಲ್ಲಿ ಎಷ್ಟು ಹಣ ಕೊಟ್ಟರು ಈ ವರ್ಷ 126 ಕೋಟಿ ಹಣವನ್ನು ಕೊಟ್ಟಿದ್ದಾರೆ. ಈವತ್ತು 126 ಕೋಟಿಯಲ್ಲಿ 30,975 ಕಿಲೋಮೀಟರ್ ರಸ್ತೆಯನ್ನು ಮೇನ್‌ಟೇನ್ ಮಾಡುವುದಕ್ಕಾಗುತ್ತದೆಯೆ? ಬರಿ 126 ಕೋಟಿ ರೂಪಾಯಿ. ಅದರಲ್ಲಿ ಐದು ವರ್ಷದ ಬಿಲ್ಲು ಸುಮಾರು 190 ಕೋಟಿ ಇದೆ. ಆ ಬಿಲ್ಲನ್ನು ಕೊಡಿ ಅಥವಾ ಬಿಡಿ ಬೇರೆ ವಿಚಾರ. ಆದರೆ ಮುಂದಿನ ವರ್ಷಕ್ಕೆ ಏನು ಮಾಡುತ್ತೀರಿ ಎಂಬ ಬಗ್ಗೆ ತಾವು ದಯಮಾಡಿ ಚಿಂತನೆ ಮಾಡಬೇಕು. ಮಾನ್ಯ ಹಣಕಾಸು ಸಚಿವರು ಹಿರಿಯರಿದ್ದಾರೆ. ಅವರಿಗೆ ಅನುಭವವಿದೆ ಏಕೆಂದರೆ 7 ವರ್ಷ ವಿರೋಧ ಪಕ್ಷದ ನಾಯಕರಾಗಿದ್ದಾರೆ ಮತ್ತು ಮೂರು ಜನ ಮುಖ್ಯಮಂತ್ರಿಯವರನ್ನು ನೋಡಿರುವ ಆಡಳಿತದ ಅನುಭವವಿದೆ. ಏಕೆಂದರೆ ಇದನ್ನು ನಮ್ಮ ಅಧಿಕಾರಿಗಳ ಮಾಹಿತಿಯ ಮೇರೆಗೆ ಸುಮ್ಮನೆ ಬಜೆಟ್‌ಗೆ, ಪಿ.ಡಬ್ಲ್ಯೂ.ಡಿ. ಗೆ ಇಷ್ಟು ಯಾವ್ಯಾವ ಇಲಾಖೆಗೆ ಇಷ್ಟು ಇದರಲ್ಲಿ ಯಾವ್ಯಾವುದು ಬೇಕೊ ಅದಕ್ಕೆ ಹಂಚುವಂಥ ಕಾರ್ಯಕ್ರಮವನ್ನು ಮಾಡಿದ್ದಾರೊ ಅಥವಾ ನಿಜವಾಗಿ ಬಜೆಟ್ ತಯಾರಾಗಿದೆಯೊ ಏನೊ ನನಗೆ ಗೊತ್ತಿಲ್ಲ. ಏಕೆಂದರೆ ಅವರು ಬಂದು 60 ದಿನಗಳಾಗಿದೆ. ನಾನು ಯಾರ ಬಗ್ಗೆಯೂ ದೂಷಣೆ ಮಾಡುವುದಕ್ಕೆ ಹೋಗುವುದಿಲ್ಲ. ನನಗೇನು ರಾಜಕೀಯವಾಗಿ ಭಾಷಣ ಮಾಡಬೇಕೆಂದು ಇಲ್ಲ. ಪ್ರಾಕ್ಟಿಕಲ್ ಆಗಿ ಏನಿದೆ? ಏಕೆಂದರೆ, ಈವತ್ತು ನಮ್ಮ ರಾಜ್ಯದಲ್ಲಿ 53 ತಾಲ್ಲೂಕು ಕೇಂದ್ರಗಳಿಗೆ ರಸ್ತೆಯನ್ನು ಮಾಡಲು ಅವಕಾಶವಾಗಿಲ್ಲ. ಇದರ ಅರ್ಥವನ್ನು ದಯಮಾಡಿ ತಿಳಿದುಕೊಳ್ಳಬೇಕು. ಎಂ.ಡಿ.ಆರ್. ರಸ್ತೆ ಇರಬಹುದು ಇದರಲ್ಲಿ ದಯಮಾಡಿ 300 ಕೋಟಿಯವರೆಗೆ ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ ಈವತ್ತು ಶಾಸಕರಿಗೆ ಒಂದು ಕಾರ್ಯಕ್ರಮ ಮಾಡಿದ್ದಾರೆ. ಐವತ್ತು ಲಕ್ಷರೂಪಾಯಿ ಯಂತೆ 150 ಕೋಟಿಯನ್ನು ಶಾಸಕರಿಗೆ ಕೊಡುವಂಥ ಕಾರ್ಯಕ್ರಮ ಮಾಡಿದ್ದಾರೆ. ಬಹಳ ಸಂತೋಷ ಯಾವುದೆ ಪಕ್ಷ ಇರಬಹುದು, ಪ್ರತಿಯೊಬ್ಬರು ಶಾಸಕರಿಗೆ ಐವತ್ತು ಲಕ್ಷ ರೂಪಾಯಿ ಕೊಡುವ ಕಾರ್ಯಕ್ರಮವೇನು ಮಾಡಿದ್ದೀರಿ, ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಅದಕ್ಕೆ ಸಂತೋಷ. ಈವತ್ತು ಬೆಂಗಳೂರು ನಗರಕ್ಕೆ 600 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. 200 ಕೋಟಿ ರೂಪಾಯಿಯನ್ನು 2006–07 ರಲ್ಲಿ ಇಟ್ಟಿದ್ದೇವೆಂದು ಹೇಳುತ್ತೀರಿ. ಆ 200 ಕೋಟಿ ರೂಪಾಯಿಯಲ್ಲಿ ಬೆಂಗಳೂರು ನಗರಕ್ಕೆ ಈವತ್ತು 200 ಕೋಟಿ ಇಟ್ಟರೆ, ರಾಜ್ಯದಲ್ಲಿ ಇನ್ನುಳಿದ 224 ತಾಲ್ಲೂಕಿಗೆ 126 ಕೋಟಿ ಇಟ್ಟರೆ, ಇದು ನ್ಯಾಯವೇ? ಗ್ರಾಮೀಣ ಪ್ರದೇಶಕ್ಕೆ ನೀವು ಒತ್ತು ಕೊಟ್ಟಿದ್ದೀರಿ ಎಂಬ ಬಗ್ಗೆ ದಯಮಾಡಿ ಅರ್ಥ ಮಾಡಿಕೊಳ್ಳಬೇಕೆಂದು ತಮ್ಮ ಮೂಲಕ ಮಾನ್ಯ ಉಪಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಬೆಂಗಳೂರು ನಗರದ ಸುತ್ತಮುತ್ತಲಿಗೆ 200 ಕೋಟಿ, ರಾಜ್ಯದ ಎಲ್ಲಾ ಎಂ.ಡಿ.ಆರ್. ರಸ್ತೆಗೆ 126 ಕೋಟಿ ಎಂದರೆ, ಇದೇನು ವೈಜ್ಞಾನಿಕವಾಗಿದೆಯೊ ಹೇಗೆ? ಈ ರೀತಿ ಕೊಡಿ ಎಂದು

ಹೇಳಿದವರು ಯಾರು? ಮಾಹಿತಿ ಕೊಡುವವರು ಯಾರು? ನಾನು ಮಂತ್ರಿಯಾಗಿದ್ದ ಶಾಸಕರು ಏನು ಮಾಡುತ್ತಾರೆಂದರೆ" ಸ್ವಾಮಿ ನಮಗೆ ರಸ್ತೆ ಮಾಡಿಕೊಡಲಿಲ್ಲ, ನಮ್ಮ ಬಿಲ್ಲನ್ನು ಕೊಡಿಸಲಿಲ್ಲ" ಎಂದು ಕೇಳುತ್ತಾರೆ. ಏಕೆಂದರೆ ನಾನು ಯಾವುದೇ ಪಕ್ಷದ ದೃಷ್ಟಿಯಿಂದ ಹೇಳುತ್ತಿಲ್ಲ. ಕೊನೆಯ ಪಕ್ಷ ಅವರು ಒಬ್ಬ ಶಾಸಕ, ಒಂದು ತಾಲ್ಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಹೋಗುವಂಥ ತಾಲ್ಲೂಕಿನ ರಸ್ತೆಯನ್ನು ಮಾಡುವುದಕ್ಕೆ ಆಗುವುದಿಲ್ಲವೆಂದರೆ ಅವರು ಶಾಸಕರಾಗಿ ಏಕೆ ಇರಬೇಕು? ಯಾವುದೇ ಪಕ್ಷ ಇರಲಿ, ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಗಮನಹರಿಸುತ್ತಾರೆಂದು ಭಾವಿಸುತ್ತೇನೆ. ಇದಲ್ಲದೆಯೆ ಇವತ್ತು ನಮ್ಮಲ್ಲಿ ಏನು ಕೆಶಿಫ್–ಟೂ ನಲ್ಲಿ ಕೆಲಸ ಕಾರ್ಯಕ್ರಮ ರೂಪಿಸಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ: ಕೇವಲ 200 ಕೋಟಿ ಇಡಲಿಲ್ಲ. 600 ಕೋಟಿ ಪ್ರಾಜೆಕ್ಟ್ ಮಾಡಿ ವರ್ಷಕ್ಕೆ 200 ಕೋಟಿಯಂತೆ ಹಂಚಿಕೊಂಡು ಹೋಗಿದ್ದಾರೆ. ಕಾರ್ಪೋರೇಷನ್‌ನವರದ್ದೆ ಸಾವಿರ ಕೋಟಿ ಬಜೆಟ್ ಇದೆ. ಅದೇ ಅಪ್ರೂವ್ ಆಗಿದೆ. ಅದರ ಜೊತೆಗೆ ಇದು 600 ಕೋಟಿ ಇಟ್ಟು ವರ್ಷಕ್ಕೆ 200 ಕೋಟಿ ಖರ್ಚು ಮಾಡುವುದು ಬೆಂಗಳೂರಿನ ಸುತ್ತಮುತ್ತಲಿನ ರಸ್ತೆಗೆ. ನ್ಯಾಷನಲ್ ಹೈವೇಗಳಲ್ಲದೆ ನೈಸ್ ರೋಡ್ ಅಲ್ಲದೆ, ಪೆರಿಫೆರಲ್ ರೋಡ್ ಅಲ್ಲದೆ

ಶ್ರೀ ಆರ್. ದಿನೇಶ್‌ಗುಂಡೂರಾವ್: ನಮ್ಮ ಕಾರ್ಪೋರೇಷನ್ ಬಜೆಟ್ 1800 ಕೋಟಿ ರೂಪಾಯಿಗಳು. ಅದು ಬೆಂಗಳೂರು ಹೊರವಲಯಕ್ಕೆ ಸೇರುವುದಿಲ್ಲ. ನಮ್ಮಲ್ಲಿ ಕಾರ್ಪೋರೇಷನ್ ಲಿಮಿಟ್ಸ್‌ನಲ್ಲಿ ಪಿ.ಡಬ್ಲ್ಯೂ.ಡಿ. ರಸ್ತೆಗಳೇ ಇಲ್ಲ. ನೀವು ಐವತ್ತು ಲಕ್ಷ ಅನುದಾನವೇನು ಶಾಸಕರಿಗೆ ಕೊಟ್ಟಿದ್ದೀರಿ ಅದು ನಮಗೆ ಸಿಗುವುದಿಲ್ಲ. ಆದ್ದರಿಂದ ಅವರು ಒಳ್ಳೆಯ ಒಂದು ನಿರ್ಣಯವನ್ನು ಮಾಡಿದ್ದಾರೆ. ಖಂಡಿತವಾಗಿ ಅದನ್ನು ನಾವು ಸ್ವಾಗತ ಮಾಡಬೇಕು.

ಶ್ರೀ ಹೆಚ್.ಡಿ ರೇವಣ್ಣ: ಮಾನ್ಯ ದಿನೇಶ್‌ಗುಂಡೂರಾವ್ ಏನು ಹೇಳುತ್ತಿದ್ದಾರೆ, ನಗರಕ್ಕೆ ಕೊಡಲಿ, ನಾನೇನು ಬೇಡವೆಂದು ಹೇಳುತ್ತಿಲ್ಲ. ನಾನು ನಗರದ ಜನತೆಗೆ ಮೋಸ ಮಾಡಿ ಎಂದು ನಿಮ್ಮ ಹತ್ತಿರ ಕೇಳಲು ಬಂದಿಲ್ಲ ನಾನು ಹೇಳುವುದು 224 ವಿಧಾನಸಭಾ ಕ್ಷೇತ್ರದಲ್ಲಿ ನಗರದ್ದು ಎಷ್ಟಿದೆ? ಗ್ರಾಮೀಣ ಪ್ರದೇಶಗಳ ವಿಧಾನಸಭಾ ಕ್ಷೇತ್ರಗಳು ಎಷ್ಟಿದೆ? ಅದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ? ದಯಮಾಡಿ ಅದನ್ನು ತಿಳಿಸಿ ಎಂದು ಕೇಳುತ್ತಿದ್ದೇನೆ. ಏಕಂದರೆ ನಗರ ಪ್ರದೇಶಕ್ಕೆ ವರ್ಷಕ್ಕೆ 200 ಕೋಟಿ ಈವತ್ತು ಇಟ್ಟಿದ್ದೀರಿ, ಕೊಡಿ ಸಂತೋಷ. ಬೇರೆಯದಕ್ಕೆ 126 ಕೋಟಿ ಇಟ್ಟಿದ್ದೀರಿ. 3054 ನಲ್ಲಿ ಕಳೆದ ಐದು ವರ್ಷದ ಬಿಲ್ಲು ಸುಮಾರು 200 ಕೋಟಿ ಇದೆ. ಅದನ್ನು ಕೊಟ್ಟರೆ ಹೊಸ ಕೆಲಸವನ್ನು ಮುಂದಿನ ವರ್ಷದಿಂದ ಎಲ್ಲಿ ತೆಗೆದುಕೊಳ್ಳುತ್ತೀರಿ? ಅದನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಉಪಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಇದಲ್ಲದೆ ಕೆಶಿಫ್–ಟೂ, ಇದರಲ್ಲೂ ಅಷ್ಟೆ. ಇವತ್ತು ರೀಪೇಮೆಂಟ್ ಬರುವುದಿಲ್ಲ. ನಾಳೆ ಬರುವುದಿಲ್ಲ ಅಥವಾ ಮುಂದಿನ ವರ್ಷಕ್ಕೆ ಬರುವುದಿಲ್ಲ ಯಾವುದಿದ್ದರೂ ಸಾಲ ಮಾಡಲೇ ಬೇಕಾಗುತ್ತದೆ. ಒಂದು ಒಳ್ಳೆಯ ಕೆಲಸ ಮಾಡಬೇಕಾದರೆ ಸಾಲ ಮಾಡಬೇಕಾಗುತ್ತದೆ. ಆದರೆ ಕೆಶಿಫ್–ಟೂನಲ್ಲಿ ಇಡೀ ರಾಷ್ಟ್ರದಲ್ಲಿ ಕೆಶಿಫ್–ಟೂನಲ್ಲಿ ನಮ್ಮ ರಾಜ್ಯ ಉತ್ತಮವಾಗಿ ಕೆಲಸ ಮಾಡುತ್ತಿದೆ ಎಂದು ವಿಶ್ವಬ್ಯಾಂಕ್‌ನವರು ಡಾಕ್ಯುಮೆಂಟೇಷನ್ ಕೊಟ್ಟಿದ್ದಾರೆ.

ಅದಕ್ಕೆ ನಾನು ಮಾನ್ಯ ಹಣಕಾಸು ಸಚಿವರ ಗಮನಕ್ಕೆ ತರುವುದು ಇಷ್ಟೆ ಅದರಲ್ಲು ಸುಮಾರು ನಾಲ್ಕೂವರೆ ಸಾವಿರ ಕಿಲೋಮೀಟರ್‌ರನ್ನು ಎಲ್ಲಿ ಯಾವ ತಾಲ್ಲೂಕಿಗೆ ಡಾಃ ನಂಜುಡಪ್ಪನವರ ವರದಿಯಲ್ಲಿ ಶಿಪಾರಸ್ಸು ಇದೆಯಾ ಅಥವಾ 53 ತಾಲ್ಲೂಕು ಕೇಂದ್ರಗಳಲ್ಲಿ ಏನು ರಸ್ತೆಗಳು ಇಲ್ಲ, ಅಲ್ಲಿ ಗಮನಹರಿಸಿ, ಅದನ್ನು ಮಾಡಲಿ ಎಂದು ಮನವಿ ಮಾಡುತ್ತೇನೆ. ಏಕೆಂದರೆ, ಇದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಯವರು ಉತ್ತರ ಕೊಡತಕ್ಕ ಸಂದರ್ಭದಲ್ಲಿ ತಿಳಿಸಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇದಲ್ಲದೆಯೆ ನಮ್ಮ ಕಟ್ಟಡಗಳು ಇದರಲ್ಲಿ ಶಾಲಾ ಕಟ್ಟಡಗಳು, ಜೂನಿಯರ್ ಕಾಲೇಜು ಇರಬಹುದು, ತಹಶೀಲ್ದಾರರ ಕಛೇರಿಗಳು ಇರಬಹುದು ಇವತ್ತು ಕಟ್ಟಡವನ್ನು ಕಟ್ಟಿ 30–40 ವರ್ಷಗಳಾಗಿದೆ. ಈವತ್ತು ರಿಪೇರಿಗೆ ಏನು ಕೊಡುತ್ತಾರೆ? ಕೆಲವು ಕಡೆ ಮಳೆ ಜಾಸ್ತಿಯಾಗಿ ಆ ಕಟ್ಟಡ ಇವತ್ತು ಬಿದ್ದುಹೋಗಿದೆ. ಇದಕ್ಕೆ ಗ್ರಾಂಟ್ ಏನು ಕೋಡುತ್ತಾರೆ? ಬಜೆಟ್‌ನಲ್ಲಿ ತೋರಿಸುವುದು 1/3 ಎಂದು ಇಟ್ಟುಬಿಡುತ್ತಾರೆ. ಐವತ್ತು ಲಕ್ಷ ಸ್ಯಾಂಕ್ಷನ್ ಮಾಡಿದರೆ ದುಡ್ಡು ಕೊಡುವುದು ಒಂದು ಲಕ್ಷ ಅಥವಾ ಐವತ್ತು ಸಾವಿರ ಅದು ಮುಂದಿನ ಹತ್ತು ವರ್ಷ ಬಜೆಟ್ ಪುಸ್ತಕದಲ್ಲಿ ಬರುತ್ತಲೇ ಇರುತ್ತದೆ. ಮೂರನೆ ಒಂದು ಭಾಗ ಎಂದು ಇದ್ದರೆ ಯಾವ ಕೆಲಸವನ್ನು ಮಾಡಲು ಆಗುವುದಿಲ್ಲ ಐವತ್ತು ಲಕ್ಷಕ್ಕೆ ಸುಮಾರು 20 ಲಕ್ಷ ಗ್ರಾಂಟ್ ಇಡದಿದ್ದರೆ ಹೇಗೆ ಕೆಲಸವನ್ನು ಮಾಡಲು ಆಗುತ್ತದೆ? ಈ ರೀತಿ ಇಡಲು ಕಾರಣವೇನು? ಹಣಕಾಸು ಸಚಿವರು ದಯಮಾಡಿ ಲೋಕೋಪಯೋಗಿ ಇಲಾಖೆಯ ಕಾಯದರ್ಶಿಗಳು ಇರಬಹುದು, ಅಥವಾ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಈ ರಾಜ್ಯದಲ್ಲಿ ಯಾವ ಕಟ್ಟಡದ ಅವಶ್ಯಕತೆ ಇದೆ. ಇದಕ್ಕೇನು ಹಣ ಬೇಕು? ಯಾವುದಕ್ಕೆ ಪ್ರಿಯಾರಿಟಿ ಕೊಡಬೇಕು? ಅದನ್ನು ಪೂರ್ಣ ಮಾಡಲು ಕ್ರಮ ತೆಗೆದುಕೊಳ್ಳಬೇಕು. ನಾನು ನಾವು ಹೇಳಿದ್ದನ್ನೆ ಮಾಡಿ ಎಂದು ಹೇಳುವುದಿಲ್ಲ ಪ್ರಿಯಾರಿಟಿಮಾಡಿ ಅದರಲ್ಲಿ ಯಾವುದು ಎನ್ನುವುದನ್ನು ದಯಮಾಡಿ ತಾವು ಕೊಟ್ಟರೆ ಅವಶ್ಯಕತೆ ಇರತಕ್ಕ ಕಟ್ಟಡಗಳಿಗೆ ಹಣ ಒದಗಿಸಬಹುದು. ಕೆಲವು ಕಡೆ ಈವತ್ತು ಮಳೆಯಲ್ಲಿ ಜೂನಿಯರ್ ಕಾಲೇಜು ಕಟ್ಟಡ ಬಿದ್ದುಹೋಗುವ ಪರಿಸ್ಥಿತಿಯಲ್ಲಿದೆ. ಅನಂತರ ಅವಶ್ಯಕತೆ ಎಷ್ಟಿದೆ ಎಂಬುದನ್ನು ತೆಗೆದುಕೊಳ್ಳಿ ಕೆಲವು ಕಡೆ ಅವಶ್ಯಕತೆ ಇಲ್ಲದೆಯೆ ಕಟ್ಟಡಗಳನ್ನು ಕಟ್ಟಿ ಈವತ್ತು ಖಾಲಿ ಬಿದ್ದಿದೆ. ಅದಕ್ಕೆ ಅವಕಾಶವಾಗಬಾರದು ಎಂದು ನಾನು ಮನವಿ ಮಾಡುತ್ತೇನೆ. 5054 ಪಿ.ಡಬ್ಲ್ಯೂ.ಡಿ. ಕಟ್ಟಡ ಮತ್ತು ರಸ್ತೆ ಎರಡೂ ಆ ರೀತಿ ಆಗಬಾರದು ಹೋದ ವರ್ಷ ಎಂ.ಎಲ್.ಎ. ಗಳಿಗೆ 40 ಲಕ್ಷ ಕೊಟ್ಟರು. ಅದು ಏನಾಯಿತು? ಗ್ರಾಂಟ್ ಏನಿದೆ ಅದನ್ನು ಕೊಡಿ. 40 ಲಕ್ಷ ಕೊಟ್ಟುಬಿಟ್ಟು ಸುಮ್ಮನೆ ಕೆಲಸವೆ ಆಗದಿದ್ದರೆ 40 ಲಕ್ಷ ಎಂದರೆ ಎಂ.ಎಲ್.ಎ. ಗಳಿಗೆ ಚೀಟಿ ಬರೆದುಕೊಟ್ಟು 20 ಲಕ್ಷದ ಎರಡು ಕೆಲಸ ಕೊಟ್ಟಿರುತೇವೆ. ಎಂ.ಎಲ್.ಎ ಯವರು ಚೀಟಿ ಕೊಟ್ಟಿದ್ದಾರೆ ಆದರು ಈ ರೋಡ್ ಆಗಲಿಲ್ಲವೆಂದು ನಾವು ಊರಿಗೆ ಹೋದಾಗಲೆಲ್ಲ ಬೈಯುತ್ತಾರೆ. ಗ್ರಾಂಟ್ ಕೊಡದಿದ್ದರೆ ನಾವೇನು ಮಾಡಲು ಆಗುತ್ತದೆ? ಇದಲ್ಲದೆಯೆ ನಬಾರ್ಡ್ ಬಗ್ಗೆ ಹೇಳುವುದಾದರೆ 20 ತಿಂಗಳು ನಾವು ಅಧಿಕಾರದಲ್ಲಿ ಇದ್ದಂಥ ಕಾಲದಲ್ಲಿ ಮಾನ್ಯ ಧರ್ಮಸಿಂಗ್‌ರವರು ಮಾನ್ಯ ಸಿದ್ದರಾಮಯ್ಯನವರು ನಾವೆಲ್ಲರು ಇದ್ದಂಥ ಕಾಲದಲ್ಲಿ ನಬಾರ್ಡ್‌ನಲ್ಲಿ 525 ಕೋಟಿ ಮೊದಲಬಾರಿಗೆ, ನಮಗೆ ಬಂದಿದೆ ಐದು ವರ್ಷದಲ್ಲಿ ನಬಾರ್ಡ್‌ನಿಂದ ಎಷ್ಟು ಬಂದಿದೆ? ನಾವು 20 ತಿಂಗಳ ಅವಧಿಯಲ್ಲಿ ನಬಾರ್ಡ್‌ನಿಂದ ಎಷ್ಟು ತಂದಿದ್ದೇವೆ? ಇವತ್ತು ಕೂಡ ನಬಾರ್ಡ್‌ನಲ್ಲಿ ಕನಿಷ್ಟ ನಮ್ಮ ಗ್ರಾಮೀಣ

ಪ್ರದೇಶದ ರಸ್ತೆಗಳಿಗೆ ಎಷ್ಟು ಇರಬೇಕೋ ಅದನ್ನು ಮುಂದಿನ ದಿನಗಳಲ್ಲಿ ದಯಮಾಡಿ ಇಡಬೇಕು? ಏಕೆಂದರೆ ನಬಾರ್ಡ್‌ನಿಂದ ಹಣ ಬಂದರೆ ಹಣಕಾಸು ಇಲಾಖೆಯಿಂದ ವಾಪಸ್ ತರಬೇಕಾದರೆ ಬಹಳ ಕಷ್ಟವಾಗುತ್ತದೆ ಹೋಗುತ್ತದೆ. ನಬಾರ್ಡ್‌ನಿಂದ ಬಂದು ಆ ದುಡ್ಡನ್ನು ವಾಪಾಸ್ ಇಲಾಖೆ ಗ್ರಾಂಟ್‌ನ್ನು ರಿಲೀಸ್ ಮಾಡಬೇಕಿದ್ದರೆ, ಬೇರೆಯವರಿಂದ ಸಾಲ ತೆಗೆದುಕೊಂಡು ಕೊಡುವುದು ಮತ್ತೆ ಹಣಕಾಸು ಇಲಾಖೆಗೆ ಹೋಗಿ ವಾಪಾಸ್ ಎಕ್ಸಿಕ್ಯೂಟಿವ್ ಇಂಜಿನಿಯರ್, ಡಿವಿಜನ್‌ಗೆ ಬರಬೇಕಾದರೆ ಎಷ್ಟು ದಿನ ತೆಗೆದುಕೊಳ್ಳುತ್ತದೆ ಎಂಬುದನ್ನು ಮಾನ್ಯ ಉಪಮುಖ್ಯಮಂತ್ರಿಯವರು ದಯಮಾಡಿ ಉತ್ತರದಲ್ಲಿ ಹೇಳಬೇಕು. ಇದು ಒಂದು ಕಡೆ ಇನ್ನು ಕೇಂದ್ರದ ಸಿ.ಆರ್.ಎಫ್. ಫಂಡ್. ಕೇಂದ್ರ ಸರ್ಕಾರದಿಂದ ಸುಮಾರು 400 ಕೋಟಿ ಹಣ ಈ ಸಲ ತಂದಿದ್ದೇವೆ. 20 ತಿಂಗಳಿನಲ್ಲಿ ಇಂಟರ್ ಸ್ಟೇಟ್ ಕೂಡ ಸೇರಿಸಿ 525 ಕೋಟಿ ಹಣವನ್ನು ತಂದಿದ್ದೇವೆ. ಸಿ.ಆರ್.ಎಫ್. ಕೂಡ ಬಂದರೆ ಅದನ್ನು ರಿಲೀಸ್ ಮಾಡುವುದಕ್ಕೆ ಎಷ್ಟು ತಿಂಗಳು ಬೇಕಾಗುತ್ತದೆ ಎಂಬ ಬಗ್ಗೆ ದಯಮಾಡಿ ಸಭೆಯಲ್ಲಿ ಹೇಳಿ. ಡೆಲ್ಲಿಯಿಂದ ಬಂದು ಇಲ್ಲಿ ಹಣಕಾಸು ಇಲಾಖೆಗೆ ಹೋಗುತ್ತದೆ. ಅಲ್ಲಿಂದ ಅನುಮತಿ ಕೊಡಬೇಕಾದರೆ ಎಷ್ಟು ದಿನ ಬೇಕು? ರಾಜ್ಯದಲ್ಲಿ ಎಲ್ಲೆಲ್ಲಿ ಪೆಂಡಿಂಗ್ ಬಿಲ್ಲು ಇದೆ? ಅಲ್ಲಿ ದುಡ್ಡು ಖರ್ಚಾಗಿದ್ದರೆ ಮತ್ತೆ ಫರ್ದರ್ ಕಳಿಸಿಕೊಡಬಹುದು. ನಾವು ಇಷ್ಟೆಲ್ಲ ಸತತ ಪ್ರಯತ್ನಪಟ್ಟು ಈ ರೀತಿ ಹಣಕಾಸು ಇಲಾಖೆಯಲ್ಲಿ ಆಗುತ್ತಿದೆ, ಆ ರೀತಿ ಆಗಬಾರದು ಎಂದು ಮಾನ್ಯ ಉಪಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ ಏಕೆಂದರೆ ನಬಾರ್ಡ್ ಇರಬಹುದು ಸಿ.ಆರ್.ಎಫ್‌ದ ಇರಬಹುದು ಎಂ.ಡಿ.ಆರ್. ರಸ್ತೆ ಇರಬಹುದು, ಸ್ಟೇಟ್ ಹೈವೆ ಇರಬಹುದು, ರಸ್ತೆ ನಿಗಮವಿರಬಹುದು, ಯಾವುದಾದರು ಮಾಡಿ, ರಸ್ತೆ ನಿಗಮದಲ್ಲಿ ಕೆಲಸ ತೆಗೆದುಕೊಳ್ಳಿ ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಆದರೆ ಇವತ್ತು ಒಂದಕ್ಕೆ ಪ್ರಯಾರಿಟಿ ಕೊಡಬೇಕೆಂದು ಮಾನ್ಯ ಉಪಮುಖ್ಯಮಂತ್ರಿಯವರನ್ನು ಕೇಳುತ್ತೇನೆ. ಇದಲ್ಲದೆಯೆ ನಮ್ಮಲ್ಲಿ ಇವತ್ತು ಕಾರವಾರ, ಮಂಗಳೂರು, ಮಲ್ಪೆ ಬಂದರು ಇರಬಹುದು ಇದಕ್ಕೆ ನಾವು ಸುಮಾರು 375ಕೋಟಿ ರೂಪಾಯಿಗಳ ಮೂರು ಯೋಜನೆ ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಇದನ್ನು ಸಹ ಕೇಂದ್ರ ಸರ್ಕಾರದ ಮೂಲಕ ಒತ್ತಡ ತಂದು ಮಾಡಿಸಬೇಕು. ಏಕೆಂದರೆ ನಮ್ಮ ರಾಜ್ಯದಲ್ಲಿರುವ ಬಂದರುಗಳ ಅಭಿವೃದ್ಧಿಗೆ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ಕೇಂದ್ರ ಸರ್ಕಾರ ಇವತ್ತು ಕೊಟ್ಟಿಲ್ಲ ಅದಕ್ಕೆ ನೀವು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಬೇಕಾಗುತ್ತದೆ ಮಾನ್ಯ ವಿರೋಧ ಪಕ್ಷದ ನಾಯಕರದೇ ಕೇಂದ್ರ ಸರ್ಕಾರ ದೆಹಲಿಯಲ್ಲಿದೆ. ಅವರು ಇದರ ಬಗ್ಗೆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಕಡೆಗೆ ಮಾನ್ಯ ಜಯಪ್ರಕಾಶ್ ಹೆಗ್ಡೆಯವರಿದ್ದಾರೆ. ಈ ಕಡೆಗೆ ನಮ್ಮ ಜಿಲ್ಲಾ ಮಂತ್ರಿಗಳಾದ ನಾಗರಾಜ ಶೆಟ್ಟಿಯವರಿದ್ದಾರೆ. ನಾವು ಇದ್ದಂತಹ ಕಾಲದಲ್ಲಿ ಸುಮಾರು ಮೂರು ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮೊನ್ನೆ ನಾನು . minor port development ಬಗ್ಗೆ ಮಾತನಾಡುವಾಗ ಹೇಳಿದೆ. ಗುಜರಾತ್, ತಮಿಳುನಾಡು, ಆಂಧ್ರ ಪ್ರದೇಶ, ಕೇರಳ ಹೀಗೆ ಬೇರೆ ಎಲ್ಲಾ ರಾಜ್ಯಗಳಲ್ಲೂ port development ಗೆ ಹೆಚ್ಚು ಒತ್ತನ್ನು ಕೊಟ್ಟಿದ್ದಾರೆ. ಕರ್ನಾಟಕದಲ್ಲಿ ಮಾತ್ರ ಅದು ಇನ್ನೂ ಆಗಿಲ್ಲ ಜನತಾ ದಳ ಸರ್ಕಾರ ಅಧಿಕಾರದಲ್ಲಿದ್ದಾಗ container handlingಗೆ

ಕಾರಾವಾರ ಪೋರ್ಟ್ ಕೊಟ್ಟಿದ್ದೆವು, ಅದು ಇವತ್ತಿಗೂ ಜಾರಿಗೆ ಬಂದಿಲ್ಲ ಅದರ ಕಡತಗಳು ಇಂದಿಗೂ ಹಿಂದೆ ಮುಂದೆ ಓಡಾಡುತ್ತಿವೆ. ತಾವು ದಯವಿಟ್ಟು ಅದರ ಬಗ್ಗೆ ಹೆಚ್ಚು ಗಮನವನ್ನು ಕೊಡಬೇಕು. ಏಕೆಂದರೆ, ಇವತ್ತೂ concessions ಕೊಡಬಹುದು. ನಾಳೆ ಅದರಿಂದ ಬರತಕ್ಕಂಥ ಆದಾಯವನ್ನು ನೀವು ಲೆಕ್ಕ ಹಾಕಿ ನೋಡಿ. Minor port development ಗೆ ತಾವು ಹೆಚ್ಚು ಒತ್ತನ್ನು ಕೊಡಬೇಕು. Cheapest mode of transportation is waterways. ಅದರ ಬಗ್ಗೆ ದಯವಿಟ್ಟು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಹದೇವ್: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ರೇವಣ್ಣನವರ ಮಾತಿಗೆ ಒಂದು ಮಾತನ್ನು ಸೇರಿಸಬೇಕಾಗುತ್ತದೆ. ಇವತ್ತು ಶಾಸಕರ ನಿಧಿಗೆ 50 ಲಕ್ಷ ರೂಪಾಯಿಗಳಿಂದ 1 ಕೋಟಿ ರೂಪಾಯಿಗಳನ್ನು ಕೊಡವವರೆಗೆ ಬಹಳ ದೊಡ್ಡ ಪ್ರಮಾಣದಲ್ಲಿ ಚರ್ಚೆಯಾಗುತ್ತಿದೆ. ಬೆಂಗಳೂರು ಸಿಟಿ ಕಾರ್ಪೊರೇಷನ್‌ನಲ್ಲಿ ಒಂದು ವಾರ್ಡ್‌ನವರು ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಇದನ್ನೂ ಕೂಡ ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ಉತ್ತರ ಕೊಡುವಾಗ ಗಮನದಲ್ಲಿಟ್ಟುಕೊಳ್ಳಬೇಕು ಎಂದು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಮಲ್ಪೆ ಬಂದರಿನ ಬಗ್ಗೆ ಈಗಾಗಲೇ ನಾವು 165 ಕೋಟಿ ರೂಪಾಯಿಗಳ ಪ್ರಸ್ತಾವನೆಯೊಂದನ್ನು ಕಳುಹಿಸಿಕೊಟ್ಟಿದ್ದೇವೆ. ಅದೇ ರೀತಿ ಕಾರವಾರ ಬಂದರಿಗೆ ಸುಮಾರು 304 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಇದೆಲ್ಲಾ ಪ್ರಸ್ತಾವನೆಗಳು ಕೇಂದ್ರ ಸರ್ಕಾರದ ಮುಂದಿವೆ. ಇದನ್ನು ಕ್ಲಿಯರ್ ಮಾಡಿಸಲು ಸನ್ಮಾನ್ಯ ಮುಖ್ಯಮಂತ್ರಿಗಳು, ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಇಬ್ಬರೂ ಮಾನ್ಯ ವಿರೋಧ ಪಕ್ಷದ ನಾಯಕರನ್ನೂ ಸಹ ತಮ್ಮ ಜೊತೆಗೆ ಕರೆದುಕೊಂಡು ಹೋಗಿ ಎಂದು ಹೇಳುತ್ತೇನೆ. ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ. ತಮಿಳುನಾಡಿನವರಿಗೆ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. CRF ನಿಂದ ತಮಿಳುನಾಡಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ? ಬೇರೆ ರಾಜ್ಯಗಳಿಗೆ ಎಷ್ಟು ಕೊಟ್ಟಿದ್ದಾರೆ? ಎಂಬುದನ್ನು ನೋಡಬೇಕು. ಹಾಗೆಯೇ ಪೋರ್ಟ್ಸ್‌ಗಳಿಗೂ ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ನೋಡಿ. ಅದರಂತೆ ನಮ್ಮ ರಾಜ್ಯಕ್ಕೂ ಕೊಡುವಂತೆ ಮಾಡಬೇಕೆಂದು ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇನ್ನು ಇಂಧನ ಇಲಾಖೆ ಬಗ್ಗೆ ಹೇಳುವುದಾದರೆ, ಇಂಧನ ಇಲಾಖೆಯಲ್ಲಿ ನಮ್ಮ ರಾಜ್ಯದಲ್ಲಿ ಕಳೆದ ಐದು ವರ್ಷಗಳ ಸಾಧನೆಯೇನು? ಅಥವಾ ಹಿಂದಿನ ನಲವತ್ತು ವಹರ್ಷಗಳ ಸಾಧನೆಯೇನು? ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ ಈ ದೇಶಕ್ಕೆ ಸ್ವಾತಂತ್ರ್ಯ ದೊರೆತು ಸುಮಾರು 50 ವರ್ಷಗಳಿಗೂ ಮಿಗಿಲಾಯಿತು. ಈ ರಾಜ್ಯದಲ್ಲಿನ ಸುಮಾರು 63 ತಾಲ್ಲೂಕುಗಳಲ್ಲಿ ಐದು ಗಂಟೆಗಳ ಕಾಲ ಕೂಡ ಕರೆಂಟ್ ಕೊಡಲಿಕ್ಕೆ ನಮಗಾಗುತ್ತಿಲ್ಲ ಇದು ನನ್ನ ಮಾಹಿತಿಯಲ್ಲ. ಹಿಂದಿನ ಐದು ವರ್ಷಗಳ ಕಾಲ ಒಂದು ಸರ್ಕಾರ ಇತ್ತು ನಾನು ಇದ್ದಂತಹ ಸರ್ಕಾರ 20 ತಿಂಗಳ ಕಾಲ ಇತ್ತು ಬೇಕಾದರೆ ತಾವು ಅದರ ಬಗ್ಗೆ ವರದಿಯನ್ನು ತರಿಸಿಕೊಳ್ಳಿ. ನಮ್ಮ ರಾಜ್ಯದಲ್ಲಿ ಎಷ್ಟು ಸ್ಟೇಷನ್ ಇವೆ? ರಾಜ್ಯದಲ್ಲಿ ಸುಮಾರು 660 ಸ್ಟೇಷನ್ಸ್ ಇರಬೇಕು. ಕರೆಕ್ಟಾಗಿ 12–14 ಗಂಟೆಗಳ ಕಾಲ ವಿದ್ಯುತ್ ಕೊಡುತ್ತೇವೆಂದರೆ ಕನಿಷ್ಟ ನಮಗೆ ಇನ್ನೂ 500–600 ಸ್ಟೇಷನ್ಸ್‌ಗಳು ಬೇಕಾಗುತ್ತವೆ. ಸರ್ಕಾರಗಳು ಬರುತ್ತವೆ. ಹೋಗುತ್ತವೆ. 2000–01ರಲ್ಲಿ ಸರ್ಕಾರದವರು ಸಹಾಯ

ಧನವನ್ನು ಕೊಡುತ್ತೇವೆ ಎಂದು announce . ಮಾಡಿದರು. ಬಡ್ಜೆಟ್ಟಿನಲ್ಲಿ ಅದಕ್ಕಾಗಿ ಇಟ್ಟಿದ್ದು 1981 ಕೋಟಿ ರೂಪಾಯಿಗಳು ಆದರೆ ಕೊಟ್ಟಿದ್ದು ಕೇವಲ708 ಕೋಟಿ ರೂಪಾಯಿಗಳು ಮಾತ್ರ ಅದೊಂದೇ ವರ್ಷದಲ್ಲಿ 1200 ಕೋಟಿ ರೂಪಾಯಿಗಳ ಬಾಕಿ ಉಳಿಯಿತು. ಏಕೆಂದರೆ ಬಡ್ಜೆಟ್ಟಿನಲ್ಲಿ ಇಟ್ಟಂತಹ ಹಣವನ್ನೇ ಕೊಡಲಿಲ್ಲ ಸಹಾಯ ಧನವನ್ನು ಕೊಡದಿದ್ದರೆ KEB ಯನ್ನು ಹೇಗೆ improvement ಮಾಡಲಿಕ್ಕಾಗುತ್ತದೆ? ಅದನ್ನು ಯಾರು ಮಾಡುತ್ತಾರೆ? ಅದೇ ರೀತಿಯಾಗಿ 2001–02ರಲ್ಲಿ 2200 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು, ಅದರಲ್ಲಿ ಕೊಟ್ಟಿದ್ದು 1872 ಕೋಟಿ ರೂಪಾಯಿಗಳನ್ನು ಮಾತ್ರ ಇದೇ ರೀತಿಯಾಗಿ ಕಳೆದ ಐದು ವರ್ಷಗಳೆಲ್ಲವನ್ನೂ ಸೇರಿಸಿದರೆ ಇವತ್ತು KEB ಗೆ ಸಹಾಯ ಧನವಾಗಿ ಕೊಡುವಂತಹ ಹಣವೇ ಸುಮಾರು 2539 ಕೋಟಿ ರೂಪಾಯಿಗಳು ಇದೆ. ಇದು ಐದು ವರ್ಷಗಳ ಕೊರತೆಯಾಗಿದೆ. Last year ದ್ದು 1750 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಇಲ್ಲಿ ನಮಗೆ ಕೊಟ್ಟಿರುವ ಮಾಹಿತಿ ಪ್ರಕಾರ ಅವರು 1250 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ರೈತರು ಹಾಕಿಕೊಂಡಿರುವ IP sets connection ಅನ್ನು ಇವತ್ತು ತೆಗೆಯಲಿಕ್ಕೆ ಹೋದರೆ ಅವರು ಗಲಾಟೆ ಮಾಡುತ್ತಾರೆ. ಕೆಲವು ಕಡೆಗಳಲ್ಲಿ ಪಂಚಾಯಿತಿಯವರು ಕುಡಿಯುವ ನೀರಿನ ವಿಚಾರದಲ್ಲಿ ಒಂದೇ ಒಂದು ಬಿಲ್ ಕಟ್ಟುವುದಿಲ್ಲ ಅಲ್ಲಿರುವ ಜನ ಶಾಸಕರನ್ನು ಸ್ಥಳೀಯ ಮುಖಂಡರುಗಳನ್ನು ಬಯ್ಯುತ್ತಾರೆ. ಯಾವ ಊರಿಗೆ ಹೋದರೂ ಇವತ್ತು ಐ.ಪಿ. ಸೆಟ್ಸ್‌ಗಳು ಜಾಸ್ತಿ ಇವೆ. ಕರೆಂಟ್ ಬಿಲ್ ಕಟ್ಟದಿರುವವರು ಪಂಚಾಯಿತಿಯವರು. ಆದರೆ ಈ ಶಾಸಕ ಬಂದ ಮೇಲೆ ಕುಡಿಯುವ ನೀರಿಲ್ಲದಂತಾಗಿದೆ. fuse ಕಿತ್ತು ಹಾಕಿದ್ದಾರೆ ಎಂದು ಜನ ಹೇಳುತ್ತಾರೆ. ಈ ತರಹದ ಪರಿಸ್ಥಿತಿ ಇದೆ. ಇದಕ್ಕಾಗಿ ಕೊಟ್ಟಿದ್ದ ದುಡ್ಡನ್ನು ಬೇರೆಯದಕ್ಕೆ ಬಳಸಿಕೊಂಡಿರುತ್ತಾರೆ. ಮಣ್ಣು ಎರಚುವುದಕ್ಕೋ ಅಥವಾ ಇನ್ನ್ಯಾವುದಕ್ಕೂ ಆ ಹಣವನ್ನು ಅವರು ಬಳಕೆ ಮಾಡಿಕೊಂಡಿರುತ್ತಾರೆ. ಬೇಲೂರು ಘೋಷಣೆ ಪ್ರಕಾರ 25 ಲಕ್ಷ ರೂಪಾಯಿಗಳ water supply ಯೋಜನೆಯನ್ನೂ ಸಹಿತ ಪಂಚಾಯಿತಿಗೆ ಕೊಡಬೇಕಾದಂತಹ ಪರಿಸ್ಥಿತಿ ಬಂದಿದೆ. ಅಲ್ಲಿನ ಪಂಚಾಯತಿ ಸೆಕ್ರೆಟರಿ ಯಾರು? ಅವನು ಎಸ್.ಎಸ್.ಎಲ್.ಸಿ. ಓದಿದವನಾಗಿರುತ್ತಾನೆ. ಚಾನೆಲ್ ಏರಿ ಮೇಲೆ ಯಾರು ಕೆಲಸ ಮಾಡುತ್ತಿದ್ದನೋ, ಅವನನ್ನು ಇವತ್ತು ಪಂಚಾಯಿತಿ ಕಾರ್ಯದರ್ಶಿ ಮಾಡಿಟ್ಟಿದ್ದಾರೆ. ಅವನ ಕೈಯಲ್ಲಿ 25 ಲಕ್ಷ ರೂಪಾಯಿಗಳ ಕಾಮಗಾರಿಗೆ ಟೆಂಡರ್ ಮಾಡಿಸಿ, ನಿರ್ವಹಣೆ ಮಾಡಿಸುವ ಅಧಿಕಾರ ಇದೆಯೇ? ಎಂಬುದನ್ನು ತಾವು ದಯಮಾಡಿ ಹೇಳಿ. ಅವನಿಗೆ ಆ ಶಕ್ತಿ ಇದೆಯೇ? ಎಂದು ದಯಮಾಡಿ ಹೇಳಿ. 25 ಲಕ್ಷ ರೂಪಾಯಿಗಳ ಕಾಮಗಾರಿಗೆ ಅವನು ಟೆಂಡರ್ ಕರೆಯಬೇಕು

ಶ್ರೀ ಕೆ.ವೆಂಕಟೇಶ್: ಬೇಲೂರು ಘೋಷಣೆಯನ್ನು ಬದಲಾವಣೆ ಮಾಡಿ.

ಶ್ರೀ ಹೆಚ್.ಡಿ ರೇವಣ್ಣ: ಅದಕ್ಕಾಗಿಯೇ ನಾನು ನಿಮಗೆ ಬಿಟ್ಟಿದ್ದೇವೆ. ಅದನ್ನು ಬದಲಾವಣೆ ಮಾಡಿ ನಾವೇನು ಅದನ್ನು ಬೇಡಿ ಎಂದು ಹೇಳುತ್ತೇವೆಯೇ? ಪಂಚಾಯಿತಿ ಲೆವೆಲ್‌ನಲ್ಲಿ ಇರುವುದನ್ನಷ್ಟೇ ನಾನಿಲ್ಲಿ ಹೇಳುತ್ತಿದ್ದೇನೆ. ಬೇಲೂರು ಘೋಷಣೆಯನ್ನಾದರೂ ಮಾಡಿ ಅಥವಾ ಇನ್ನ್ಯಾವುದಾದರೂ ಘೋಷಣೆಯನ್ನಾದರೂ ಮಾಡಿ. ಜನ ಸಾಮಾನ್ಯರಿಗೆ ಅನುಕೂಲವಾಗುವಂತಹ ಕೆಲಸ ಮಾಡಿಕೊಡಿ ಎಂದು ನಾನು ಕೇಳುತ್ತಿದ್ದೇನೆ. ಯಾವ ಘೋಷಣೆಯನ್ನಾದರೂ ಮಾಡಿಕೊಳ್ಳಿ

ಜನಸಾಮಾನ್ಯರಿಗೆ ಯಾವುದೇ ರೀತಿಯ ತೊಂದರೆಯಾಗದ ರೀತಿಯಲ್ಲಿ ಕೆಲಸವಾಗುವಂತಹ ರೀತಿಯಲ್ಲಿ ವ್ಯವಸ್ಥೆ ಆಗಬೇಕು ಎಂದಷ್ಟೇ ನಾನಿಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಅಧಿಕಾರವನ್ನೂ ಕೂಡ ಬೇಕಾದರೆ ಪಂಚಾಯಿತಿಯವರ ಕೈಯ್ಯಲ್ಲೇ ಕೊಡಿ, ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ ಆದರೆ ಇದನ್ನು ಜನಸಾಮಾನ್ಯರಿಗೆ ಅನುಕೂಲವಾಗುವಂತಹ ರೀತಿಯಲ್ಲಿ ಮಾಡಬೇಕು.

ಶ್ರೀ ಮಹದೇವ್: ಮನೆಗಳ ಹಂಚಿಕೆ ವಿಚಾರದಲ್ಲಿ ಇಲ್ಲಿರತಕ್ಕಂಥ ನಮ್ಮ ಎಲ್ಲಾ ಶಾಸಕರ ಅನುಭವಗಳನ್ನು ಹಂಚಿಕೊಂಡರೆ ಚೆನ್ನಾಗಿರುತ್ತದೆ. ಒಂದು ಪಂಚಾಯಿತಿಗೆ 40 ಮನೆಗಳೆಂದು ಕೊಟ್ಟಿದ್ದಾರೆ. ನಾವು ಪಂಚಾಯಿತಿ ಸದಸ್ಯರಿಗೆ ಮನೆಗಳನ್ನು ಕೊಡಬೇಡಿ ಎಂದು ಹೇಳುತ್ತಿಲ್ಲ. ಆದರೆ ಅಲ್ಲಿ ನಡೆದಿರತಕ್ಕಂಥ ಅಧ್ವಾನ ಹೇಗಿದೆ ಎಂದರೆ, ಯಾರು MLA? ಅವನಿಗೆ ಏಕೆ ಕೊಡಬೇಕು? ಆ ಮಟ್ಟದಲ್ಲೂ ಕೂಡ ವಿವಾದ ನಡೆದಿದೆ. ಇದನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಹೆಚ್.ಡಿ.ರೇವಣ್ಣ : ನಾವು ಎಷ್ಟು ವರ್ಷಗಳ ಕಾಲ ಜನರಿಗೆ ಸುಳ್ಳು ಹೇಳಲಿಕ್ಕಾಗುತ್ತದೆ? ಆ ದೃಷ್ಟಿಯಿಂದ ನಾನು ಹೇಳುತ್ತೇನೆ, ದಯಮಾಡಿ ಮುಂದಿನ ದಿವಸಗಳಲ್ಲಿ KPTCL ಗೆ ಕೊಡಬೇಕಾದ ಹಣವನ್ನು ಕೊಟ್ಟುಬಿಡಿ. 2539 ಕೋಟಿ ರೂಪಾಯಿಗಳ ಹಣವನ್ನೇನು ಅದಕ್ಕೆ ಕೊಡಬೇಕು, ಅದನ್ನು ಕೊಡಿ ನೀವು ಎಷ್ಟು ಕೊಡುತ್ತೀರೋ ನನಗೆ ಗೊತ್ತಿಲ್ಲ ಅದಕ್ಕಾಗಿ ನೀವೇನು ಪ್ರಾವಿಷನ್ ಮಾಡಿಟ್ಟುಕೊಂಡಿದ್ದೀರೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಸೂಕ್ತವಾಗಿ ಹೇಳಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ಕಳೆದ ಐದಾರು ವರ್ಷಗಳಲ್ಲಿ ವರ್ಷಕ್ಕೆ 10-12 ಸ್ಟೇಷನ್‌ಗಳನ್ನಷ್ಟೇ ಮಾಡುತ್ತಿದ್ದೇವೆ. ನಾವು ಹಿಂದೆ ಕಳೆದ 20 ತಿಂಗಳ ಅವಧಿಯಲ್ಲಿ ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ ಇದಕ್ಕಾಗಿ ಒಂದು ಕಾರ್ಯಕ್ರಮೊಂದನ್ನು ರೂಪಿಸಿದ್ದೆವು. ನಾನು ಒಬ್ಬ ಸದಸ್ಯನಾಗಿ ಸನ್ಮಾನ್ಯ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಕನಿಷ್ಟ ನಾವು ಈ ವರ್ಷ ಹೆಚ್ಚು ಸ್ಟೇಷನ್‌ಗಳನ್ನು ಮಾಡಬೇಕು. ಸಂಬಂಧಪಟ್ಟಂತಹ ಅಧಿಕಾರಿಗಳು ಒಂದು ವರ್ಷಕ್ಕೆ 365 ಸ್ಟೇಷನ್‌ಗಳನ್ನು ಮಾಡಬೇಕೆಂದು ಒಂದು ದೊಡ್ಡ ನಿರ್ಣಯವನ್ನು ಮಾಡಿದ್ದಾರೆ. ಇದಕ್ಕೆ 2006-07ರಲ್ಲಿ 6885 ಕೋಟಿ ರೂಪಾಯಿಗಳನ್ನು system improvement ಇರಬಹುದು, ಹೊಸದಾಗಿ ಮಾರ್ಗದ ಕಂಬ ಎಳೆಯುವುದು ಇರಬಹುದು, ಲೈನ್ ಎಳೆಯುವುದು ಇರಬಹುದು, ಇದೆಲ್ಲಕ್ಕೂ ಇವತ್ತು ಸುಮಾರು 6885 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಸರ್ಕಾರ ಅದಕ್ಕೆ ಹೆಚ್ಚು ಒತ್ತು ಕೊಡಬೇಕು. ನೀವು ಸಾಲದ ರೂಪದಲ್ಲಾದರೂ ತೆಗೆದುಕೊಳ್ಳಿ ಅಥವಾ ಇನ್ನ್ಯಾವುದೇ ರೂಪಾದಲ್ಲಾದರೂ ತೆಗೆದುಕೊಳ್ಳಿ. ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು ಕನಿಷ್ಟ 10-12 ಗಂಟೆಗಳ ಕಾಲ ಕರೆಂಟ್ ಕೊಡುವಂತಹ ಕಾರ್ಯಕ್ರಮವನ್ನು ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದಲ್ಲದೆ, ವಿದ್ಯುತ್ ಕ್ಷೇತ್ರದ ಬಗ್ಗೆ ಸಹ ಹೇಳ ಬಯಸುತ್ತೇನೆ, ಕೆಲವು ಕಡೆ ಭಾಗ್ಯಜೋತಿ, ಕುಟೀರ ಜ್ಯೋತಿ ಇರಬಹುದು, ಅಥವಾ IP sets confirmationಮಾಡುವುದು ಇರಬಹುದು. ಒಂದು ಸಾರಿ ನಾವು 10 ಸಾವಿರ ರೂಪಾಯಿಗಳನ್ನು ಕಟ್ಟಬೇಕೆಂದು ಮಾಡಿದೆವು. ಲಾಸ್ಟ್ ಟೈಮ್ ಅದಕ್ಕಾಗಿ 178 ಕೋಟಿ ರೂಪಾಯಿಗಳ ಸಬ್ಸಿಡಿ ಹಣ ಇಟ್ಟಿದ್ದರು. ಅದನ್ನು ಏಕೆ ಕೊಡಲಿಲ್ಲವೋ ಗೊತ್ತಿಲ್ಲ. ಅಕ್ರಮ-ಸಕ್ರಮದ ಬಗ್ಗೆ 178 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ

ಎಂದು ಬಜೆಟ್ ಭಾಷಣದಲ್ಲೂ ಅನೌನ್ಸ್ ಮಾಡಲಾಯಿತು, ಇತರ ಕಡೆಗಳಲ್ಲೂ ಮಾಡಲಾಯಿತು. ಸುಮಾರು 70 ಸಾವಿರ ರೈತರು ಏನೋ ಒಂದು ನಂಬಿಕೆಯ ಮೇಲೆ ದುಡ್ಡನ್ನು ಕಟ್ಟಿದ್ದಾರೆ. ಆದರೆ ಇವತ್ತು ಒಂದು ಪೈಸೆ ಸಹಾ ಹಣವನ್ನು ರಿಲೀಸ್ ಮಾಡಲಿಲ್ಲ. ದಡ್ಡು ರಿಲೀಸ್ ಮಾಡದಿದ್ದರೆ. ಅಧಿಕಾರಿಗಳು ಹೇಗೆ ಅಕ್ರಮ–ಸಕ್ರಮ ಮಾಡುತ್ತಾರೆ? ಇವತ್ತು ಪಾಪ 10 ಸಾವಿರ ರೂಪಾಯಿಗಳನ್ನು ತುಂಬಿ ರೈತ ಕುಳಿತಿದ್ದಾನೆ. ಇದರಿಂದ ಸರ್ಕಾರಕ್ಕೂ ಮತ್ತು KPTCL ಗೂ burden ಬರುತ್ತದೆ. ಆದರೆ ನಾವು ಒಂದು ಕಾರ್ಯಕ್ರಮ ಎಂದು ಘೋಷಣೆ ಮಾಡಿದ ಮೇಲೆ ಅದನ್ನು ಜಾರಿಗೊಳಿಸುವ ಬಗ್ಗೆ ಸರ್ಕಾರ ಗಮನ ಕೊಡಬೇಕಲ್ಲವೇ? ಅದನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ. ಯಾರೇ ಆಗಲಿ ಇರುವ ವಿಷಯವನ್ನೇ ಹೇಳಬೇಕಲ್ಲವೇ? ನಾನೇನು ಸರ್ಕಾರದ ಪರವಾಗಿ ಅಥವಾ ಇನ್ನೊಬ್ಬರ ವಿರುದ್ಧವಾಗಿ ಹೇಳಲಿಕ್ಕೆ ಇಲ್ಲಿ ಎದ್ದು ನಿಂತಿಲ್ಲ

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ರೇವಣ್ಣನವರೆ, ನೀವೇ ಆಗ ಮಂತ್ರಿಗಳಾಗಿದ್ದಿರಿ.

ಶ್ರೀ ಹೆಚ್.ಡಿ.ರೇವಣ್ಣ: ನಾನು ಮಂತ್ರಿಗಳಾಗಿದ್ದರಿಂದಲೇ 20 ತಿಂಗಳಿನಲ್ಲಿ 365 ಸ್ಟೇಷನ್ಸ್‌ಉಗೆ ಟೆಂಡರ್ ಕರೆಸಿ ಮಾಡಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: Un-authorised regularisation OYT scheme ಜಾರಿಗೆ ಬಂದಾಗ ನೀವೇ ಮಂತ್ರಿಗಳಾಗಿದ್ದಿರಿ.

ಶ್ರೀ ಹೆಚ್.ಡಿ.ರೇವಣ್ಣ: ಮಾಧುಸ್ವಾಮಿಯವರೆ, ಅದನ್ನು implement ಮಾಡಿ ಮುಂದುವರೆಸಿ ಎಂದು ನಾನು ಇಲ್ಲಿ ಕೇಳುತ್ತಿದ್ದೇನೆ ಅದಕ್ಕೆ ಬೇಕಾದಂತಹ ಹಣವನ್ನು ಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನೀವು ಅದನ್ನು ಮಾಡಿಲ್ಲವಲ್ಲಾ? ಅದಕ್ಕೆ ನೀವು ಉತ್ತ ರ ಹೇಳಿ. OYT scheme ಇವತ್ತಿನವರೆಗೂ transformer ಹಾಃಕಿಕೊಟ್ಟಿಲ್ಲ, Unauthorised ಆಗಿರುವವರಿಗೆ materials ಕೊಟ್ಟು ಯಾರಿಗೂ service ಕೊಟ್ಟಿಲ್ಲ ಅದು ಏನಾಯಿತು ಎಂದು ಹೇಳಿ?

ಶ್ರೀ ಹೆಚ್.ಡಿ.ರೇವಣ್ಣ: ನಾನು ಇದ್ದಂತಹ ಕಾಲದಲ್ಲಿ 365 ಸ್ಟೇಷನ್ಸ್ ಮಾಡುವುದಕ್ಕೆ ನಿರ್ಣಯಮಾಡಿ, ಅದಕ್ಕೆ ಪ್ರೋಗ್ರಾಮ್ ಹಾಕಿ, ಸುಮಾರು 6855 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಮಂಜೂರಾತಿ ಮಾಡಿಸಿದ್ದೇನೆ. ಅದಲ್ಲದೆ ಸುಮಾರು ಟಿಸಿಗಳನ್ನು ಹಾಕಿದ್ದೇವೆ, ಕೇಂದ್ರದ ರಾಜೀವ್‌ಗಾಂಧಿ ಸ್ಕೀಮ್‌ನಲ್ಲಿ ಮೂರು ತಿಂಗಳಲ್ಲಿ ಸುಮಾರು 1,200 ಕೋಟಿ ರೂಪಾಯಿಗಳಿಗೆ ಒಂದು ಸ್ಕೀಮ್ ಮಾಡಿ 9 ರಿಂದ 17 ತಾಲ್ಲೂಕುಗಳನ್ನು ಕ್ಲೀಯರ್ ಮಾಡಿಸಿದ್ದೇವೆ. ಇನ್ನು 9 ತಾಲ್ಲೂಕುಗಳ ಪ್ರಸ್ತಾವನೆ ಕೇಂದ್ರ ಸರ್ಕಾರದ ಮುಂದೆ ಇದೆ. ಅದನ್ನು ಮಾಡಿಸಿ ಎಂದು ನಾನು ಮನವಿ ಮಾಡುತ್ತಿದ್ದೇನೆ. ಏಕೆಂದರೆ, ರಾಜ್ಯದ ಸುಮಾರು 54 ಲಕ್ಷ ಕುಟುಂಬಗಳಿಗೆ ಪುಕ್ಕಟೆ ಕರೆಂಟ್ ಕೊಡುವಂತಹ ಕಾರ್ಯಕ್ರಮ ಅದು. ಕೇಂದ್ರ ಸರ್ಕಾರದವರು 90 ಪರ್ಸೆಂಟ್ ಮಾಡುತ್ತಾರೆ, 10 ಪರ್ಸೆಂಟ್ ರಾಜ್ಯ ಸರ್ಕಾರದ್ದು ಇದೆ. ಕೇಂದ್ರ ಸರ್ಕಾರದವರು 90 ಪರ್ಸೆಂಟ್ ಸಬ್ಸಿಡಿ ಕೊಡುತ್ತಾರೆ, 10 ಪರ್ಸೆಂಟ್ ರಾಜ್ಯ ಸರ್ಕಾರದ್ದು ಇದೆ. ಏನು 9 ತಾಲ್ಲೂಕುಗಳು ಇವೆ. ಅದನ್ನೂ ಮುಂದುವರೆಸಬೇಕೆಂದು ನಾನು ಮನವಿ ಮಾಡುತ್ತೇನೆ. ಮುಂದಿನ ದಿನಗಳಲ್ಲಿ ವಿದ್ಯುತ್ ಉತ್ಪಾದನೆಗೆ

ರಾಜ್ಯದಲ್ಲಿ ಒಂದು ಗ್ರಿಡ್ ಹಾಕಬೇಕೆಂದು ಮಾಡುತ್ತಿದ್ದಾರೆ. ಸುಮಾರು ನಾಲ್ಕುವರೆ ಸಾವಿರ ಮೆ.ವ್ಯಾ.ನ ಒಂದು ಗ್ರಿಡ್. ಮಾನ್ಯ ದೇಶಪಾಂಡೆ ಸಾಹೇಬರು ವಿರೋಧ ಮಾಡುತ್ತಿದ್ದಾರೆಂದು ಕೇಳಿದೆ, ಮುಖ್ಯ ಮಂತ್ರಿಗಳು, ಉಪ ಮುಖ್ಯ ಮಂತ್ರಿಗಳು ಮತ್ತು ದೇಶಪಾಂಡೆಯವರು ಎಲ್ಲರೂ ಕೂತು ಒಂದು ನಿರ್ಣಯ ಮಾಡಿ ಕೇಂದ್ರ ಸರ್ಕಾರದಿಂದ ನಾಲ್ಕುವರೆ ಸಾವಿರ ಮೆ.ವ್ಯಾ. ವಿದ್ಯುತ್ತನ್ನು ಮಾಡುವಂತಹ ಗ್ರಿಡ್ ಬರುತ್ತದೆ ಅದನ್ನು ಮಾಡುವುದಕ್ಕೆ ಅವರೆಲ್ಲರೂ ಸೇರಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡುತ್ತೇನೆ. ವಿರೋಧ ಮಾಡುತ್ತಿದ್ದಾರೆಂದು ಹೇಳಲಿಲ್ಲ. ಅವರೆಲ್ಲಾರ ಸಲಹೆ ತೆಗೆದುಕೊಂಡು ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ 4.50 ಮೆ.ವ್ಯಾ. ವಿದ್ಯುತ್ತನ್ನು ಉತ್ಪಾದನೆ ಮಾಡತಕ್ಕಂತಹ ಗ್ರಿಡ್ ಬರುತ್ತದೆ, ಅದನ್ನು ಮಾಡುವುದಕ್ಕೆ ಅವರು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಸಂಬಂಧಪಟ್ಟಂತಹ ಅಧಿಕಾರಿಗಳು ಸೇರಿ ಕ್ರಮತೆಗೆದುಕೊಳ್ಳಲಿ ಎಂದು ಹೇಳುತ್ತಿದ್ದೇನೆ ಹೊರತು ಬೇರೆ ತರಹ ಅವರ ಬಗ್ಗೆ ನಾನು ಛಾರ್ಜ್ ಮಾಡುತ್ತಿಲ್ಲ. ಇದಲ್ಲದೆ, ಇವತ್ತಿನ ದಿವಸ, ಮುಂದಿನ ದಿನಗಳಲ್ಲಿ ನಾಲ್ಕೈದು ವರ್ಷಗಳಲ್ಲಿ 4.500 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡದೆ ಹೋದರೆ ಕಷ್ಟ ಎಂದು ನಾನು ಮನವಿ ಮಾಡುತ್ತಿದ್ದೇನೆ. ಇದಲ್ಲದೆ, ಇವತ್ತಿನ ದಿವಸ, ನಾವು ಎಲ್ಲರೂ ರೈತರ ಬಗ್ಗೆ ಮಾತನಾಡುತ್ತೇವೆ ಕಾಂಗ್ರೆಸ್ ಪಕ್ಷದವರೂ ರೈತರು ಎಂದು ಹೇಳುತ್ತಾರೆ, ಜೆಡಿಎಸ್ ಪಕ್ಷದವರೂ ರೈತರು ಎಂದು ಹೇಳುತ್ತಾರೆ. ಬಿಜೆಪಿಯವರೂ ರೈತರೂ ಎಂದು ಹೇಳುತ್ತಾರೆ. ಆದರೆ ರೈತರ ಕಾರ್ಯಕ್ರಮಕ್ಕೆ ಬಂದಾಗ ಆ ಫೈಲುಗಳು ಸರ್ಕಾರಕ್ಕೆ ಹೋದರೆ ನಾಲ್ಕು ತಿಂಗಳು, ಐದು ತಿಂಗಳು ನಿಲ್ಲಲು ಕಾರಣವೇನು? ಏಕೆಂದರೆ ರೈತರು ಎನ್ನುವ ಪದ ಏನಾದರೂ ತೆಗೆದು ಹಾಕಿ ಬಿಟ್ಟು ಬೇರೆ ತರಹ ಏನಾದರೂ ಹೆಸರು ಇಡಬೇಕಾಗುತ್ತದೆ ಅಷ್ಟೆ. ರೈತರು ಎಂದರೆ ಸಾಕು ಆ ಫೈಲನ್ನು ನಾಲ್ಕು ತಿಂಗಳು, ಐದು ತಿಂಗಳು ಇಟ್ಟುಕೊಳ್ಳುತ್ತಾರೆ. ಬೇರೆ ಫೈಲ್ ಇದ್ದರೆ ಸಾಯಂಕಾಲದ ಒಳಗೆ ಕ್ಯಾಬಿನೆಟ್‌ಗೆ ಹೋಗಿರುತ್ತದೆ. ರೈತರ ಫೈಲ್‌ಇದೆ ಎಂದರೆ ನಾಲ್ಕೈದು ತಿಂಗಳು ತೆಗೆದುಕೊಳ್ಳುತ್ತಾರೆ. ಮಾನ್ಯ ಸಭಾಧ್ಯಕ್ಷರೆ, ಇದಕ್ಕೆ ಏನಾದರೂ ಪರಿಹಾರ ಕಂಡು ಹಿಡಿಯಬೇಕು. ರೈತರು ಎನ್ನುವ ಪದವನ್ನೇ ನಾವು ತೆಗೆಯ ಬೇಕಾಗುತ್ತದೆ. ಏಕೆಂದರೆ, ಓಟಿಗೋಸ್ಕರ ನಾವು ಎಲ್ಲಾ ಪಕ್ಷದವರು ರೈತರು ಎಂದು ಹೇಳುತ್ತೇವೆ. ನಮ್ಮ ಕರ್ನಾಟಕ ಹಾಲು ಮಹಾ ಮಂಡಳಿಯ ಒಂದು ಉದಾಹರಣೆ ಹೇಳುತ್ತೇನೆ. ನಮ್ಮಲ್ಲಿ ವರ್ಷಕ್ಕೆ 80,000 ಕ್ವಿಂಟಾಲ್ ಜೋಳವನ್ನು ನಾವು ಖರೀದಿ ಮಾಡುತ್ತೇವೆ. ಮಾಧುಸ್ವಾಮಿಯವರೂ ಮಹಾ ಮಂಡಳದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ನಾಲ್ಕು ಪಶು ಆಹಾರ ಘಟಕಗಳು ಇವೆ. ನಮ್ಮಲ್ಲಿರುವ ನಾಲ್ಕು ಘಟಕಗಳೂ ಲಾಸ್ ಆಗಿವೆ. ಖಾಸಗಿಯವರ ಪೈಪೋಟಿಯೊಂದಿಗೆ ನಾಲ್ಕು ಘಟಕಗಳು ರಾಜ್ಯದಲ್ಲಿ ಉತ್ತಮವಾಗಿ ಕೆಲಸ ಮಾಡಿ ಪ್ರತಿ ತಿಂಗಳು 10,000 ಟನ್ ಹಾಲು ಉತ್ಪಾದನೆ ಮಾಡುತ್ತಿದ್ದೇವೆ. ಸುಮಾರು 8 ಕೋಟಿ ರೂಪಾಯಿ ಲಾಭ ಮಾಡಿದ್ದೇವೆ. ಲಾಭ ಬಂದಿದ್ದು ಮತ್ತೆ ರೈತರಿಗೆ ವಾಪಸ್ ಕೊಡುತ್ತಿದ್ದೇವೆ. ಸುಮಾರು ಒಂದು ಟನ್‌ಗೆ ಎಂಟು ನೂರು ರೂಪಾಯಿಯಂತೆ ನಾವು ಕ್ಯಾಟ್ಲಫಿಡ್ ರೇಟ್ ಇಳಿಸುತ್ತೇವೆ. ಲಾಭ ಬಂದಿದ್ದು ಮತ್ತೆ ವಾಪಸ್ ರೈತರಿಗೆ ಕೊಡುತ್ತೇವೆ. ಸುಗ್ಗಿಯಲ್ಲಿ ಯಾವುದಾದರೂ ಪದಾರ್ಥ ಸಿಕ್ಕಾಗ, ಉದಾಹರಣೆಗೆ ಜೋಳ, ಸುಗ್ಗಿಯಲ್ಲಿ ಒಂದು ಕ್ವಿಂಟಾಲ್ ಜೋಳ 500 ರೂಪಾಯಿ ಇರುತ್ತದೆ. ನಾವು ಯಾರ ಹತ್ತಿರ ಕೊಡುತ್ತೇವೆ. ರೈತರ ಹತ್ತಿರ ನೇರವಾಗಿ ನಮ್ಮ ಸೊಸೈಟಿಯವರು ಬೆಲೆ

ಕೊಟ್ಟು 500 ರೂಪಾಯಿ ಜೋಳ ಕೊಳ್ಳುತ್ತೇವೆ, ಇದನ್ನು ನಿಮ್ಮ ಪಾರದರ್ಶಕ ಕಾಯಿದೆಯಿಂದ ತೆಗೆಯಿರಿ ಎಂದು ನಾವು ಬರೆದರೆ ನಾಲ್ಕು ತಿಂಗಳು ಐದು ತಿಂಗಳು ಇಟ್ಟುಕೊಂಡು ಇದು ಬೇಡ ಎಂದು ಹೇಳುತ್ತಾರೆ. ಫೈಲ್ ನೋಡುವುದೇ ಇಲ್ಲ. ಸರ್ಕಾರಕ್ಕೆ ಏಕೆ ಈ ಫೈಲ್ ಬಂದಿತು, ಏನು ಕಾರಣ, ಈ ಫೈಲಲ್ಲಿ ಏನು ಇದೆ, ಎಂದು ಫೈಲ್ ನೋಡುವುದೇ ಇಲ್ಲ. ಕೊನೆಯಲ್ಲಿ ನಾಲ್ಕು ತಿಂಗಳು ಬಿಟ್ಟುಕೊಂಡು ಇದಕ್ಕೆ ಎಕ್ಸಮಷ್ನ್ ಕೊಡುವುದಕ್ಕೆ ಬರುವುದಿಲ್ಲ ಎಂದು ಬರೆಯುತ್ತಾರೆ. ಇದು ಯಾವ ರೀತಿ ಆಡಳಿತ ಮಾಡುತ್ತಾರೋ ನನಗೆ ಗೊತ್ತಿಲ್ಲ. ಗೋಕುಲ್‌ರಾಮ್‌ರವರು ಉತ್ತಮವಾದ ಅಧಿಕಾರಿಗಳು. ಅವರ ಬಗ್ಗೆ ನಾನು ಛಾರ್ಜ್ ಮಾಡುವುದಿಲ್ಲ. ಏಕೆಂದರೆ, ಕೆಳ ಮಟ್ಟದಲ್ಲಿ ಯಾವ ತರಹ ಇದೆ ಎಂದು ಅವರಿಗೆ ಗೊತ್ತಿಲ್ಲ. ರೈತರದು ಎಂದರೆ ಅವರಿಗೆ ಏನಾದರೂ ಕರೆಂಟ್ ಹಿಡಿದುಕೊಳ್ಳುತ್ತದೋ ಏನೋ ಗೊತ್ತಿಲ್ಲ ನನಗೆ ಏಕೆಂದರೆ, ನಾಲ್ಕು ತಿಂಗಳು ಕಡತ ಇಟ್ಟುಕೊಳ್ಳುತ್ತಾರೆ. ಉದಾಹರಣೆಗೆ ನಾನು 20,000 ಟನ್‌ಗೋಸ್ಕರ ಟೆಂಡರ್ ಕರೆಯುತ್ತೇನೆ, ಎಲ್ ಒನ್ ಒಬ್ಬ ಮಾರ್ವಾಡಿ ಹಾಕುತ್ತಾನೆ, ನಿಮ್ಮ ಪಾರದರ್ಶಕ ಕಾನೂನಿನಲ್ಲಿ ಅವನು ಎಲ್‌ಒನ್ ಎಂದರೆ ಎಲ್ ಒನ್‌ನಲ್ಲಿಯೇ ಕೊಡಬೇಕು. 700 ರೂಪಾಯಿಗೆ ಹಾಕಿದರೂ ಕೊಡಬೇಕು. ಸುಗ್ಗಿ ಕಾಲದಲ್ಲಿ ರೈತರು ನೇರವಾಗಿ ಎಪಿಎಂಸಿ ಮುಖೇನ ಖರೀದಿಗೆ ಕೊಟ್ಟರು. ಅದೇ ರೀತಿ ಕೋ ಅಪರೇಟಿವ್ ಸೆಕ್ಟಾರ್‌ನಲ್ಲಿ ಇರುವ ಪ್ರಾಥಮಿಕ ಸಂಘಗಳು ಅವರೇ ರೈತರ ಬಳಿ ಖರೀದಿ ಮಾಡುತ್ತಾರೆ. ಬಿಲ್ ಕೊಡುತ್ತಾರೆ. ಲಾಭ ಬಂದರೆ ಮತ್ತೆ ವಾಪಸ್ ರೈತರಿಗೆ ಕೊಡುತ್ತಾರೆ. ಏನಾದರೂ ಅವರ ದುಡ್ಡನ್ನು ನಾವು ಇಟ್ಟುಕೊಳ್ಳುವುದಕ್ಕಾಗುತ್ತದೆಯೇ? ರೈತರ ಹತ್ತಿರ ಇವತ್ತು ಒಂದು ಕ್ವಿಂಟಾಲ್ ಕೊಡಬಹುದು, ಎರಡು ಕ್ವಿಂಟಾಲ್ ಕೊಡಬಹುದು, ಐದು ಕ್ವಿಂಟಾಲ್ ಕೊಡಬಹುದು, ಅದರ ಕಡೆ ಯಾರೂ ಗಮನ ಹರಿಸುವುದಿಲ್ಲ. ಇದಕ್ಕೆ ಸುಮಾರು ಒಂದೂವರೆ ಕೋಟಿ ದುಡ್ಡು ಉಳಿಯುವುದು, ಕಡತ ತೆಗೆದು ಒಂದು ಕಡೆ ಡಬ್ಬಿಗೆ ಎಸೆದು ನಾಲ್ಕು ತಿಂಗಳು ಆದ ಮೇಲೆ ಒಂದು ಸೀಲ್ ಹೊಡೆದು ಇದನ್ನು ತಿರಸ್ಕರಿಸಲಾಗಿದೆ, ಪಾರದರ್ಶಕ ಕಾಯಿದೆ ಇರುವುದರಿಂದ "ಎಂದು ಕಳುಹಿಸಿದರೆ ಏನು ವ್ಯವಸ್ಥೆ ಇದು? ಹಣಕಾಸು ಸಚಿವರು ದಯವಿಟ್ಟು ಇಂತಹ ಕಡತವನ್ನು ಪರಿಶೀಲಿಸಬೇಕಾಗುತ್ತದೆ. ಇದಕ್ಕೆ ಕೆಂಪು ಇಂಕ್ ಹಾಕಬೇಕೋ ಅಥವಾ ಹಸಿರು ಇಂಕ್ ಹಾಕಬೇಕೋ ಹೇಳಿ, ಅಥವಾ ಇದಕ್ಕೇನಾದರೂ ಚೀಟಿ ಅಂಟಿಸಬೇಕೆಂದರೆ ಹೇಳಿ. ರೈತರು ಎನ್ನುವ ಪದಕ್ಕೆ ಯಾವುದಾದರೂ ಬೇರೆ ಹೆಸರು ಇಡಬೇಕೆಂದರೆ ಇಡುತ್ತೇವೆ

ಶ್ರೀ ಜೆ.ಸಿ.ಮಾಧುಸ್ವಾಮಿ : ಮಂತ್ರಿಗಳು ಆಗಲೇ ಎದ್ದು ಹೋಗಿದ್ದಾರೆ. ಆರ್ಥಿಕ ಇಲಾಖೆಯ ಎಲ್ಲಾ ಅಧಿಕಾರಿಗಳು ಖಾಲಿ ಯಾರಾದರೂ ಒಬ್ಬರು ಇರುವುದು ಬೇಡವಾ? ರೈತರಿಗೆ ಎಕ್ಸಮಷನ್ ಕೊಡಿ ಎಂದು ಕೇಳುತ್ತಿದ್ದಾರೆ. ಐದು ಜನ ಆರು ಜನ ಕಾರ್ಯದರ್ಶಿಗಳ ಪೈಕಿ ಒಬ್ಬರಾದರೂ ಕುಳಿತುಕೊಳ್ಳುವುದು ಬೇಡವಾ? ಅವರು ರೈತರಿಗೆ ಇರುವ ಸಮಸ್ಯ ಹೇಳುತ್ತಿದ್ದಾರೆ. ಪ್ರಾಕ್ಟಿಕಲ್ ಆಗಿ ಅನುಭವಿಸುತ್ತಿರುವುದನ್ನು ಯಾರಿಗೆ ಹೇಳಬೇಕು?

ಶ್ರೀ ಬಿ.ಎ.ಜೀವಿಜಯ : ಮಾನ್ಯ ಅಧ್ಯಕ್ಷರೆ, ಅವರು ಅನುಭವದ ಮಾತು ಹೇಳುತ್ತಿದ್ದಾರೆ. ಕೇಂದ್ರದಲ್ಲಿ ಅರ್ಜುನಸಿಂಗ್‌ರವರು ಮಂತ್ರಿಗಳಾಗಿದ್ದಾಗ ಅವರು ಹೇಳುತ್ತಿದ್ದರು, ರೈತರ ಬಗ್ಗೆ ಏನಾದರೂ ಸಬ್ಸಿಡಿ ಕೊಟ್ಟರೆ The economy of the natan will go to dogs ಆದರೆ

ಸ್ಪೆಕ್ಯುಲೀಟರ್‌ಗೆ ದುಡ್ಡು ಕೊಟ್ಟರೆ country will prosper ಸರಿಯಾಗಿ ಹೇಳುತ್ತಿದ್ದರು ಅವರು. ಶ್ರೀ ಹೆಚ್.ಡಿ. ರೇವಣ್ಣ : ಉದಾಹರಣೆಗೆ ಹೇಳುವುದಾದರೆ ಕೋಲಾರ ಜಿಲ್ಲೆಯ ಶ್ರೀ ನಿವಾಸಗೌಡರು ಇದ್ದಾರೆ, ಶ್ರೀ ಕೃಷ್ಣ ಬೈರೇಗೌಡರು ಇದ್ದಾರೆ, ಈ ಕಡೆ ಚಿಂತಾಮಣಿಯ ನಮ್ಮ ಶಾಸಕರು ಇದ್ದಾರೆ, ಆ ಪ್ರದೇಶದಲ್ಲಿ ನೀರಾವರಿ ಇಲ್ಲ. ಅಲ್ಲಿ ಇವತ್ತು ಹಾಲು ಉತ್ಪಾದನೆಯಿಂದ ಕೆಲವು ರೈತರು ಬದುಕುತ್ತಿದ್ದಾರೆ. ರೇಷ್ಮೆ ಮತ್ತು ಹಾಲು ಎರಡು ಕಡೆಯಿಂದ ಬದುಕುತ್ತಿದ್ದಾರೆ. ಹಿಂದೆ ಮಾನ್ಯ ಜೆ.ಹೆಚ್.ಪಟೇಲರು ಇದ್ದಾಗ ಹಿಂದಿನ ಸರ್ಕಾರದಲ್ಲಿ ಕೃಷ್ಣರವರು ಇದ್ದಾಗ, ಹಿಂದಿನ ಮುಖ್ಯ ಮಂತ್ರಿಗಳಾದ ಮಾನ್ಯ ಧರ್ಮಸಿಂಗ್‌ರವರಿಗೆ ಎಲ್ಲಾಪತ್ರ ಬರೆದೆ, ನಮಗೇನೂ ದುಡ್ಡು ಕೊಡಬೇಡಿ, ಒಂದು ಲೀಟರ್ ಹಾಲು ಹಾಕುವ ರೈತನಿಗೆ ನೀವೇ ನೇರವಾಗಿ ಎರಡು ರೂಪಾಯಿ ಪಾಸ್ ಆನ್ ಮಾಡಿ. ನಮಗೆ ಡೈರಿಗೆ ಏನು ಕೊಡಬೇಡಿ ಎಂದು. ಯಾರು ಒಬ್ಬ ರೈತ ಕನಿಷ್ಟ ಎರಡು ವರ್ಷ ಹಾಲು ಹಾಕಿರುತ್ತಾರೆ, ಅಂಥವರಿಗೆ ಕೊಡಿ ನೆನ್ನೆ ಹಾಕಿದವರಿಗೆ ಬೇಡ. ಅವರಿಗೆ ಎರಡು ರೂಪಾಯಿ ಅಥವಾ ಒಂದು ರೂಪಾಯಿ ಆದರೂ ಹೆಚ್ಚಿಗೆ ಕೊಡಿ. ಮಾರುಕಟ್ಟೆ ಬಿದ್ದು ಹೋದಂತಹ ಸಮಯದಲ್ಲಾದರೂ ಅವರಿಗೆ ಹಣ ಕೊಡಿ, ಅದಕ್ಕೆ ಯಾರೂ ಗಮನಕೊಡಲಿಲ್ಲ. ದಯಮಾಡಿ ಅದನ್ನೂ ಮಾಡಬೇಕೆಂದು ಹೇಳುತ್ತೇನೆ. ನಮ್ಮ ನೆರೆ ರಾಜ್ಯ ಮಹಾ ರಾಷ್ಟ್ರದಲ್ಲಿ ತುಪ್ಪಕ್ಕೆ ನಾಲ್ಕು ಪರ್ಸೆಂಟ್ ಟ್ಯಾಕ್ಸ್ ಇದೆ. ನಮ್ಮಲ್ಲಿ 12.50 ರೂಪಾಯಿ ಹಾಕಿದ್ದೀರಿ. ನಾವು ಖಾಸಗಿಯವರ ಜೊತೆ ಹೇಗೆ ಪೈಪೋಟಿ ಮಾಡುವುದು, ಹೊರ ರಾಜ್ಯದಲ್ಲಿ ನಾಲ್ಕು ರೂಪಾಯಿ ಟ್ಯಾಕ್ಸ್ ಇದ್ದರೆ, ಇಲ್ಲಿ 12 ರೂಪಾಯಿ ಮಾಡುತ್ತೀರಿ. ನಾವು ನಮ್ಮ ಕೋ ಆಪರೇಟಿವ್ ಸೆಕ್ಟಾರ್‌ನಲ್ಲಿ ಉದಾಹರಣೆಗೆ ಹೇಳುವುದಾದರೆ ತಿರುಪತಿಗೆ ಇವತ್ತು ತುಪ್ಪ ಕಳುಹಿಸುತ್ತೇವೆ, ಅದಕ್ಕೂ ನಾಲ್ಕು ಪರ್ಸೆಂಟ್ ಟ್ಯಾಕ್ಸ್ ಕಟ್ಟಿ ಎಂದು ಹೇಳುತ್ತೀರಿ. ಸಹಕಾರಿ ರಂಗದಲ್ಲಿರುವಂತಹ ಪ್ರತಿಯೊಬ್ಬ ರೈತನಿಗೆ ಟ್ಯಾಕ್ಸ್ ತೆಗೆಯುವುದು ಸೂಕ್ತ ಎಂದು ನನ್ನ ಭಾವನೆ. ಇದಾದ ಮೇಲೆ ಮಜ್ಜಿಗೆ. ಅದಕ್ಕೆ ಟ್ಯಾಕ್ಸ್ ಹಾಕಿದ್ದಾರೆ. ಸರಾಯಿ ಕುಡಿಯುವವರಿಗೆ ಟ್ಯಾಕ್ಸ್ ಹಾಕಿದರೆ ಬೇಡ ಎಂದು ಹೇಳುವುದಿಲ್ಲ. ಬ್ರ್ಯಾಂದಿ ಕುಡಿಯುವವರಿಗೆ ಒಂದಕ್ಕೆ ನಾಲ್ಕು ಪಟ್ಟು ಹಾಕಿ. ಮಜ್ಜಿಗೆ ಕುಡಿಯುವವರಿಗೆ ಟ್ಯಾಕ್ಸ್ ಹಾಕುತ್ತೇವೆಂದರೆ ಏನು ಅರ್ಥ? ಎಲ್ಲಾ ಡೈರಿಗಳಿಗೆ ನೋಟೀಸ್ ಕೊಟ್ಟಿದ್ದಾರೆ. ನಾಲ್ಕು ಪರ್ಸೆಂಟ್ ಟ್ಯಾಕ್ಸ್ ಒಂದು ಲೀಟರ್ ಮಜ್ಜಿಗೆಗೆ ಹಾಕುತ್ತೇವೆ ಎಂದು ಹೇಳಿದ್ದಾರೆ. ಇದರಿಂದ ಶರಾಬು ಕುಡಿಯುವುದಕ್ಕೆ ಉತ್ತೇಜನ ಕೊಟ್ಟ ಹಾಗಾಯಿತು. ಮಜ್ಜಿಗೆಗೆ ಟ್ಯಾಕ್ಸ್ ಹಾಕಿದ್ದಾರೆ ಅದು ಹಾಕುವುದು ಬೇಡವೆಂದು ಮನವಿ ಮಾಡುತ್ತೇನೆ. ಅದಲ್ಲದೇ ಇವತ್ತು ನಮ್ಮಲ್ಲಿ ಉತ್ತರ ಕರ್ನಾಟಕದಲ್ಲಿರುವಂತಹ ಡೈರಿಗಳಿಗೆ ಹೆಚ್ಚಿನ ಹಣ ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ (ಮುಂ.ವ): ಇದಲ್ಲದೆ ಪ್ರಮುಖವಾದದ್ದನ್ನು ನಾನು ಕೊನೆಯದಾಗಿ ಹೇಳಬಯಸುತ್ತೇನೆ ಇವೊತ್ತು ನಾವು ಸಹಕಾರಿ ಇಲಾಖೆಯಲ್ಲಿ ರೈತರಿಗೆ ಸಾಲವನ್ನು ಕೊಡುತ್ತೇವೆ.

ಶ್ರೀ ಎನ್.ಎಸ್.ಭೋಸರಾಜ್: ಮಾನ್ಯ ಅಧ್ಯಕ್ಷರೆ, ಮೊನ್ನೆ ಏನೋ ನಾಲ್ಕೂ ಒಕ್ಕೂಟಕ್ಕೂ ಹಣ ಕೊಡುತ್ತಾರೆಂದು ಒಂದು ಸ್ಕೀಂ ಮಾಡಿದಿರಲ್ಲ ಆದರೆ ಬಳ್ಳಾರಿ ಒಕ್ಕೂಟಕ್ಕೆ ಕೊಟ್ಟಿಲ್ಲ. ನಾನು ತಿಳಿದುಕೊಂಡಿರುವ ಹಾಗೆ ಈ ಸ್ಕೀಂನಲ್ಲಿ ಬಳ್ಳಾರಿ ಒಕ್ಕೂಟವನ್ನು ತೆಗೆದುಹಾಕಿ ಬೇರೆಯದ್ದಕ್ಕೆಲ್ಲಾ ದುಡ್ಡು ಕೊಟ್ಟಿದ್ದಾರೆ. ಏನಾದರೂ ಸೋನಿಯಾಗಾಂಧಿ....

ಶ್ರೀ ಹೆಚ್.ಡಿ. ರೇವಣ್ಣ: ಇದಕ್ಕೇ ಪಾರದರ್ಶಕ ಆಡಳಿತ ಅಂತಾರೆ. ನಮ್ಮಲ್ಲಿ ಯಾವುದಾದರೂ ರೈತರಿಗೆ ಬೇಕಾದರೆ, ಉದಾಹರಣೆಗೆ ಹೇಳುವುದಾದರೆ, ಮಂಡ್ಯ ಷುಗರ್ ಫ್ಯಾಕ್ಟರಿ, ಇದರ ಕಥೆಯನ್ನು ದಯಮಾಡಿ ಮಾನ್ಯ ಸದಸ್ಯರು ಕೇಳಬೇಕು. ಕಳೆದ 70 ವರ್ಷದಲ್ಲಿ ಈ ರಾಜ್ಯದಲ್ಲಿ ಮೂರು ಷುಗರ್ ಫ್ಯಾಕ್ಟರಿಗಳು ಉತ್ತಮವಾಗಿದ್ದವು. ಒಂದು ಸಂಕೇಶ್ವರ ಷುಗರ್ ಫ್ಯಾಕ್ಟರಿ. ಎರಡನೆಯದು ಪಾಂಡವಪುರದ್ದು. ಮೂರನೆಯದು ಮಂಡ್ಯದ ಮೈ ಷುಗರ್ ಕಾರ್ಖಾನೆ. ಇವೊತ್ತು ಈ ಮೂರು ಸಕ್ಕರೆ ಕಾರ್ಖಾನೆಗಳು ಯಾವ ರೀತಿ ಕೆಲಸ ಮಾಡುತ್ತಿವೆ? ಎಂಥ ಸನ್ನಿವೇಶ ಬಂದರೂ 3 ಕೋಟಿಗಿಂತ ನಷ್ಟ ಇಲ್ಲ. ಎಂಥ ಸನ್ನಿವೇಶ ಬಂದರೂ ಮಾನ್ಯ ಅಧ್ಯಕ್ಷರೆ. 3 ಕೋಟಿಗಿಂತ ನಷ್ಟ ಇಲ್ಲಾ. ಆದರೆ ಇವೊತ್ತು ನಮ್ಮ ಸರ್ಕಾರಿ ಅಧಿಕಾರಿಗಳು ನಿರ್ಣಯ ಮಾಡಿದರು, ನಮ್ಮಂಥವರೇ ಯಾರಾದರೂ ರಾಜಕಾರಣಿಗಳು, ಅಥವಾ ಬೇರೆ ಯಾರಾದರೂ ಮಾಡಿದ್ದರೆ ಫಸ್ಟ್ ಕ್ರಿಮಿನಲ್ ಕೇಸ್ ಹಾಕಿ ಒಳಕ್ಕೆ ಹಾಕಿಬಿಡುತ್ತಿದ್ದರು. ಅದು ಸಂಪೂರ್ಣ ಚರ್ಚೆ ಆಗುತ್ತಿತ್ತು ಏಕೆಂದರೆ ಕಳೆದ ಸನದದಲ್ಲಿ ಪ್ರತಿ ದಿನ ಬೆಳಿಗ್ಗೆ ಎದ್ದರೆ ಪೂರ್ತಿ ಚರ್ಚೆ ಅದರ ಬಗ್ಗೆಯೇ ಆಗುತ್ತಿತ್ತು. ಸಭಾಧ್ಯಕ್ಷರು ಅಂಥವಕ್ಕೆ ಒಳ್ಳೆಯ ರುಚಿ ಕೇಳೋಕೆ, ಎಂದು ಸಭಾಧ್ಯಕ್ಷರು ಅನುಮತಿಯನ್ನು ಕೊಡುತ್ತಿದ್ದರು. ದಯಮಾಡಿ ಆ ರೀತಿ ಆಗಬಾರದು. ನಾನು ಏಕೆ ಇವೊತ್ತು. ಹೇಳುತ್ತಿದ್ದೇನೆಂದರೆ ಇವೊತ್ತಿನ ಪರಿಸ್ಥಿತಿಯಲ್ಲಿ ರೈತರಿಗೆ ಯಾವ ತರಹ ಶೋಷಣೆಯಾಗುತ್ತಿದೆ. ಏಕೆಂದರೆ ನಾನು ಇವೊತ್ತಿನ ದಿನ ಉದಾಹರಣೆಗೆ ಹೇಳುವುದಾದರೆ ಮೈ ಶುಗರ್ ಕಾರ್ಖಾನೆ. ಮೈ ಶುಗರ್ ಕಾರ್ಖಾನೆಯಲ್ಲಿ ಸುಮಾರು 11 ಲಕ್ಷ 26 ಸಾವಿರ ಕ್ವಿಂಟ್ವಾಲ್ ಸಕ್ಕರೆ ಇವೊತ್ತು ಇದೆ, ಬ್ಯಾಂಕ್‌ನವರು ಬರೆಯುತ್ತಾರೆ ಸ್ಟಾಕ್ ಇದೆ, "ಇವೊತ್ತು ಸಕ್ಕರೆ ರೇಟ್ ಜಾಸ್ತಿ ಆಗಿದೆ ನೀವು ಮಾರಾಟ ಮಾಡುವುದಕ್ಕೆ ಹೋಗಬೇಡಿ" ಎನ್ನುತ್ತಾರೆ. ಇವೊತ್ತು ಬ್ಯಾಂಕ್‌ನಲ್ಲಿ ಮಾರಾಟ ಮಾಡುವುದಕ್ಕೆ ಹೋಗಬಾರದು, ಸಕ್ಕರೆ ರೇಟ್ ಜಾಸ್ತಿ ಇದೆ, ಇದನ್ನು ಮಾರಾಟ ಮಾಡಬಾರದು ಎಂದು ಹೇಳಿ ಸಂಬಂಧಪಟ್ಟಂಥ ಯಾರು ಬ್ಯಾಂಕ್ ಅದಕ್ಕೆ ಸಾಲ ಕೊಟ್ಟಿರುತ್ತಾರೆ ಆ ಬ್ಯಾಂಕ್‌ನ ಮುಖ್ಯಸ್ಥರು ಆ ಪತ್ರವನ್ನು ಬರೆಯುತ್ತಾರೆ ಅದರೆ ಇವೊತ್ತಿನ ದಿವಸ ಆಡಳಿತಾಧಿಕಾರಿಗಳು ಅದನ್ನು ಧಿಕ್ಕರಿಸುತ್ತಾರೆ. ಏಕೆ? ಚುನಾಯಿತ ಪ್ರತಿನಿಧಿಗಳು ಇರಲಿಲ್ಲ. ಆಡಳಿತಾಧಿಕಾರಿಗಳು ಇದ್ದಂಥ ಕಾಲದಲ್ಲಿ ಒಂದು ಕ್ವಿಂಟಾಲ್ ಸಕ್ಕರೆಗೆ 1260 ರೂಪಾಯಿ ಮಾರ್ಕೆಟ್‌ನಲ್ಲಿರುತ್ತದೆ. ಇದನ್ನು 875 ರೂಪಾಯಿಗೆ ಮಾರಾಟ ಮಾಡುತ್ತಾರೆ. ಟೆಂಡರ್ ಯಾವ ತರಹ ಕರೆಯುತ್ತಾರೆ. ಟೆಂಡರ್ ಕರೆಯಬೇಕಾದರೆ ಎಲ್ಲಾ ವಿಷಯಕ್ಕೂ ಪಾರದರ್ಶಕ ಆಡಳಿತ ಎನ್ನುತ್ತಾರೆ ಇದಕ್ಕೆ 15 ಕೋಟಿ ರೂಪಾಯಿಯದು ಟೆಂಡರ್ ಕರೆಯುತ್ತಾರೆ. ಟೈಂ ಎಷ್ಟು ದಿವಸ, ನಾಲ್ಕೇ ದಿವಸ, ಟೆಂಡರ್ ಕೊಡುವುದು ನಾಲ್ಕೇ ದಿವಸ. ಇವೊತ್ತು ಟೆಂಡರ್ ಹಾಕಿದರೆ ನಾಲ್ಕೇ ದಿನ. ನಾಲ್ಕು ದಿನದಲ್ಲಿ ಮಧ್ಯಾಹ್ನ 3 ಗಂಟೆಗೆ ಟೆಂಡರ್ ಹೊಡೆಯುತ್ತಾರೆ. 4–30 ಕ್ಕೆ ಆರ್ಡರ್ ಕೊಡುತ್ತಾರೆ. ಮಧ್ಯಾಹ್ನ 3 ಗಂಟೆಗೆ ಟೆಂಡರ್ ಒಡೆಯುವುದು. 4–30ಕ್ಕೆ ಆರ್ಡರ್ ಕೊಡುವುದು. ಮಾನ್ಯ ಅಧ್ಯಕ್ಷರೆ, ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ, ಒಂದೇ ಒಂದು ಸರ್ಕಾರಿ ಅಧಿಕಾರಿಗಳ ನಿರ್ಣಯದಿಂದ 47 ಕೋಟಿ ರೂಪಾಯಿ ಆ ಸಂಸ್ಥೆಗೆ ಹೋಯಿತು. ನಮ್ಮಲ್ಲಿ ಏನು ಮಾಡಬೇಕು, 2 ಕೋಟಿ ರೂಪಾಯಿ ಬೆಲೆಗೂ ಮೀರಿ ಟೆಂಡರ್ ಕರೆಯುವುದಾದರೆ, ಗ್ಲೋಬಲ್ ಟೆಂಡರ್ ಕರೆಯಬೇಕು ಎಂದು ಹೇಳುತ್ತೇವೆ. ಏಕೆ ಇದಕ್ಕೆ ಗ್ಲೋಬಲ್ ಟೆಂಡರ್ ಕರೆಯಲಿಲ್ಲ. 15 ಕೋಟಿ

ರೂಪಾಯಿ ಟೆಂಡರನ್ನು ಕೇವಲ ನಾಲ್ಕು ದಿನ ಟೈಂ ಕೊಟ್ಟು ಹೇಗೆ ಕರೆದರು? ಸರ್ಕಾರದ್ದು ಏನಾದರೂ ಅನುಮತಿ ತೆಗೆದುಕೊಂಡಿದ್ದರೆ? " ರೈತರಿಗೆ ಪೇಮೆಂಟ್ ಕೊಡಬೇಕಾಗಿತ್ತು ಅದಕ್ಕೋಸ್ಕರ ನಾವು ತರಾತುರಿಯಲ್ಲಿ ಮಾಡಿದ್ದೇವೆ" ಎಂದು ಹೇಳುತ್ತಾರೆ. ಸಕ್ಕರೆಯನ್ನು ಮಾರಿದ ಮೇಲೂ, ನಾಲ್ಕು ತಿಂಗಳಾದರೂ, ಟೆಂಡರ್‌ದಾರ ಅಲ್ಲಿಯೇ ಸಕ್ಕರೆಯನ್ನು ಇಟ್ಟುಕೊಳ್ಳುತ್ತಾನೆ. 11 ಲಕ್ಷ 20 ಕ್ವಿಂಟಾಲ್ ಸಕ್ಕರೆಯನ್ನು ಗೋದಾಮಿನಲ್ಲಿಯೇ ಇಟ್ಟುಕೊಂಡಿರುತ್ತಾನೆ. ಅವನಿಗೆ ಬೇಕಾದಾಗ ರೇಟ್ ರೈಸ್ ಆದಾಗ ಬಿಡಿಸಿಕೊಳ್ಳುತ್ತಾ ಇರುತ್ತಾನೆ. ಯಾವಾಗ ಬೇಕಾಗುತ್ತದೆಯೋ ಆಗ ಬಿಡಿಸಿಕೊಳ್ಳುವುದು. ಏಕೆಂದರೆ ಸಹಕಾರಿ ರಂಗದಲ್ಲಿರುವಂಥ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ಹಾಕಿದಾಗ ಅವರು ಯಾವ ರೀತಿಯಲ್ಲಿ ಮುಳುಗಿಸುತ್ತಾರೆ ಎಂಬುದಕ್ಕೆ ನಾನು ಉದಾಹರಣೆಯನ್ನು ತಮಗೆ ಕೊಡುತ್ತಿದ್ದೇನೆ. ಇದನ್ನು ದಯಮಾಡಿ ತನಿಖೆ ಮಾಡಿಸುತ್ತೀರ? ಮೈಶುಗರ್‌ನ ಜನರಲ್ ಬಾಡಿಯಲ್ಲಿ ಆಗಿದ್ದನ್ನು ಹೇಳುತ್ತೇನೆ. ಪಾಪ ಚೆಲುವರಾಯಸ್ವಾಮಿಯವರು ಮುಂದುಗಡೆ ಕುಳಿತಿದ್ದಾರೆ. ಅವರು ಸಿದ್ದರಾಮಯ್ಯನವರು ಹಾಗೂ ಸಿಂಧ್ಯಾ ಸಾಹೇಬರ ಹತ್ತಿರ ಕುಳಿತು ಏನು ಮಾಡಿದರು ಎಂಬುದನ್ನು ನಾನು ಆಮೇಲೆ ಹೇಳುತ್ತೇನೆ.

ಶ್ರೀ ಚೆಲುವರಾಯಸ್ವಾಮಿ : ಏನು ಮಾಡಿದೆ?

ಶ್ರೀ ಹೆಚ್.ಡಿ. ರೇವಣ್ಣ : ಹೇಳುತ್ತೇನೆ ಸ್ವಲ್ಪ ಇರಿ. ನೀವೇನು ತಪ್ಪು ಮಾಡಿದಿರಿ ಎಂದು ನಾನು ಹೇಳುತ್ತಿಲ್ಲ. ಏಕೆಂದರೆ ನಾಲ್ಕು ತಿಂಗಳುಗಳ ಕಾಲ ಸಕ್ಕರೆಯನ್ನು ಇಟ್ಟುಕೊಂಡು 1276 ರೂಪಾಯಿ ರೇಟ್ ಇರುವ ಸಕ್ಕರೆಯನ್ನು 875 ರೂಪಾಯಿಗಳಿಗೆ ಕೊಟ್ಟರಲ್ಲಾ...

ಶ್ರೀ ಚೆಲುವರಾಯಸ್ವಾಮಿ : 33 ಕೋಟಿ ದುಡ್ಡು ಕೊಟ್ಟಿದ್ದು ....

ಶ್ರೀ ಹೆಚ್.ಡಿ. ರೇವಣ್ಣ : ತಡೀರಿ, ಚೆಲುವರಾಯಸ್ವಾಮಿ ನಾನು ಹೇಳುತ್ತೇನೆ. ಸಾರ್ ಇದು ಒಂದು ಕಡೆ. ಸಕ್ಕರೆ ಸಾಗಾಣಿ ಮಾಡುವುದಕ್ಕೆ ಟೆಂಡರ್‌ನ್ನೇ ಕರೆಯಲಿಲ್ಲ. 90 ಲಕ್ಷ ರೂಪಾಯಿಗಳ ಟೆಂಡರ್‌ನ್ನು ಒಬ್ಬ ಲಾರಿ ಕಂಟ್ರ್ಯಾಕ್ಟರ್‌ಗೆ ಬಾಡಿಗೆಗೆ ಎಂದು ಕೊಡುತ್ತಾರೆ. ಆದರೆ ಪೇಮೆಂಟ್ ಕೊಡುವುದು 40 ಲಕ್ಷ. ಅವನು ಫ್ಯಾಕ್ಟರಿಯವರ ಮೇಲೆಯೇ ಕೇಸ್ ಹಾಕುತ್ತಾನೆ. ಇದರ ಬಗ್ಗೆ ವಾರ್ಷಿಕ ಮಹಾಸಭೆಯಲ್ಲಿ ಯಾರು ಅಧಿಕಾರಿ ಇದರಲ್ಲಿ ಇದ್ದಾನೆ ಅವನ ಮೇಲೆ ಕ್ರಿಮಿನಲ್ ಕೇಸ್ ಹಾಕಬೇಕೆಂದು ರೈತರೆಲ್ಲರೂ ಸೇರಿ ರೆಸಲ್ಯೂಶನ್ ಮಾಡುತ್ತಾರೆ. ಪಾಪ ರೈತರೆಲ್ಲರೂ ಸೇರಿ ಬಹಳ ಕಷ್ಟಪಟ್ಟು ರೆಸಲ್ಯೂಶನ್ ಮಾಡುತ್ತಾರೆ. ನಮ್ಮಲ್ಲಿ ಜನರಲ್ ಬಾಡಿ ಎಂದು ಬಿಟ್ಟರೆ ಅವೊತ್ತು ಮಧ್ಯಾಹ್ನ ಊಟ ಇರುತ್ತದೆ, ಕೆಲವು ಕಡೆ ಉಪ್ಪಿಟ್ಟು ಕಾಫಿ ಕೊಡುತ್ತಾರೆ, ಕೆಲವು ಕಡೆ ಬಿರಿಯಾನಿ ಕೊಡುತ್ತಾರೆ, ಇವೆಲ್ಲಾ ಜನರಲ್ ಬಾಡಿಯಲ್ಲಿ ಕೊಡುವಂಥ ಪದಾರ್ಥ. ಏನು ಮಾಧುಸ್ವಾಮಿಯವರೆ, ನಿಮಗೆ ಗೊತ್ತಿದೆ ದೇಶಪಾಂಡೆ ಸಾಹೇಬರಿಗೆ ಕೂಡಗೊತ್ತಿದೆ, ಏಕೆಂದರೆ ಅವರೂ ಕೋ-ಆಪರೇಟಿವ್ ಎಕ್ಸ್‌ಪರ್ಟ್. ಅವರೂ ಗುರುಪಾದಪ್ಪ ನಾಗಮಾರಪಲ್ಲಿ ಅಲ್ಲಿಯೇ ಪಕ್ಕದಲ್ಲೇ ಇದ್ದಾರೆ. ಪಾಪ ರೈತರುಗಳೆಲ್ಲರೂ ಜನರಲ್ ಬಾಡಿಯಲ್ಲಿ ಬಹಳ ಕಷ್ಟಪಟ್ಟು " ಸ್ವಾಮಿ ಕ್ರಿಮಿನಲ್ ಕೇಸ್ ಹಾಕಿ ಯಾರು, 47 ಕೋಟಿ ವಿಚಾರದಲ್ಲಿ ಅವ್ಯಹಾರ ಮಾಡಿದ್ದಾರೆ ಅವರ ಮೇಲೆ ಕ್ರಿಮಿನಲ್ ಕೇಸ್ ದಯಮಾಡಿ ಹಾಕಿ" ಎಂದರೇ ಅದು ಅಲ್ಲಿಯೇ ಒಂದು ಕಡೆ ಧೂಳು ಹಿಡಿಯುತ್ತದೆ. ಫೈಲನ್ನೇ

ತೆಗೆದು ಎಸೆಯುತ್ತಾರೆ. ಅದೇ ಬೇರೆ ಯಾರಾದರೂ ಮಾಧುಸ್ವಾಮಿಯೋ, ರೇವಣ್ಣನೋ, ಅಥವಾ ಗುರುಪಾದಪ್ಪನವರೋ ಅಥವಾ ದೇಶಪಾಂಡೆಯವರೋ ಆಗಿದ್ದರೆ ಬೆಳಕು ಹರಿಯುವುದರೊಳಗೆ ಪೇಪರ್‌ನಲ್ಲಿ ಅಚ್ಚುಕಟ್ಟಾಗಿ ಮುಖಪುಟದಲ್ಲಿ ಹಾಕಿಸಿಬಿಟುತ್ತಿದ್ದರು. "ಇವರೆಲ್ಲಾ ಮಾಡಿದ ಘನಕಾರ್ಯ ಇದು" ಎಂದು ಹೇಳಿ ಹಾಕಿಸುತ್ತಿದ್ದರು. ಆದರೆ ಇಲ್ಲಿ ಅದನ್ನು ತೆಗೆದುಕೊಂಡು ಹೋಗಿ ಒಂದು ಡಬ್ಬಕ್ಕೆ ಹಾಕುತ್ತಾರೆ. ಇದಕ್ಕೆ ಏನು ಕಾರಣ? ಇದಕ್ಕೆ ಯಾವ ಅಧಿಕಾರಿಗಳು ಕಾರಣ? ಅಲ್ಲಿಗೆ ಸರ್ಕಾರದ ಪ್ರತಿನಿಧಿಗಳನ್ನು ಏತಕ್ಕೆ ಅಲ್ಲಿಗೆ ಕಳುಹಿಸುವುದು? ಸರ್ಕಾರದಿಂದ ಪ್ರತಿನಿಧಿಯನ್ನು ಏಕೆ ನೀವು ಕಳುಹಿಸುತ್ತೀರಿ ಬೇಡ ಸರ್ಕಾರದಿಂದ ಪ್ರತಿನಿಧಿಯನ್ನು ಕಳುಹಿಸುವುದಕ್ಕೆ ಹೋಗಬೇಡಿ. ಆ ಎಂ.ಡಿ.ಗಳು ತಿಂದರೆ ತಿಂದುಕೊಂಡುಬಿಡಲಿ. ಎಷ್ಟು ಬೇಕೋ ಮಜಾ ಮಾಡಿಕೊಳ್ಳಲಿ. ಇವೊತ್ತಿನ ದಿವಸ ಈ ರೀತಿಯಲ್ಲಿ ನಡೆಯುತ್ತಿದೆ. ಅದೇ ನಮ್ಮ ಚೆಲುವರಾಯಸ್ವಾಮಿಯವರು ಅವೊತ್ತು ಬಂದು ಹೇಳಿದರು ರಾಜಕೀಯದ ಒತ್ತಡ, 30 ಕೋಟಿ ರೂಪಾಯಿಗಳನ್ನು ಒಂದೇ ಬಾರಿಗೆ ಸಿದ್ದರಾಮಯ್ಯನವರು ಮತ್ತು ಸಿಂಧ್ಯಾರವರು ರಿಲೀಸ್ ಮಾಡಿಸಿದರು. ಏಕೆ ಹೇಳಿ, ಇದನ್ನು ಕೇಳಲಿಲ್ಲವಲ್ಲ ಇವರು, ಏಕೆ ಇದು ಲಾಸ್ ಆಯಿತು, ಒಂದೇ ವರ್ಷದಲ್ಲಿ 47 ಕೋಟಿ ಏಕೆ ಲಾಸ್ ಆಯಿತು, ಇದಕ್ಕೆ ಕಾರಣಕರ್ತರು ಯಾರು,

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರಿಗೆ ಒತ್ತಡ ಇದ್ದರೆ ನಿಮ್ಮದೇ ಇರಬೇಕಲ್ಲ. ಇನ್ನು ಯಾರದಿರಬಹುದು ಒತ್ತಡ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಒತ್ತಡ ಹಾಕುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಾದರೆ ಒತ್ತಡ ಇದ್ದರೆ ಇನ್ಯಾರದ್ದು ಇರಬಹುದು?

ಶ್ರೀ ಸಿದ್ಧರಾಮಯ್ಯ : ಈ ವಿಚಾರ ಬಂದಾಗ ಮೈ ಶುಗರ್‌ನಲ್ಲಿ ಬಹಳಷ್ಟು ನಷ್ಟ ಆಗಿತ್ತು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು, ಅವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕು ಮತ್ತು ಇದಕ್ಕಾಗಿ ಎನ್‌ಕ್ವೈರಿ ಆಗಬೇಕು ಎಂದು ನಾನು ತೆಗೆದುಕೊಂಡಿದ್ದಂಥ ಮೀಟಿಂಗ್‌ನಲ್ಲಿ ಆ ರೀತಿಯಲ್ಲಿ ನಿರ್ಣಯವಾಗಿದೆ. ಆ ನಿರ್ಣಯ ಆದ ಮೇಲೆಯೇ ನಾನು ಅದಕ್ಕೆ ದುಡ್ಡು ಕೊಡುವುದು ಎಂದು ಹೇಳಿ ತೀರ್ಮಾನವಾಯಿತು. ಆಗ ಮಂಡ್ಯದ ಉಸ್ತುವಾರಿ ಮಂತ್ರಿ ಚೆಲುವರಾಯಸ್ವಾಮಿಯವರು ಬಂದು ಇಲ್ಲಾ ಅದಕ್ಕೇನಾದರೂ ಮಾಡಬೇಕು, ಏನಾದರೂ ಮಾಡಬೇಕು, ಬಹಳ ಕಷ್ಟವಾಗಿಬಿಟ್ಟಿದೆ We can't face the people in the district ಎಂದು ಹೇಳಿದರು

ಶ್ರೀ ಜೆ.ಸಿ. ಮಾಧುಸ್ವಾಮಿ : ಸಭೆಯಲ್ಲಿ ಹೋಗಿ ಅಲ್ಲಿ ಮಾತು ಕೊಟ್ಟು ನಂತರ ನಿಮ್ಮ ಹತ್ತಿರ ಬಂದಿದ್ದರು ಅವರು.

ಶ್ರೀ ಸಿದ್ಧರಾಮಯ್ಯ : ಇಲ್ಲಾ ಇಲ್ಲಾ ಮಾತು ಬೇರೆ ಕೊಟ್ಟಿದ್ದರು ಅಮೇಲೆ ರೈತ ಸಭೆ, ರೈತ ಸಂಘದವರು, ಅಲ್ಲಿನ ರೈತರುಗಳು ....

ಶ್ರೀ ಜೆ.ಸಿ. ಮಾಧುಸ್ವಾಮಿ : ರೆಕಾರ್ಡ್ ಇದೆ ನಮ್ಮ ಹತ್ತಿರ. ಇವರು ಅಲ್ಲಿಗೆ ಹೋಗಿ ಭಾಷಣ ಮಾಡಿ ಮಾತು ಕೊಟ್ಟು ಆಮೇಲೆ ನಿಮ್ಮ ಹತ್ತಿರ ಬಂದಿದ್ದು.

ಶ್ರೀ ಸಿದ್ಧರಾಮಯ್ಯ : ಅದಾದಮೇಲೆ ಇಲ್ಲೂ ಕೂಡ ಒಂದು ರೈತರ ಸಭೆ ಆಯಿತು. ನಿಮಗೂ ಗೊತ್ತಿದೆ ಅಧ್ಯಕ್ಷರೆ. ನಿಮ್ಮ ಛೇಂಬರ್‌ನಲ್ಲೂ ಮಂಡ್ಯ ರೈತರದ್ದು ಅದು ಚರ್ಚೆಯಾಗಿದೆ.

ಅಧ್ಯಕ್ಷರು :- ಒಂದು ಟನ್‌ಗೆ ಎಷ್ಟು ಹಣ ಕೊಡಬೇಕು ಎಂದು ಚರ್ಚೆಯಾಗಿದ್ದು.

ಶ್ರೀ ಸಿದ್ಧರಾಮಯ್ಯ : ಆದುದರಿಂದ ಇವೆಲ್ಲಾ ಚರ್ಚೆಯಾಗಿ subject to condition ಅವೊತ್ತು ಕಾರ್ಖಾನೆಗೆ ನಷ್ಟ ಆದಾಗ ಯಾವ ಅಧಿಕಾರಿ ಇದ್ದರು, ಆ ಅಧಿಕಾರಿ ಮೇಲೆ ಕಠಿಣವಾದಂಥ ಕ್ರಮ ತೆಗೆದುಕೊಳ್ಳಬೇಕು, ಅವರನ್ನು ಮನೆಗೆ ಕಳುಹಿಸಬೇಕು ಎಂದು ಕಂಡೀಶನ್ ಹಾಕಿ 33 ಕೋಟಿಯನ್ನೋ 35 ಕೋಟಿಯನ್ನೋ ಅವೊತ್ತು ಹಣವನ್ನು ಬಿಡುಗಡೆ ಮಾಡಿರುವುದು.

ಶ್ರೀ ಹೆಚ್.ಡಿ. ರೇವಣ್ಣ : ಸಾರ್ ನಾನು ಈಗ ಸಿದ್ದರಾಮಯ್ಯನವರ ಬಗ್ಗೆಯಾಗಲೀ, ಚೆಲುವರಾಯಸ್ವಾಮಿ ಬಗ್ಗೆಯಾಗಲೀ ನಾನು ಮಾತನಾಡುತ್ತಿಲ್ಲ. ಚೆಲುವರಾಯಸ್ವಾಮಿಯವರು ಆ ಭಾಗದ ಜಿಲ್ಲಾ ಮಂತ್ರಿಗಳು. ಅವರು ರೈತರನ್ನು ಉಳಿಸಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ನೀವೂ ಕೂಡ ಕೊಡಬೇಕು ಎಂದು ಹೇಳಿದ್ರಪ್ಪಾ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಹೇಳಿದ್ದೇನೆ. ನಾನು ತನಿಖೆ ಮಾಡುವುದನ್ನು ಬಿಡಿ ಎಂದು ನಿಮ್ಮ ಹತ್ತಿರ ಹೇಳಿಲ್ಲ. ನಾನು ಅವೊತ್ತೇ ಕ್ಯಾಬಿನೆಟ್‌ನಲ್ಲಿ ಹೇಳಿದ್ದೇನೆ. ಸಾರ್ ಇಂಥಿಂಥ ಅನ್ಯಾಯಗಳು ನಡೆಯುತ್ತಿವೆ, ಇಂಥವಕ್ಕೆ ಸರ್ಕಾರದ ಪ್ರತಿನಿಧಿ ಯಾರಿದ್ದಾರೆ...

ಅಧ್ಯಕ್ಷರು : ರೇವಣ್ಣನವರೆ, ಇದರ ಬಗ್ಗೆ ತನಿಖೆಯಾಗಿ ಏನು ತಪ್ಪು ಮಾಡಿರತಕ್ಕಂಥ ಅಧಿಕಾರಿಗಳಾಗಿರಬಹುದು, ಇನ್ನೊಬ್ಬರಾಗಿರಬಹುದು, ಅವರ ಮೇಲೆ ಕಠಿಣ ಶಿಕ್ಷೆ ಆಗಬೇಕು ಎಂದು ನೀವು ವಾದ ಮಾಡುತ್ತಿದ್ದೀರೋ ಅಥವಾ ಏನು ನಿಮ್ಮ ಅಭಿಪ್ರಾಯ.

ಶ್ರೀ ಹೆಚ್.ಡಿ. ರೇವಣ್ಣ : ಸಾರ್ ಕೊನೆಯದಾಗಿ, ನಾನು ಸ್ವಲ್ಪ ಹೇಳುವುದಕ್ಕೆ ನನಗೆ ಸುಮ್ಮನೆ ಬಿಡಿಸಾರ್. ಏಕೆ ನೀವೇನಾದರೂ ಅವರ ಪರವಾಗಿ ಅರ್ಧಕ್ಕೇ ಮುಗಿಸಬೇಕು ಎಂದು ತಾವು ಮಾಡುತ್ತಿದ್ದೀರಾ? ಆ ರೀತಿ ಇದ್ದರೆ ಹೇಳಿ. ನಾನು ಸುಮ್ಮನೆ ಕುಳಿತುಕೊಂಡು ಬಿಡುತ್ತೇನೆ. ಬೇಡ ಎಂದರೆ ಸುಮ್ಮನೆ ಕುಳಿತುಕೊಂಡುಬಿಡುತ್ತೇನೆ. ಚೆಲುವರಾಯಸ್ವಾಮಿಯವರು ಒತ್ತಡ ಹಾಕಿದರು ಎಂದು ನಾನು ಹೇಳುತ್ತಿಲ್ಲ. ರೈತರನ್ನು ಅವರು ಉಳಿಸಬೇಕಾದ್ದು ಅವರ ಕರ್ತವ್ಯವಾಗಿತ್ತು. ಅವರು ಆ ಕೆಲಸವನ್ನು ಮಾಡಿದ್ದಾರೆ. ಇದನ್ನು ಜನರಲ್ ಬಾಡಿಯ highest body ಆಗಿದ್ದು ಕ್ರಿಮಿನಲ್ ಕೇಸನ್ನು ಯಾವ ಅಧಿಕಾರಿ ಮೇಲೆ ಹಾಕಬೇಕು ಎಂದು ತೀರ್ಮಾನ ಮಾಡಬೇಕಾಗಿತ್ತು ಯಾವುದಕ್ಕಾದರೂ ಹೆಚ್ಚು ಕಡಿಮೆಯಾದರೆ ಜನತೆಯೇ ಜನಾರ್ಧನ ಎಂದು ಜನತೆ ಹತ್ತಿರ ಹೋಗುತ್ತೇವೆಂದು ಹೇಳುತ್ತೇವೆ. ಇಂತಹ ಮಹಾಸಭೆಯಲ್ಲಿ ಯಾರು ಅಧಿಕಾರಿ ಇದ್ದಾನೆ, ಅವನ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಎಂದರೆ ಅದನ್ನು ಬುಟ್ಟಿಗೆ ಹಾಕುತ್ತೀರಿ ಎಂದರೆ ಅರ್ಥ ಏನದು? ಯಾವ ಸರ್ಕಾರವಾಗಲಿ, ನಾನು ಆ ಸರ್ಕಾರ ಈ ಸರ್ಕಾರದ ಬಗ್ಗೆ ಹೇಳುತ್ತಿಲ್ಲ. ಮಾನ್ಯ ಯಡಿಯೂರಪ್ಪ ಸಾಹೇಬರು 60 ದಿವಸದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಏಕೆಂದರೆ, ಅವರು ಬಹಳ ಎಕ್ಸೈಜ್ ಮಾಡಿ, ಅವರಿಗೆ ಗ್ರಾಮೀಣ ಪ್ರದೇಶದ ಬಗ್ಗೆ ಅನುಭವ ಇರುವುದರಿಂದ ಕೆಲವು ಕಾರ್ಯಕ್ರಮ ರೂಪಿಸಿದ್ದಾರೆ. ನಾನು ಅದರ ಬಗ್ಗೆ ಟೀಕೆ ಟಿಪ್ಪಣಿ ಮಾಡುವುದಕ್ಕೆ ಹೋಗುವುದಿಲ್ಲ. ಅದರಲ್ಲಿ ರೈತರಿಗೆ ಬಡ್ಡಿ ಮನ್ನಾ ಮಾಡುವುದು ಮುಂತಾದ ಯೋಜನೆಗಳನ್ನು ಮಾಡಿದ್ದಾರೆ. ನಾನು ಇದರ ಬಗ್ಗೆ ಹೇಳಿ ನಂತರ ಬೇರೆ ಹೇಳುತ್ತೇನೆ. ನಾನು ಸಭೆಯಲ್ಲಿ ದಯಮಾಡಿ ಎಲ್ಲಾ ಸದಸ್ಯರಿಗೆ ಮನವಿ ಮಾಡುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅನೇಕ ಸಲ ಈ ಸದನದಲ್ಲೆ ಅಧಿಕಾರಿಗಳ ವಿಚಾರ ಪ್ರಸ್ತಾಪವಾಗಿತ್ತು. ಹಾಗಾದರೆ ಹೇಗೆ ಇವರಿಗೆ ಇಷ್ಟು ವರ್ಷಗಳಲ್ಲಿ? ಶಿಕ್ಷೆ ಆಗದೆ ಹೋಗಿರುವುದು? ಇವರನ್ನು ಯಾರು ಕಾಪಾಡುತ್ತಾರೆ? ನಮ್ಮ ವ್ಯವಸ್ಥೆಯೊಳಗೆ ನಾವೆಲ್ಲಾ ನೀತಿಯನ್ನು ಹೇಳುತ್ತೇವೆ. ಈಗ ಹೂಚ್ ದಂಧೆಯಾಯಿತು; ಗಂಗರಾಂ ಬಿಲ್ಡಿಂಗ್ ಬಿದ್ದುಹೋಗಿದ್ದಾಯಿತು, ಸರ್ಕಸ್ ಟ್ರಾಜಿಡಿ ಆಯಿತು. ಲೋಕಾಯುಕ್ತ ರೈಡ್ಸ್ ಆಯಿತು. ಸುಮಾರು ಆಗಿದ್ದಾವೆ. ಲಾಸ್ಟ್‌ಗೆ ಎಲ್ಲ ಬಾಯಿಲ್‌ಡೌನ್ ಆಗುತ್ತದೆ ಎಂದರೆ ಕ್ಯಾಸ್ಟ್. ಇಲ್ಲ ಕ್ಯಾಷ್. ಸಿ ಬಿಟ್ಟು ಡಿ ಇಲ್ಲವೇ ಇಲ್ಲ. Only ‘C’. ‘So’ it boils down to caste or cash ಎಲ್ಲೋ ಅಲ್ಲೋ ಇಲ್ಲೋ ಹುಡುಕಿಕೊಂಡು ಬಂದು ಬಿಡುತ್ತಾರೆ. ಧರ್ಮಾಧಿಕಾರಿಗಳು ಗುರುಗಳು, ದೊಡ್ಡ ದೊಡ್ಡ ಖಾವಿಧಾರಿಗಳು “ ನಮ್ಮ ಕುಲಾನೇ ನಾಶವಾಗಿ ಹೋಗಿಬಿಡುತ್ತದೆ ಇವನನ್ನು ಕಾಪಾಡದೆ ಹೋದರೆ “ ಎಂದು ಹೇಳಿಬಿಡುತ್ತಾರೆ. ಆಗ ಪಕ್ಷ, ಪಂಗಡ ನೀತಿ, ನಿಜ ಭ್ರಷ್ಟಾಚಾರ ದೇಶ ಏನೂ ಇರುವುದೇ ಇಲ್ಲ. ಯಾವನಾದರೂ ದಿಕ್ಕಿಲ್ಲದೆ ಇರುವವನು ಸಿಕ್ಕಿದರೆ ಅವನಿಗೆ ಬೇಕಾದರೆ ಕ್ಯಾಬಿನೇಟ್‌ನಲ್ಲಿ ತಕ್ಷಣ ಡಿಸ್‌ಮಿಸ್ ಮಾಡಬೇಕೆಂದು ತೀರ್ಮಾನ ತೆಗೆದು ಕೊಳ್ಳುತ್ತಾರೆ. ಪಕ್ಷಗಳನ್ನು ಮೀರಿ ನಾವು ಒಗ್ಗಟು ಆಗುವುದು ಯಾವಾಗ ಎಂದರೆ ಈ ಎರಡು ವಿಚಾರ ಬಂದಾಗ. ಇಲ್ಲದೆ ಹೋದರೆ, there should some tenable reason, why such people have gone scot-free till today? why? who is coming to their rescue? ನಾವು ನಮ್ಮ ಆತ್ಮ ಸಂಶೋಧನೆ ಮಾಡಿಕೊಳ್ಳಬೇಕಾಗುತ್ತದೆ. ಕೆಪಿಟಿಸಿಎಲ್ ಇದೆ.

ಅಧ್ಯಕ್ಷರು : ಆತ್ಮ ಇದ್ದರೆ ಶೋಧನೆ ಮಾಡಿಕೊಳ್ಳಬಹುದು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಆತ್ಮ ಸತ್ತು ಹೋಗಿದೆ. ಇವತ್ತು ಬಹಳ ದೊಡ್ಡ ಮಾತು ಹೇಳಿದಿರಿ. ಅಧ್ಯಕ್ಷ ಪೀಠದಿಂದ ಬಹಳ ದೊಡ್ಡ ಮಾತು ಹೇಳಿದಿರಿ. ನಾವು ಒಂದು ರೀತಿ ಜೀವಂತ ಶವವಾಗಿ ಇಲ್ಲೆ ಕೆಲಸವನ್ನು ಮಾಡುತ್ತಿದ್ದೇವೆ. ನಾಟಕೀಯವಾಗಿ ಕೆಲಸ ಮಾಡುತ್ತಿದ್ದೇವೆ. ನಮಲ್ಲಿ honesty ಎನ್ನುವಂತಹ ಎಲಿಮೆಂಟ್ ಸತ್ತುಹೋಗಿ ಬಿಟ್ಟಿದೆ. ನಮ್ಮ ನಿಮ್ಮ ಜೀವನ, ನಮ್ಮ ಸ್ಥಿತಿ ಗತಿಗಳನ್ನು ಹೋಲಿಸಿಕೊಂಡರೆ ಯಾರಾದರೂ ಒಬ್ಬ ಟ್ರಾಫಿಕ್ ಇನ್ಸ್‌ಪೆಕ್ಟರ್ ಆಗಿರುವಂತಹವನ ಮನೆಗೆ ಹೋಗಿ ಅವನ ಜೀವನ ನೋಡಿದರೆ, ಅಥವಾ ಮೋಟಾರ್ ವೆಹಿಕಲ್ ಇನ್ಸ್‌ಪೆಕ್ಟರ್ ಅಥವಾ ರೇಂಜ್ ಫಾರೆಸ್ಟರ್ ಆಫೀಸರ್, ಒಬ್ಬ ಎಕ್ಸೈಜ್ ಸೂಪರಿಂಟೆಂಡೆಂಟ್ ನೋಡಿಬಿಟ್ಟರೆ ನಾಚಿಕೆಯಾಗಿ ತಲೆ ತಗ್ಗಿಸಿಬಿಡಬೇಕು. ಇದೇ ಸದನದಲ್ಲಿ ಗಟ್ಟಿ ಚಂದ್ರಶೇಖರ್ ರವರು ಒಂದು ಭಾಷಣವನ್ನು ಮಾಡಿದ್ದರು. ಅವರು ಬಹಳ ಚೆನ್ನಾಗಿ ನಗು ನಗುತ್ತಾ ಮಾತನಾಡುತ್ತಿದ್ದರು. ಅವರು ಎರಡನೆ ಸಲ ಆರಿಸಿ ಬಂದಿದ್ದರು. ಅವರು, “ ನನ್ನ ಮನೆಯಲ್ಲೆ ನನ್ನ ಹೆಂಡತಿ ಗಲಾಟೆ ಮಾಡುತ್ತಿದ್ದಾರೆ ಮಾನ್ಯ, ಅಧ್ಯಕ್ಷರೆ ಏಕೆ ನೀವು ಎಂಎಲ್ ಎ ಆಗುತ್ತೀಯಾ? ನೋಡು ಪಕ್ಕದ ಮನೆಯಲ್ಲಿರುವವನು ಸೊಸೈಟಿ ಸ್ಕೆಟರಿ, ಅವರು ಆರು ಎಳೆ ಚೈನ್ ಮಾಡಿಸಿದ್ದಾರೆ. ನಿನ್ನ ಹಣೆಬರಹಕ್ಕೆ ಎರಡು ಸಲ ಮೆಂಬರ್ ಆದೆ, ನನಗೆ ಒಂದು ಚೈನ್ ಇಲ್ಲ, ಬಿಟ್ಟು ಬಿಡು ಈ ಎಂಎಲ್ಎ ಕೆಲಸ, ಸೊಸೈಟಿ ಸ್ಕೆಟರಿ ಆಗು ಎಂದು ಗಲಾಟೆ ಮಾಡುತ್ತಿದ್ದಾಳೆ “ ಎಂದು ಈ ಸದನದಲ್ಲಿ ಮಾತನಾಡಿದ್ದರು. ಹಾಸ್ಯದಲ್ಲೆ ಎಷ್ಟು ಅರ್ಥವನ್ನು ಅವರು ಬಿಂಬಿಸುವುದಕ್ಕೆ ಪ್ರಯತ್ನವನ್ನು ಪಟ್ಟಿದ್ದರು. ಮಾನ್ಯ ರೇವಣ್ಣನವರು ಬಹಳ

ಚೆನ್ನಾಗಿ ಮಾತನಾಡುತ್ತಿದ್ದಾರೆ. We are very happy. ಅವರು ಮೆಂಬರ್ ಆಗಿ ಮಾತನಾಡುವುದಕ್ಕೆ ಹೆಚ್ಚು ಅವಕಾಶ ಸಿಕ್ಕಿರಲಿಲ್ಲ. ಇವತ್ತು ನಿಜವಾಗಲೂ ಕೂಡ ಹಾಸ್ಯವಾಗಿ ಬಹಳ ಸೀರಿಯಸ್ಸಾಗಿ ಇರುವಂತಹ ಮ್ಯಾಟರನ್ನು ಹೇಳುತ್ತಿದ್ದಾರೆ. 875 ರೂಪಾಯಿಗೆ ಮಾರುತ್ತಾರೆ, ಎಂದು ಹೇಳಿದರು. It is a very serious mattter. ಆದರೆ ನಾನು ಎಲ್ಲರಲ್ಲೂ ಕೈಜೋಡಿಸಿ ಕೇಳಿಕೊಳ್ಳುತ್ತೇನೆ, ಆ ವಿಷಯದಲ್ಲೆ ನಮ್ಮ ಪ್ರಾಮಾಣಿಕತೆ ಎಷ್ಟರ ಮಟ್ಟಿಗೆ ಇದೆ? ಜಾತಿ ಮತ್ತ ಹಣದ ಪ್ರಶ್ನೆ ಬಂದಾಗ ಅದನ್ನು ಮೀರಿ ನಿಲ್ಲುವಂತಹ ಮಿಲಿಟೆನ್ಸಿ ನಮ್ಮಲ್ಲಿ ಎಷ್ಟು ಜನರಲ್ಲೆ ಇದೆ? that is what is to be answered.

ಶ್ರೀ ವಾಟಾಳ್ ನಾಗರಾಜ್ : ರಾಜಕಾರಣಿಗಳಲ್ಲೂ ಇದೆಯಲ್ಲ ಜಾತಿ. ಮಂತ್ರಿ ಆಗಬೇಕಾದರೆ ಜಾತಿ, ಶಾಸಕರಾಗಬೇಕಾದರೆ ಜಾತಿ, ರಾಜ್ಯಸಭೆಗೆ ತರಬೇಕಾದರೆ ಜಾತಿ.

ಒಬ್ಬರು ಮಾನ್ಯ ಸದಸ್ಯರು : ಈಗ ಶಾಸಕರಿಂದ ಪ್ರಾರಂಭಮಾಡಿ.

(ಗೊಂದಲ)

ಅಧ್ಯಕ್ಷರು : ರೇವಣ್ಣನವರೆ ಬೇಗ ಮುಗಿಸಿ.

ಶ್ರೀ ಎನ್.ಚೆಲುವರಾಯಸ್ವಾಮಿ : ಅವರು ಹೇಳಿದ್ದು ವಾಸ್ತವ ಸತ್ಯ. ಆದರೆ ಇದಕ್ಕೆ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು ಎಂದು ರಾಜ್ಯದಲ್ಲಿ... ಒಂದು ನಿಮಿಷ ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು :– ಚೆಲುವರಾಯ ಸ್ವಾಮಿಯವರೆ ಅವರು ಭಾಷಣ ಮುಗಿಸಲಿ. ರಿಪ್ಲೈ ಆಗಬೇಕು.

ಶ್ರೀ ಎನ್ .ಚೆಲುವರಾಯಸ್ವಾಮಿ :– ನಾನು ಮಧ್ಯ ಮಾತನಾಡುವುದಿಲ್ಲ ಸಾರ್. ಉತ್ತರವನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಕೊಡುತ್ತಾರೆ. ಶುಗರ್ ಫ್ಯಾಕ್ಟರಿ ವಿಚಾರ ಬಂದಾಗ 2000 ರಿಂದ 2004 ರಲ್ಲೆ ಇಡೀ ಸೌತ್ ಇಂಡಿಯಾದಲ್ಲೆ ನಂಬರ್ ಒನ್ ಫ್ಯಾಕ್ಟರಿ ಇದ್ದದ್ದನ್ನು ಮುಚ್ಚಿದಾಗ ಬಹುಶ. ಎನ್‌ಕ್ವೈರಿ ಆದಮೇಲೆ ಯಾರ ಮೇಲೆ ಕ್ರಮ ಆಗಲಿಲ್ಲ. ಮಾನ್ಯ ರೇವಣ್ಣ ಸಾಹೇಬರು ಹೇಳಿದ್ದು ನೂರಕ್ಕೆ ನೂರು ಸತ್ಯ. ಅವತ್ತು ಮಾನ್ಯ ಸಿದ್ಧರಾಮಯ್ಯನವರು ಕಂಡೀಷನ್ ಮಾಡಿ ಕ್ರಮ ಆಗಬೇಕೆಂದು ಹೇಳಿ ಹಣವನ್ನು ಬಿಡುಗಡೆ ಮಾಡಿದರು. ಅದು ಹಾಗೆ ಇನ್ನು ಫೈಲ್‌ನಲ್ಲೆ ಇದೆ. ಅದರ ಹಿಂದೆ ನಾವೆಲ್ಲಾ ಅಲ್ಲೆ ಕುಳಿತಿದ್ದೆವು. ನಾವು ಅಲ್ಲೆ ಕುಳಿತಿದ್ದೆವು, 7 ನಗರಸಭೆಯಲ್ಲಿ 200 ಕೋಟಿ ರೂಪಾಯಿ ಹಗರಣ ಎಂದು ಹೇಳಿದರು. ಅದು 15 ದಿವಸಕ್ಕೆ ಮುಚ್ಚಿಹೋಯಿತು. ಈ ರೀತಿಯಾಗಿ ಈ ರಾಜ್ಯದಲ್ಲಿ 50 ವರ್ಷದಿಂದ ಸತತವಾಗಿ ನಡೆದುಕೊಂಡು ಬರುತ್ತಿದೆ. ಇದಕ್ಕೆ ಪಕ್ಷಾತೀತವಾಗಿ ಒಂದು ನಿಲುವು ತೆಗೆದುಕೊಂಡು ಎಲ್ಲರೂ ಸಹ ಒಂದು ದಾರಿಯಲ್ಲೆ ಹೋಗಬೇಕಾಗಿದೆ. ರಾಜಕೀಯ ಪಕ್ಷಗಳು ತಮ್ಮ ತಮ್ಮ ಸ್ವಾರ್ಥಕ್ಕೆ, ವೈಯುಕ್ತಿಕವಾಗಿ ತೆಗೆದುಕೊಳ್ಳುವುದರಿಂದ ಇವತ್ತು ಈ ಮಟ್ಟಕ್ಕೆ ಇದೆ. ಇನ್ನು ತೊಂದರೆ ಆಗುವವರೆಗೂ ...

ಅಧ್ಯಕ್ಷರು : ಚೆಲುವರಾಯ ಸ್ವಾಮಿಯವರೆ ನನ್ನ ಮಾತು ಕೇಳಿ. ನೀವು ಈಗ ಅಧಿಕಾರದಲ್ಲಿದ್ದೀರಿ. ಮೊದಲನೆ ಬೆಂಚ್‌ನಲ್ಲಿದ್ದೀರಿ. ಈಗ ಆ ಇಚ್ಛಾಶಕ್ತಿಯನ್ನು ತೋರಿಸ ಬೇಕಾದವರು ನೀವು. ಅದಕ್ಕೆ ಏನಾದರೂ ಅಡ್ಡಿ ಬಂದರೆ ಈ ಕಡೆಯಿಂದವರಾಗಲೀ ಆ ಕಡೆಯವರಿಂದಾಗಲೀ ಆಗ ಹೇಳಿ ಇಚ್ಛಾಶಕ್ತಿ ನಿಮ್ಮಲ್ಲಿ ತೋರಿಸಬೇಕು ಈಗ. ಮೊದಲು ಮತ್ತು ಎರಡನೆ ಬೆಂಚ್‌ನವರು ತೋರಿಸಬೇಕು.

ಶ್ರೀ ಎಂ. ಮಹದೇವ್ : ಅದು ತಮ್ಮಿಂದನೆ ಪ್ರಾರಂಭವಾಗಬೇಕು

ಅಧ್ಯಕ್ಷರು : ಆಯಿತು ಕುಳಿತುಕೊಳ್ಳಿ ಸ್ವಾಮಿ. ಈಗ ರೇವಣ್ಣನವರೆ ಮಾತನಾಡಿ. ದಯಮಾಡಿ ಅವರು ಮುಗಿಸಲಿ.

ಒಬ್ಬರು ಮಾನ್ಯ ಸದಸ್ಯರು : ನಿಮ್ಮಲ್ಲಿ ಆ ಇಚ್ಛಾಶಕ್ತಿ ತೋರಿಸುತ್ತಿದ್ದಾರೆ ಈಗ. ಅದರ ಬೆನ್ನತ್ತಿಕೊಂಡು ಹೋಗಿ.

(ಗೊಂದಲ)

ಅಧ್ಯಕ್ಷರು : ಆಯಿತು, ಮುಗಿಸಲಿ ಅವರು. ಈಗ ಎಲ್ಲಾ ವಿಚಾರಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅವರು ಮಾತನಾಡುತ್ತಿದ್ದಾರೆ ಮುಗಿಸಲಿ. ಮಾತನಾಡಿ ರೇವಣ್ಣನವರೆ.

ಶ್ರೀ ಹೆಚ್.ಡಿ.ರೇವಣ್ಣ :– ಈಗ ಏನಾಗುತ್ತದೆ ಎಂದರೆ ನಾವು ಏನು ಮಾತನಾಡಬೇಕು ಎಂದು ಇರುತ್ತೇವೋ ಅದೆಲ್ಲಾ ಮರೆಸಬೇಕು ಎಂದು ಮಧ್ಯೆ ಮಧ್ಯೆ ಎದ್ದು ನಿಂತುಕೊಳ್ಳುತ್ತಾರೆ ಏಕೆಂದರೆ....

ಅಧ್ಯಕ್ಷರು : ಮಹದೇವ್, ಅವರು ಮಾತನಾಡಲಿ ಬಿಡಿ. ನಿಮ್ಮ ಸರದಿ ಬಂದಾಗ ಮಾತನಾಡುವಿರಂತೆ. ಈಗ ಸಮಯ ಇಲ್ಲ, ಇನ್ನು ರಿಪ್ಲೈ ಮಾಡಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಈಗ ನಾನು ಇಷ್ಟೆ ಹೇಳುವುದು, ಇದಕ್ಕೆ ಸಂಬಂಧಪಟ್ಟವರು ಯಾರು? ಜನರಲ್ ಬಾಡಿ ಒಂದು ಹೈಯೆಸ್ಟ್ ಅಥಾರಿಟಿ. ರಾಜ್ಯದಲ್ಲೆ 3ನೇ ಸ್ಥಾನದಲ್ಲಿ ಇದ್ದಂತಹ ಸಂಸ್ಥೆಯನ್ನು ಒಂದೇ ದಿನದಲ್ಲಿ 47 ಕೋಟಿ ರೂಪಾಯಿ ನಷ್ಟ ಮಾಡುವುದಕ್ಕೆ ಯಾರು ಕಾರಣ ಕರ್ತರು ? 1260 ರೂಪಾಯಿ ಇರುವಂತಹ ಸಕ್ಕರೆಯನ್ನು 875 ರೂಪಾಯಿಗೆ ಮಾರಾಟ ಮಾಡಿದ್ದು ಯಾರು? ಮತ್ತೆ ನಾಲ್ಕು ತಿಂಗಳುಗಳ ಕಾಲ ಸಕ್ಕರೆಯನ್ನು ಲಿಫ್ಟ್ ಮಾಡದೆ ಅಲ್ಲೆ ಇಡುವುದಕ್ಕೆ ಅವಕಾಶ ಕೊಟ್ಟಂತಹ ಅಧಿಕಾರಿ ಯಾರು? ಬ್ಯಾಂಕ್ ಅಧಿಕಾರಿ ಹೇಳಿದರು ಮಾರುವುದು ಬೇಡ ಮಾರುಕಟ್ಟೆ ರೇಟ್ ಜಾಸ್ತಿ ಇದೆ ಎಂದು ಹೇಳಿದರು. ಏಕೆಂದರೆ ಹೇಮಾವತಿ ಶುಗರ್ ಫ್ಯಾಕ್ಟರಿ ನಾವು ವಿರೋಧ ಮಾಡಿದೆವು. ಇವತ್ತು ಹೇಮಾವತಿ ಶುಗರ್ ಫ್ಯಾಕ್ಟರಿ ನಷ್ಟ ಎಲ್ಲಾ ಕಳೆದು 5 ಕೋಟಿ ರೂಪಾಯಿ ಲಾಭವಾಯಿತು. ಅದನ್ನು ನಾವು ವಿರೋಧ ಮಾಡಿದೆವು. ನಾವು ರೈತರ ಪರವಾಗಿರುವವರು. ಇವತ್ತು ಇದಕ್ಕೆ ಕಾರಣಕರ್ತರು ಯಾರು? ಮತ್ತು ಹೈಯೆಸ್ಟ್ ಜನರಲ್ ಬಾಡಿ, ಕ್ರಿಮಿನಲ್ ಕೇಸ್ ಹಾಕಿ ಎಂದರೂ ಕೂಡ ಅದರ ಕಡತವನ್ನು ಧೂಳಿಗೆ ಹಾಕಿದ್ದು ಯಾರು ? ಆ ಸಂಸ್ಥೆಗೆ ಹೋಗುತ್ತಿದ್ದಂತಹ ಅಧಿಕಾರಿ ಯಾರು? ಅಂದರೆ ರಾಜ್ಯಸರ್ಕಾರದಿಂದ ಪ್ರತಿನಿಧಿಸುವ ಅಧಿಕಾರಿ ಯಾರು? ಇವರ ಮೇಲೆ ಕ್ರಿಮಿನಲ್ ಕೇಸ್ ಹಾಕುವುದಕ್ಕೆ ಸರ್ಕಾರ ಮಾಡಬೇಕೆಂದು ಮನವಿ ಮಾಡುತ್ತೇನೆ. ಈಗ ಮಾನ್ಯ ವಿರೋಧ ಪಕ್ಷದ ಸದಸ್ಯರೆಲ್ಲಾ ಹೇಳಿದರು. ಇದನ್ನು ಮಾಡಬೇಕೆಂದರೆ ಸಭೆಯಲ್ಲೆ ಒಂದು ನಿರ್ಣಯ ಮಾಡಲಿ. ಇದು ಮೊದಲು ಪ್ರಾರಂಭವಾದರೆ ಇಡೀ ರಾಜ್ಯದಲ್ಲೆ ಕೂಡ ಪ್ರಯೋಜನ ಆಗುತ್ತದೆ ಎಂದು ಮನವಿ ಮಾಡುತ್ತೇನೆ. ಇದಲ್ಲದೆ ಮಾನ್ಯ ಯಡಿಯೂರಪ್ಪ ಸಾಹೇಬರು ನಮ್ಮ ಉಪ ಮುಖ್ಯಮಂತ್ರಿಗಳು ಕೆಲವು ಅತ್ಯುತ್ತಮ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಹೇಳುವುದಾದರೆ ರೈತರಿಗೆ ಸಾಲವನ್ನು ಬಡ್ಡಿ ನೂರಕ್ಕೆ ನಾಲ್ಕು ರೂಪಾಯಿಯಂತೆ ಕೊಡುತ್ತೇವೆಂದು ಹೇಳಿದ್ದಾರೆ. ಸಂತೋಷ ಅದನ್ನು ಮಾಡಿರುವುದು. ಆದರೆ

ನಿಜವಾಗಿ ಅದು ಇಂಪ್ಲಿಮೆಂಟ್ ಆಗಬೇಕು. ನಮ್ಮಲ್ಲಿ ಏನಾಗುತ್ತದೆ ಎಂದರೆ ಹಳ್ಳಿ ಕಡೆ ವಿಎಸ್‌ಎಸ್‌ಎನ್‌ಎಲ್ ಇವೆ. ಪ್ರತಿವರ್ಷ ಅವರದೆ ರಿನ್ಯೂ ಆಗುತ್ತಿರತ್ತದೆ. ಹೋದವರ್ಷ ಯಾರು ಸಾಲ ತೆಗೆದುಕೊಂಡಿರುತ್ತಾರೆ, ಅಲ್ಲೆ ಸ್ಕ್ರೆಟರಿ ಏನು ಮಾಡುತ್ತಾನೆ ಎಂದು ಮಾನ್ಯ ಶ್ರೀನಿವಾಸ ಗೌಡರಿಗೆ ಅದು ಗೊತ್ತು. ಅಲ್ಲಿ ಬುಕ್ ಅಡ್ಜಸ್ಟಮೆಂಟ್ ಮಾಡುತ್ತಾರೆ. ಮೂರು ಜನಕ್ಕೆ ಬುಕ್ ಅಡ್ಜಸ್ಟ್‌ಮೆಂಟ್ ಮಾಡಿ ಅವನ ಹತ್ತಿರ ಎಂಟು ಪರ್ಸೆಂಟ್ ಅಥವಾ ಹತ್ತು ಪರ್ಸ್ವೆಂಟ್‌ವರೆಗೆ ಬಡ್ಡಿ ತೆಗೆದುಕೊಂಡು ಪುಸ್ತಕದಲ್ಲಿ ಕಡಿಮೆ ತೋರಿಸಿಕೊಂಡು ಅಧಿಕಾರಿಗಳು ಅಡ್ಜಸ್ಟ್ ಮೆಂಟ್, ಮಾಡುತ್ತಾರೆ. ಪುಸ್ತಕದಲ್ಲಿ ತೋರಿಸಿಕೊಳ್ಳುವುದಕ್ಕೆ ಅಡ್ಜ್‌ಸ್ಟ್‌ಮೆಂಟ್ ಮಾಡಿಕೊಂಡು ಎಂಟು ದಿವಸಕ್ಕೆ 2 ಅಥವಾ 3 ಸಾವಿರ ರೂಪಾಯಿ ಸ್ಕ್ರೆಟರಿಗಳು ಹೊಡೆದುಕೊಳ್ಳುತ್ತಾರೆ. ಇದು ಆಗಬಾರದು. ಏಕೆಂದರೆ ಹೊಸದಾಗಿ ಸಾಲ ಕೊಡಬೇಕಾಗುತ್ತದೆ. ಅಥವಾ ಏನಾದರು ವಿಎಸ್‌ಎಸ್‌ಎನ್‌ಎಲ್ ಡಿಸಿಸಿ ಬ್ಯಾಂಕ್ ಇದ್ದರೆ ನರ್ಸಿಂಗ್ ಹೋಮ್‌ಗೆ ಫಸ್ಟ್ ಕೊಡುತ್ತಾರೆ. ಯಾವುದಾದರೂ ಹಾಸ್ಪಿಟಲ್ ಕಟ್ಟುವುದಿದ್ದರೆ ಫಸ್ಟ್ ಸಾಲ ಕೊಡುತ್ತೇವೆ ಎಂದು ಹೇಳುತ್ತಾರೆ. ನರ್ಸಿಂಗ್ ಹೊಂ ಕಟ್ಟುವುದಕ್ಕೆ ಪಸ್ಟ್ ಕೊಡುತ್ತಾರೆ. ಯಾರಾದರೂ ಆಸ್ಪತ್ರೆಯನ್ನು ಕಟ್ಟುತ್ತೇನೆಂದರೆ ಫಸ್ಟ್ ಸಾಲವನ್ನು ಕೊಡುತ್ತಾರೆ. ಹೋಟಲ್ ಮಾಡುತ್ತೇನೆಂದರೆ ಸಾಲವನ್ನು ಫಸ್ಟ್ ಕೊಡುತ್ತಾರೆ. ಈ ರೀತಿ ಆಗಬಾರದು. ದಯಮಾಡಿ ಕಂಡೀಷನ್ ಹಾಕಿ ರೈತರಿಗೆ ಇಷ್ಟು ಪರ್ಸೆಟ್ ಸಾಲವನ್ನು ಶೇ. 4ರಲ್ಲಿ ಕೊಡಬೇಕು. ಅದು ರೈತರಿಗೆ ಅನುಕೂಲವಾಗಬೇಕೆಂಬ ಉದ್ದೇಶದಿಂದ ಇದನ್ನು ಮಾಡಬೇಕು. ಇದನ್ನು ಎಲ್ಲಾ ರೈತರಿಗೂ ಕೊಡಿ, ಎಲ್ಲಾ ರೈತರಿಗೂ ಕೊಡುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಆದಷ್ಟು ರೈತರಿಗೆ ಇದನ್ನು ಶೇ. 4ರಲ್ಲಿ ಬಡ್ಡಿಯಲ್ಲಿ ಸಾಲವನ್ನು ಕೊಡುವುದು ಏನು ಇದೆ. ಇದನ್ನು ಕೊಡುವಂಥಾದ್ದಕ್ಕೆ ಅವಕಾಶವನ್ನು ಮಾಡಬೇಕು. ಇದು ಅಲ್ಲದೇ ಕೆಲವು ಜನತಾ ಮನೆಗಳಿಗೆ ಹಸಿರು ಕಾರ್ಡ್‌ಗಳ ಬಗ್ಗೆ, ನಮ್ಮ ರೈತರುಗಳು ಬಕಪಕ್ಷಿಗಳಂತೆ ಕಾದ ಹಾಗೆ ಕಾಯುತ್ತಿದ್ದಾರೆ. ಹಿಂದಿನ ಸರ್ಕಾರ ಬಂದು 20 ತಿಂಗಳು ಗಳಾಯಿತು. ಅದಕ್ಕೂ ಹಿಂದಿನ ಸರ್ಕಾರಕ್ಕೆ 5 ವರ್ಷ ಪೂರ್ತಿ ಮೆಜಾರಿಟಿಯನ್ನು ಕೊಟ್ಟರೂ 3 ರೂ. 20 ಪೈಸೆಗೆ ಅಕ್ಕಿಯನ್ನು ಕೊಡುವ ಕಾರ್ಯಕ್ರಮವನ್ನು ಮಾಡುವುದಕ್ಕೆ ಆಗಲಿಲ್ಲ. ಮಾನ್ಯ ಧರ್ಮಸಿಂಗ್‌ರವರು ಮತ್ತು ನಮ್ಮ ಜೆ.ಡಿ.ಎಸ್. ಎರಡೂ ಸೇರಿ ಮಾಡಿದ ಗೌರ್ವನಮೆಂಟ್ 3.20ರೂ ಗಳಿಗೆ ಒಂದು ಕೆಜಿ ಅಕ್ಕಿ ಕಾರ್ಯಕ್ರಮವನ್ನು ನಾವು ಮಾಡಿದೆವು. ಆದರೂ ಅಧಿಕಾರಿಗಳೂ ಪುಸ್ತಕವನ್ನು ಇಟ್ಟುಕೊಂಡು ಕುಳಿತುಬಿಟ್ಟು. 3.20 ರೂ. ಗಳಿಗೆ ಅಕ್ಕಿ ಎಂದು ಯಾವಾಗ ಕಾರ್ಡ್ ಅನ್ನು ಕೊಡುತ್ತಾರೊ, ನನಗೆ ಗೊತ್ತಿಲ್ಲ. ಆ ಕಾರ್ಡ್ ಅನ್ನು ಕೊಡುವುದಕ್ಕೆ 20 ತಿಂಗಳುಗಳನ್ನು ತೆಗೆದುಕೊಂಡರೆ, ಇನ್ನು ಅಕ್ಕಿ ಹಂಚುವುದಕ್ಕೆ ಎಷ್ಟು ದಿವಸಗಳು ಆಗುತ್ತವೆ? ಈ ಕಾರ್ಡ್ ಪ್ರಿಂಟ್ ಮಾಡಿಸುವುದಕ್ಕೆ ಈಗ 20 ತಿಂಗಳುಗಳು ಆಗಿ ಹೋಯಿತು. ನಾವು ಊರಿಗೆ ಹೋದಾಗಲೆಲ್ಲಾ ನಮ್ಮನ್ನು ಬೈಯುತ್ತಾರೆ. ಇಲ್ಲಿ 3ರೂ. ಗಳಿಗೆ ಅಕ್ಕಿಯನ್ನು ಕೊಡುತ್ತೇವೆಂದು ಹೇಳುತ್ತಾರೆ. ಕೆಲವರಿಗೆ ಅಕ್ಕಿ ಬಂದಿದೆ, ಕೆಲವರು ತೆಗೆದುಕೊಳ್ಳುತ್ತಾ ಇಲ್ಲ, ಅವರು ಸಾಯುತ್ತಾ ಇದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ರೇವಣ್ಣನವರೆ 1ನೇ ತಾರೀಖಿನಿಂದ ಹಂಗಾಮಿ ಕಾರ್ಡ್ ಕೊಡುತ್ತೇವೆಂದು ಸರ್ಕಾರ ಹೇಳಿದೆಯಲ್ಲಾ..

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಧರ್ಮಸಿಂಗ್‌ರವರ ಸಮ್ಮುಖದಲ್ಲಿ ಸಚಿವ ಸಂಪುಟದಲ್ಲಿ ಹಿಂದಿನ ಸರ್ಕಾರದಲ್ಲಿ ತೀರ್ಮಾನವಾಗಿತ್ತು. ಫೆಬ್ರವರಿ 20ನೇ ತಾರೀಖಿನೊಳಗೆ ಎಲ್ಲಾ ಕಾರ್ಡ್‌ಗಳನ್ನು ಕೊಡುವಂತೆ ತೀರ್ಮಾನವಾಗಿತ್ತು. ಆದರೆ 20ನೇ ಫೇಬ್ರವರಿ ತಿಂಗಳು ಆಯಿತು. ಇನ್ನೂ ಮಾಡಿಲ್ಲ ದಯಮಾಡಿ ಈ ಹಸಿರು ಕಾರ್ಡ್ ಅನ್ನು ಕೊಡುವ ಬಗ್ಗೆ ಎಷ್ಟು ದಿವಸಕ್ಕೆ ಕೊಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು, ಮತ್ತು ಕೂಡಲೇ ರೈತರಿಗೆ ಹಸಿರು ಕಾರ್ಡ್ ಅನ್ನು ಕೊಡಬೇಕೆಂದು ಹೇಳುತ್ತೇನೆ.

ಡಾ : ಎಂ.ಸಿ. ಸುಧಾಕರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಇದ್ದಿದ್ದರೆ ಕೊಡುತ್ತಿದ್ದರು. ಅದು ಬದಲಾವಣೆ ಆಗಿರುವುದಕ್ಕೆ ಈಗ ತಡೆಯಾಗಿದೆ.

ಶ್ರೀ ಸಿದ್ದು ಸಾವದಿ : ಮಾನ್ಯ ಅಧ್ಯಕ್ಷರೆ, 18 ತಿಂಗಳುಗಳಾದರೂ ಕೊಡುವುದಕ್ಕೆ ಆಗಲಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ನೀವು ಏನು ಹೇಳಿದ್ದೀರಿ, ಸ್ವಲ್ಪ ನೀವು ಅರ್ಥ ಮಾಡಿಕೊಳ್ಳಿ. 150 ಸೀಟುಗಳನ್ನು ಕೊಟ್ಟಿರುವುದಕ್ಕೆ ನೀವು 3 ರೂ. 20 ಪೈಸೆ ಅಕ್ಕಿಯನ್ನು ತೆಗೆದುಹಾಕಿದ್ದೀರಿ. ನಿಮ್ಮ ಕೈಯಲ್ಲಿ ಇಲ್ಲ ಮಾನ್ಯ ಧರ್ಮಸಿಂಗ್‌ರವರು ಮತ್ತು ಮಾನ್ಯ ಹೆಚ್.ಡಿ. ದೇವೇಗೌಡರು ಸೇರಿಕೊಂಡು ಅವತ್ತು ಈ ಕಾರ್ಯಕ್ರಮವನ್ನು ರೂಪಿಸಿದರು. ಮಾನ್ಯ ಸಿದ್ದರಾಮಯ್ಯನವರು ಇದ್ದರು, 3ರೂ. ಗಳಿಗೆ ಅಕ್ಕಿಯನ್ನು ಕೊಟ್ಟರು. ನಿಮಗೆ 150 ಸೀಟುಗಳನ್ನು ಕೊಟ್ಟಿದ್ದಕ್ಕೆ 6.50 ರೂ ಗಳನ್ನು ಮಾಡಿದ್ದೀರಿ. ನೀವು ರೈತರು ಅದರ ಬಗ್ಗೆ ಹೇಳುವುದಕ್ಕೆ ಹೋಗಬೇಡಿ.

ಶ್ರೀ ಬಿ.ಶಿವರಾಮ್ : ಮಾನ್ಯ ಧರ್ಮಸಿಂಗ್‌ರವರು ಕಾಂಗ್ರೆಸ್ ಸಿಎಲ್‌ಪಿ ಲೀಡರ್.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಾನು ಅದರ ಬಗ್ಗೆ ಹೇಳುತ್ತಾ ಇಲ್ಲ. ಇವತ್ತು ಈ ರೀತಿ ಆಗುತ್ತಿದೆ. ಈ ರೀತಿ ಆಗಬಾರದು. ಈ ಬಗ್ಗೆ ಕಾನೂನು ಮಾಡುವುದಕ್ಕೆ ಏನು? ಯಾವ ಅಧಿಕಾರಿ ವಿಲೇಜ್ ಅಕೌಂಟೆಂಟ್ ಇರುತ್ತಾನೆ. ಅವನು ಪತ್ರೆ ಹಚ್ಚಲಿ ಅನೌನ್ಸ್ ಮಾಡಲಿ. ಅವನು ಸರಿಯಾಗಿ ಹಸಿರು ಕಾರ್ಡ್ ಅನ್ನು ಕೊಡದೇ ಹೋದರೆ ಅವನನ್ನು 6ತಿಂಗಳು ಜೈಲಿಗೆ ಹಾಕಿ. ಏಕೆ ಮಾಡುವುದಕ್ಕೆ ಆಗುವುದಿಲ್ಲ? ದಯಮಾಡಿ ಅದನ್ನು ಮಾಡಿಯೆಂದು ಮನವಿ ಮಾಡುತ್ತೇನೆ. ರೈತರಿಗೆ ಶೇ.4ರಂತೆ ಬಡ್ಡಿಯಲ್ಲಿ ಏನು ಹಣವನ್ನು ಕೊಡುತ್ತಾರೆ. ಅದಕ್ಕೆ ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಇನ್ನು ಹಳ್ಳಿ ಮಕ್ಕಳಿಗೆ ಪ್ರೌಢಶಾಲೆಯ ಬಗ್ಗೆ ಒಂದು ಚಿಂತನೆ ಇರುವುದರಿಂದ ಹಳ್ಳಿಯ ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡಬೇಕೆಂದು, ಆ ದೃಷ್ಟಿಯಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ಹಳ್ಳಿ ಹೆಣ್ಣುಮಕ್ಕಳಿಗೆ ಫ್ರಿ ಸೈಕಲ್ ಅನ್ನು ಕೊಡುತ್ತಿದ್ದಾರೆ. ಅದು ಒಳ್ಳೆಯದು. ಅದಕ್ಕೆ ಬಣ್ಣ ಹೊಡೆಸಿ ಕೊಡುತ್ತಾರೆಂದು ಮಾನ್ಯ ಬಸವರಾಜ ರಾಯರೆಡ್ಡಿ ಯವರು ಹೇಳಿದರು. ಇಲ್ಲಿ ಬಣ್ಣ ಹೊಡೆಸಿ ಕೊಡುತ್ತಾರೊ, ಹೊಸ ಸೈಕಲ್ ಕೊಡಿಸುತ್ತಾರೋ ಏನಾದರೂ ಮಾಡಲಿ ಬಿಡಿ.

ಇಲ್ಲ. ಈಗ ಸೈಕಲ್ ಹೋಗಬೇಕೆಂದರೆ ರಸ್ತೆಗಳು ಸರಿಯಾಗಿ ಇರಬೇಕು. ಈಗ ಅವರು ಸೈಕಲ್ ಕೊಟ್ಟರೂ ರಸ್ತೆಗಳೆ ಸರಿಯಾಗಿ ಇಲ್ಲ.

ಅಧ್ಯಕ್ಷರು : ಸೈಕಲ್ ಕೊಡುವ ಹೊತ್ತಿಗೆ ರಸ್ತೆಗಳು ಸರಿಯಾಗುತ್ತದೆ ಬಿಡಿ.

ಶ್ರೀ ಹೆಚ್.ಡಿ.ರೇವಣ್ಣ :- ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಕಾರಿನಲ್ಲಿ ಹೋಗುವ ರಸ್ತೆ, ಅದಕ್ಕೆ ಬೇಡವೆಂದು ಬಜೆಟ್ ಅನ್ನು ಕಡಿಮೆ ಇಟ್ಟಿದ್ದಾರೆ. ಹಳ್ಳಿ ರೋಡ್‌ಗಳಲ್ಲಿ ಸೈಕಲ್ ಹೋಗುತ್ತದೆ. ಅದಕ್ಕೆ ಸೈಕಲ್ ಅನ್ನು ಕೊಟ್ಟಿದ್ದಾರೆ, ಅದಕ್ಕೆ ನೀವು ಏನು ವರಿ ಮಾಡುವುದು ಬೇಡ. ಕಾರು ಹೋಗುವ ರಸ್ತೆಯಲ್ಲಿ ಕಾರು ಹೋಗುತ್ತವೆ. ಸೈಕಲ್‌ನಲ್ಲಿ ಹೋಗಬೇಕಾದರೆ ಅವರು ಹಳ್ಳಿಯ ರೋಡ್‌ನಲ್ಲೆ ಹೋಗುತ್ತಾರೆ. ಅದಕ್ಕೆ ಕಾರಿಗೆ ಕಡಿಮೆ ಹಣವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಮೊನ್ನೆ ಬೆಂಗಳೂರಿನ ಹತ್ತಿರ ಇರುವ ದೊಡ್ಡ ಬಳ್ಳಾಪುರಕ್ಕೆ ಹೋಗಿದ್ದೆ. ಅಲ್ಲಿ ಸುಮಾರು 4 ಕಿ.ಮೀ. ಗಳವರೆಗೂ ಸುಮಾರು ನೂರು ಹಳ್ಳಗಳು ಇತ್ತು, ಕೆಳಗೆ ಇಳಿಯಬೇಕು, ಮೇಲಕ್ಕೆ ಹತ್ತಬೇಕು. ಇದು ಮಾನ್ಯ ರೇವಣ್ಣನವರಿಗೂ ಗೊತ್ತಿದೆ. ನಾನು ಸತ್ಯವನ್ನು ಹೇಳುತ್ತಿದ್ದೇನೆ. ಈ ಸತ್ಯ ಹೇಳಿಬಿಡಿ " ನನ್ನ ಕಾಲದಲ್ಲಿ ಆಗಲಿಲ್ಲವೆಂದು ಹೇಳಿಬಿಡಿ."

ಶ್ರೀ ಬಿ. ಶಿವರಾಮ್ : ತಾವು ನೂರು ಹಳ್ಳವನ್ನು ನೋಡಿದ್ದೀರಾ, ನಮ್ಮ ಜಿಲ್ಲೆಯಲ್ಲಿ ಇಲ್ಲವೆಂದು ತಿಳಿದುಕೊಳ್ಳಬೇಡಿ. ನಮ್ಮ ಜಿಲ್ಲೆಯಲ್ಲಿ ಶುರುವಾಡಿದರೆ ಹಾಸನದಿಂದ ತಿಪಟೂರಿನವರೆಗೂ ಪೂರ್ತಿ ಗುಂಡಿಗಳೇ ಇವೆ. ಬೇರೆ ಕಡೆಗಳಲ್ಲೂ ಆ ರೀತಿಯಾಗಿ ಇವೆ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಹೆಚ್.ಡಿ.ರೇವಣ್ಣ ನವರು ತಮ್ಮ ಭಾಷಣವನ್ನು ಮುಗಿಸುತ್ತಿದ್ದಾರೆ. ಇನ್ನು ಬಹಳ ಜನರು ಮಾತನಾಡುವವರು ಇದ್ದಾರೆ. ತಾವು ಬೇಗ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಇತರ ಸದಸ್ಯರುಗಳು ರಸ್ತೆಯನ್ನು ಮಾಡಲಿಲ್ಲವೆಂದು ಹೇಳಿದ್ದಾರೆ. ನಾನು 20 ತಿಂಗಳಲ್ಲಿ ರಸ್ತೆ ಕಾಮಗಾರಿಗೆ ಎಷ್ಟು ಹಣವನ್ನು ಕೊಟ್ಟಿದ್ದೆನೆಂದು ಬೇಕಾದರೆ ಚರ್ಚೆಗೆ ಇಡಿ, ನಾನು ಉತ್ತರವನ್ನು ಕೊಡಲು ರೆಡಿಯಾಗಿದ್ದೇನೆ. ಕಳೆದ 5 ವರ್ಷಗಳಲ್ಲಿ ಏನು ಹಣವನ್ನು ಇಟ್ಟಿದ್ದರು, 20 ತಿಂಗಳಲ್ಲಿ ನಾನು ಏನು ಕೊಟ್ಟಿದ್ದೇನೆಂಬುದನ್ನು ರುಜುವಾತು ಮಾಡಿ ತೋರಿಸುತ್ತೇನೆ. ನಾನು ಇನ್ನು ರಾಜಕೀಯ ಜೀವನಕ್ಕೆ ಬರುವುದಿಲ್ಲ. ಉದಾಹರಣೆ ಹೇಳುವುದಾದರೆ ಮಾನ್ಯ ಬಿ. ಶಿವರಾಮ್ ಇದ್ದಾರೆ. ನನಗೆ ಪಕ್ಷಭೇದ ಏನು ಇಲ್ಲ, 3 ಕೋಟಿ ರೂಪಾಯಿಗಳಿಗೆ 5 ಸಾರಿ ಟೆಂಡರ್ ಅನ್ನು ಹಾಕಿದ್ದೇನೆ ಟೆಂಡರ್ ಬರದೇ ಹೋದರೆ ನಾನು ಏನು ಮಾಡಲಿ?

ಶ್ರೀ ಮಹದೇವ್ : ಮಾನ್ಯ ಅಧ್ಯಕ್ಷರೆ, ಈಗ ಬಜೆಟ್ ಮಂಡನೆಯಾಗುತ್ತಿದೆ, ಅದು ನಗು ನಗುತ್ತಾ, ಎಂಡ್ ಆಗಲಿ, ನಾವು ನೆನ್ನೆ ಮೊನ್ನೆ ಎಲ್ಲಾ ನೋಡಿ ಸಾಕಾಗಿದೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರು ಮಾತನಾಡಲಿ ಬಿಡಿ. ತಾವು ಬೇಗ ಭಾಷಣವನ್ನು

ಮುಗಿಸಿ, ತಾವು ಯೀಲ್ಡ್ ಆಗಬೇಡಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾತಿನ ಮಧ್ಯೆ ಇಂಟರ್‌ಫೀಯರ್ ಆದರೆ ನಾನು ಏನು ಮಾಡಲಿ? ನಾನು ಮಾತನಾಡುವುದಕ್ಕೆ ಅವಕಾಶವನ್ನು ಕೊಡದಿದ್ದರೆ ನಾನು ಏನು ಮಾಡಲಿ?

ಅಧ್ಯಕ್ಷರು : ಆಯಿತು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ : ಈಗ ಉದಾಹರಣೆಗೆ ಹೇಳುವುದಾದರೆ ತಿಪಟೂರು ಚಿಕ್ಕನಾಯಕನ ಹಳ್ಳಿ ರಸ್ತೆ ಫೈಲ್ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಬಿದ್ದು ಎಷ್ಟು ದಿವಸ ಆಯಿತು? ನಮ್ಮ ಲೋಕೋಪಯೋಗಿ ಇಲಾಖೆಯಿಂದ ಏನಾದರೂ ಕಡತ ಬಿದ್ದಿದೆಯಾ? ಹಣಕಾಸು ಇಲಾಖೆಗೆ ನಾನು 48 ಕೋಟಿ ರೂಪಾಯಿಗಳನ್ನು ನಾನು ರಸ್ತೆಗೆ ಕಳುಹಿಸಿಕೊಟ್ಟರೆ, ನಾನು ಇದು ಸಾರ್ವಜನಿಕರಿಗೆ ಅನುಕೂಲವಾಗಲಿ, ಎಂಬ ದೃಷ್ಟಿಯಿಂದ ಮಾಡಿದ್ದೇನೆ. ಈಗ ಉದಾರಣೆಗೆ ಹೇಳುವುದಾದರೆ ನಬಾರ್ಡ್ ರಸ್ತೆಯ ಬಗ್ಗೆ ಯಾವ್ಯಾವ ತಾಲ್ಲೂಕಿಗೆ ಎಷ್ಟು ಕೊಟ್ಟಿದ್ದೇನೆಂಬುದನ್ನು ಹೇಳಲಿ, ಹೇಳುತ್ತೇನೆ, ಸಿ.ಆರ್.ಎಫ್. ನದು, ನಾನು ಸರಿಯೋ ತಪ್ಪೊ ಕೆಲವು ಕಡೆಗಳಲ್ಲಿ ಬಿ.ಜೆ.ಪಿ. ಯ ಶಾಸಕರಿಗೂ 50 ಲಕ್ಷ ರೂಪಾಯಿಗಳಂತೆ ಕೊಟ್ಟಿದ್ದೇನೆ. ನನಗೆ ಏನು ಅಭ್ಯಂತರ ಇಲ್ಲ, ಬೇಕಾದರೆ ಇದರ ಬಗ್ಗೆ ಚರ್ಚೆ ಮಾಡಬೇಕೆಂದರೆ, ನಾನು ಚರ್ಚೆಯನ್ನುಮಾಡುವುದಕ್ಕೆ ನಾನು ತಯಾರು ಇದ್ದೇನೆ. ಈಗ ಉದಾಹರಣೆಗೆ ಹೇಳುವುದಾದರೆ ಸಿ.ಆರ್.ಎಫ್. ನಿಂದ ಕಳೆದ 20 ತಿಂಗಳುಗಳಿಂದ ಕೇಂದ್ರ ಸರ್ಕಾರದಿಂದ ನಾನು ತಂದಿದ್ದೇನೆ. ನಬಾರ್ಡ್‌ನಲ್ಲಿ 525 ಕೋಟಿ ರೂಪಾಯಿಗಳಷ್ಟು ಹಣವನ್ನು ನಾನು ತಂದಿದ್ದೇನೆ. ಈ ನಬಾರ್ಡ್‌ನಿಂದ ಕಳೆದ ಹಿಂದಿನ 5 ವರ್ಷಗಳಿಂದ ಎಷ್ಟು ಹಣವನ್ನು ಕೊಟ್ಟಿದ್ದರೆಂಬುದನ್ನು ಹೇಳಲಿ, ಸಿ.ಆರ್.ಎಫ್. ನಿಂದ ಎಷ್ಟು ಹಣ ಬಂದಿತ್ತು, ಎಂಬುದನ್ನು ಹೇಳಲಿ.

ಶ್ರೀ ಬಿ.ಶಿವರಾಮ್ : ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಒಂದು ದಿನ ಚರ್ಚೆಗೆ ಇಡಿ, ಎಂದು ಹೇಳಿದ್ದಾರೆ, ಚರ್ಚೆಗೆ ಇಡಿ.

ಶ್ರೀ ಹೆಚ್.ಡಿ ರೇವಣ್ಣ : ಮಾನ್ಯ ಅಧ್ಯಕ್ಷರೆ, ಚರ್ಚೆಗೆ ಇಡಿ, ನಾನು ರೆಡಿಯಾಗಿದ್ದೇನೆ.

ಶ್ರೀ ಬಿ.ಶಿವರಾಮ್ : ಮಾನ್ಯ ಧರ್ಮಸಿಂಗ್‌ರವರು ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ ಆಗಿದ್ದರು. ಅವರು ನಾಲ್ಕುವರೆ ವರ್ಷಕ್ಕೆ ಎಷ್ಟು ಹಣ ಕೊಟ್ಟಿದ್ದಾರೆಂದು ಹೇಳುತ್ತಾರೆ. ನೀವು 20 ತಿಂಗಳುಗಳಲ್ಲಿ ಎಷ್ಟು ಆಗಿದೆ. ಯಾವ್ಯಾವ ಭಾಗಕ್ಕೆ ಏನು ಕೆಲಸ ಆಗಿದೆ, ಇದೆಲ್ಲವನ್ನು ಚರ್ಚೆ ಮಾಡಿ. ಕೆಲವು ಕಡೆಗಳಲ್ಲಿ 75 ಕೋಟಿ ಆಗಿದೆ. ಬೇರೆ ಕಡೆಗಳಿಗೆಲ್ಲಾ 5 ಕೋಟಿ ರೂಪಾಯಿಗಳು ಆಗಿವೆ. ಅವೆಲ್ಲ ಚರ್ಚೆಯಾದರೆ ಹೊರಗಡೆ ಬರುತ್ತದೆ, ಸತ್ಯ ಏನೆಂಬುದು ಗೊತ್ತಾಗುತ್ತದೆ. ಈ ಸತ್ಯ ಹೊರಗಡೆ ಬರಬೇಕೆಂದರೆ ಅದು ಚರ್ಚೆಯಾಗಬೇಕು. ನಮ್ಮಲ್ಲಿ ಯಾರು ಬೇಡವೆಂದು ಹೇಳುವುದಿಲ್ಲ, ಚರ್ಚೆಗೆ ಸಿದ್ಧರಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಚರ್ಚೆಗೆ ಹೆದರಿಕೊಂಡು ಓಡಿಹೋಗುವುದಿಲ್ಲ, ನಾನು ಚರ್ಚೆಗೆ ಹೆದರಿಕೊಂಡು ಓಡಿಹೋಗುತ್ತೇನೆಯೇ?

ಅಧ್ಯಕ್ಷರು : ಮಾನ್ಯ ಶಿವರಾಮ್‌ರವರೆ, ಮಾನ್ಯ ಹೆಚ್.ಡಿ.ರೇವಣ್ಣನವರು ಮಾತನಾಡಲಿ

ಅಧ್ಯಕ್ಷರು : ಮಾನ್ಯ ಶಿವರಾಮ್‌ರವರೆ, ಮಾನ್ಯ ಹೆಚ್.ಡಿ.ರೇವಣ್ಣನವರು ಮಾತನಾಡಲಿ ಬಿಡಿ. ನೀವು ಬೇಕಾದರೆ ಉತ್ತರವನ್ನು ಕೊಡಿ, ನೀವು ಏಕೆ ಪರಸ್ಪರ ಇಲ್ಲಿ ನಿಂತುಕೊಳ್ಳುತ್ತೀರಿ.

ಶ್ರೀ ಬಿ.ಶಿವರಾಮ್ : ಕಳೆದ ನಾಲ್ಕುವರೆ ವರ್ಷದ್ದು ಚರ್ಚೆಯಾಗಲಿ, 20 ತಿಂಗಳಿನದ್ದು ಎಲ್ಲೆಲ್ಲಿ ವ್ಯತ್ಯಾಸ, ಏನೇನು ಆಗಿದೆಯೆಂಬುದು ಸದನಕ್ಕೆ ಗೊತ್ತಾಗಲಿ, ಇದನ್ನು ಒಂದು ದಿವಸ ಚರ್ಚೆಗೆ ಇಡಬೇಕು.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಹೆದರಿಕೊಂಡು ಏನು ಓಡಿ ಹೋಗುವುದಿಲ್ಲ. ಈ ಸದನದಲ್ಲಿ ವಿಧಾನಸಭೆಯಿಂದ ಎರಡು ಬಾರಿ ಗೆದ್ದು ಬಂದಿದ್ದೇನೆ. ಒಂದು ಸಾರಿ ಸೋತಿದ್ದೇನೆ, ನಾನು ಏನು ಕದ್ದು ಓಡಿಹೋಗುವುದಿಲ್ಲ. ನಾನು ಯಾವುದೇ ತನಿಖೆಗೆ ಬೇಕಾದರೂ ಸಿದ್ದನಿದ್ದೇನೆ. ಧರ್ಮಸಿಂಗ್‌ರವರು ಕಳೆದ 5 ವರ್ಷಗಳಿಂದ ಏನುಮಾಡಿಲ್ಲವೆಂದು ನಾನು ಹೇಳುತ್ತಿಲ್ಲ. ಅವರು ಮುಖ್ಯಮಂತ್ರಿಗಳಾಗಿದ್ದಾಗ ನನಗೇನು ಅವರು ಯಾವುದೇ ರೀತಿಯ ಅಡೆತಡೆಗಳನ್ನು ಮಾಡಿರಲಿಲ್ಲ. ನಮ್ಮ ಪಕ್ಷಗಳಲ್ಲಿ ಏನೇ ಭೇದ ಇರಲಿ, ...

ಶ್ರೀ ಬಿ. ಶಿವರಾಮ್ : ಅವರು ನಿಮಗೆ ಏನು ಅಡೆತಡೆಗಳನ್ನು ಮಾಡಲಿಲ್ಲ. ಅವರು ಮಾನವೀಯತೆಯಿಂದ ಮಾಡಿದ್ದಾರೆ. ಯಾವ್ಯಾವ ಕ್ಷೇತ್ರಕ್ಕೆ ಎಷ್ಟು ಆಯಿತು, ಏನೇನು ಆಯಿತು, ಎಂಬುದಕ್ಕೆ ಚರ್ಚೆಗೆ ಇಟ್ಟರೆ ಎಲ್ಲವೂ ಗೊತ್ತಾಗುತ್ತದೆ. ನಾವು ಏನು ನಿಮ್ಮನ್ನು ಚರ್ಚೆಗೆ ಇಡಿ ಎಂದು ಹೇಳಲಿಲ್ಲ, ನೀವೇ ಚರ್ಚೆಗೆ ಇಡುತ್ತೇನೆಂದು ಹೇಳಿದ್ದೀರಿ. ನೀವೆ ಸದನದ ಮುಂದೆ ಇಡಿ. ನಾವು ಯಾರು ಓಡಿಹೋಗುವುದಿಲ್ಲ, ಎಲ್ಲಾ ಇಲ್ಲೆ ಇರುತ್ತೇವೆ, ಚರ್ಚೆ ಮಾಡೋಣ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವರಾಮ್ ರವರಿಗೂ ಚರ್ಚೆ ಮಾಡುವುದಕ್ಕೆ ಅವಕಾಶ ಸಿಕ್ಕರೆ, ಚರ್ಚೆ ಮಾಡಲಿ.

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ. ನಿಮಗೂ ಬೇಕಾದಷ್ಟು ಅವಕಾಶಗಳು ಇದೆ. ನೀವು ಮಾತನಾಡಬಹುದು. ನೀವು ಉತ್ತರವನ್ನು ಕೊಡಬಹುದು. ದಯಮಾಡಿ ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರು ಏನು ಹೇಳಬೇಕೊ ಅದನ್ನು ಹೇಳಲಿ, ತಾವು ಬೇಗ ಭಾಷಣವನು ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ : ರಾಜಕೀಯ ಭಾಷಣಗಳು ಹೇಗೆ ಹೇಗೆ ನಡೆದಿದೆ, ಎಂಬುದನ್ನು ಬೇಕಾದರೆ ಹೇಳುತ್ತೇನೆ. ಇದರ ಬಗ್ಗೆ ಧೀರ್ಘವಾಗಿ ಬೇಕಾದರೆ ಚರ್ಚೆ ಮಾಡುವುದಕ್ಕೆ ನಾನು ತಯಾರು ಇದ್ದೇನೆ. ನನಗೆ ರಾಜಕೀಯ ಭಾಷಣ ಮಾಡುವುದು ನನಗೆ ಗೊತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ದಯಮಾಡಿ ಉತ್ತರಕ್ಕೆ ಒಂದು ಟೈಮ್ ಅನ್ನು ಫಿಕ್ಸ್ ಮಾಡಿ, ಇದು ಮೇಲ್ಮನೆಗೆ ಹೋಗಿ ಪಾಸು ಮಾಡಿಕೊಂಡು ಬರಬೇಕಾಗಿದೆ. ನಾನು 2.30 ಗಂಟೆಗೊ, 3ಗಂಟೆಗೊ, ಉತ್ತರವನ್ನು ಕೊಡುವಂತೆ ನಿನ್ನೆ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿದೆ. ಆದುದರಿಂದ ತಾವು ಯಾವುದಾದರೂ ಒಂದು ಟೈಮ್ ಫಿಕ್ಸ್ ಮಾಡಿ, ಈಗ 4ಗಂಟೆಗಾದರೂ ಉತ್ತರ ಕೊಡಲು ಫಿಕ್ಸ್ ಮಾಡಿದರೆ, ನಾನು ಉತ್ತರವನ್ನು ಕೊಡಲು ಅನುಕೂಲವಾಗುತ್ತದೆ.

ಅಧ್ಯಕ್ಷರು : ಆಯಿತು, ಈಗ ಮಾನ್ಯ ಹೆಚ್.ಡಿ. ರೇವಣ್ಣನವರು ಭಾಷಣವನ್ನು ಮುಗಿಸಿ ಬಿಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ಮೇಲ್ಮನೆಗೆ ಹೋಗಿ ವಾಪಸ್ಸು ಬರಬೇಕಲ್ಲಾ ...

ಅಧ್ಯಕ್ಷರು : ಆಯಿತು, ಮಾನ್ಯ ಹೆಚ್.ಡಿ. ರೇವಣ್ಣನವರೆ, ತಾವು ಬೇಗ ಮುಗಿಸಿ, ಇನ್ನು ಒಬ್ಬಿಬ್ಬರು ಮಾತನಾಡಬೇಕಾಗಿದೆ, ಉತ್ತರ ಆಗಬೇಕಾಗಿದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು :– ಮಾನ್ಯ ಅಧ್ಯಕ್ಷರೆ, ನಮಗೂ 10ನಿಮಿಷ ಕಾಲಾವಕಾಶವನ್ನು ಕೊಡಿ, ಕೇವಲ ಮುಂದಿನ ಸಾಲಿನ ಸದಸ್ಯರು ಮಾತನಾಡಿದರೆ ಆಗುವುದಿಲ್ಲ. ನಮ್ಮಂಥವರಿಗೂ 10 ನಿಮಿಷಗಳು ಮಾತನಾಡಲು ಅವಕಾಶವನ್ನು ಕೊಡಿ.

ಶ್ರೀ ಕೆ. ಶ್ರೀನಿವಾಸಗೌಡ :– ನೀವು ಇಲ್ಲಿ ಇದ್ದಾಗ ಬಿಡುತ್ತಿದ್ದಿರಾ? ಅಲ್ಲಿ ಹೋದ ಮೇಲೆ ಚೆಂಜ್ ಆಗಿಬಿಟ್ಟರೆ ಹೇಗೆ? ನಾವು ಮಾತನಾಡಬೇಕು, ನಮಗೂ ಬೆಳಕು ಚೆಲ್ಲಬೇಕೆಂಬ ಆಸೆ ಇದೆ. ನೀವು ಈಗಲೇ 4 ಗಂಟೆ ರಾಹುಕಾಲ ಬರುತ್ತದೆಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಈಗ ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಏನಿದು? ಮಾನ್ಯ ಶ್ರಿನಿವಾಸಗೌಡ್ರೆ ಕುಳಿತುಕೊಳ್ಳಿ.

(ಗೊಂದಲ)

ಅವರು ಮಾತನಾಡಿ ಮುಗಿಸುವುದಕ್ಕೆ ನೀವು ಬಿಡುತಿಲ್ಲವಲ್ಲಾ. ಮಾನ್ಯ ರೇವಣ್ಣನವರೇ, ಬೇಗ ಮಾತನಾಡಿ ಮುಗಿಸಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ರಾಜಕೀಯವಾಗಿ ಹೇಳಬೇಕೆಂದರೆ ಹೇಳುವುದಕ್ಕೂ ತಯಾರಿದ್ದೇನೆ. ಆದರೆ ನಾನು ಅಷ್ಟು ಕೀಳುಮಟ್ಟಕ್ಕೆ ಹೋಗುವ ವ್ಯಕ್ತಿಯಲ್ಲ. ನಾನು ಹೇಳುತ್ತೇನೆ, ಬೇಕಾದರೆ ರಾಜಕೀಯವಾಗಿ ಚರ್ಚೆ ಮಾಡಬೇಕೆನ್ನುವುದಾದರೆ ಈ ಸದನ ಮೆಷೀನ ಮಾಡುವುದಕ್ಕೆ ready ಇದ್ದೇನೆ. ಈಗ ನಾನು ಉದಾಹರಣೆಗೆ ಹೇಳುವುದಾದರೆ, ನಾನು ಮಂತ್ರಿ ಸ್ಥಾನದಿಂದ ಇಳಿದು ಹೋದೆ. ...ನಾನು ಹಿಂದೆ ವಸತಿ ಸಚಿವನಾಗಿದ್ದೆ. ಹೊಳೆನರಸೀಪುರ ತಾಲ್ಲೂಕಿನಲ್ಲಿ ಮನೆ ಬಗೆ ಅವ್ಯವಹಾರ ಆಯಿತೆಂದು ನನ್ನ ಮೇಲೆ C.O.D. ತನಿಖೆ ಮಾಡಿಸಿದರು. ಏನಾಯಿತು? C.O.D. ತನಿಖೆ ಆಗಿದ್ದನ್ನು ತೆಗೆದುಕೊಂಡು ಬಂದು ಇಡೀ ಸದನದಲ್ಲಿ ಏನಾಯಿತು? ನಾನೇನೂ ಹೆದರಿಕೊಂಡು ಓಡಿಹೋಗುವುದಿಲ್ಲ.

(ಗೊಂದಲ)

ಶ್ರೀ ಬಿ. ಶಿವರಾಮು : 1–4.... ರಲ್ಲಿ ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಕಟ್ಟಿದಂಥ ಮನೆಗಳನ್ನು enquiry ಗೆ ಹಾಕಿದ್ದೀರಲ್ಲಾ? Bill ಕೊಟ್ಟು ಎಷ್ಟು ದಿವಸಗಳಾಯಿತು?

(ಗೊಂದಲ)

ಏಪ್ರಿಲ್ ತಿಂಗಳಿಗೆ ಎರಡು ವರ್ಷವಾಯಿತು. ನೀವು ದುಡ್ಡು ಕೊಟ್ಟಿಲ್ಲ. ಹೋಗಿ file ತೆಗೆಸಿ ನೋಡಿ. ಎರಡು ವರ್ಷಗಳಾದರೂ payment ಆಗಿಲ್ಲ. Enquiry ಗೆ ಹಾಕಿ format ಹಾಕಿ issue ಮಾಡಿ. ಎರಡು ವರ್ಷದ ನಂತರ ಮೊನ್ನೆ ದಿನ ಎರಡು ವರ್ಷಗಳ ನಂತರ cheque ಹೋಗಿದೆ ಎಂದರೆ....

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ....ಇಡೀ ರಾಜ್ಯದಲ್ಲಿ ಬಿಲ್ ಹಣ ಬಂದಿಲ್ಲ ಇನ್ನೂ balance ಇದೆ. ಇಡೀ ರಾಜ್ಯದಲ್ಲಿ ಮನೆಗಳಿಗೆ bill ಕೊಡಬೇಕು. ಬರೀ ಹಾಸನದಲ್ಲಿ ಒಂದೇ ಅಲ್ಲ.

(ಗೊಂದಲ)

ಶ್ರೀ ಬಿ. ಶಿವರಾಮ್ : Enquiry ಗೆ ಹಾಕಿ, ನಿಮಗೇನು ಗೊತ್ತು ಸತ್ಯ? ದಾಖಲೆಯನ್ನು ಬೇಕಾದರೆ ಕೊಡುತ್ತೇನೆ, ಚರ್ಚೆ ಆಗಲಿ ಎಂದು ಎಂದು ಅದಕ್ಕೆ ಹೇಳಿದ್ದು ಯಾವ ಕಾರ್ಯದರ್ಶಿಯವರು ಮಾಡಬೇಕೆಂದು ಹೇಳಿದ್ದಿರಲ್ಲ ಎರಡು ವರ್ಷಗಳಾಯಿತು ಸುಮ್ಮನೆ ಕುಳಿತಿದ್ದಾರಲ್ಲ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ. ಮಹದೇವ್ : ಕಾಲಾವಕಾಶ ಕಡಿಮೆ ಇದೆ. ಬೇರೆಯವರು ಬಜೆಟ್ ಮೇಲೆ ಮಾತನಾಡಲು ಕಾಲಾವಕಾಶವಾಗಬೇಕು. ಇಲ್ಲಿ ವೈಯಕ್ತಿಕವಾಗಿ ಜಗಳ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಶಿವರಾಮ್ : ಎರಡು ವರ್ಷಗಳಿಂದ ಜನರಿಗೆ ದುಡ್ಡು ಕೊಟ್ಟಿಲ್ಲವೆಂದರೆ ಅವರ ಪರಿಸ್ಥಿತಿ ಏನಾಗಬೇಕು? ವಿಚಾರಣೆ ಮಾಡಿ. ವಿಚಾರಣೆ ಮಾಡಬೇಡಿ ಎಂದು ನಾವು ಹೇಳಿದ್ದೇವೆಯೆ? ಚರ್ಚೆಗೆ ಬೇಕಾದಷ್ಟು ವಿಚಾರಗಳು ಇದೆ. ಪೈಮುಗಳನ್ನು ಹೇಗೆ ಕೊಂಡುಕೊಳ್ಳುವಾಗ ಎಷ್ಟು ಟ್ರಾನ್ಸಪರೆನ್ಸಿ ಆಕ್ಟನ್ನು ಅನ್ವಯ ಮಾಡಿದ್ದಾರೆಂದು ಗೊತ್ತಿದೆ. ಎಲ್ಲಾ ವಿಚಾರ ಹೊರಕ್ಕೆ ಬರಲಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಶಿವರಾಂರವರಿಗೆ ಸ್ವಲ್ಪ ಹೆಚ್ಚಿನ ಅವಕಾಶ ಕೊಡಿ. ಅವರು ಚರ್ಚೆ ಮಾಡಲಿ. ಅವರು ಏನೇನು ಇದೆಯೋ ಅದರ ಬಗ್ಗೆಯೆಲ್ಲ ಬೆಳಕನ್ನು ಚೆಲ್ಲಲಿ. ಅದಕ್ಕೆ ಸರ್ಕಾರ ಉತ್ತರ ಕೊಡುತ್ತದೋ ಹೇಗೆ? ಅವರು ಮಾತನಾಡಬೇಕಾದರೆ ಅದಕ್ಕೆ ವಿರೋಧವಾಗಿ ನೀವು ಮಾತನಾಡುವುದು ಒಳ್ಳೆಯದಲ್ಲ. ನೀವೇ ಮಾತನಾಡಿ. ಸರ್ಕಾರ ಉತ್ತರವನ್ನು ಕೊಡಲು ಸಿದ್ಧವಾಗಿದೆ. ಅವರು ಮಾತನಾಡಬೇಕಾದರೆ ನೀವು ಅಡ್ಡ ಬರುವುದು ಒಳ್ಳೆಯದಲ್ಲ.

(ಗೊಂದಲ)

ಶ್ರೀ ಬಿ. ಶಿವರಾಮು : ಜಿಲ್ಲಾಪಂಚಾಯಿತಿಯಲ್ಲಿ ಆಗಿರತಕ್ಕ ಅವ್ಯವಹಾರದಿಂದ ಹಿಡಿದು ಮನೆಯದ್ದು ರೋಡಿನದ್ದು ಎಲ್ಲದರ ಬಗ್ಗೆಯೂ ಚರ್ಚೆಗೆ ನಾನು ಸಿದ್ಧ.

(ಗೊಂದಲ)

ಶ್ರೀ ಹೆಚ್.ಡಿ ರೇವಣ್ಣ : ಅದಕ್ಕೆ ನಾನು ರೆಡಿಯಾಗಿದ್ದೇನೆ.

(ಗೊಂದಲ)

ಶ್ರೀ ಬಿ. ಶಿವರಾಮು : ಅದನ್ನು ನಾನು ಕೇಳಲಿಲ್ಲ. ನಾವು ರೆಡಿಯಾಗಿದ್ದೇವೆ. ನಾವು ಎಲ್ಲೂ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ಶಿವರಾಮುರವರೆ ಕುಳಿತುಕೊಳ್ಳಿ. ವೈಯಕ್ತಿಕ ಜಗಳವಾಗಿ ಇದನ್ನು ಮಾರ್ಪಾಡು ಮಾಡುವುದು ಸರಿಯಲ್ಲ. ದಯಮಾಡಿ ಎಲ್ಲ ಕುಳಿತುಕೊಳ್ಳಿ ನಾನು ಅವರನ್ನು ಕರೆದಿದ್ದೇನೆ. ಅವರು ಮಾತನಾಡುತ್ತಿದ್ದಾರೆ. ರೀ ಶಿವರಾಮುರವರೇ, ನಿಮಗೆ ಅವಕಾಶ ಕೊಟ್ಟಾಗ ನೀವೇನು ಹೇಳುತ್ತೀರೋ ಹೇಳಿ. ಇಲ್ಲಿ ಈಗ ಪರಸ್ಪರ ವೈಯಕ್ತಿಕವಾಗಿ ಮಾತನಾಡುವ ಅವಶ್ಯಕತೆಯಿಲ್ಲ.

(ಗೊಂದಲ)

ಶ್ರೀ ಬಿ. ಶಿವರಾಮು : ಯಾವುದಕ್ಕೂ ಯಾರ ಹತ್ತಿರವೂ ನಾನು Beg ಮಾಡಲಿಲ್ಲ. ಆದ್ದರಿಂದ ವೈಯಕ್ತಿಕವಾಗಿ ಮಾತನಾಡುವುದು ಏನು ಬಂತು? ಸಾರ್ವಜನಿಕವಾಗಿ ಜನರ ಕೆಲಸದ ವಿಚಾರಕ್ಕೆ ಅಷ್ಟಯೇ ನಮ್ಮದು. ಆದರೆ ಅವರು ಚರ್ಚೆ ಬೇಕೆಂದರೆ ನಾವು ಸಿದ್ಧವಾಗಿದ್ದೇವೆ.

(ಗೊಂದಲ)

ಅಧ್ಯಕ್ಷರು : ಅಷ್ಟೇ ಅಷ್ಟೇ. ದಯಮಾಡಿ ಕುಳಿತುಕೊಳ್ಳಿ. ಅವರು ಮಾತನಾಡಲಿ.

(ಗೊಂದಲ)

ಶ್ರೀ ಬಿ. ಶಿವರಾಮು : ಆದರೆ ಅವರು ಬೇಕು ಎಂದು ಹೇಳಿದರೆ ನಾವು ಸಿದ್ಧವಾಗಿದ್ದೇವೆ.

ಅಧ್ಯಕ್ಷರುಃ ಆಯಿತು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ನಾನು ಹೇಳುವವರೆಗೆ ಅವರು ಪೂರ್ತಿ ಕೇಳಲಿ. ಅವರೂ ಮಾತನಾಡಲಿ, ಅದನ್ನು ನಾನು ತಾಳ್ಮೆಯಿಂದ ಕೇಳುತ್ತೇನೆ. ಮೊನ್ನೆ ಧರ್ಮಸಿಂಗ್ ಸಾಹೇಬರು ಮಾತನಾಡಿದರು. ಎಲ್ಲಾ ತರಹದ್ದು ಅಂದರೆ ಅದು ಅಕ್ರಮ ಸಕ್ರಮ ಎಲ್ಲವನ್ನು ಮಾತನಾಡಿದರು. ನಾನೇದರೂ ಆಗ ಮಾತನಾಡಿದ್ದೇನೆಯೇ? ಬೇರೆಯವರು ಹೇಳುವಾಗ ನಾವು ತಾಳ್ಮೆಯಿಂದ ಕೇಳಲಿಲ್ಲವೇ? ಆ ಸದಸ್ಯರಿಗೆ ಸ್ವಲ್ಪ ತಾಳ್ಮೆಯಿಂದ ಕುಳಿತುಕೊಳ್ಳುವುದಕ್ಕೆ ಹೇಳಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಶಿವರಾಮು : ವೈಯಕ್ತಿಕ ವಿಚಾರಕ್ಕೆ ಚರ್ಚೆ ಅಲ್ಲ. ಕ್ಷೇತ್ರಗಳಲ್ಲಿ ಸಾರ್ವಜನಿಕರ ಕೆಲಸಗಳಿಗಷ್ಟೇ ನಾವು ಸೀಮಿತವಾಗಿ ಮಾತನಾಡುತ್ತೇನೆ ವೈಯಕ್ತಿಕವಾಗಿ ಇಲ್ಲವೆಂದು ಹೇಳಿಬಿಟ್ಟಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಈಗ ಮಾನ್ಯ ಸಭಾಧ್ಯಕ್ಷರೆ, ಒಬ್ಬ ಸದಸ್ಯರು ತಾಳ್ಮೆಯಿಂದ ಕೇಳಲಿ. ಬೇಕಾದರೆ ಅವರೂ ಹೇಳಲಿ. ರೇವಣ್ಣನವರೇ ಇಂತಿಂಥಾದ್ದನ್ನು ಮಾಡಿದಿರಿ, ನಿಮ್ಮ ಕಾಲದಲ್ಲಿ ಇಂತಹ ಅನ್ಯಾಯ ನಡೆದಿತ್ತು ಎಂದು ಹೇಳಲಿ. ನಮ್ಮದೇನೂ ಅಭ್ಯಂತರವಿಲ್ಲ. ನಾನು ಶಾಂತಿಯಿಂದ ಕೇಳುತ್ತೇನೆ. ಈಗ ಉದಾಹರಣೆಗೆ ಹೇಳುವುದಾದರೆ, ಈಗ ನಾನು ಆ ರೀತಿ ರಾಜಕೀಯವಾಗಿ ಸೇಡು ತೀರಿಸಿಕೊಳ್ಳುವುದಾದರೆ ಸುಮಾರು ಎರಡೂವರೆ ಸಾವಿರ ಹಸಿರು ಕಾರ್ಡು ಕೊಟ್ಟು 14 ಜನ ವಿಲೇಜ್ ಅಕೌಂಟೆಂಟ್ ಸಸ್ಪೆಂಡ್ ಮಾಡಿದ್ದಾರೆ. 20 ತಿಂಗಳುಗಳಿಂದ ಡಿಸಿ ಆಫೀಸಿನಲ್ಲಿ ಕಡತ ಹಾಗೇ ಬಿದ್ದಿದೆ. ನಾನು ಕೇಳುವುದಕ್ಕೆ ಹೋಗಿದ್ದೇಯೇನ್ರಿ? ರಾಜಕೀಯವಾಗಿ ಸೇಡು ತೀರಿಸಿಕೊಳ್ಳುವುದಾಗಿದ್ದರೆ, ಆಗ ನಾನು ಜಿಲ್ಲಾ ಮಂತ್ರಿಯಾಗಿದ್ದೆ, ಅರ್ಧ ಗಂಟೆಯೊಳಗೆ 14 ಜನ ವಿಲೇಜ್ ಅಕೌಂಟೆಂಟ್ ಸಸ್ಪೆಂಡ್ ಮಾಡುತ್ತಿದ್ದೆ.

(ಗೊಂದಲ)

ಶ್ರೀ ಬಿ. ಶಿವರಾಮು : ಎನ್‌ಕ್ವೇರಿ ಹಾಕಿಸಿದ್ದು ಯಾರು?

(ಗೊಂದಲ)

ಮಾನ್ಯ ಸದಸ್ಯರೊಬ್ಬರು : ಮಾನ್ಯ ಅಧ್ಯಕ್ಷರೆ,. ಇವರು ನಮ್ಮ ಜಿಲ್ಲೆಯನ್ನು ಹಾಳು ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಇದು ಸರಿಯಲ್ಲ ಈ ಸದನಕ್ಕೆ ಗೌರವ ಬರುವುದಿಲ್ಲ ರೇವಣ್ಣನವರೇ ನೀವು ಜನರಲ್ ಆಗಿ ಬಜೆಟ್ ಮೇಲೆ ಮಾತನಾಡಿ. ವೈಯಕ್ತಿಕ ವಿಚಾರ ಯಾವುದೂ ಬೇಡ. ದಯವಿಟ್ಟು ಬಜೆಟ್ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಸಾರ್ ಈಗ ಅವರು ವೈಯಕ್ತಿಕವಾಗಿ ತೆಗೆದುಕೊಂಡು ಹೋಗುತ್ತಿದ್ದಾರೆ.

ಅಧ್ಯಕ್ಷರು : ಅವರು ವಿಚಾರ ಇವರ ವಿಚಾರ ಈಗ ಬೇಡ. ಬಜೆಟ್ ಬಗ್ಗೆ ಮಾತನಾಡಿ. ವೈಯಕ್ತಿಕವಾಗಿ ಮಾತನಾಡುವುದು ಬೇಡ.

ಶ್ರೀ ಹೆಚ್.ಡಿ. ರೇವಣ್ಣ : ಸದಸ್ಯರು ಬೇಕಾದರೆ ತಾಳ್ಮೆಯಿಂದ ಕೇಳಲಿ. ನಾನು ಉತ್ತರ ಹೇಳಿದ ಮೇಲೆ ನಿಂತುಕೊಂಡು ಬೇಕಾದರೆ ನನ್ನ ಮೇಲೆ 20 ತಿಂಗಳು ನೀವು ಜಿಲ್ಲಾ ಮಂತ್ರಿಯಾಗಿದ್ದ ಕಾಲದಲ್ಲಿ ಇಂತಿಂಥ ಅನ್ಯಾಯ ನಡೆಸಿದ್ದೀರಿ, ಇಂತಿಂಥ ಲೂಟಿ ಮಾಡಿದ್ದೀರೆಂದು ಬೇಕಾದರೆ ಹೇಳಲಿ. ನಾನು ಕೇಳಲು ತಯಾರಿದ್ದೇನೆ. ಅದು ಬಿಟ್ಟು ಸುಮ್ಮನೆ ಎದ್ದು ನಿಂತುಕೊಂಡು ನನ್ನನ್ನು ಉದ್ದೇಶಿಸಿ ಹೇಳಿದರೆ ಅದು ಸರಿಯಲ್ಲ. ದಯಮಾಡಿ ಅವರು ಅದನ್ನು ಅರ್ಥಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಬಿ. ಶಿವರಾಮು : ಈಇಗ ಅವರು ಅದೇ ಸರ್ಜಿಕಲ್ ಲಿಮಿಟ್, ನಮ್ಮದೇನೂ ವಿಚಾರ ಇಲ್ಲ. ಬಜೆಟ್ ಮೇಲೆ ನಾವು ಅಷ್ಟಕ್ಕೆ ಲಿಮಿಟ್ ಆಗಿ ಉಪ ಮುಖ್ಯಮಂತ್ರಿಗಳನ್ನು ನಾವು ಕೇಳುತ್ತಿದ್ದೇವೆ, ಅಧ್ಯಕ್ಷರೂ ಅಷ್ಟಕ್ಕೆ ಲಿಮಿಟ್ ಆಗಿ ಮಾತನಾಡಿದರೆ ಏನೂ ಇಲ್ಲ ವಿಲೇಜ್ ಅಕೌಂಟೆಂಟ್ ಸಸ್ಪೆಂಡ್ ಆದ, ಮೊನ್ನೆ ನಾವೇನೂ ಅವ್ಯವಹಾರ ಮಾಡಿಲ್ಲ ಸಿ.ಓ.ಡಿ. ಗೆ ಹಾಕಿದ್ದರು. ನಾವೇನು ಮಾಡಿದ್ದೆವು ? ಸಿ.ಓ.ಡಿ ಗೆ ಹಾಕಿದ್ದರೆ ಈಗ ನಮಗೂ ಹಾಕಿದ್ದಾರೆ.

(ಗೊಂದಲ)

ಅಧ್ಯಕ್ಷರು : ಈಗ ವೈಯಕ್ತಿಕ ವಿಚಾರಗಳನ್ನು ಎತ್ತಿಕೊಂಡು ಪ್ರಸ್ತಾಪ ಮಾಡುವುದು ಸರಿಯಲ್ಲ. ಈ ಸದನಕ್ಕೆ ಶೋಭೆ ಬರುವುದಿಲ್ಲ. ದಯಮಾಡಿ ಬಜೆಟ್ ಮೇಲೆ ಮಾತನಾಡಬೇಕು. ರೇವಣ್ಣನವರೆ, ನಿಮ್ಮ ಹಾಸನ ಜಿಲ್ಲೆಯದು, ಗಂಡಸಿ ವಿಚಾರ ಬಿಡಿ. ಈಗ ಸಮಗ್ರವಾಗಿ ಬಜೆಟ್ ಮೇಲೆ ದಯವಿಟ್ಟು ಮಾತನಾಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ, ಈಗ ನಾನೇನೂ ಯಾರ ಬಗ್ಗೆಯೂ ವೈಯಕ್ತಿಕವಾಗಿ ಮಾತನಾಡಿ ಅವರ ಮನಸ್ಸಿಗೆ ನೋವುಂಟು ಮಾಡುವ ಉದ್ದೇಶ ನನಗೇನೂ ಇಲ್ಲ. ಒಂದು ನಿಮಿಷ ತಾಳ್ಮೆಯಿಂದ ದಯಮಾಡಿ ಕೇಳಿ. ನಾವು ಹಿಂದೆ ಕುಳಿತುಕೊಂಡಿದ್ದಾಗ ದೇವೆಗೌಡರನ್ನು ಇಷ್ಟೆಲ್ಲಾ ಬೈಯ್ಯುತ್ತಿದ್ದಾಗ ನಾನೇನಾದರೂ ಮಾತನಾಡಿದ್ದೇನೆಯೇ? ಐದು ವರ್ಷ ನಾನು ಈ ಸಭೆಯಲ್ಲಿ ಬೆಳಿಗ್ಗೆ ಸಾಯಂಕಾಲ ....

(ಗೊಂದಲ)

ಶ್ರೀ ಬಿ. ಶಿವರಾಮು : ದೇವೇಗೌಡರನ್ನು ಯಾರಾದರೂ ಈ ಸದನದಲ್ಲಿ ಬೈದಿದ್ದಾರೆಯೇ? ಹೇಳಲಿ ನೋಡೋಣ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ದೇವೇಗೌಡರ ಹೆಸರು ಈ ಸದನದಲ್ಲಿ ಬರಲಿಲ್ಲ.

ಶ್ರೀ ಬಿ. ಶಿವರಾಮು : ಯಾರಾದರೂ ದೇವೇಗೌಡರನ್ನು ಈ ಸದನದಲ್ಲಿ ಬೈದಿದ್ದಾರೆಂದು ಹೇಳಲಿ ನೋಡೋಣ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ದೇವೇಗೌಡರ ಹೆಸರು ಈ ಸಾರಿ ಯಾರಿಂದಲೂ ಇಲ್ಲಿ ಪ್ರಸ್ತಾಪವಾಗಿಲ್ಲ.

(ಗೊಂದಲ)

ಅಧ್ಯಕ್ಷರು: ರೇವಣ್ಣನವರೇ, ಈಗ ತಾವು ಹೇಳಿ ಮುಗಿಸಿಬಿಡಿ. ಈಗ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ಶಿವರಾಮು: ನಾನು ಯಾರನ್ನು ಆ ತರಹ ವೈಯಕ್ತಿಕವಾಗಿ ಬೈಯ್ಯುವುದಕ್ಕೆ ಹೋಗುವುದಿಲ್ಲ. (ಗೊಂದಲ) ನಾನು ಯಾವತ್ತೂ ಆ ತರಹ ಲಘುವಾಗಿ ಇಲ್ಲಿ ಮಾತನಾಡುವುದಿಲ್ಲ. (ಗೊಂದಲ) C.O.D. enquiry ಈಗ ಏಕೆ ಬೇಕು?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಅವರು ಹೇಳಿದ್ದು ಹೆಚ್.ಡಿ. ದೇವೇಗೌಡರ ಬಗ್ಗೆ ಅಲ್ಲ ಅವರು ಹೇಳಿದ್ದು ಜಿ.ಟಿ. ದೇವೇಗೌಡರ ಬಗ್ಗೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ರೇವಣ್ಣನವರೇ, ಬೇಗ ಮುಗಿಸಿ. ಸರ್ಕಾರದಿಂದ reply ಆಗಬೇಕು

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಾನು ಮುಂಚೆಯೇ ನಮ್ಮ ಮಾನ್ಯ ಅಧ್ಯಕ್ಷರಲ್ಲಿ " ರಾಹುಕಾಲದಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಕೊಡಬೇಡಿ ನಾವು ರಾಹುಕಾಲದಲ್ಲಿ ಮಾತನಾಡಿದಾಗ ನಮಗೆ ಸಭೆಯಲ್ಲಿ ಸರಿಯಾಗಿ ಮಾತನಾಡುವುದಕ್ಕೆ ಅವಕಾಶವಾಗುವುದಿಲ್ಲ. ಆದ್ದರಿಂದ ದಯಮಾಡಿ ನೀವು ರಾಹುಕಾಲದಲ್ಲಿ ಅವಕಾಶ ಕೊಡಬೇಡಿ" ಎಂದು ಹೇಳಿದ್ದೆ ಏಕೆಂದರೆ ಅವರು ಅದೇನೋ ನನಗೆ ಸೆಲೆಕ್ಟ್ ಮಾಡಿ ರಾಹುಕಾಲದಲ್ಲಿ ಮಾತನಾಡಬೇಕೆಂದು ಅವಕಾಶ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇವತ್ತು ರಾಹುಕಾಲ ಇಲ್ಲ. ಯಮಗಂಡ ಕಾಲ ಇದು.

(ಗೊಂದಲ)

ಶ್ರೀ ಬಿ. ಶಿವರಾಮು : ...fix ಮಾಡಿ ಕೊಟ್ಟವರೇ ಅವರು ರಾಜೀನಾಮೆ ನೀಡಬೇಕೆಂದು ಇಡೀ ಕಾಂಗ್ರೆಸ್ ಸಚಿವರಿಗೆ ಗೊತ್ತು 19 ನೇ ತಾರೀಖು ಬಿಟ್ಟುಕೊಟ್ಟ ಮೇಲೆಯೇ ಈ ಸದನ ಹೋಗಿದ್ದು ಅವರ ಸರ್ಕಾರ ಪಾಪ. ಅವರ ಮುಖ್ಯಮಂತ್ರಿಗಿರಿಯೇ ಹೋಯಿತು ಈ ರಾಹು ಕಾಲದಲ್ಲಿ ಯಾರು ಪ್ರಾರಂಭ ಮಾಡಿದವರು .....

(ಗೊಂದಲ)

ಯಾರನ್ನು ಕೇಳಿ ಫಿಕ್ಸ್ ಮಾಡಿದ್ದು .... ಚೆಲುವರಾಯಸ್ವಾಮಿಗೇ ಗೊತ್ತು.

(ಗೊಂದಲ)

ಅಧ್ಯಕ್ಷರು : ವೈಯಕ್ತಿಕವಾಗಿ ಮಾತನಾಡಬೇಡಿ ಬಡ್ಜೆಟ್ ಮೇಲೆ ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ : ಸರ್ಕಾರವನ್ನು ಯಾರು ತೆಗೆದರು ಎನ್ನುವುದನ್ನು ಧರ್ಮಸಿಂಗ್ ಸಾಹೇಬರು ಹೇಳಲಿ. ಆತ್ಮ ಮುಟ್ಟಿ ಹೇಳಲಿ. ಧರ್ಮಸಿಂಗ್ ಸಾಹೇಬರು ಸರ್ಕಾರ ಯಾರು ತೆಗೆದರೆಂದು ಹೇಳಲಿ.

(ಗೊಂದಲ)

ಶ್ರೀ ಬಿ. ಶಿವರಾಮು : ಚೆಲುವರಾಯಸ್ವಾಮಿ ಇದ್ದಾರೆ. ಎಲ್ಲರೂ ಇದ್ದಾರೆ. ಕ್ಯಾಬಿನೆಟ್ ಸಚಿವರು ಇದ್ದಾರೆ. ಯಾರನ್ನು ಕೇಳಿ 19ನೇ ತಾರೀಖು ಸದನವನ್ನು ನಿಗದಿ ಮಾಡಿದ್ದೀರಿ.

(ಗೊಂದಲ)

19ನೇ ತಾರೀಖು ಸದನ ನಿಗದಿಯಾಗಿದ್ದೇ ನಿಮ್ಮನ್ನು ಕೇಳಿ. 16ಕ್ಕೆ ನಿಗದಿಯಾಗಿದ್ದನ್ನು 19ಕ್ಕೆ ನಿಗದಿ ಮಾಡಿಸಿದ್ದೇ ನೀವು. ಒಳ್ಳೆಯ ದಿವಸವೆಂದು ಹೇಳಿ ಮಾಡಿದಿರಿ. ಅವತ್ತೇ ಸರ್ಕಾರ : 19ನೇ ತಾರೀಖು ಹೋಯಿತು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :– ಈ ಸರ್ಕಾರ ತೆಗೆದವರು ಯಾರೆಂದು ಧರ್ಮಸಿಂಗ್ ಸಾಹೇಬರು ಹೇಳಲಿ.

(ಗೊಂದಲ)

ಶ್ರೀ ಬಿ. ಶಿವರಾಮು : ಯಾರು ಆತ್ಮ ಮುಟ್ಟಿಕೊಂಡು ಹೇಳಬೇಕು? ಚೆಲುವರಾಯಸ್ವಾಮಿ ಸ್ನೇಹಿತರು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಈಗ ಧರ್ಮಸಿಂಗ್ ಸಾಹೇಬರು ....

(ಗೊಂದಲ)

ಶ್ರೀ ಬಿ. ಶಿವರಾಮು : ಯಾವತ್ತೂ ಸುಳ್ಳು ....

(ಗೊಂದಲ)

ನೇರವಾಗಿ ಮಾತನಾಡುವುದಕ್ಕೆ ಅವಕಾಶ ಸಿಕ್ಕಿಲ್ಲ ಅಷ್ಟೆ.

ಶ್ರೀ ಎನ್. ಚಲುವರಾಯಸ್ವಾಮಿ : 19ನೇ ತಾರೀಖು ....

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ. ಈಗ ಇದು ಬಹಳ ಅತಿಯಾಯಿತು. ನಿಮ್ಮ ವಿಚಾರಗಳಿದ್ದರೆ ಬೇರೆ ಬೇರೆ ಸಂದರ್ಭಗಳಲ್ಲಿ ಮಾತನಾಡಿ. ಈಗ ಅವರು ಮಾತನಾಡುತ್ತಿದ್ದರೆ ಅದಕ್ಕೆ ನೀವು ಉತ್ತರ ಕೊಡಬೇಕು. ಅವರು ಇನ್ನೊಂದು ಹೇಳುತ್ತಾರೆ. ದಿಸೀಸ್ ನಾಟ್ ಕರೆಕ್ಟ್. ನೀವೆಲ್ಲಾ ಹಿರಿಯ ಸದಸ್ಯರು, ಏಕೆ ಈ ತರಹ ಮಾಡುತ್ತೀರಿ? ನೀವೆಲ್ಲಾ ರಾಜಕೀಯಕ್ಕೆ ಬಂದಿರುವುದು ಪರಸ್ಪರ ಹೊಡೆದಾಡುವುದಕ್ಕಾ? ಎಲ್ಲರ ಸೇವೆ ಮಾಡುವುದಕ್ಕೇ ಬಂದಿರುವುದು. ದಯಮಾಡಿ ಸದನದ ಗೌರವ ಉಳಿಸಿ. ನಿಮ್ಮ ವೈಯಕ್ತಿಕ ವಿಚಾರ ತರಬೇಡಿ. ಮಾತನಾಡಿ, ಏನೋ ಕೆಲವು ವಿಚಾರಗಳನ್ನು ಮಾತನಾಡಿದರು. ದಯಮಾಡಿ ಮುಗಿಸಿ. ರೇವಣ್ಣನವರೆ.

ಶ್ರೀ ಹೆಚ್.ಡಿ. ರೇವಣ್ಣ : ಕೊನೆಯಲ್ಲಿ, ನಾನು ಸನ್ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದಿಷ್ಟೆ ಇವತ್ತು ಕೆಲವು ರೈತಾಪಿ ಜನರಿಗೆ ಆಗುವಂಥ ಒಳ್ಳೆಯ ಕೆಲಸವನ್ನು ತಾವು ಮಾಡಿದ್ದೀರಿ. ಆದರೆ, ಮುಂದಿನ ದಿನಗಳು ನಮ್ಮ ಈ ರಾಜ್ಯದ ಜನತೆಗೆ ಉಪಯೋಗವಾಗುವ ಇಂಧನ ಇಲಾಖೆ ಇರಬಹುದು ಲೋಕೋಪಯೋಗಿ ಇಲಾಖೆ ಇರಬಹುದು ಅಥವಾ . . . .

ಅಧ್ಯಕ್ಷರು : ರೇವಣ್ಣನವರೆ, ರಿಪ್ಲೈಯಾಗಬೇಕು. ದಯಮಾಡಿ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ಕೊನೆಯದಾಗಿ, ನಾನು ಕನ್‌ಕ್ಲೂಡ್ ಮಾಡುತ್ತಿದ್ದೇನೆ ಸಾರ್.

ಅಧ್ಯಕ್ಷರು : ಆಯಿತು.

ಶ್ರೀ ಹೆಚ್.ಡಿ. ರೇವಣ್ಣ : ಆಮೇಲೆ,ಇವತ್ತು ಕೃಷಿ ಸಾಲ 4 ಪರ್ಸೆಂಟ್‌ಗೆ ಕೊಡುತ್ತಿದ್ದೀರಿ. ಸಂತೋಷ. ಆದರೆ, ಬಡ್ಡಿ ಮನ್ನಾ ಮಾಡುತ್ತಿದ್ದೀರಿ. ಮತ್ತೆ ಇದೇನಾಗುತ್ತದೆಂದರೆ. ಏಪ್ರಿಲ್ 30ನೇ ತಾರೀಖು ಲಾಸ್ಟ್ ಡೇಟ್ ಎಂದು ಹೇಳಿದ್ದೀರಿ. ಎಕ್ಸ್‌ಟೆಂಡ್ ಮಾಡಿದ್ದೀರಿ. ಸಂತೋಷ. ಆದರೆ ಏಪ್ರಿಲ್ 29ಕ್ಕೆ ಸರ್ಕಾರಿ ಆದೇಶ ಹೋಗುತ್ತದೆ. ಅದಾಗಬಾರದು. ದಯಮಾಡಿ, ನಾಳೆಯೇ ಒಂದು ಸರ್ಕಾರಿ ಆದೇಶ ಹೊರಡಿಸಿ ನಮ್ಮ ರೈತಾಪಿ ಜನಕ್ಕೆ ಏಪ್ರಿಲ್ 30ನೇ ತಾರೀಖಿನ ವರೆಗೆ ಬಡ್ಡಿ ಕಟ್ಟಲು ದಿನಾಂಕವನ್ನು ಎಕ್ಸ್‌ಟೆಂಡ್ ಮಾಡಿದ್ದೇವೆನ್ನುವ ಒಂದು ಮೆಸೇಜ್ ಅನ್ನು ತಾವು ದಯಮಾಡಿ ಕೊಡಬೇಕೆಂದು ಹೇಳಿ ಉಪ ಮುಖ್ಯಮಂತ್ರಿಗಳಲ್ಲಿ ನಾನು ಮನವಿ ಮಾಡುತ್ತಿದ್ದೇನೆ. ಇದಲ್ಲದೆ, ನನಗೇನೂ ಯಾರ ಮೇಲೂ ವೈಯಕ್ತಿಕವಾಗಿ ದ್ವೇಷವಿಲ್ಲ. ನನಗೇನೂ ಆ ತರಹ ರಾಜಕೀಯವಾಗಿ ಆ ತರಹ ಸಣ್ಣತನದ ಸೇಡನ್ನು ತೆಗೆದುಕೊಂಡು ಏನೂ ಮಾಡಬೇಕಾದ್ದಿಲ್ಲ. ಏಕೆಂದರೆ, ರಾಜಕೀಯದಲ್ಲಿ ಸೋತೋ ಇದ್ದೇನೆ, ಗೆದ್ದೂ ಇದ್ದೇನೆ. ಆದರೆ ನನ್ನ ಉದ್ದೇಶವೇನೆಂದರೆ, ಈ ಸಭೆಯನ್ನು ಬೇರೆ ದಿಕ್ಕಿಗೆ ತೆಗೆದುಕೊಂಡು ಹೋಗಬಾರದು ಎಂದು ಎಲ್ಲ ಸದಸ್ಯರಿಗೆ ಮನವಿ ಮಾಡುತ್ತೇನೆ. ಏನಾದರೂ ನನ್ನ ತಪ್ಪಿದರೆ ನನಗೆ ಹೇಳಿ. ನಾನು ತಿದ್ದಿಕೊಳ್ಳುತ್ತೇನೆ. ಈ ತರಹ ಮಾಡಿರುವುದು ಸರಿ ಇಲ್ಲ, ನನ್ನ ಅಧಿಕಾರಾವಧಿಯಲ್ಲಿ ನಾನು ಹೀಗೆ ಮಾಡಿದ್ದೇನೆಂದು ಬೇಕಾದರೆ ಹೇಳಿ. ನಾನು ತಿದ್ದಿಕೊಳ್ಳುವುದಕ್ಕೆ ರೆಡಿ ಇದ್ದೇನೆ. ನನಗೆ ಯಾರ ಬಗ್ಗೆಯೂ ವೈಯಕ್ತಿಕವಾಗಿ ದ್ವೇಷವಿಲ್ಲ. ಆದರೆ, ಸಭೆಯಲ್ಲಿ ಶಾಂತ ರೀತಿಯಿಂದ ದಯವಿಟ್ಟು ಸದಸ್ಯರು ನಾವು ಹೇಳುವುದನ್ನೂ ಕೇಳಿ. ಸದನದ ಗೌರವ ಉಳಿಸಿಕೊಡಿ. ಈಗ 20 ತಿಂಗಳು ನಮ್ಮ ಧರ್ಮಸಿಂಗ್ ಸಾಹೇಬರಿದ್ದರು. ಅವರಿಗೆ ಯಡಿಯೂರಪ್ಪನವರು ಸಹಕಾರ ಕೊಟ್ಟರು. ಇವತ್ತೇನು ಅವರು ಆಡಳಿತ ನಡೆಸುತ್ತಾರೆಂದು 6 ತಿಂಗಳು ಒಂದು ವರ್ಷ, 2 ವರ್ಷವೋ, 3 ತಿಂಗಳೋ ಕಾದು ನೋಡಿ. ಒಳ್ಳೆಯ ಕೆಲಸ ಮಾಡಿದರೆ ಜನ ಓಟು ಹಾಕುತ್ತಾರೆ. ಇಲ್ಲವೆಂದರೆ ಮನೆಗೆ ಕಳುಹಿಸುತ್ತಾರೆ. ಒಂದು ಸಾರಿ ನಮ್ಮನ್ನೂ ಸೋಲಿಸಲಿಲ್ಲವೆ? ಒಳ್ಳೆಯ ಕೆಲಸ ಮಾಡಿಯೇ ಸೋಲಿಸಿದರು. ಮುಂದಿನ ಸಾರಿಯು ಚುನಾವಣೆಯುಲ್ಲಿ ಗೆಲ್ಲಿಸಿದರು. ಉಪ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ತಾವು ಒಳ್ಳೆಯ ಬಡ್ಜೆಟ್ ಕೊಟ್ಟಿದ್ದೀರಿ. ಏಕೆಂದರೆ ಧರ್ಮಸಿಂಗ್ ಸಾಹೇಬರದ್ದು ಅರ್ಧ ಅರ್ಧ ಗೌರ್ನಮೆಂಟಿತ್ತು . ಆಗ ಸಿದ್ದರಾಮಯ್ಯನವರು, ಧರ್ಮಸಿಂಗ್ ಸಾಹೇಬರು ಮತ್ತು ನಮ್ಮ ಸದಸ್ಯರೆಲ್ಲ ಸೇರಿ ರೈತಾಪಿ ಜನರಿಗೆ ಪರಿಹಾರ ಕೊಟ್ಟರು. ಅದಾದಮೇಲೆ ಯಡಿಯೂರಪ್ಪನವರು ಇನ್ನೂ ಒಳ್ಳೆಯ ಬಡ್ಜೆಟ್ ಕೊಟ್ಟಿದ್ದಾರೆ. ಕೆಲವು ಯಾವುವು ಕೈಬಿಟ್ಟು ಹೋಗಿವೆ ಅವೆಲ್ಲಾ ಸೇರಿವೆ. ಅದಕ್ಕೆ ನಾನು ಸಂತೋಷ ಪಡುತ್ತೇನೆ. ಅಧಿಕಾರಿ ವರ್ಗ ಹೇಳುವುದು ಕೇಳುವುದು ಬೇಡ. ನೀವು ಪ್ರಾಕ್ಟಿಕಲ್ ಆಗಿ ಮಾಡಿ. ಒಳ್ಳೆಯ ಹೆಸರು ಮಾಡಿ. ಇನ್ನೂ ಆರು ತಿಂಗಳೋ ಒಂದು ವರ್ಷ . . . . ಕೆಲವರು 6 ತಿಂಗಳಲ್ಲೆ ಸರ್ಕಾರ ಹೋಗುತ್ತದೆನ್ನುತ್ತಾರೆ. ಕೆಲವರು ಒಂದು ವರ್ಷದಲ್ಲಿ ಹೋಗುತ್ತದೆನ್ನುತ್ತಾರೆ. ಕೆಲವರು 20 ತಿಂಗಳು ಪೂರೈಸುತ್ತಾರೆಂದು ಹೇಳುತ್ತಾರೆ. ನಾವು ಏಕೆಂಧರೆ, ಅದಕ್ಕೆ ಮಹದೇವಣ್ಣನನ್ನು ಕರೆದುಕೊಂಡು ಬಂದು ಶಾಸ್ತ್ರ ಕೇಳಬೇಕೆಂದು ಮಾಡಿದ್ದೇವೆ.

ಅಧ್ಯಕ್ಷರು : ರೇವಣ್ಣನವರೆ ದಯಮಾಡಿ ಮುಗಿಸಿಬಿಡಿ. ರಿಪ್ಲೈ ಆಗಬೇಕು.

ಶ್ರೀ ಹೆಚ್.ಡಿ. ರೇವಣ್ಣ : ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಯಡಿಯೂರಪ್ಪನವರೆ .... ಮಾಜಿ ಅರ್ಥ ಸಚಿವರು ಮಾತನಾಡಬೇಕೆಂದು ಇದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) : ಹಿಂದಿನ ಹಣಕಾಸಿನ ಸಚಿವರು ಯಾರು ಒಂದು ಒಳ್ಳೆಯ ಬಡ್ಜೆಟ್‌ಅನ್ನು ಕೊಟ್ಟಿದ್ದರು. ಅವರು ಮಾತನಾಡುವುದನ್ನು ಕೇಳುವುದಕ್ಕೆ ನಾನೂ ಕಾತುರನಾಗಿ ಕುಳಿತಿದ್ದೇನೆ. ಈ ಮನೆಯ ಎಲ್ಲ ಸದಸ್ಯರಿಗೆ ನಾನಿಷ್ಟೇ ವಿನಂತಿ ಮಾಡುವುದು. ನೀವು ಹೇಗೆ ಹೇಳುತ್ತೀರೋ ಹಾಗೆ ನಾನು ಕೇಳುತ್ತೇನೆ. ನಾನ್ಯಾರು? ನಾವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತಾಗ ಇವತ್ತು ಏನಾದರೂ ಮಾಡಿ ಎರಡೂವರೆ, ಮೂರು ಗಂಟೆಗೆ ರಿಪ್ಲೈ ಮಾಡಿಸಿ, ಅಲ್ಲಿ ಹೋಗಿ ರಿಪ್ಲೈ ಮುಗಿಸಿಕೊಂಡು ವಾಪಸ್ಸು ಬರಬೇಕೆಂದು ನಮ್ಮ ಅಪೇಕ್ಷೆ ಇದೆ. ಇನ್ಯಾರು ಒಬ್ಬಿಬ್ಬರು ಮಾತನಾಡಬೇಕು ಅದಕ್ಕೆ ಸೀಮಿತವಾಗಿ ಸಮಯದಲ್ಲಿ ಕೊಟ್ಟರೆ, 4 ಗಂಟೆಗಾದರೂ ಅಥವಾ 4.30 ಗಂಟೆಗಾದರೂ ಉತ್ತರ ಕೊಡುವುದಕ್ಕೆ ನನಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಈಗ ಮೊದಲು ಸಿದ್ದರಾಮಯ್ಯನವರು ಮಾತನಾಡಲಿ. ಅವರು ಹಿಂದೆ ಅರ್ಥ ಸಚಿವರಾಗಿದ್ದವರು.

ಶ್ರೀ ಗಡ್ಡದೇವರ ಮಠ : ಸಾರ್, ರೈತರ ಪರವಾಗಿ ಒಂದೇ ಒಂದು ಸಲಹೆ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಿದ್ದರಾಮಯ್ಯನವರು ಮಾತನಾಡಿದ ಮೇಲೆ ನಾನು ಉತ್ತರ ಕೊಟ್ಟ ಮೇಲೆ ನೀವು ಕೇಳಬೇಕಾದಂಥ ಅನೇಕ ಪ್ರಶ್ನೆಗಳಿಗೆ ನಾನೇ ಉತ್ತರ ಕೊಟ್ಟುಬಿಡುತ್ತೇನೆ. ಆಗ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಗಡ್ಡದೇವರ ಮಠ : ಒಂದೇ ಒಂದು ಬೇಡಿಕೆ ಇದೆ.

ಅಧ್ಯಕ್ಷರು : ಕ್ಲಾರಿಫಿಕೇಷನ್‌ನಲ್ಲಿ ಕೇಳಿ. (ಗೊಂದಲ) ಸಿದ್ದರಾಮಯ್ಯನವರನ್ನು ಕರೆದಿದ್ದೇನೆ, ಆಮೇಲೆ ಮಾತನಾಡಿ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ ಕ್ಷೇತ್ರ): ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರಿಗೆ ಹಣಕಾಸು ಸಚಿವರಿಗೆ, ನಾನೊಂದು ಸಲಹೆ ಕೊಡುತ್ತೇನೆ. ಸಲಹೆಯೇ ಬೇಡವೆ? ಏಕೆ? ನೀವು ಅ ಕಡೆ ಕುಳಿತಾಗ ಅಷ್ಟೊಂದು ಸಲಹೆ ತೆಗೆದುಕೊಂಡಿದ್ದೇನೆ. ನಾನು ಮಾತನಾಡುವುದಕ್ಕೆ ಮುಂಚಿತವಾಗಿ ನಿಮಗೇನು ನನ್ನ ಸಲಹೆ ಏನೆಂದರೆ, ಈಗ ನಾನು ಮಾತನಾಡುತ್ತೇನೆ. ಉತ್ತರವನ್ನು ನೀವು ನಾಳೆ ಕೊಡಿ. ಯಡಿಯೂರಪ್ಪನವರೆ ನಾನು 2 ಸಾರಿ ಹಾಗೇ ಕೊಟ್ಟಿದ್ದೇನೆ. 2004–05ರ ಬಡ್ಜೆಟ್‌ಗೆ ಬೆಳಿಗ್ಗೆ ಇಲ್ಲಿ ಉತ್ತರ ಕೊಟ್ಟು ಸಾಯಂಕಾಲ ಅಲ್ಲಿ ಉತ್ತರ ಕೊಟ್ಟಿದ್ದೇನೆ. ಮತ್ತೆ 2005–06ಕ್ಕೆ ಇಲ್ಲಿ ಉತ್ತರ ಕೊಟ್ಟು ಮತ್ತೆ ಮಧ್ಯಾಹ್ನ ಅಲ್ಲಿ ಉತ್ತರ ಕೊಟ್ಟಿದ್ದೇನೆ. ಫೈನಾನ್ಷಿಯಲ್ ಬಿಲ್ ಎಲ್ಲ ಪಾಸ್ ಆಗಿದೆ. ಮಾಧುಸ್ವಾಮಿಯವರೆ ನಿಮಗೆಲ್ಲ ಗೊತ್ತಿರಬೇಕಲ್ಲ? ಇನ್ನೂ ಕೆಲವರೆಲ್ಲ ಮಾತನಾಡಬೇಕೆಂದು ಇದ್ದಾರೆ. ಪಾಪ ಅವರಿಗೆಲ್ಲ ಅಸಮಾಧಾನ, ಡಿಸಪಾಯಿಂಟ್ ಮಾಡುತ್ತೀರಿ.

ನೀವೂ ಸಲಹೆಗಳನ್ನು ಕೇಳಿ. ಹೊಸ ಹಣಕಾಸಿನ ಮಂತ್ರಿಗಳು. ನೀವು ತಾಳ್ಮೆ ಕಳೆದುಕೊಂಡರೆ ಹೇಗೆ? ನಾನು ಮಾತನಾಡುತ್ತೇನೆ. ಆದ್ದರಿಂದ, ಅಧ್ಯಕ್ಷರೆ ನೀವು ಆ ತರಹ ಸಲಹೆ ಕೊಡಿ. ನಾನು ಅವರಿಗೆ ಹೇಳುವುದಿಲ್ಲ, ನಿಮಗೇ ಹೇಳಿಬಿಡುತ್ತೇನೆ.

ಅಧ್ಯಕ್ಷರು : ಅವರಿಗೇ ಹೇಳಬೇಕು.

ಶ್ರೀ ಸಿದ್ದರಾಮಯ್ಯ : ಅವರು ಒಳ್ಳೆಯ ಸ್ನೇಹಿತರು. ಕೇಳುತ್ತಾರೆ. ನನಗೆ ಯಡಿಯೂರಪ್ಪನವರು ಮಂಡಿಸಿರುವ ಚೊಚ್ಚಲ ಮುಂಗಡಪತ್ರದ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ನಿಮಗೆ ನನ್ನ ಧನ್ಯವಾದಗಳು. ಯಡಿಯೂರಪ್ಪನವರು ಬಹಳ ವರ್ಷ ದೀರ್ಘ ಕಾಲ ವಿರೋಧ ಪಕ್ಷದಲ್ಲಿ ಕುಳಿತಿದ್ದರು. ನಾನು ಅವರನ್ನು ಇಲ್ಲಿ 1989 ರಿಂದ ನೋಡುತ್ತಿದ್ದೇನೆ. 1983ರಿಂದ ನಾನು ನೋಡುತ್ತಿದ್ದೇನೆ. ಈಶ್ವರಪ್ಪನವರು 1985ಕ್ಕೆ ಬಂದವರು. 1989ಕ್ಕೆ ಅವರು ನಮ್ಮ ಜೊತೆಯಲ್ಲೇ ಬಂದವರು. 1983ರಿಂದ ಅವರೂ ಕೂಡ ಇದ್ದಾರೆ. ಒಮ್ಮೆ ಮಾತ್ರ ಇರಲಿಲ್ಲವೆಂದು ಕಾಣಿಸುತ್ತದೆ. 5 ಸಾರಿ ವಿರೋಧ ಪಕ್ಷದಲ್ಲಿ ಕುಳಿತಿದ್ದಿರಿ. ವಿಧಾನ ಪರಿಷತ್ತಿಗೂ ಒಂದು ಸಾರಿ ಹೋಗಿದ್ದರು. ನೀವೇ ಅವರನ್ನು ಕಳುಹಿಸಿಕೊಟ್ಟಿದ್ದಿರಿ. ನಾನು ಯಾವ ಪಾರ್ಟಿ ಎಂದು ಹೇಳಿದೆನೆ? ಅದಕ್ಕೂ ತಕರಾರು ತೆಗೆದರೆ ಹೇಗೆ? ಬಿಜೆಪಿಯವರು ಕಳುಹಿಸಿದಿರಿ ಎಂದು ನಾನು ಹೇಳಿದೆ ಅಷ್ಟೆ. ಕಳುಹಿಸಿದಿರಿ. ದೀರ್ಘ ಕಾಲ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಿದ್ದಾರೆ. ಮತ್ತೆ ಅವರು ಯಾವಾಗಲೂ ನನಗೆ ಗೊತ್ತಿರುವ ಹಾಗೆ, ರೈತರ ಬಗ್ಗೆ, ಹೆಚ್ಚು ಪ್ರಸ್ತಾಪ ಮಾಡುತ್ತಿದ್ದರು. ಒಂದೊಂದು ಸಾರಿ ಬಹಳ ಅವೇಶಕ್ಕೊಳಗಾಗುತ್ತಿದ್ದರು. ಲೀಡರ್ ಆಫ್ ದಿ ಆಪೋಜಿಷನ್ ಆಗಿದ್ದರೂ ಕೂಡ ಬಹಳ ಆವೇಶಕ್ಕೊಳಗಾಗಿ ಬಿಡುತ್ತಿದ್ದರು. ನಾನು ಕಳೆದ ಸಾರಿ ಮೊದಲನೇ 2004–2005ನೇ ಸಾಲಿನ ಬಡ್ಜೆಟ್ ಅನ್ನು ಮಂಡಿಸಿದಾಗ, ಬಡ್ಡಿ ಎಲ್ಲಾ ಮನ್ನಾ ಮಾಡಲೇಬೇಕೆಂದು ಬಹಳ ಜೋರಾಗಿ ಹೇಳಿದರು. ಬಡ್ಡಿ, ಸುಸ್ತಿ ಬಡ್ಡಿ ಎಲ್ಲ ಮನ್ನಾ ಮಾಡಲೇಬೇಕೆಂದರು. ಒಂದು ಹಂತದಲ್ಲಿ ಒಂದು ಸಾರಿ ಅಸಲನ್ನು ಮನ್ನಾ ಮಾಡಿಬಿಡಿ ಎಂದು ಹೇಳಿದರು. " ಒನ್‌ಟೈಂ ಮೆಷರ್", "ಒನ್‌ಟೈಂ ರಿಲೀಫ್" ಎಂದು ಹೇಳಿ ಅಸಲನ್ನೆ ಮನ್ನಾ ಮಾಡಿಬಿಡಿ ಎಂದು ಹೇಳಿ ಹೇಳಿದರು. ಆದರೆ, ನಾನು ಯಾವತ್ತೂ ಕೂಡ ಅಸಲನ್ನು ಮನ್ನಾ ಮಾಡಿ ಎಂದು ಸಜೆಷನ್ ಕೊಡುವುದಿಲ್ಲ. ಆದರೆ, ಅವರು ಹೇಳಿದ್ದನ್ನೇ ನಾನು ಹೇಳುತ್ತಿದ್ದೇನಷ್ಟೆ. ನಾನು ಅವತ್ತೂ ಹೇಳಿದ್ದೆ, ಇವತ್ತೂ ಕೂಡ ಅದನ್ನೇ ಹೇಳುತ್ತೇನೆ. ಅಸಲನ್ನು ಮನ್ನಾ ಮಾಡಬೇಕೆಂದು ಕೂಡ ಹೇಳುವುದಿಲ್ಲ. ಮತ್ತೆ, ಬಡ್ಡಿಯನ್ನು ಸುಸ್ತಿ ಬಡ್ಡಿಯನ್ನೂ ಪದೇ ಪದೇ ಮನ್ನಾ ಮಾಡಬೇಕೆಂದು ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಅದು ಒಳ್ಳೆಯ ಪರಿಪಾಠ ಅಲ್ಲ ರಾಜ್ಯದ ಆರ್ಥಿಕ ಹಿತದೃಷ್ಟಿಯಿಂದ ಒಳ್ಳೆಯ ಆರ್ಥಿಕ ದೃಷ್ಟಿಯಿಂದ ಅದು ಒಳ್ಳೆಯ ಪರಿಪಾಠವಾಗಲಾರದು ಎನ್ನತಕ್ಕಂಥದ್ದು ನನ್ನ ಭಾವನೆ. ಆದರೆ ಬಡ್ಡಿ ಸುಸ್ತಿ ಬಡ್ಡಿ ಮನ್ನಾ ಮಾಡಬೇಕಾದಂಥ ಅನಿವಾರ್ಯ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ನಿರ್ಮಾಣವಾಗಿದೆ. ಮೂರು ವರ್ಷ ಸತತ ಬರಗಾಲ ಬಂದಿತ್ತು, ಜನರು ಆತ್ಮಹತ್ಯೆ ಜನರು ಮಾಡಿಕೊಳ್ಳುತ್ತಿದ್ದರು. ಬಹಳಷ್ಟು ಜನರು ಆತ್ಮಹತ್ಯೆಕ್ಕೆ ಮೊರೆ ಹೋಗಿಬಿಟ್ಟಿದ್ದರು. ಸಾಲ ತೀರಿಸುವುದಕ್ಕಾಗದೆ, ಅವರ ಮನೆ –ಮಠಗಳು ಹರಾಜು ಆಗುವುದಕ್ಕೆ ಬಂದವು ಜಪ್ತಿಯಾಗುವುದಕ್ಕೆ ಬಂದವು, ಆ ಕಾರಣಕೋಸ್ಕರವಾಗಿ ಒಮ್ಮೆ

ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುವುದು ಅತ್ಯಂತ ಅಗತ್ಯನೂ ಇದೆ ಮತ್ತು ಅನಿವಾರ್ಯತೆಯೂ ಇದೆ ಎನ್ನತಕ್ಕಂಥ ಕಾರಣದಿಂದ ನಾವು ಒನ್ ಟೈಂ ಮೆಜರ್ಸ್ ಆಗಿ ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಿದ್ದೇವೆ. ಅದಕ್ಕೆ ನಾನು ಮೊದಲೇ ಹೇಳಿದಂತೆ ಅಸಲೇ ಮನ್ನಾ ಮಾಡಿಬಿಡಬೇಕು, ಯಾವಾಗಲೂ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿಬಿಡಬೇಕು ಎನ್ನತಕ್ಕಂಥ ವಿಚಾರವನ್ನು ನಾನು ಯಾವತ್ತೂ ಕೂಡ ಪ್ರತಿಪಾದನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಈಗ ಮಾಡಿರತಕ್ಕಂಥದ್ದು ಬಡ್ಡಿ ಸುಸ್ತಿ ಬಡ್ಡಿ ಮನ್ನಾ ನಾವೇನು ಮಾಡಿದೆವು, ಕಳೆದ ವರ್ಷ, ಅಂದರೆ ಈ ಆರ್ಥಿಕ ವರ್ಷದಲ್ಲಿ ಏನು ಮಾಡಿದೆವು ಅದು ಏಪ್ರೀಲ್ ಕೊನೆಯ ವಾರದವರೆವಿಗೂ ಮುಂದುವರಿಸಿದ್ದೇವೆಂದು ಹೇಳುತ್ತಾರೆ, ಈಗಾಗಲೇ ಬಕಹುತೇಕ ನೂರಕ್ಕೆ ತೊಂಬತ್ತೊಂಬತ್ತು (99) ಪರ್ಸೆಂಟ್ ಜನರು ಕಟ್ಟಿ ಬಿಟ್ಟಿದ್ದಾರೆ. ಅಸಲು ಕಟ್ಟಿದರೆ ಬಡ್ಡಿ ಏನು ಮನ್ನಾ ಮಾಡುತ್ತೇವೆಂದು ಹೇಳಿದ್ದೆವು . . . .

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಈಗಾಗಲೇ ಅಸಲು ಕಟ್ಟಿದ್ದಾರೆ 90 ಪರ್ಸೆಂಟ್ ಎಲ್ಲಾ ಮುಗಿದಿದೆ, ಒಂದು ಏನು ಆಗಿದೆ ಎಂದರೆ, ಅಕ್ಟೋಬರ್‌ನಿಂದ ಕೊಡಿ ಎಂದು ಅವರು ಇದ್ದಾಗ ಹೇಳುತ್ತಿದ್ದರು. ಅದು ವಾಪಸ್ ಕೊಡಿ ಎಂದಿರಿ, ಅವರು ಕೊಟ್ಟಿಲ್ಲ, ಅದರಿಂದ ಏನಾಗಿದೆ ಕೊಟ್ಟವರು ಕೋಡಂಗಿ ಅಗಿದ್ದಾನೆ, ಕೊಟ್ಟಿಲ್ಲದವನು ವೀರಭದ್ರನಾಗಿದ್ದಾನೆ.

ಶ್ರೀ ಸಿದ್ದರಾಮಯ್ಯ : ಗುರುಪಾದಪ್ಪನವರೆ, ಸಪ್ಲಿಮೆಂಟರಿ ಎಸ್ಟೀಮೆಟ್ಸ್‌ನಲ್ಲಿ 400 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತಿದ್ದಾರೆ. ನಾವು ಆ ದಿವಸ ಎಷ್ಟು ಅಗಬಹುದು ಎನ್ನತಕ್ಕಂಥ ಅಂದಾಜು ಮಾಡಿ ಆ ಪೂರ್ಣ ಅಂದಾಜು ನಮಗೆ ಸಿಕ್ಕಿರಲಿಲ್ಲ ಹಾಗಾಗಿ ಬಜೆಟ್‌ನಲ್ಲಿ ಎಷ್ಟು ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿದರೆ ಅದನ್ನು ಎಷ್ಟು ಸೊಸೈಟಿಗಳಿಗೆ ತುಂಬಿ ಕೊಡುವುದಕ್ಕಾಗುತ್ತದೆ?

ಶ್ರೀ ಕೆ.ಎನ್. ರಾಜಣ್ಣ : ಮನ್ನಾ ಎಂದು ಹೇಳಬೇಡಿ ಎಂದು ತಮಗೆ ಮಾದಲಿನಿಂದಲೂ ಹೇಳುತ್ತಿದ್ದೇವೆ. ಏಕೇಂವರೆ, ಸಹಕಾರ ಸಂಘಗಳಲ್ಲಿ ಬ್ಯಾಂಕ್‌ಗಳಲ್ಲಿ ಇರುವುದು ಡೆಪಾಸಿಟರ್ ದುಡ್ಡು, ಅವರಿಗೆ ಅವರ ಡೆಪಾಸಿಟ್‌ನಿಂದ ಕೊಟ್ಟಿರತಕ್ಕಂಥ ಸಾಲ, ಆ ಸಾಲದ ಮೇಲೆ ನೀವು ರೈತರ ಪರವಾಗಿ ಬಡ್ಡಿಯನ್ನು ತುಂಬಿ ಕೊಡತಕ್ಕಂಥದ್ದು. ಮನ್ನಾ ಎಂದರೆ ನೀವು ಲ್ಯಾಂಡ್ ರೆವಿನ್ಯೂ ಮನ್ನಾ ಮಾಡುವುದು ಅದು ನಮಗೆ ಬರುವುದಿಲ್ಲ. ಆದ್ದರಿಂದ, ನಾನು ತಮಗೆ ಅದನ್ನು ಮನ್ನಾ ಎಂದು ಹೇಳಬೇಡಿ ಎಂದು ಹೇಳಿದೆ.

ಶ್ರೀ ಸಿದ್ದರಾಮ್ಮಯ್ಯ : ಓ.ಕೆ. ಈಗ ನಿಮ್ಮ ಭಾಷೆಯಲ್ಲಿ ಕೋ–ಅಪರೇಟಿವ್ ಭಾಷೆನಲ್ಲಿ ಹೇಳಿಬಿಡುತ್ತೇನೆ. ರೈತರು ಕೊಡಬೇಕಾಗಿದ್ದಂಥ, ಬಡ್ಡಿ ಸುಸ್ತಿ ಬಡ್ಡಿಯನ್ನು ಸರ್ಕಾರ ಅವರ ಪರವಾಗಿ ಸೊಸೈಟಿಗಳಿಗೆ ತುಂಬಿ ಕೊಟ್ಟು, ಅವರ ಮೇಲೆ ಇದ್ದಂಥ ಭಾರವನ್ನು ಇಳಿಸಿದ್ದೇವೆ, ಕರೆಕ್ಟಾಗಿ ಇದೆಯೇ? ಅದನ್ನು ಇಳಿಸಲಿಕ್ಕೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿ ಆಗುತ್ತದೆ. ಈ ವರ್ಷದ ಮುಂಗಡಪತ್ರದಲ್ಲಿ 450 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ಇನ್ನು 450 ಕೋಟಿ ರೂಪಾಯಿ ಆಗಬಹುದು ಎಂದು ಅಂದಾಜು ಇತ್ತು. ಅದನ್ನು ಆಗಾಗ್ಗೆ ನೋಡಿಕೊಂಡು ಎಷ್ಟೆಷ್ಟು ಅಸಲು ಕಟ್ಟುತ್ತಾರೆ ನೋಡಿಕೊಂಡು, ನಾವೆಷ್ಟು ಬಡ್ಡಿ ಸುಸ್ತಿ ಬಡ್ಡಿ ಪರವಾಗಿ ರೈತರ ಪರವಾಗಿ ಎಂಬುದನ್ನು ಲೆಕ್ಕ ಹಾಕಿ, ಅಮೇಲೆ ಪೂರಕ ಅಂದಾಜುಗಳಲ್ಲಿ ಕೋಡೋಣ ಎಂದು ಅವತ್ತು ನಾವು ಒಂದು ತೀರ್ಮಾನ ಮಾಡಿ, 450 ಕೋಟಿ ರೂಪಾಯಿ ಇಟ್ಟಿದ್ದೆವು. ಈಗ ಗುರುಪಾದಪ್ಪ "ಇನ್ನೂ ಸೊಸೈಟಿಗಳಿಗೆ ದುಡ್ಡು ಬಂದಿಲ್ಲ, ತೊಂದರೆಯಾಗುತ್ತದೆ" ಎಂದು ಹೇಳಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅದನ್ನು ಹೇಳಿದ್ದೇನೆ, ಇನೊಂದು ನೀವು ಇದ್ದಾಗ ಅವರು ಹೇಳಿದ್ದರು. ಹಿಂದಿನಿಂದ ಕೊಡಬೇಕು, ಅಕ್ಟೋಬರ್, ತಾವು ಮಾರ್ಚ್ 31ಕ್ಕೆ ಮಾಡಿದ್ದಿರಿ. ಹಿಂದೆ ಕೊಟ್ಟವರದು ವಾಪಸ್ ಕೊಟ್ಟಿಲ್ಲ ಪಾಪ ಅವರಿಗೆ ತೊಂದರೆಯಾಗುತ್ತದೆ, ಅದಕ್ಕೆ ಅಕ್ಟೋಬರ್‌ನಿಂದ ಮಾಡಿರಿ ಎಂದರು. ನೀವು ಮಾರ್ಚ್ 1 ರಿಂದ ಮಾಡಿದಿರಿ. ಅವಾಗ ಅವರು ಮಾಡುತ್ತಾರೆಂದರು ಈಗ ಅವರು ಮಾಡುತ್ತಾರೆಯೇ?

ಶ್ರೀ ಸಿದ್ಧರಾಮಯ್ಯ : ಏಪ್ರೀಲ್ 1 ನೇ ತಾರೀಖಿನಿಂದ ಮಾಡಿರಿ ಎಂದು ಹೇಳಿತ್ತು ಅಮೇಲೆ ಬದಲಾವಣೆ ಮಾಡಿ ನಾವು ತೀರ್ಮಾನ ಮಾಡಿದ್ದೆವು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾಡಿದ್ದಿರಿ. ಅದಕ್ಕೆ ಅವರು ಹಿಂದಿನಿಂದ ಮಾಡಬೇಕಾಗಿತ್ತು ಕೊಟ್ಟವರೆಲ್ಲ ಮನೆಗೆ ಹೋಗುತ್ತಿದ್ದಾರೆ. ಅದಕ್ಕೆ " ಕೊಟ್ಟವನ್ನೆಲ್ಲ ಕೋಡಂಗಿಯಾದ ಇಸ್ಕೊಂಡವನು ವೀರಭದ್ರ ಅದ," ಎಂದು ನಾನು ಹೇಳಿದ್ದು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಯಡಿಯೂರಪ್ಪನವರೆ, ಮಾರ್ಚ್ 31 ಕ್ಕಿಂತ ಮುಂಚೆ ಮಾರ್ಚ್ 2004 ಕ್ಕಿಂತ ಹಿಂದೆ, ಯಾರ್ಯಾರು ಕಟ್ಟಿಬಿಟ್ಟಿದ್ದಾರೆ ಅದೆಲ್ಲ ಮನ್ನಾ ಆಗುತ್ತದೆ, ಈ ರೀತಿ ಒಂದು ಸ್ಕೀಂ ಬರುತ್ತದೆಂದು, ಮುಂದೆ ಬಂದು ಕಟ್ಟಿಬಿಟ್ಟಿದ್ದರು ಅದನ್ನು ಕೂಡ ಕೊಡಬೇಕೆಂದು ಅನೇಕ ಜನ ಮಾನ್ಯ ಸದಸ್ಯರು ಒತ್ತಾಯ ಮಾಡಿದ್ದರು. ನಾವು ಅದನ್ನು ಕೋಡೋಣ ಎಂದು ಹೇಳಿದ್ದೆ. ಮೂರು ತಿಂಗಳದ್ದು ಎಷ್ಟು ಆಗುತ್ತದೆ ಅದನ್ನು ಕೋಡೋಣ. ಮತ್ತೆ ಕೊನೆಗೆ ಎಲ್ಲಿಯವರೆವಿಗೆ ನಾವು ಅವರಿಗೆ ಅಸಲು ಕಟ್ಟಲಿಕ್ಕೆ ಅವಕಾಶ ಕೊಡುತ್ತೇವೆ, ಅದು ಈಗ 30 ಏಪ್ರೀಲ್ ವರೆಗೆ ಕೊಟ್ಟಿದ್ದಾರೆ. ಅಲ್ಲಿಯವರೆಗೆ ಬರತಕ್ಕಂಥ ಬಡ್ಡಿ ಆಗತಕ್ಕಂಥದ್ದನ್ನು ಕೂಡ ನಾವು ಅವರಿಗೆ ವಾಪಸ್ ಸೊಸೈಟಿಗಳಿಗೆ ಕಟ್ಟಿ ಕೊಡಬೇಕೆಂದು ನಿರ್ಣಯವನ್ನು ಕೂಡ ಮಾಡಿದ್ದೆವು. ಅದನ್ನು ಒಂದು ವೇಳೆ ತಾವು ಮಾಡದಿದ್ದರೆ ಅದನ್ನು ಮಾಡಬೇಕೆಂದು ನನ್ನ ಒತ್ತಾಯ. ಯಡಿಯೂರಪ್ಪನವರು ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ, ಯಡಿಯೂರಪ್ಪನವರು ರೈತರ ಬಗ್ಗೆ ಏನೇ ಹೇಳಿದರೂ ಕೂಡ ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ ಅವರು, ರೈತರ ಬಗ್ಗೆ ಹೋರಾಟ ಮಾಡಿಕೊಂಡು ಬಂದಿರುವುದರಿಂದ ಅವರು ಇಲ್ಲವೆಂದು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಮಾಡುತ್ತಾರೆ ಎನ್ನತಕ್ಕಂಥ ವಿಶ್ವಾಸ ನನಗಿದೆ ಆ ಕಾರಣಕ್ಕಾಗಿಯೇ ನಾನು ಈ ಸಲಹೆಯನ್ನು ಕೊಡಲಿಕ್ಕೆ ಬಯಸುತ್ತೇನೆ.

ಶ್ರೀ ಹೆಚ್. ನಿಂಗಪ್ಪ : ಇದರಲ್ಲಿ ಕೆಲವು ಐಟಂಗಳನ್ನು ಕೈ ಬಿಟ್ಟುಬಿಟ್ಟಿದ್ದಾರೆ. ಅವರಿಗೆ ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಅವರಿಗೆ ಹೇಳಬೇಕು, ಅವರು ಹೇಳಬೇಕು, ನಾನು ಹೇಳಿದರೆ ಏನು ಪ್ರಯೋಜನವಾಗಲಾರದು. ನಿಂಗಪ್ಪನವರೇ ಅಮೇಲೆ ಅವರಿಗೆ ಬರೆದುಕೊಡಿ. ಈಗ ರೈತರ ಪರವಾಗಿ, ಬಡವರ ಪರವಾಗಿ ಗ್ರಾಮೀಣ ಜನರ ಪರವಾಗಿ ಕೆಲಸ ಮಾಡತಕ್ಕಂಥ ಅವಕಾಶ ತಮಗೆ ಸಿಕ್ಕಿದೆ. ಅದು ಹೇಗೆ ಸಿಕ್ಕಿದೆ, ಹೇಗೆ ಬಂತು ಎಂದು ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಿಮಗೊಂದು ಅವಕಾಶ ಈಗ ಬಂದಿದೆ. ಈ ಅವಕಾಶ ನಿಮಗೆ ಸಿಕ್ಕಿರುವುದಕ್ಕೆ ನನ್ನ

ಅಭಿನಂದನೆಗಳನ್ನು ತಮಗೆ ಹೇಳುವುದಕ್ಕೆ ಬಯಸುತ್ತಿದ್ದೇನೆ. ನೀವು ನಿಮ್ಮ ಮುಂಗಡಪತ್ರದಲ್ಲಿ ಪ್ಯಾರ ನಂಬರ್ (9) ರಿಂದ ಪ್ಯಾರ ನಂಬರ್ (14) ರವರೆಗೆ ರಾಜ್ಯದ ಆರ್ಥಿಕ ಸ್ಥಿತಿಗತಿಗಳು, ಹಣಕಾಸಿನ ಪರಿಸ್ಥಿತಿ ಇವುಗಳ ಬಗ್ಗೆ ಹೇಳಿದಿರಿ. ಇವತ್ತೇನು ಫಿಸ್‌ಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್‌ನಲ್ಲಿ ಕೆಲವು ಟಾರ್ಗೆಟ್‌ಗಳನ್ನು ತಾವು ನಿಗದಿ ಮಾಡಿದಿರಿ, ಇದೇ ಸದನದಲ್ಲಿ 2002 ನೇ ಇಸವಿಯಲ್ಲಿ "ಫಿಸ್‌ಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್" ಅನ್ನು ಪಾಸ್ ಮಾಡಿದ್ದಿರಿ. "ಅಂದರೆ ಆರ್ಥಿಕ ಹೊಣೆಗಾರಿಕೆ ಕಾಯ್ದೆ" ಎಂದು ನಾವು ಮಾಡಿದ್ದೇವೆ. ಆ ಆರ್ಥಿಕ ಹೊಣೆಗಾರಿಕೆ ಕಾಯ್ದೆಯಲ್ಲಿ ಬಹಳ ಮುಖ್ಯವಾಗಿ ಕೆಲವು ಟಾರ್ಗೆಟ್‌ಗಳನ್ನು ನಾವು ಅಲ್ಲಿ ಹಣಕಾಸಿನ ಪರಿಸ್ಥಿತಿ ಬಗ್ಗೆ ರಾಜ್ಯ ಏನು ಮಾಡಬೇಕು? ಏಕೆಂದರೆ, ಹಣಕಾಸಿನ ಪರಿಸ್ಥಿತಿ 1990 ರಿಂದ ಈಚೆಗೆ ಇಡೀ ದೇಶದಲ್ಲಿ ಹದಗೆಟ್ಟು ಹೋಯಿತು. ಕರ್ನಾಟಕ ಕೂಡ ಅದಕ್ಕೆ ಹೊರತಲ್ಲ, ಬಹಳ ಕೆಟ್ಟು ಹೋಗಿ, ತೆರಿಗೆ ಸರಿಯಾದ ಪ್ರಮಾಣದಲ್ಲಿ ವಸೂಲಿ ಯಾಗುತ್ತಿರಲಿಲ್ಲ. ರೆವಿನ್ಯೂ ಡಿಫಿಶಿಂಟ್‌ಹೆಚ್ಚಾಗುತ್ತಾ ಇತ್ತು , ಫಿಸ್‌ಕಲ್ ಡಿಫಿಶಿಂಟ್ ಯದ್ವಾತದ್ವಾ ಬೆಳೆಯುತ್ತಾ ಇತ್ತು, ಹೀಗಾಗಿ ನಾವು ರೆವಿನ್ಯೂ ಡಿಫಿಶಿಂಟ್‌ನ್ನು ಸಾಲ ತೆಗೆದುಕೊಂಡು ಬಂದು ಅದನ್ನು ತೀರುವಳಿ ಮಾಡತಕ್ಕಂಥ ಪರಿಸ್ಥಿತಿ ಇಡೀ ದೇಶದಲ್ಲಿ ಅನೇಕ ರಾಜ್ಯಗಳಲ್ಲಿ ನಿರ್ಮಾಣವಾಗಿತ್ತು ಕರ್ನಾಟಕ ರಾಜ್ಯದಲ್ಲಿ ಕೂಡ ನಿರ್ಮಾಣವಾಗಿತ್ತು. ಅದನ್ನೇ ನೀವು ಪ್ಯಾರ 9 ರಿಂದ 14 ರವರೆಗೆ ಅದನ್ನೆ ಪ್ರಸ್ತಾಪ ಮಾಡಿದಿರಿ. 2002–2003ನೇ ಸಾಲಿನ ಮುಂಗಡ ಪತ್ರ ಮಂಡಿಸಿದಾಗ ಯಾವ ಪರಿಸ್ಥಿತಿ ಇತ್ತು ಮತ್ತು 2003–2004ರ ಮುಂಗಡ ಪತ್ರ ಮಂಡಿಸಿದಾಗ ಯಾವ ಪರಿಸ್ಥಿತಿ ಇತ್ತು, 2004–2005ನೇ ಸಾಲಿನ ಮುಂಗಡ ಪತ್ರ ಮಂಡಿಸಿದಾಗ ಯಾವ ಪರಿಸ್ಥಿತಿ ಇತ್ತು ಹಾಗೆಯೇ 2005–2006ನೇ ಸಾಲಿನ ಮುಂಗಡ ಪತ್ರ ಮಂಡಿಸಿದಾಗ ಯಾವ ಪರಿಸ್ಥಿತಿ ಇತ್ತು ಮತ್ತು ಈಗ 2006–2007ರ ಈ ಮುಂಗಡ ಪತ್ರವನ್ನು ಮಂಡಿಸುವಾಗ ಇವತ್ತಿನ ಹಣಕಾಸಿನ ಪರಿಸ್ಥಿತಿ ಯಾವ ರೀತಿ ಇದೆ ಎನ್ನತಕ್ಕಂಥದನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ನಾನು 2004–2005ರ ಮುಂಗಡಪತ್ರವನ್ನು ಮಂಡಿಸಿದಾಗ, ಅವತ್ತಿನ ಬಜೆಟ್ ಎಸ್ಟಿಮೇಟ್ಸ್ 2,135 ಕೋಟಿ ರೆವಿನ್ಯೂ ಡಿಪಾಸಿಟ್ ಇತ್ತು. ಅನಂತರ ರಿವೈಜ್ಡ್ ಎಸ್ಟಿಮೇಟ್‌ನಲ್ಲಿ 2,380.44 ಕೋಟಿ ರೂಪಾಯಿಗಳಷ್ಟು ಕಡಿಮೆ ಆಯಿತು. ಮತ್ತೆ ಅಕೌಂಟ್ಸ್‌ನಲ್ಲಿ : 507 ಕೋಟಿ ರೂಪಾಯಿ ಇನ್ನು ಕಡಿಮೆ ಆಗಿದೆ. ನಮಗೆ ಕೊಟ್ಟಿರತಕ್ಕಂಥ ಅಂಕಿ–ಅಂಶಗಳ ಪ್ರಕಾರ, 507 ಕೋಟಿ ರೂಪಾಯಿ ಆಗಿದೆ. ಅಂದರೆ, ಮೈನಸ್ ರೆವಿನ್ಯೂ ಡಿಪಾಶಿಟ್ 2135 ಕೋಟಿ ರೂಪಾಯಿಗಳಿಂದ 507 ಕೋಟಿ ರೂಪಾಯಿಗೆ 2003–2004ನೇ ವರ್ಷ ಕೊನೆಗೊಂಡಾಗ, ಇಳಿಯಿತು ಈ 507 ಕೋಟಿ ರೂಪಾಯಿ ಮಾಡಿಕೊಂಡು ನಾವು 2004–2005ನೇ ಸಾಲಿನ ಆಯವ್ಯಯವನ್ನು ಮಂಡಿಸಿದೆವು. ನಾನು 2004–2005ರಲ್ಲಿ ಆಯವ್ಯಯ ಮಂಡಿಸಿದಾಗ 8 ವರ್ಷಗಳ ನಂತರ ಮೊದಲಬಾರಿಗೆ 73 ಕೋಟಿ ರೂಪಾಯಿ ಉಳಿತಾಯವಾಗಬಹುದು, ಅಂದರೆ ಸರ್ಪ್ಲಸ್ ಬಜೆಟ್‌ನ್ನು ಮಂಡಿಸತಕ್ಕಂಥದನ್ನು ಈ ಸದನದ ಮುಂದೆ ನಾವು ಮಾಡಿದೆವು. Surplus is protected. 2004–2005ನೇ ಸಾಲಿನಲ್ಲಿ ಆರ್ಥಿಕ ನಿರ್ವಹಣೆ ಚೆನ್ನಾಗಿ ಮಾಡದ್ದರಿಂದ ಅಂದರೆ ಹಿಂದಿನ ಆರ್ಥಿಕ ವರ್ಷದಲ್ಲಿ ಚೆನ್ನಾಗಿ ಆರ್ಥಿಕ ನಿರ್ವಹಣೆ ಮಾಡಿದ್ದರಿಂದ ಮತ್ತು ಬಜೆಟ್‌ನಲ್ಲಿದ್ದಂಥ ಟಾರ್ಗೆಟ್‌ಗಿಂಥ ಮತ್ತು ನಿರೀಕ್ಷೆಗಿಂಥ ಹೆಚ್ಚು ತೆರಿಗೆಯನ್ನು ವಸೂಲ್ಮಾಡಿದ್ದರಿಂದ ಮತ್ತು ವೇಸ್ಟ್‌ಫುಲ್ ಎಕ್ಸ್‌ಪೆಂಡಿಚರ್‌ನ್ನು ಕಟ್ ಡೌನ್ ಮಾಡಿದ್ದರಿಂದ, ಮತ್ತು ಡೆಡ್ debt ಸರ್ವಿಸ್‌ನಲ್ಲಿ ಬರ್ಡನ್‌ನ್ನು ಕಡಿಮೆ ಮಾಡಿದ್ದರಿಂದ

2005–2006ನೇ ಸಾಲಿನಲ್ಲಿ ನಾವು ಏನೇನು ಅಚೀವ್ ಮಾಡಬೇಕೆಂದು ಫಿಸ್‌ಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್‌ನಲ್ಲಿ ಹೇಳಲಾಗಿತ್ತೋ ಅದನ್ನು 2005–2006 ರಲ್ಲಿ ಮಾಡಬೇಕಾಗಿರತಕ್ಕಂಥದನ್ನು 2004–2005 ರಲ್ಲಿಯೇ ಅದನ್ನು ಅಚೀವ್ ಮಾಡಿದೆವು. ಅಂದರೆ ಒಂದು ವರ್ಷ ಮುಂಚಿತವಾಗಿಯೆ ಮಾಡಿದೆವು. 2005ರಲ್ಲಿ ಅಂದರೆ ಈ ವರ್ಷ ಅದನ್ನು ಮಾಡಬೇಕಾಗಿತ್ತು. ಫಿಸ್‌ಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್‌ಪಾ ಪ್ರಕಾರವಾಗಿ ರೆವಿನ್ಯೂ ಡಿಪಾಸಿಟ್ ಎಲಿಮಿನೇಟ್ ಆಗಬೇಕಾಗಿದದ್ದು ಈ ವರ್ಷ. ಫಿಸ್‌ಕಲ್ ಡಿಫಿಶಿಯಿಟ್ 3 ಪರ್ಸೆಂಟ್‌ಗಿಂಥ ಒಳಗಡೆ ಬರಬೇಕಾಗಿದ್ದು ಈ ವರ್ಷ. ಆದರೆ ಕಳೆದ ಆರ್ಥಿಕ ಸಾಲಿನಲ್ಲಿಯೇ ರೆವಿನ್ಯೂ deficit ಎಲಿಮೆನೇಟ್ ಮಾಡಿ ಫಿಸ್‌ಕಲ್ ಡಿಫಿಶಿಯಿಟ್ 4 ಪರ್ಸೆಂಟ್‌ಗಿಂತ ಹೆಚ್ಚು ಇತ್ತು. It was 4.26%. It has been reduced to less than 3% i.e., 2.82% ಗೆ ತಂದು ನಿಲ್ಲಿಸಿದ್ದೆವು. ಫಿಸ್‌ಕಲ್ ರೆಸ್ಪಾನ್ಸಿಬಿಲಿಟಿ ಆ್ಯಕ್ಟ್‌ನಲ್ಲಿ ಇದನ್ನು ಮಾಡಿದರೆ 11ನೇ ಮತ್ತು 12ನೇ ಹಣಕಾಸಿನ ಆಯೋಗ ರಾಜ್ಯಸರ್ಕಾರಕ್ಕೆ ಕೆಲವು ಆರ್ಥಿಕ ಸೌಲಭ್ಯಗಳನ್ನು ಒದಗಿಸಿಕೊಡುತ್ತೇವೆ ಮತ್ತು ಫಿಸ್‌ಕಲ್ ಇನ್‌ಸೆಂಟಿವ್ಸ್ ಕೊಡುತ್ತೇವೆ ಎನ್ನತಕ್ಕಂಥದನ್ನು ಹೇಳಿದ್ದರು. ಈ ಒಂದು ಕಾರಣದಿಂದ ಕರ್ನಾಟಕಕ್ಕೆ 324 ಮತ್ತು 307 ಕೋಟಿ ಅಂದರೆ 631 ಕೋಟಿ ರೂಪಾಯಿ ಇವತ್ತು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಫಿಸ್‌ಕಲ್ ಇನ್‌ಸೆಂಟಿವ್ ಸಿಕ್ಕಿದೆ. It is because of the better management of the debt. ರೆವಿನ್ಯೂ ಡಿಫಿಸಿಟ್‌ನ್ನು ಎಲಮನೇಟ್ ಮಾಡಿದ್ದಕ್ಕೆ ಮತ್ತು ಆಫ್ ಬಜೆಟ್ ಬಾರೊಯಿಂಗ್‌ನ್ನು ಬಹಳ ಕಡಿಮೆ ಮಾಡಿದ್ದಕ್ಕೆ, ಅಂದರೆ ಆಫ್ ಬಜೆಟ್ ಬಾರೊಯಿಂಗ್ ಬಹಳ ಯದ್ವಾತದ್ವ ಹೋಗಿರತಕ್ಕಂಥದ್ದನ್ನು ಕಡಿಮೆ ಸಸ್ಟೈನಬಲ್ ಲೆವಲ್‌ಗೆ ತಂದಿದ್ದಕ್ಕೆ ಮತ್ತು ಡೆಟ್ ಸರ್ವಿಸ್ ಭಾರ ಕಡಿಮೆ ಅದದ್ದಕ್ಕೆ, ಫಿಸ್‌ಕಲ್ ಡಿಫಿಶಿಟ್ 3 ಪರ್ಸೆಂಟ್ ಗಿಂತ ಒಳಗಡೆ ಬಂದಿದ್ದಕ್ಕೆ 600 ಕೋಟಿ ರೂಪಾಯಿಗಿಂತ ಹೆಚ್ಚು ಇನ್‌ಸೆಂಟಿವ್ಸ್ ಇವತ್ತು ಕರ್ನಾಟಕ ಸರ್ಕಾರಕ್ಕೆ ಬಂದಿದೆ. ಇವತ್ತಿನ ದಿವಸ ಇಷ್ಟೆಲ್ಲ ಒಂದು ಒಳ್ಳೆಯ ಆರ್ಥಿಕ ವಾತಾವರಣ ಏನಿದೆ ಇದಕ್ಕೆ ಈ ಸರ್ಕಾರ ಕ್ರೆಡಿಟ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. This credit will not go to this Government, because this Government came to power only 45 days back. For this prudent Fiscal Management is the reason. This coalition government is not entitled for any credit. Credit goes to the previous Government. ಇದಕ್ಕೆ ಸಂಬಂಧಪಟ್ಟಂತೆ ನನ್ನ ಹೆಸರು ಹೇಳಿದರೆ ಅದನ್ನು ನಾನೇ ಹೇಳಿಕೊಂಡ ಹಾಗೆ ಆಗುತ್ತದೆ. ಆದ್ದರಿಂದ ನನ್ನ ಹೆಸರನ್ನು ಹೇಳಿಕೊಳ್ಳುವುದಕ್ಕೆ ಹೋಗುವುದಿಲ್ಲ. ಬೇರೆಯವರು ಈಗಾಗಲೇ ಹೇಳಿದ್ದಾರೆ. ನಾನು ಬೇರೆ ಹೇಳಿದರೆ ಸ್ವಲ್ಪ ಟೀಕೆಗೆ ಒಳಗಾಗಿ ಬಿಡುತ್ತದೆ. ಮತ್ತೆ ಕೆಲವರಿಗೆ ಇಷ್ಟ ಆಗದೇ ಇರಬಹುದು. ಮತ್ತೆ ನನ್ನ ಎಲ್ಲರು ಹೊಗಳುತ್ತಾರೆಂದು ಹೇಳಿದರು. ಈ ರೀತಿಯಾಗಿ ಒಳ್ಳೆಯ ಮಾತು ಹೇಳಿದಾಗ ಅದು ಹೊಗಳಿದ ಹಾಗೆ ಆಗುತ್ತದೆಯೆ? 631 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಈ ರಾಜ್ಯಕ್ಕೆ ಫಿಸ್‌ಕಲ್ ಇನೆಸೆಂಟಿವ್ಸ್ ಸಿಗಬೇಕಾದ ರೀತಿಯಲ್ಲಿ ಮಾಡಿದ್ದಕ್ಕೆ ಅದು ನನ್ನನು ಹೊಗಳಿದ ಹಾಗೆ ಆಗುತ್ತದೆಯೆ? My contribution is there. It is because of Prudent Fiscal Management. It is because of good dept management. ಮತ್ತೆ ತೆರಿಗೆಯನ್ನು ಸರಿಯಾದ ರೀತಿಯಲ್ಲಿ ವಸೂಲ್ಮಾಡಿದ್ದರಿಂದ ಎನ್ನತಕ್ಕಂಥ ಮಾತನ್ನು ಸದಸ್ಯರುಗಳ

ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದಕ್ಕೋಸ್ಕರ ಇಕ್ರಾ ಸಂಸ್ಥೆ ಬಗ್ಗೆ ಬಜೆಟ್‌ನಲ್ಲಿ ಇವರೇ ಹೇಳಿದ್ದಾರೆ. ಇದನ್ನು ನಾನು ಹೇಳಿರತಕ್ಕಂಥದಲ್ಲ ಬಂಡವಾಳ ಹೂಡಿಕೆದಾರರಿಗೆ, ಶ್ರೇಣಿ ಕೊಡತಕ್ಕಂಥ ಮಾಹಿತಿಯನ್ನು ಇಕ್ರಾ ಸಂಸ್ಥೆಯವರು ಕೊಡುತ್ತಾರೆ. ಬಂಡವಾಳ ಹೂಡಿಕೆದಾರರಿಗೆ ಕರ್ನಾಟಕದ ಬಗ್ಗೆ ಮಾಹಿತಿ ಕೊಡುತ್ತಾರೆ. ಅಂದರೆ ಕರ್ನಾಟಕ ರಾಜ್ಯದಲ್ಲಿ ಬಂಡವಾಳ ಹೂಡುವುದಕ್ಕೆ ಹದವಾಗಿದೆಯೋ ಅಥವಾ ಇಲ್ಲವೋ ಮತ್ತು ಟ್ಯಾಕ್ಸ್ ಫ್ರೆಂಡ್ಲಿ ಆಗಿದೆಯೋ ಅಥವಾ ಇಲ್ಲವೋ ಮತ್ತೆ ಇಲ್ಲಿ ಲಾ ಅಂಡ್ ಆರ್ಡ್‌ರ್ ಚೆನ್ನಾಗಿದೆಯೋ ಅಥವಾ ಇಲ್ಲವೋ ಮತ್ತು ಇಲ್ಲಿ ಎಲ್ಲಾ ರೀತಿಯ ವಾತವರಣ ನಿರ್ಮಾಣ ಆಗಿದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದನ್ನ ನೋಡುವುದರ ಜೊತೆಗೆ, ನಮ್ಮ ಫಿಸ್‌ಕಲ್ ಡಿಫಿಯಿಟ್ ಯಾವ ರೀತಿಯಾಗಿ ಎಂಬುದನ್ನು ಮತ್ತು ಟ್ಯಾಕ್ಸ್ ಸ್ಟ್ರಕ್ಚರ್ ಯಾವ ರೀತಿಯಾಗಿದೆ ಎಂದು ಮತ್ತು ರೆವಿನ್ಯೂ ಡಿಫಿಶಿಟ್ ಯಾವರೀತಿಯಾಗಿದೆ ಎಂಬುದರ ಬಗ್ಗೆ, ರೆವಿನ್ಯೂ ಡೆಫಿಸಿಟ್ ಹೇಗೆ ಇದೆ Taking all these facts into consideration, ಇಕ್ರೋದವರು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಅವರು ಏನು ಹೇಳಿದ್ದಾರೆಂದರೆ ಕರ್ನಾಟಕ ಅತ್ಯುನ್ನತ ಶ್ರೇಣಿಯಲ್ಲಿದೆ, ಎಂದು ಹೇಳಿದ್ದಾರೆ. ಕರ್ನಾಟಕ ಸ್ಟ್ಯಾಂಡ್ಸ್ ನಂ :1. ಭಾರತದ ಯಾವ ರಾಜ್ಯಗಳಿಗೂ ಕೊಟ್ಟಿಲ್ಲ. AAA ಇದು ಕರ್ನಾಟಕ್ಕೆ ಮಾತ್ರ ಕೊಟ್ಟಿರುವುದು. ಇಂತಹ ಪರಿಸ್ಥಿತಿಯಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಯಾಗಿರುವುದು. 2135 ಕೋಟಿ ರೂಪಾಯಿಗಳು ಫಿಸಿಕಲ್ ಡೆಫಾಸಿಟ್ ಇದ್ದಾಗ ಬಂದಿರುವುದಲ್ಲ. 2135 ಕೋಟಿ ರೂಪಾಯಿಗಳು ಪಿಸಿಕಲ್ ಡೆಫಾಸಿಟ್‌ನ್ನು ಬೆನ್ನು ಮೇಲೆ ಹೊತ್ತುಕೊಂಡು ಬಂದಿರುವುದಲ್ಲ. 854 ಕೋಟಿ ರೂಪಾಯಿಗಳು ಸರ್‌ಪ್ಲೆಸ್‌ನ್ನು ಇಟ್ಟುಕೊಂಡು ಬಂದಿರುವುದು. ಇವೆಲ್ಲಾ ಯಾಕೇ ಇಕ್ರಾದವರು ಕೊಟ್ಟಿದ್ದಾರೆ. ಇವತ್ತು 3 ಪರ್ಸೆಂಟ್ ಏತಕ್ಕೆ ಕಡಿಮೆಯಾಯಿತು? ಇದು ಹೇಗೆ ಸಾಧ್ಯವಾಯಿತು? ಸಾಲವೆಲ್ಲಾ ಕಡಿಮೆ ಮಾಡಿಕೊಳ್ಳುವುದಕ್ಕೆ ಹೇಗೆ ಸಾಧ್ಯವಾಯಿತು? ಇವತ್ತು ಕರ್ನಾಟಕದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಇವತ್ತು ತೆರಿಗೆ ಖೋತಾ ಆಗಿದೆ. 2004–05ನೇ ಸಾಲಿನಲ್ಲಿ ನಿಮಗೆ ಸುಮ್ಮನೆ ಪರ್ಸೆಂಟೇಜಿವೈಸ್ ನೋಡಿದಾಗ ಟಾರ್ಗೆಟ್‌ಗಿಂತ 2004–05 ರಲ್ಲಿ ಕಮರ್ಷಿಯಲ್ ಟ್ಯಾಕ್ಸ್ 110 ಪರ್ಸೆಂಟ್ 2004–05, ಇದು ಕಳೆದ ವರ್ಷದ್ದು. ನಾವು ಎಷ್ಟು ಗುರಿಯನ್ನು ಇಟ್ಟುಕೊಂಡಿದ್ದೆವೋ ಆ ಗುರಿಗಿಂತ ಮೀರಿ 110 ಪರ್ಸೆಂಟ್ ಹೋಗಿದೆ. ಹಾಗೆಯೇ ಸ್ಟೇಟ್ ಎಕ್ಸೈಸ್. ಇದು ಕೂಡ, it has gone up to 107% 2004–05ರಲ್ಲಿ 107 ಪರ್ಸೆಟ್ ಬರೀ ಟಾರ್ಗೆಟ್‌ನ್ನು ರೀಚ್ ಆಗುವುದು ನಮಗೆ ಹಿಂದಿನ ವರ್ಷಗಳಲ್ಲಿ ಕಷ್ಟವಾಗುತ್ತಿತ್ತು. ನಾವು ಎಷ್ಟು ಎಷ್ಟು ಎಕ್ಸ್‌ಪೆಕ್ಟೆಡ್ ರೆಸೀಪ್ಟ್ ಇಟ್ಟಕೊಂಡಿದ್ದೇವು ರೆವಿನ್ಯೂ ರೆಸಿಟ್‌ನ್ನು ಆ ರೆವಿನ್ಯೂ ರೆಸಿಟ್‌ಗಳು ಈಗ ತೆಗೆದುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಇದು ಬಹಳ ಬಿಗಿಯಾಗಿ ತೆರಿಗೆಯನ್ನು ವಸೂಲು ಮಾಡಿರುವುದರಿಂದ ಸಾಧ್ಯವಾಯಿತು. ಹಾಗೆಯೇ ಮೋಟಾರು ವೆಹಿಕಲ್ಸ್ ಟ್ಯಾಕ್ಸ್ 110 ಪರ್ಸಟ್ ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್ 118 ಪರ್ಸೆಂಟ್ ತಲುಪಲು ಸಾಧ್ಯವಾಯಿತು ಅಫ್‌ಕೋರ್ಸ್ ಇದು ಭೂಮಿ ಬೆಲೆ ಜಾಸ್ತಿಯಾಯಿತು. ರಿಯಲ್ ಎಸ್ಟೇಟ್ ಬೆಲೆ ಜಾಸ್ತಿಯಾಯಿತು, ಅದಕ್ಕೆ ಅನುಗುಣವಾಗಿ ನಾವು ರಿವಿಷನ್ ಅಫ್ ಲ್ಯಾಂಡ್ ವ್ಯಾಲ್ಯು ಎಲ್ಲವನ್ನು ಮಾಡಿದೆವು.

ಶ್ರೀ ಬಸವರಾಜರಾಯರೆಡ್ಡಿ : ಇನ್‌ವೆಸ್ಟರ್ ಜಾಸ್ತಿ ಬಂದರು, ಇದರಿಂದ ಭೂಮಿಯ ಖರೀದಿಯೂ ಜಾಸ್ತಿಯಾಯಿತು.

ಶ್ರೀ ಸಿದ್ದರಾಮಯ್ಯ : ನಾನು ಯಾವ ಕಾರಣಕ್ಕೆ ಬಂತು ಎಂದು ಹೇಳುವುದಕ್ಕೆ ಹೋಗಲಿಲ್ಲ. ಭೂಮಿ ಬೆಲೆ ಜಾಸ್ತಿಯಾಯಿತು ಅದು ಒಂದು ಕಾರಣ ಎಂದು ಇಟ್ಟುಕೊಳ್ಳೋಣ. ಈಗ ಏನು ಕಡಿಮೆಯಾಗಿಲ್ಲ. ಈಗಲೂ ಕೂಡ ಭೂಮಿ ಬೆಲೆ ಜಾಸ್ತಿಯಾಗಿದೆ. It has gone up to 118% ನಿಮಗೆ ಒಟ್ಟಾರೆ ಫಿಗರ್‌ಗಳನ್ನು ಹೇಳಬೇಕೆಂದರೆ. ಒಟ್ಟು ಎಷ್ಟು ಕೋಟಿ ರೂಪಾಯಿಗಳು 2003–04ರಲ್ಲಿ ರೆವಿನ್ಯೂ ರೆಸಿಟ್‌ನಲ್ಲಿ ಹೆಚ್ಚಾಯಿತು. The total revenue receipt was Rs. 20,760 crore. ಅಂದರೆ 20,760 ಕೋಟಿ ರೂಪಾಯಿಗಳು. To-day in the current financial year, it is nearly Rs. 30,000 crore. ಎರಡು ಆರ್ಥಿಕ ವರ್ಷದಲ್ಲಿ ಬರೀ ರೆವಿನ್ಯೂ ರೆಸಿಟ್ ಒಂದರಲ್ಲಿಯೇ ರಾಜಸ್ವ ಅಸ್ತಿತ್ವಕ್ಕೆ ಎಂದು ನಾವು ಕನ್ನಡದಲ್ಲಿ ಹೇಳುತ್ತೇವೆಲ್ಲಾ ಆಯವ್ಯಯ, ಪುಸ್ತಕದಲ್ಲಿ ಬರೆಯುತ್ತೇವಲ್ಲಾ ರೆವಿನ್ಯೂ ರೆಷಿಟ್ ಇದು ಒಂದರಲ್ಲಿಯೇ more than Rs. 9,000 crore. ಅಫ್‌ಕೋರ್ಸ್ ಇದರಲ್ಲಿ ಸ್ವಲ್ಪಸ್ವಲ್ಪ ಎಲ್ಲಾ ಇಡುತ್ತಿದ್ದೇವೆ. ನಾನ್ ಟ್ಯಾಕ್ಸ್ ರೆವಿನ್ಯೂನಲ್ಲಿ ಸ್ವಲ್ಪ ಹೆಚ್ಚಾಗಿದೆ. ಹಾಗಾಗಿ ರಿಸೋರ್ಸ್ ಫ್ರಮದಿ ಸೆಂಟರ್ ಸ್ವಲ್ಪ ಹೆಚ್ಚಾಗಿದೆ. ರೆವ್ಯೂಲ್ಯೂಷನ್‌ನಲ್ಲಿ ಸ್ವಲ್ಪ ಹೆಚ್ಚಾಗಿದೆ. But, taking State's own tax revenues into consideration, ನಮ್ಮ ರಾಜ್ಯದ ತೆರಿಗೆಗಳನ್ನೆ ತೆಗೆದುಕೊಂಡರು ಕೂಡ 2003–04 ರಲ್ಲಿ 12570 ಕೋಟಿ ರೂಪಾಯಿಗಳು, ಈ ವರ್ಷ ರಿವೈಸ್ಡ ಎಸ್ಟಿಮೇಟ್ ಇದು ಅಕೌಂಟ್ಸ್ ಫಿಗರ್ ಅಲ್ಲ ಅದು ಅಕೌಂಟ್ಸ್ ಫಿಗರ್. 2003–04 ಅದು ಅಕೌಂಟ್ಸ್ ಫಿಗರ್. 2004–05 ಅಕೌಂಟ್ಸ್ ಫಿಗರ್. 2005–06 ಇನ್ನು, ಅಕೌಂಟ್ಸ್ ಫಿಗರ್ ಬಂದಿಲ್ಲ. It is only revised estimate. It may go beyond the figures mentioned here or less than the figures mentioned here also. Normally, it goes beyond the figures mentioned here. ರಿವೈಸ್ಡ್ ಎಸ್ಟಿಮೇಟ್ ಅದಕ್ಕಿಂತ ಜಾಸ್ತಿ ಹೋಗಿರುತ್ತದೆ. ನಮ್ಮ ಸ್ಟೇಟರ್ ರಾಜ್ಯದ ತೆರಿಗೆ 2003–04ರಲ್ಲಿ 12570 ಕೋಟಿ ರೂಪಾಯಿಗಳು. ಟು ಡೇ ರಿವೈಸ್ಡ್ ಎಸ್ಟಿಮೇಟ್ 19504 ಕೋಟಿ ರೂಪಾಯಿಗಳು ಅಂದರೆ ನಮ್ಮ ರಾಜ್ಯದ ತೆರಿಗೆಯೇ 7 ಸಾವಿರ ಕೋಟಿ ರೂಪಾಯಿಗಳಷ್ಟು ಹೆಚ್ಚಾಯಿತು. ಇದು ಇವತ್ತು ಬಹಳ ಮುಖ್ಯವಾದಂತಹ ಕಾರಣ. ಇವತ್ತು ಆರ್ಥಿಕ ಪರಿಸ್ಥಿತಿ ಇವತ್ತು ಚೆನ್ನಾಗಿ ಆಗಿದ್ದರೆ, ರೊಬೊಸ್ತಾಗಿದ್ದರೆ ಇವತ್ತು ಮಾನ್ಯ ಯಡಿಯೂರಪ್ಪನವರಿಗೆ ಜೇಬಿನ ತುಂಬ ಖರ್ಚು ಮಾಡುವುದಕ್ಕೆ ದುಡ್ಡು ಸಿಕ್ಕಿದ್ದರೆ this is responsible. ಇದು ಕಾರಣ. ಹಿಂದೆ 2135 ಕೋಟಿ ರೂಪಾಯಿಗಳು ಇತ್ತಲ್ಲ. ತೆರಿಗೆ ಹಿಂದೆಯೂ ಅದೇನೆ. ಹಿಂದೆ ಮಾಡಿರುವುದೇ 3 ರೂಪಾಯಿ ಅಕ್ಕಿಯನ್ನು ಕೊಟ್ಟಿರುವುದು ನಾವೇ ಮಾನ್ಯ ರೇವಣ್ಣನವರೇ ತಾವು ಇದ್ದಿರಲ್ಲಿರಿ, 6 ರೂ ಬಡ್ಡಿ ಸಾಲ ಕೊಡಬೇಕೆಂದು ಮಾಡಿರುವುದು ನಾವೇ 49 ಕೋಟಿ ರೂಪಾಯಿಗಳು ರೈತರು ಲಾಂಗ್ ಟರ್ಮ್ ಸಾಲವನ್ನು ತೆಗೆದುಕೊಂಡಿದ್ದರೆ ಅದನ್ನು ತೀರಿಸಿದವರು ನಾವೆಯೇ, ಹಿಂದಿನ ಸರ್ಕಾರದವರು ಬಿಟ್ಟುಹೋಗಿರುವಂತಹ ರೈತರಿಗೆ ಕೊಡಬೇಕಾಗಿರುವಂತಹ ಬಾಕಿಯನ್ನು ತೀರಿಸಿದವರು ನಾವೇ,

ಅನ್‌ಲೈನ್ ಲಾಟರಿಯನ್ನು ರದ್ದು ಮಾಡಿರುವುದು ನಾವೇ, ಇದಕ್ಕೆ 282 ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ನಾವೇ, 450 ಕೋಟಿ ರೂಪಾಯಿಗಳು ಸುಸ್ತಿ ಬಡ್ಡಿ ಮನ್ನಾ ಮಾಡುವ ಬಗ್ಗೆ ಕೊಟ್ಟಿದ್ದರೆ ಅದನ್ನು ಇಟ್ಟಿದ್ದರೆ ಮತ್ತು ಈಗ ಸಪ್ಲಿಮೆಂಟರಿ ಎಸ್ಟಿಮೇಟ್‌ನಲ್ಲಿ 400 ಕೋಟಿ ರೂಪಾಯಿಗಳು ಇವತ್ತು ಏನು ಕೊಡುತ್ತಿದ್ದೀರಲ್ಲಾ. ಇವತ್ತು ಅದಕ್ಕೆ ಒಪ್ಪಿಗೆಯನ್ನು ತೆಗೆದುಕೊಳ್ಳುತ್ತಿದ್ದಿರಲ್ಲಾ, ಒಪ್ಪಿಗೆಗಾಗಿ ಸದನದ ಮುಂದೆ ಮಂಡಿಸಿದ್ದಾರಲ್ಲಾ, ಆ 400 ಕೋಟಿ ರೂಪಾಯಿಗಳು ಈ ವರ್ಷದ್ದೇ ದುಡ್ಡು. ಅದು ಮುಂದಿನ ವರ್ಷದ್ದು ಅಲ್ಲ. ಅದು ಮುಂದಿನ ವರ್ಷ ತೆರಿಗೆಯನ್ನು ವಸೂಲು ಮಾಡುವುದಲ್ಲ. ನಾನು ಹೇಳಲಾ ಈಗ (ಮಾನ್ಯ ರೇವಣ್ಣನವರನ್ನು ಉದ್ದೇಶಿಸಿ) ನಾನು ಹಣಕಾಸಿನ ಮಂತ್ರಿ ಯಾಗಿರುವಾಗ ಒಂದು ವರ್ಷಕ್ಕೆ ೭–೮ ಎಲ್‌ಓಸಿಯನ್ನು ಪಿಡಬ್ಲ್ಯೂಡಿ ಇಲಾಖೆಗೆ ಕೊಟ್ಟಿದ್ದೇನೆ. ಆಮೇಲೆ ನಾನು ಇದ್ದೇನಾ?

ಶ್ರೀ ಅರಗ ಜ್ಞಾನೇಂದ್ರ : ಸಿದ್ದರಾಮಯ್ಯನವರೆ MIDBದ್ದು ಮೈನರ್ ಇರಿಗೇಷನ್‌ದು ಮೇಜರ್ ಇರಿಗೇಷನ್‌ದು, ಪಿಡಬ್ಲ್ಯೂಡಿದು ಎಲ್ಲಾ ಬಿಲ್ಲುಗಳು ಪೆಂಡಿಂಗ್ ಇದೆ. ಇಷ್ಟು ಎಕ್ಸ್‌ಸ್ ಇದ್ದರೆ ಅವರಿಗೆಲ್ಲಾ ಕೊಟ್ಟು ಋಣವನ್ನು ತೀರಿಸಿಕೊಳ್ಳಬಹುದಾಗಿತ್ತು. ಸಣ್ಣ ಕೈಗಾರಿಕೆಗೆ ಸಬ್ಸಿಡಿ.

ಶ್ರೀ ಸಿದ್ದರಾಮಯ್ಯ : ಅವೆಲ್ಲಾ ಇರುವುದಕ್ಕೆ ಈ ಸಾಲ ಹಾಫ್ ಬಜೆಟ್ ಬಾರೋಯಿಂಗ್ ತೆಗೆದುಕೊಳ್ಳುತ್ತಿದ್ದಿರಲ್ಲಾ. ಅದಕ್ಕೆ ಕೊಡಬೇಕೋ ಬೇಡವೋ? ಕೇಂದ್ರಸರ್ಕಾರದವರು ಹೇಳಿದ್ದರು. ನೀವು ಮಾಡಿಕೊಳ್ಳಿ Debt-swapping ಸ್ಕೀಮ್ ಜಾಸ್ತಿ ಬಡ್ಡಿ ಇರುವಂತಹ ಸಾಲಗಳು, ಹೈಕಾಸ್ಟ್ ಲೋನ್ ಇದೆಯಲ್ಲಾ, ಕಡಿಮೆ ರೇಟ್ ಇಂಟರೆಸ್ಟ್ ಕಡಿಮೆ, ಬ್ಯಾಂಕ್‌ಗಳಲ್ಲಿ ರೇಟ್ ಆಫ್ ಇಂಟರೆಸ್ಟ್ ಕಡಿಮೆ, ಅದನ್ನೆಲ್ಲಾ ಕಡಿಮೆ ಮಡದೆ ಹೋಗಿದ್ದರೆ. ಇವತ್ತು ಇದನ್ನೇ ಕೊಡುತ್ತಾ ಕುಳಿತುಕೊಂಡಿದ್ದರೆ ಹಾಗೆಂದು ನಾವು ಯಾವುದೇ ಇಲಾಖೆಗೆ ಕೊಡದೆಯೇ ಎಲ್ಲಾ ಇದೆ ಕೆಲಸ ಮಾಡಿಕೊಂಡು ಅಂದರೆ ಉಳಿಸುವುದೇ ಒಂದು ಕೆಲಸ ಮಾಡಿದೆವೆಂದು ನಾವು ಹೇಳಲಿಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ. ಪಿಡಬ್ಲ್ಯೂಡಿಗೂ ದುಡ್ಡು ಕೊಟ್ಟಿದ್ದೇವೆ. ಈ ವರ್ಷ ಬಜೆಟ್‌ನಲ್ಲಿ ೨೦೦೫–೦೬ನೇ ಸಾಲಿನಲ್ಲಿ ನೀರಾವರಿಗೆ ಎಷ್ಟು ಇದೆ ಪ್ಲಾನ್‌ನಲ್ಲಿ? 2005–06ನೇ ಸಾಲಿನಲ್ಲಿ 3942 ಕೋಟಿ ರೂಪಾಯಿಗಳು ಇದೆ. ಈ ವರ್ಷ ಯಡಿಯೂರಪ್ಪನವರು ಬಳಸಿರುವ ಬಜೆಟ್ಟಿನಲ್ಲಿ 4,280/– ಕೋಟಿ ರೂಪಾಯಿಗಳು. ಪ್ಲಾನ್ ನಾನು ಮಂಡಿಸಿದಾಗ ಈ ವರ್ಷ 13,555/– ಕೋಟಿ ರೂಪಾಯಿಗಳು. ಅವರು ಪ್ಲಾನ್ ಮಂಡಿಸುವಾಗ 16,166/– ಕೋಟಿ ರೂಪಾಯಿಗಳು, ಇದು ಪ್ರಪೋರ್ಷನೇಟ್ ಇದೆಯೇ? ಈ ಪ್ಲಾನ್ ಸೈಜ್ ದೊಡ್ಡದಾಯಿತಲ್ಲ. ಈಗ 16,166/– ಕೋಟಿ ರೂಪಾಯಿಗಳು ಆಯಿತಲ್ಲಾ, ಕೊಟ್ಟಿರುವುದು ನಾನೇನಲ್ಲ.

ಶ್ರೀ ಕೃಷ್ಣ ಸಿ.ಬೈರೇಗೌಡ : ಹೋದ ವರ್ಷದ 29%, ಈ ವರ್ಷದಲ್ಲಿ 26% ಇದೆ.

ಶ್ರೀ ಸಿದ್ದರಾಮಯ್ಯ : ಅದನ್ನೇ ಹೇಳುತ್ತಿದ್ದೇನೆ ಕೃಷ್ಣೇಗೌಡರೇ, ಇಲ್ಲ, ಹೋದವರ್ಷ ಪ್ರಪೋರ್ಷನೇಟ್ ಆಗಿ ನೀರಾವರಿ ಮತ್ತು ಪ್ರವಾಹ ನಿಯಂತ್ರಣ ಈ ವರ್ಷ 4,280/– ಕೋಟಿ ರೂಪಾಯಿಗಳು, ಅದು ಟೋಟಲ್ ಪ್ಲಾನ್‌ನಲ್ಲಿ 26.48 %. ಈ ವರ್ಷದ ಬಜೆಟ್ಟಿನಲ್ಲಿ ಪ್ರಸ್ತುತ ವರ್ಷ 2005–2006ರಲ್ಲಿ 3,942.41 ಲಕ್ಷ ರೂಪಾಯಿಗಳು, i.e., 29.08% ಹೋದವರ್ಷ ಅಂದರೆ ಈ ವರ್ಷ ಇವೆರಡಕ್ಕೂ ಕಂಪೇರ್ ಮಾಡುವಾಗ ಹೋದವರ್ಷವೆಂದು ಹೇಳಿದೆ ಅಷ್ಟೇ.

ಶ್ರೀ ಮಲ್ಲಿಕಾರ್ಜುನ್ ಖರ್ಗೆ: ಈ ವರ್ಷದ ಬಜೆಟ್ ಪುಸ್ತಕವನ್ನು ಟೇಬಲ್ ಮೇಲಿಟ್ಟು ನಿಮ್ಮ ಬಜೆಟ್ ಪುಸ್ತಕವನ್ನು ಕೈಯಲ್ಲಿ ಹಿಡಿದು ಈ ವರ್ಷವೆಂದು ಹೇಳುತ್ತಿದ್ದೀರಿ ಎಂದಿರಿ ಅದಕ್ಕೆ ಹೇಳುತ್ತಿದ್ದೇವೆ.

ಶ್ರೀ ಸಿದ್ಧರಾಮಯ್ಯ : ಇಲ್ಲ I will come to that. In the current year's budget..... ಇನ್ನು ಈ ಕರೆಂಟ್ ಇಯರ್ ಮುಗಿದಿಲ್ಲವಲ್ಲ, ಮಾರ್ಚ್ 31 ಕ್ಕೆ ತಾನೇ ಈ ವರ್ಷ ಮುಗಿಯುವುದು, ಆರ್ಥಿಕ ವರ್ಷ ನಾನು ಹೇಳುವುದು. ಈ ವರ್ಷ ಅಂದರೆ ಮಾರ್ಚ್ 31ಕ್ಕೆ ಕೊನೆಯಾಗುವುದು, ಅಂದರೆ 2005–06. ಮುಂದಿನ, ಮುಂದಿನ ವರ್ಷ ಮುಂಗಡ ಪತ್ರ ಅಂದರೆ ಮುಂದಿನ ವರ್ಷಕ್ಕೆ, ಏಪ್ರಿಲ್ 1ನೇ ತಾರೀಕಿನಿಂದ ಮುಂದಕ್ಕೆ ಮಂಡಿಸಿರುವ ಬಜೆಟ್ ಇದು. ಇದರಲ್ಲಿ 4,280/– ಕೋಟಿ ರೂ.ಗಳು 3942/– ಕೋಟಿ ರೂಪಾಯಿಗಳಿಗಿಂತ ಜಾಸ್ತಿಯಾದರೂ ಕೂಡ ಪರ್ಸೆಂಟೇಜ್‌ವೈಸ್ 2005–06ಕ್ಕಿಂತ ಕಡಿಮೆಯಿದೆ, ಇನ್ನೂ 3% ಕಡಿಮೆ ಇದೆ.

ಶ್ರೀ ಎಸ್.ಎಸ್. ಪಾಟೀಲ್ : ಹಿಂದಿನ ಕೃಷ್ಣ ಸರ್ಕಾರದವರು ಎಷ್ಟು ಇಟ್ಟಿದ್ದರು ಎಂದು ಹೇಳಬೇಕು, ಅದಕ್ಕಿಂತ ತಾವು ಕಡಿಮೆ ಮಾಡಿದ್ದೀರಿ. ಅದರ ಬಗ್ಗೆ ಸ್ವಲ್ಪ ಹೇಳಬೇಕು.

ಶ್ರೀ ಸಿದ್ಧರಾಮಯ್ಯ : ಆಯಿತು ನೋಡಿ ಹೇಳುತ್ತೇನೆ, ತಾವು ಕುಳಿತುಕೊಳ್ಳಿ.

ಶ್ರೀ ಕೃಷ್ಣ ಸಿ. ಬೈರೇಗೌಡ : ನಿನ್ನೆ ಖರ್ಗೆ ಸಾಹೇಬರು ಹೇಳಿದ ಹಾಗೆ 31% ಇತ್ತು, ಹಿಂದೆ ಎಸ್.ಎಂ.ಕೃಷ್ಣ ಅವರು ಮಂಡಿಸಿದ ಬಜೆಟ್‌ನ ಪ್ಲಾನ್ ಸೈಜ್ ಕಡಿಮೆ ಇತ್ತು.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನು ಇವರು ಇವತ್ತು ಮತ್ತೆ ತರಬೇಕಾಗಿತ್ತು. ಕೃಷ್ಣ ಸರ್ಕಾರದವರು ರೈತರ ಪರವಾಗಿ 31% ಇಟ್ಟಿದ್ದರಲ್ಲ, ಅದನ್ನು ಇವರು ಮತ್ತೆ ತರಬೇಕಾಗಿತ್ತು.

ಶ್ರಿ ಸಿದ್ಧರಾಮಯ್ಯ : ಇರಬಹುದು ನಾನು ಅದನ್ನು ನೋಡಿಲ್ಲ, ಆ ಪುಸ್ತಕವನ್ನು ನಾನು ತಂದಿಲ್ಲ, ಆಯಿತು, ಇಲ್ಲೇನಾದರೂ ಇದ್ದರೆ ಹುಡುಕಿ ಹೇಳುತ್ತೇನೆ, ಅದಿರಲಿ, ನಾನು ಕೃಷ್ಣ ಅವರ ಸರ್ಕಾರದ ಬಗ್ಗೆ ಮಾತನಾಡಲಿಕ್ಕೆ ಇನ್ನೂ ಹೋಗಿಲ್ಲ, ಈ ಸರ್ಕಾರದ ಬಗ್ಗೆ ಏನು ಮಾತನಾಡಲಿಕ್ಕೆ ಇದೆ, 45 ದಿವಸಗಳಷ್ಟೇ ಆಗಿದೆ, ಇದರ ಅಭಿವೃದ್ಧಿ ಬಗ್ಗೆ ಏನು ಹೇಳಬೇಕು. ಮುಂದಿನ ವರ್ಷಕ್ಕೆ ನಿಮಗೆ ಸರ್ಟಿಫಿಕೇಟ್ ಕೊಡುತ್ತೇವೆ, ಒಂದು ವರ್ಷವಾದ ಮೇಲೆ ನೀವು ಫೈನಾನ್ಷಿಯಲ್ ಮ್ಯಾನೇಜ್ಮೆಂಟ್ ಹೇಗೆ ಮಾಡುತ್ತೀರಿ? ನೀವು ಕೊಟ್ಟಿರುವ ಪ್ಲಾನ್ ಸೈಜ್ ಅನ್ನು ಹೇಗೆ ಅಚೀವ್ ಮಾಡುತ್ತೀರಿ? ನೀವು ಕೊಟ್ಟಿರತಕ್ಕಂಥ ಎಲ್ಲಾ ಪ್ರೋಗ್ರಾಮ್‌ಗಳನ್ನು 100% ಅಚೀವ್ ಮಾಡುವಿರೊ, ಇಲ್ಲವೋ? ನೀವು ನೀಡಿರುವ resources, targets ಎಲ್ಲಾ ರೀಚ್ ಆಗುತ್ತದೆಯೋ ಇಲ್ಲವೋ, ಇದೆಲ್ಲಾ ಆದಮೇಲೆ ಸತ್ಯವಾಗಿ ನೀವು ಮುಂದಿನ ವರ್ಷದವರೆಗೆ ಇದ್ದರೆ ಆ ಪುಸ್ತಕವನ್ನು ನೋಡಿಕೊಂಡೇ ಫ್ಯಾಕ್ಟ್ಸ್ ಆಂಡ್ ಫಿಗರ್ಸ್ ಮೇಲೆ ನಿಮಗೆ ಏನು ಕೊಡಬೇಕು ಎಂದು ನಾವು ಹೇಳುತ್ತೇವೆ.

ಶ್ರೀ ಡಿ.ಹೆಚ್. ಶಂಕರಮೂರ್ತಿ : ಇದ್ದರೆ ಎಂದು ಏಕೆ? ಅನುಮಾನ ಏಕೆ? ನೀವು ನಮಗೆ ಶುಭವನ್ನು ಕೋರಬೇಕು.

ಶ್ರಿ ಸಿದ್ಧರಾಮಯ್ಯ : ಶುಭವನ್ನು ಕೋರುತ್ತೇನೆ, ಕೆಟ್ಟದನ್ನು ಬಯಸಲಿಕ್ಕೆ ಹೋಗುವುದಿಲ್ಲ. ಶುಭವನ್ನು ಕೋರುತ್ತೇವೆ. I wish you all the best. ಆಗಬಹುದೇ, what more you require? I wish you all the best, ಆದುದರಿಂದ ನಾನು ಸುಮ್ಮನೆ ಉದಾಹರಣೆಗೆ

ಹೇಳಿದ್ದು, ಹಾಗೆಯೇ ಅಗ್ರಿಕಲ್ಚರಲ್‌ನಲ್ಲಿಯೂ ಕಡಿಮೆಯಾಗಿದೆ, ರೂರಲ್ ಡೆವಲಪ್ಮೆಂಟ್ ಕಡಿಮೆಯಾಗಿದೆ, ಹಾಗೆಯೇ ಎನರ್ಜಿಯಲ್ಲಿ, ಹೆಲ್ತ್‌ನಲ್ಲಿ ಕೂಡ ಕಡಿಮೆಯಾಗಿದೆ. ನೋಡಿ, ನೀವು 5% Inflation ಇದೆ, 5% Inflation + budget size has been, compared to this year, ದೊಡ್ಡದಾಯಿತು, What is the budget size this year, next year, 16,166 ಕೋಟಿ ರೂಪಾಯಿಗಳು ಅಂದರೆ 25% ಜಾಸ್ತಿಯಾಗಿದೆಯೆಂದು ನೀವೇ ಹೇಳಿದ್ದೀರಿ Then where is the budget allocation to all these important sectors proportonate to that 25% That is my point.

ಶ್ರೀ ಬಿ.ಶಿವರಾಂ : ಪ್ಲಾನ್ ಸೈಜ್ ಹೇಗೆ ಆಯಿತು ಎಂದು ಹೇಳಬೇಕು.

ಶ್ರೀ ಸಿದ್ಧರಾಮಯ್ಯ : ನಾನು ನಿಮ್ಮ ಪುಸ್ತಕದಲ್ಲಿ ಓದಿ ಹೇಳುತ್ತಿದ್ದೇನೆ, ನಾನು ಹೇಳುವುದು ಸುಳ್ಳಲ್ಲ. ನೋಡಿ, ಏಕೆಂದರೆ ಯಡಿಯೂರಪ್ಪನವರು ಅವರ ಭಾಷಣದಲ್ಲಿ ಹೇಳಿದ್ದಾರೆ., ಈ ವರ್ಷಕ್ಕಿಂತ ಮುಂದಿನ ವರ್ಷಕ್ಕೆ ನೀರಾವರಿಗೆ 44% ಹೆಚ್ಚಿಗೆ ಮಾಡಿದ್ದೇವೆ,Where is it? ಆಯಿತು, ನೀವೇ ಹೇಳಿ,ಉತ್ತರ ಕೊಡುವಾಗ ಯಡಿಯೂರಪ್ಪನವರೇ ಹೇಳಿ.

ಡಾ : ವಿ.ಎಸ್. ಆಚಾರ್ಯ : ಈ ಬಗ್ಗೆ ಒಂದು ಉತ್ತರವನ್ನು ಕೊಡಬಯಸುತ್ತೇನೆ.

ಶ್ರೀ ಸಿದ್ಧರಾಮಯ್ಯ : ಅದು ನನಗೂ ಗೊತ್ತಾಗಿದೆ, ನಾನೇ ಹೇಳುತ್ತೇನೆ, ಕುಳಿತುಕೊಳ್ಳಿ ಸ್ವಾಮಿ, ಡಾ : ಆಚಾರ್ಯರೇ, ಯಡಿಯೂರಪ್ಪನವರೇ ನಾನು ಅದನ್ನು ಹೇಳುತ್ತೇನೆ, I have read it also. ಕುಳಿತುಕೊಳ್ಳಿ ಇವರು ಏನು ಹೇಳಿದ್ದಾರೆಂದರೆ,..

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು) : ನಿಮಿಷ ಯೀಲ್ಡ್ ಆಗಿ, ನಾನು ಬಹಳ ಸ್ಪಷ್ಟವಾಗಿ ನನ್ನ ಆಯವ್ಯಯದಲ್ಲಿ ವರ್ಷಕ್ಕೆ ಆಕ್ಚುಯಲ್ ಕಾಮಗಾರಿಗಳಿಗೆ ಏನೇನು ಹಣ ಕೊಟ್ಟಿದ್ದೇನೆಂಬ ಬಗ್ಗೆ ಪ್ರತ್ಯೇಕವಾಗಿ ನೀಡಿದ್ದೇನೆ. ಹೋದ ವರ್ಷ ಏನು ಕೊಟ್ಟಿದ್ದೆವು, ಈ ವರ್ಷ ಏನು ಕೊಟ್ಟಿದ್ದೇವೆ, ಅದರಲ್ಲಿ 44% ಏರಿಕೆಯಾಗಿದೆ, ಹೌದೋ ಅಲ್ಲವೋ ಎನ್ನುವುದನ್ನು ಅಂಕಿಅಂಶಗಳನ್ನು ನೋಡಿ ಹೇಳಿ. ನಾವೇನು ಬಡ್ಡಿ, ಸಾಲ ಮರುಪಾವತಿ ಮಾಡಿದ್ದೇವೆ ಅದನ್ನು ಬಿಟ್ಟು ಅದೇ ಅಕ್ಚುಯಲ್ ಫಿಗರ್ಸ್ ಅನ್ನು ತೆಗದುಕೊಂಡು ಕಾಮಗಾರಿಗೆ ಏನು ಹಣ ಬಿಡುಗಡೆಯಾಗಿದೆ, ಹೋದ ಸಾರಿ ಬಿಡುಗಡೆಯಾಗಿರುವುದಕ್ಕೂ 44% ಜಾಸ್ತಿಯಾಗಿದೆ ಎನ್ನುವುದನ್ನು ವಿಧಾನಪರಿಷತ್ತಿನಲ್ಲಿ ಕ್ಲಾರಿಫಿಕೇಷನ್ ಕೇಳಿ ಅಲ್ಲಿ ಸಾಕಷ್ಟು ಚರ್ಚೆಗಳಾಗಿ ಅದಕ್ಕೆ ಉತ್ತರ ಕೊಡುವಂತಹ ಪ್ರಯತ್ನವನ್ನು ನಾನು ಎರಡೂ ಮನೆಗಳಲ್ಲಿ ಮಾಡಿದ್ದೇನೆ. ಅಲ್ಲಿ ಪ್ರಿವಿಲೇಜ್ ಮೂವ್ ಮಾಡುವವರೆಗೆ ಹೋದರು. ಎಲ್ಲಾ ವಿವರಗಳನ್ನು ನಾನು ಕೊಟ್ಟಿದ್ದೇನೆ. ನೀವ್ಯಾಕೆ ಅದನ್ನು ಒಪ್ಪಿಕೊಳ್ಳಬಾರದು.

ಶ್ರೀ ಸಿದ್ಧರಾಮಯ್ಯ : I am not going to move any privilege, it is not my intention at all, ನಾನೇನು ಹೇಳುತ್ತಿದ್ದೇನೆ ಅಂದರೆ, ಹಾಗಾದರೆ ಈ ಬಜೆಟ್ ಪುಸ್ತಕದಲ್ಲಿ ಈ ಚಿತ್ರಗಳನ್ನು ಏಕೆ ಕೊಟ್ಟಿದ್ದೀರಿ? ಇವೆಲ್ಲಾ ಹಾಕಿದ್ದೀರಿ, ನೀವೇ ಪ್ಲಾನ್‌ನಲ್ಲಿ ಎಷ್ಟೆಷ್ಟು ಅಲೋಕೇಷನ್ sectoral allocation ಎಂದು ಇಲ್ಲಿ ನೀವೇ ಹೇಳಿರುವುದು ಅಲ್ಲವೇ ಯಡಿಯೂರಪ್ಪನವರೇ? ನಾನು ಹೇಳಿರುವುದೇ ಇದು? sectoral allocation 2006–07ಕ್ಕೆ 4280 ಕೋಟಿ ರೂಪಾಯಿಗಳು ಎಂದು ಇಲ್ಲಿ ಹೇಳಿದ್ದೀರಿ, ಪ್ಲಾನ್‌ನಲ್ಲಿ ಯಾವ್ಯಾವುದಕ್ಕೆ ಎಂದು sectoral allocation ಮಾಡಿದ್ದಿರಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : sectoral allocation ಅಲ್ಲಿ ಪ್ಲಾನ್ ಅಲೋಕೇಷನಲ್ಲಿ ಅದನ್ನು ಹೇಳಿದ್ದೇನೆ, ಸೆಪರೇಟ್ ಆಗಿ ಹೇಳುವಾಗ ವರ್ಕ್ಸ್‌ಗೆ ಏನು ಕೊಟ್ಟಿದ್ದೇವೆಂದು ಅಲ್ಲಿ ಹೇಳಿದ್ದೇನೆ, ಇದಕ್ಕೂ ಅದಕ್ಕೂ ಇರುವ ವ್ಯತ್ಯಾಸವನ್ನು ಹೇಳಿದ್ದೇನೆ.

ಶ್ರೀ ಸಿದ್ಧರಾಮಯ್ಯ : ಹಾಗಾದರೆ ಇದಕ್ಕೂ ಅದಕ್ಕೂ ತಾಳೆಯಿಲ್ಲವೇ? ಆಚಾರ್‌ರವರೇ, ಇವರೇನು ಹೇಳುತ್ತಾರೆಂದರೆ ಈ ವರ್ಷ 2068.00 ಕೋಟಿ ರೂಪಾಯಿಗಳನ್ನು ನಾವು ಕೆಲಸಕ್ಕೆ ಖರ್ಚು ಮಾಡಿದ್ದೇವೆ. ಅದರ ಮೇಲೆ 2,900 ಕೋಟಿ ರೂಪಾಯಿಗಳನ್ನು ಮುಂದಿನ ವರ್ಷಕ್ಕೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಅದೇ ಅಲ್ಲವೇ, ಹೌದು, ಅದಲ್ಲದೇ ಇನ್ನೇನು ಹೇಳುತ್ತೀರಿ? ನೀರಾವರಿಯಲ್ಲಿ ತೆಗೆಯಿರಿ.

ಡಾ: ವಿ ಎಸ್. ಆಚಾರ್ಯ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು): ಪ್ಲಾರ 143 ರಲ್ಲಿ ಎಷ್ಟು ಜಾಗ್ರತೆಯಾಗಿ ಶಬ್ದಗಳನ್ನು ಉಪಯೋಗ ಮಾಡಿದೆ ಎಂದರೆ ಪ್ರತ್ಯಕ್ಷ ನೀರಾವರಿ ಕಾಮಗಾರಿಗಳಿಗೆ 2005–06ರಲ್ಲಿ 2,068/– ಕೋಟಿ ರೂಪಾಯಿಗಳು, ಮುಂದಿನ ವರ್ಷ 2,972/– ಕೋಟಿ ರೂಪಾಯಿಗಳು. ನಮ್ಮ ಗ್ರೌಂಡ್ ಲೆವಲ್‌ನಲ್ಲಿ ನೀರಾವರಿ ಕೆಲಸಗಳಾಗುವಂತದ್ದರಲ್ಲಿ 2,068/– ಕೋಟಿ ರೂಪಾಯಿಗಳ ಬದಲಿಗೆ ಅದನ್ನು ಹೆಚ್ಚಿಸಿ 2,972/– ಕೋಟಿ ರೂಪಾಯಿಗಳನ್ನು ಕೊಟ್ಟಿದೆ, ಶೇಕಡ 44 ರಷ್ಟು ಜಾಸ್ತಿಯಿದೆ, ಇನ್ನು ನೀರಾವರಿಗೋಸ್ಕರ ತೆಗೆದುಕೊಂಡ ಸಾಲವನ್ನು ವಾಪಸ್ಸು ಮಾಡುವುದಕ್ಕೆ ಎಲ್ಲವೂ ಪ್ಲಾನ್ ಅಲೋಕೇಷನ್‌ನಲ್ಲಿ ಸೇರಿರುತ್ತದೆ. ಈಗ ಒಬ್ಬ ಫೈನಾನ್ಸ್ ಮಿನಿಸ್ಟರ್‌ಗೆ ಪ್ರತ್ಯೇಕವಾಗಿ ಎಷ್ಟು ಕೆಲಸ ಗೌಂಡ್‌ಲೆವೆಲ್‌ನಲ್ಲಿ ಆಗುತ್ತದೆ ಅಂತ ಹೇಳುವಂತಹ ಹಕ್ಕು ಇದೆಯೋ ಇಲ್ಲವೋ. ಆ ಹಕ್ಕನ್ನು ಅವರು ಬರೆದಿದ್ದಾರೆ. ಫಾರ್ಮೇಟ್‌ನಲ್ಲಿ ನೀರಾವರಿಗೆ ಅಲೋಕೇಶನ್ ಇಷ್ಟು ಅಂತ ಹೇಳಿ ಅಕ್ಚಯಲ್ ವರ್ಕ್ಸ್‌ಗೆ ಇಷ್ಟು ಆಗುತ್ತದೆ ಅಂತ ಹೇಳಿ ಹೇಳಿದ್ದಾರೆ. 2005–06 ರಲ್ಲಿ 2068 ಕೋಟಿ ನೀರಾವರಿಯಾಗಿದ್ದರೆ ಮುಂದಿನ ವರ್ಷ 2978 ಕೋಟಿ ಒದಗಿಸಿದೇವೆಂದು ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ : ನಾನು ಅದನ್ನು ಒದಿಕೊಂಡಿದ್ದೇನೆ ಡಾಕ್ಟರ್ ಆಚಾರ್ಯರೇ, 143ನೇ ಪ್ಯಾರಾದಲ್ಲಿ 44 ಪರ್ಸೆಂಟ್ ಅಂತ ಹೇಳಿರುವುದು. ಹಾಗಾದರೆ ನೀವು ಈ ವರ್ಷ ಹೆಚ್ಚು ಹಣ ಖರ್ಚು ಮಾಡದೇ ಇದ್ದರೆ ನಾವು ಜವಾಬ್ದಾರರಾಗುವುದಕ್ಕೆ ಆಗುತ್ತದೆಯೆ? ಸದನ ಅದಕ್ಕೆ ಜವಾಬ್ದಾರಿ ಆಗುವುದಕ್ಕೆ ಆಗುತ್ತದೆಯೇ? ಹೋದ ಸಾರಿ 3029 ಕೋಟಿ, 2004–05 ರಲ್ಲಿ 3029 ಕೋಟಿ ಇತ್ತು ನೀರಾವರಿಗೆ That has been increased to 3942 Cross ನೀವು ಈಗ ಏನು ಹೇಳುತ್ತೀರಿ ಖರ್ಚಾಗಿರುವುದೇ ಇಷ್ಟೇ Ic aatnd money spest on works.

ಡಾ: ವಿ.ಎಸ್ ಆಚಾರ್ಯ : ಮಾನ್ಯ ಅಧ್ಯಕ್ಷರೇ, ಅವರ ಯಾವ ಫಿಗರ್‌ನ್ನು ನಾವು ಡಿಸ್‌ಪ್ಯೂಟ್ ಮಾಡಲಿಲ್ಲ. ಖರ್ಚು ಕಡಿಮೆ ಆಗಿದೆ ಅಂತ ಹೇಳಲಿಲ್ಲ...

ಶ್ರೀ ಸಿದ್ಧರಾಮಯ್ಯ : ಅವರು ಆಮೇಲೆ ಹೇಳಲಿ ಮಾನ್ಯ ಅಧ್ಯಕ್ಷರೇ, ನೀವು ಉತ್ತರ ಕೊಡುವಾಗ ಏನೇನು ಹೇಳಬೇಕೋ ಅದನ್ನೆಲ್ಲಾ ಹೇಳಿ. ನನ್ನದೇನೂ ತಕರಾರು ಇಲ್ಲ. ಇದರಲ್ಲಿ ಏನು ಹೇಳಿದ್ದಾರೆ ಅಂದರೆ 2006–07ನೇ ಸಾಲಿನಲ್ಲಿ ಒಟ್ಟು 2972 ಕೋಟಿ ರೂಪಾಯಿಗಳನ್ನು ಒದಗಿಸಲಾಗುತ್ತಿದೆ. 2005–06ನೇ ಸಾಲಿನಲ್ಲಿ ಈ ಮೊತ್ತ 2068 ಇತ್ತು, ಇದರ ಮೇಲೆ 44 ಪರ್ಸೆಂಟ್ ಅಂತ ನೀವು ಹೇಳುವುದು ತಾನೆ? ಇದು ನನಗೆ ಅರ್ಥವಾಗಿದೆ. ನೀವು ಸೆಕರ್ ಅಲೋಕೇಶನ್‌ನಲ್ಲಿ

ಈ ಪುಸ್ತಕದಲ್ಲಿ ನೀವು ಏನು ಹೇಳಿದ್ದೀರಿ ಅಂದರೆ 4280 ಕೋಟಿ ವಾರ್ಷಿಕ ಯೋಜನೆಯಲ್ಲಿ ಅಲೋಕೇಶನ್ ಟು ಇರಿಗೇಶನ್ ಅಂಡ್ ಫ್ಲಡ್ಸ್ ಇದಕ್ಕೆ 4280 ಕೋಟಿ ಅಂತ ಇದೆ. ಪ್ರಪೋರ್ಶನೇಟ್ ಆಗಿ ಅದು ಕಡಿಮೆಯಾಗಿದೆ. ಅದು ನನ್ನ ಆರ್‌ಗುಮೆಂಟ್. ಆದ್ದರಿಂದ ಸೆಕ್ಟೋರಲ್ ಅಲೋಕೇಶೇನ್ ಇರಿಗೇಶನ್ ಮತ್ತು ಫ್ಲಡ್ಸ್‌ಗೆ ಕೊಟ್ಟಿರತಕ್ಕಂಥಾದ್ದು ಕಡಿಮೆ ಆಗಿದೆ. ನನ್ನ ಮನವಿ ಏನೆಂದರೆ, ನನ್ನ ಸಲಹೆ ಏನೆಂದರೆ ಈ ಸರ್ಕಾರಕ್ಕೆ ನಿಮಗೆ ಅತ್ಯಂತ ಉತ್ತಮವಾದ ಆರ್ಥೀಕ ಪರಿಸ್ಥಿಗೆ ಬಂದಾಗ 2004–05 was an year of fiscal correction. Subsequent years are fiscal consolidation years. ಅಂದರೆ ಇವತ್ತು ಸುಸ್ಥಿತವಾದ ಪರಿಸ್ಥಿತವಾದ ಪರಿಸ್ಥಿತಿಯಲ್ಲಿದ್ದೀರಿ. ಈ ಪರಿಸ್ಥಿತಿಯಲ್ಲಿ ಇರುವಾಗ ಸರ್ಕಾರ ಯೋಚನೆ ಮಾಡಬೇಕಾಗಿರುವಂತಾದ್ದು, ಇಂಥಹ ಪರಿಸ್ಥಿತಿಯಲ್ಲಿ ಕರ್ನಾಟಕ ಸರ್ಕಾರ ಯೋಚನೆ ಮಾಡಬೇಕಾಗಿದ್ದು ಇರಿಗೇಶನ್‌ಗೆ, ಹೆಲ್ತ್‌ಗೆ, ಎಜುಕೇಶನ್‌ಗೆ, ಡ್ರಿಂಕಿಂಗ್ ವಾಟರ್‌ಗೆ, ಅಂಡ್ ರೂರಲ್ ಡವಲಪ್‌ಮೆಂಟ್ ಈ ಇಲಾಖೆಗಳಿಗೆ ಹೆಚ್ಚು ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗಿತ್ತು. ಇನ್ನೂ ಹೆಚ್ಚು ಹಣವನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿತ್ತು. ನಾವು ಕೊಟ್ಟಿರುವುದಕ್ಕಿಂತ ಪ್ರಪೋರ್ಶನೇಟ್ ಆಗಿ ಕಡಿಮೆ ಕೊಟ್ಟಿದ್ದೀರಿ. ಈ ಎಲ್ಲಾ 2–3 ಇಲಾಖೆಗಳನ್ನು ನೋಡಿದರೆ ಅಗ್ರಿಕಲ್ಚರ್‌ನಲ್ಲಿ ಹಾಗೆಯೇ ಇದೆ. 6.76 ಪರ್ಸೆಂಟ್ ಇದ್ದರೆ 6.33 ಇದೆ. 875 ಕೋಟಿಯಿಂದ 936 ಕೋಟಿ ಮಾಡಿದ್ದೀರಿ ಅದು 5.79 ಪರ್ಸೆಂಟ್ ರೂರಲ್ ಡವಲಪ್‌ಮೆಂಟ್. 600 ಕೋಟಿಯಿಂದ 713 ಕೋಟಿ ಮಾಡಿದ್ದೀರಿ. ಪರ್ಸ್‌ಂಟ್‌ವೈಜ್ ಈ ವರ್ಷಗಳಿಂದ ಕಡಿಮೆ ಇದೆ. ಸ್ಪೆಷಲ್ ಏರಿಯಾ ಡೆವಲಪ್‌ಮೆಂಟ್ ಅದರಲ್ಲೂ ಕೂಡ, ಹೈದ್ರಾಬಾದ್ ಕರ್ನಾಟಕ. ಮಲೆನಾಡು ಡೆವೆಲಪ್‌ಮೆಂಟಿಗೂ ಕೂಡ ಕಡಿಮೆ ಮಾಡಿದ್ದೀರಿ. ಎಜುಕೇಶನ್ ಆದ್ರೂ ಕೂಡ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ. ನಾನು ಏಕೆ ಹೇಳುತ್ತಿದ್ದೇನೆ ಅಂದರೆ, ಇವತ್ತು ಎರಡು ಪದಗಳನ್ನು ನೀವು ಬಹಳ ಮುಖ್ಯವಾಗಿ ಹೇಳಿದ್ದೀರಿ. ನಮ್ಮದು ಸಾಮಾಜಿಕ ನ್ಯಾಯ, ಜಂಡರ ತಾರತಮ್ಯ ಹೋಗಲಾಡಿಸುತ್ತೇವೆ ಉತ್ತಮವಾದ ಗುಣಮಟ್ಟ ಈ ರಾಜ್ಯದ ಜನರಿಗೆ ಅವರ ಜನಜೀವನ ಉತ್ತಮವಾಗಿ ಆಗಬೇಕು. ಬಡತನ ಹೋಗಬೇಕು. ಗ್ರಾಮೀಣ ಜನರು ನೆಮ್ಮದಿಯಿಂದ ಇರಬೇಕು ಈ ಎಲ್ಲಾ ಪದಗಳನ್ನು ಬಳಸಿದ್ದೀರಿ. ಇವತ್ತು ಬಡತನ ಹೋಗಬೇಕಾದರೆ, ರೀಜನಲ್ ಇಂಬ್ಯಾಲೆನ್ಸ್ ಹೋಗಬೇಕಾದರೆ. ಲಿಂಗ ತಾರತಮ್ಯ ಹೋಗಬೇಕಾದರೆ ಇಡೀ ರಾಜ್ಯದ ಜನರ ಜೀವನ ಮಟ್ಟ ಸುಧಾರಣೆಯಾಗಬೇಕಾದರೆ. ಹೆಲ್ತ್ ಎಜುಕೇಶನ್, ಇರಿಗೇಶನ್, ರೂರಲ್ ಡವಲಪ್‌ಮೆಂಟ್, ಡ್ರಿಂಕಿಂಗ್ ವಾಟರ್ ಅಂಡ್ ಕಮ್ಯೂನಿಕೇಶನ್ ಇಷ್ಟಕ್ಕೂ ಕೂಡ ಹೆಚ್ಚು ಬಂಡವಾಳವನ್ನು ಹೂಡತಕ್ಕಂಥ ಅಗತ್ಯ ಇದೆ. ನೀವು ಹೇಳಿದ್ದೀರಿ ನಾವು ಹೈಸ್ಕೂಲ್‌ಗೆ ಹೋಗುವಂತಹ ಮಕ್ಕಳಿಗೆ ಹೈಸ್ಕೂಲ್‌ನಿಂದ ಅಂದರೆ 7ನೇ ತರಗತಿಯಿಂದ ಹೈಸ್ಕೂಲ್‌ಗೆ ಹೋಗುವ ಮಕ್ಕಳಿಗೆ ಸೈಕಲ್ ತೆಗೆದುಕೊಡುತ್ತೇವೆ, ಅದಕ್ಕೋಸ್ಕರ 25 ಕೋಟಿ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಅದನ್ನು ನಾನೇನು ಕ್ರಿಟಿಸೈಜ್ ಮಾಡುವುದಕ್ಕೆ ಹೋಗುವುದಿಲ್ಲ. ಸೈಕಲ್ ಹೊಡೆಯುವುದಕ್ಕೆ 25 ಕೋಟಿ ಇಟ್ಟಿದ್ದೀರಿ ಸೈಕಲ್ ಕೊಡುವುದರಿಂದ ಲಿಟರಸಿ ಪರ್ಸೆಂಟೇಜ್ ಏನೂ ಇಂಪ್ರೂವ್ ಆಗುವುದಿಲ್ಲ. ಇನ್ನು ಎಷ್ಟು ಹತ್ತಿರದಲ್ಲಿ ಶಿಕ್ಷಣ ಸಿಗುತ್ತದೆ ಅದು ಬಹಳ ಮುಖ್ಯ ಮಕ್ಕಳಿಗೆ ನೀವು ಸೈಕಲ್ ತೆಗೆದುಕೊಟ್ಟರೂ ಕೂಡ ಸೈಕಲ್‌ನಲ್ಲಿ ಪಕ್ಕದ ಊರಿಗೆ 2 ಕಿಲೋಮಿೂಟರ್ 3 ಕಿಲೋಮಿೂಟರ್ 4 ಕಿಲೋಮಿೂಟರ್ ಸೈಕಲ್‌ನಲ್ಲಿ ಹೋಗುತ್ತಾರೆ ಎನ್ನುವ ಭರವಸೆ ಏನೂ ನಮಗೆ ಇರುವುದಿಲ್ಲ.

ಈಗ ಬಸ್ ಪಾಸುಗಳು ಇವೆ. ಬಸ್ಸುಗಳು ಹೋಗಲು ಆಗದೇ ಇರುವಂತಹ ಊರುಗಳು ಬೇಕಾದಷ್ಟು ಇವೆ. ಬಸ್ಸುಗಳು ಹೋಗಲು ಆಗದೇ ಇರುವಂತಹ ಊರುಗಳು ಬೇಕಾದಷ್ಟು ಇವೆ. ಅವುಗಳಿಗೆ ಟ್ರಾನ್ಸ್‌ಪೋರ್ಟ್ ಇವತ್ತಿಗೂ ಕೂಡ ಕವರ್ ಮಾಡಿಲ್ಲ. ಅನೇಕ ಹಳ್ಳಿಗಳಿಗೆ ಬಸ್ಸು ಸೌಕರ್ಯ ಸಿಕ್ಕಿಲ್ಲ. ರಸ್ತೆಗಳೇ ಇಲ್ಲವಲ್ಲ ಹೋಗುವುದಕ್ಕೆ ಇನ್ನು ಬಸ್ಸುಗಳು ಹೇಗೆ ಹೋಗುತ್ತವೆ ಅದರ ಬದಲು ಅವರಿಗೆ ಹತ್ತಿದಲ್ಲಿದೆಯೇ ಶಾಲೆಗಳನ್ನು ತೆರೆಯತಕ್ಕಂಥ ಪ್ರಯತ್ನ ಮಾಡಬೇಕು. ಆದಕೋಸ್ಕರವಾಗಿ ಬಹಳ ಹೆಚ್ಚು ಹಣ ಖರ್ಚು ಮಾಡಬೇಕು. ನಾನು ಹೋದ ಸಲ ಸದನದಲ್ಲಿ ಹೇಳಿದ್ದೆ ಬಿಸಿಯೂಟದ ಕಾರ್ಯಕ್ರಮ 5ನೇ ತರಗತಿಯಿಂದ 7ನೇ ತರಗತಿವರೆಗೂ ವಿಸ್ತರಣೆ ಮಾಡಿದಾಗ ಮತ್ತು 8ನೇ ತರಗತಿಗೂ ಕೆಲವು ಕಡೆ ಕೊಡುತ್ತೇವೆಂದು ಹೇಳಿದಾಗ, ಇದು ಮುಂದೆ ಸೆಕೆಂಡರಿ ಎಜುಕೇಶನ್‌ಗೆ ಹೋಗತಕ್ಕಂಥ ಎಲ್ಲಾ ಮಕ್ಕಳಿಗೂ ಕೂಡ ಕೊಡುತ್ತೇವೆಂದು ಹೇಳಿದ್ದೆವು. ಅದನ್ನು ವಿಸ್ತರಣೆಮಾಡಿ. ನಿಮಗೆ ಡ್ರಾಪ್ಸ್‌ಔಟ್ಸ್ ಕಡಿಮೆ ಆಗಬಹುದು. ಎಲ್ಲರಿಗೂ ಶಿಕ್ಷಣ ಸಿಗಬೇಕು. ಇವತ್ತು ಎಷ್ಟು ಇದೆ ಲಿಟ್ರಸಿ ಪರ್ಸೆಂಟೇಜ್? ಟೋಟಲ್ ಲಿಟ್ರಸಿ ಪರ್ಸೆಂಟೇಜ್ 66 ಪರ್ಸೆಂಟ್ ಇದೆ ಅದರಲ್ಲಿ ಹೆಣ್ಣು ಮಕ್ಕಳದ್ದು 59 ಪರ್ಸೆಂಟ್. ಅವರು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ, ಆರ್ಥಿಕ ಸಮೀಕ್ಷೆಯ ಪ್ರಕಾರ ಹೆಣ್ಣು ಮಕ್ಕಳದ್ದ 59 ಪರ್ಸೆಂಟ್ ಇದೆ ರಾಯಚೂರು ಗುಲ್ಬರ್ಗಾಕ್ಕೆ ಹೋದರೆ, ರಾಯಚೂರಿನಲ್ಲಿ ಇನ್ನು 49 ಪರ್ಸೆಂಟ್ ಇದೆ ಗುಲ್ಬರ್ಗಾಕ್ಕೆ ಹೋದರೆ ಇನ್ನು 50 ಪರ್ಸೆಂಟ್ ಇದೆ ಇದು ಲಿಟ್ರಸಿ ಪರ್ಸೆಂಟೇಜ್. 100 ಪರ್ಸೆಂಟ್ ಲಿಟ್ರೇಟ್ ಆಗಬೇಕಾದರೆ ಏನು ಮಾಡಬೇಕೆನ್ನುವ ಪ್ರೊಗ್ರಾಂಗಳು ಬೇಕು. 2010ನೇ ಇಸವಿಯ ಹೊತ್ತಿಗೆ ಸಂಬಂಧಿಸಿದಂತೆ ಅಲ್ಲಿ ರಾಷ್ಟ್ರಪತಿಗಳು ಭಾಷಣ ಮಾಡಿದ್ದಾರೆ ಇನ್ನು 5 ವರ್ಷದಲ್ಲಿ 100 ಪರ್ಸೆಂಟ್ ಲಿಟ್ರಸಿಯಾಗಬೇಕು ಎಂದು ಸೂಚಿಸಿದ್ದಾರೆ ಎಂದು ಅವರಿಂದ ಭಾಷಣವನ್ನು ಮಾಡಿಸಿ ಅದನ್ನು ಕೂಡ ಇಲ್ಲಿ ನೀವು ಚರ್ಚೆ ಮಾಡಿದ್ದೀರಿ, Where are the programmes for this ? ಇವತ್ತು ಇಂತಹ ಒಳ್ಳೆಯ ಹಣಕಾಸಿನ ಪರಿಸ್ಥಿತಿಯಲ್ಲಿ ಇದ್ದರೂ ಕೂಡ ಈ ಕಡೆಗೆ ಗಮನಕೊಡುವುದಕ್ಕೆ ಆಗಲಿಲ್ಲವಲ್ಲ ಆದುದರಿಂದ ನಿಮಗೆ ರ್‍ಯಾಪಿಡ್ ಗ್ರೋತ್ ವಿತ್ ಇಕ್ವಿಟಿ ಎನ್ನುವ ಫಿಸಿಕಲ್ ಪಾಲಸಿಯನ್ನೇನು ನಾವು ಅಡಾಪ್ಟ್ ಮಾಡಿಕೊಂಡಿದ್ದೇವೆ, ಆ ದಿಕ್ಕಿನಲ್ಲಿ ನೀವು ಹೊರಟಿಲ್ಲವೆನ್ನುವುದು ನನ್ನ ವಾದ You are not going in that direction. You have no vision to solve thase problems. ಅದನ್ನೆ ತಾನೆ ರಾಷ್ಟ್ರಪತಿಗಳು ಹೇಳಿರುವುದು ಇಲ್ಲಿ ಚರ್ಚೆಯಾಗಿ ಅದರ ಬಗ್ಗೆ ವಾದವಿವಾದಗಳೆಲ್ಲಾ ಆಯಿತು ರಾಯಚೂರಿನಲ್ಲಿ 49 ಪರ್ಸೆಂಟ್ ಲಿಟ್ರಸಿ ಇದೆ ಅಲ್ಲಿ ಯಾವತ್ತು ನಾವು 100 ಪರ್ಸೆಂಟ್‌ಗೆ ತಲುಪುವುದು? ಅದಕ್ಕೆ 1999ರಲ್ಲಿ ಕರ್ನಾಟಕದಲ್ಲಿ ಪ್ಲಾನಿಂಗ್ ಡಿಪಾರ್ಟ್‌ಮೆಂಟಿನಿಂದ ಆಗ ನಾನು ಹಣಕಾಸುಮಂತ್ರಿ ಯಾಗಿದ್ದಾಗ ನನ್ನ ಅಧ್ಯಕ್ಷತೆಯಲ್ಲಿ ಹ್ಯುಮನ್ ಡೆವಲಪ್‌ಮೆಂಟ್ ಇಂಡೆಕ್ಸ್ ಆಗಿದೆ. ನಮಗೆ ಯಾವುದೂ ಬೇಕಾಗುವುದಿಲ್ಲ ಈಗ ಪ್ಲಾನಿಂಗ್ ಮಿನಿಸ್ಟರ್ ಯಡಿಯೂರಪ್ಪನವರೆ ಆಗಿದ್ದಾರೆ, ಮಾನವ ಅಭಿವೃದ್ಧಿ ಸೂಚ್ಯಾಂಕ ಈಗ ಇಡೀ ಜಗತ್ತಿನಲ್ಲಿ ಎ.ಟಿ. ರಾಮಸ್ವಾಮಿಯವರೆ ಪರ್ ಕ್ಯಾಪಿಟ ಎಷ್ಟಾಯಿತೆಂದು ಲೆಕ್ಕ ಹಾಕುವುದಿಲ್ಲ ಬೆಳವಣಿಗೆಯನ್ನು ಗುರುತಿಸುವುದು, not per capital income; not on GSDP growth ಜಿಡಿಪಿ ಗ್ರೋತ್ ಕೇಂದ್ರ ಸರ್ಕಾರದ್ದು 8.1 ಇದೆ, ನಮ್ಮದ್ದು 8.7 ಪರ್ಸೆಂಟ್ ಇದೆ ಎಂದು ಬೆನ್ನು ತಟ್ಟಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : 9.2 ಪರ್ಸೆಂಟ್‌ಗೆ ಗ್ರೋತ್ ಅನ್ನು ತೆಗೆದುಕೊಂಡು ಹೋಗುತ್ತೇವೆಂದು ಹೇಳಿದ್ದಾರೆ.

Sri Siddaramaiah : I am not disputing all these facts ಈಗ ವರಮಾನವನ್ನು ಯಾವುದರ ಮೇಲೆ ಲೆಕ್ಕ ಹಾಕುವುದು? ಯಾರು ಶ್ರೀಮಂತರಿದ್ದಾರೆ, ಅತ್ಯಂತ ಬಡವರಿದ್ದಾರೆ ಅದರ ಅವರೇಜ್ ತೆಗೆದುಕೊಂಡು ತಾನೆ ಲೆಕ್ಕ ಹಾಕುವುದು. ಬಡವನಿಗು ಕೂಡ ಅವನು ಬದುಕುವುದಕ್ಕೆ ಅವನ ಮಕ್ಕಳಿಗೆ ವಿದ್ಯಾಭ್ಯಾಸ ಸಿಕ್ಕಿದೆಯಾ, ಅವನ ಆರೋಗ್ಯ ರಕ್ಷಣೆಯಾಗಿದೆಯಾ ಅವನಿಗೆ ಮನೆ ಸಿಕ್ಕಿದೆಯಾ ಎರಡು ಹೊತ್ತು ಊಟ ಸಿಗುತ್ತಿದೆಯಾ ಕೆಲಸ ಸಿಗುತ್ತಿದೆಯಾ, ನೀರು ಸಿಗುತ್ತಿದೆಯಾ ಎನ್ನುವುದು ಬಹಳ ಮುಖ್ಯ ಇವತ್ತು ನಮಗೆ 26000 ರೂಪಾಯಿಗಳ ತಲಾ ವರಮಾನವಿದೆ, ದೇಶದಲ್ಲಿ ನಾವು 7ನೇ ಜಾಗದಲ್ಲಿದ್ದೇವೆ ಇವತ್ತು ಮಾನವ ಅಭಿವೃದ್ಧಿ ಸೂಚ್ಯಾಂಕದ ಪ್ರಕಾರ our place is 7th in the country ಆ ಮಧ್ಯೆ ತೊಂದರೆಯಾಯಿತಲ್ಲ ರೆವಿನ್ಯೂ ಡೆಫಿಸಿಟ್ ಫಿಸಿಕಲ್ ಡೆಫಿಸಿಟ್, ಸಾಲ ಇವೆಲ್ಲಾ ಆಯಿತೆಲ್ಲಾ we have slipped from the 6th position to the 7th position ಇವತ್ತು 6 ರಿಂದ ಏಳನೇ ಜಾಗಕ್ಕೆ ಬಂದಿದ್ದೇವೆ. ಈಗ ನಾವು ಮತ್ತೆ 7 ರಿಂದ ಮುಂದಕ್ಕೆ ಹೋಗುಬೇಕಲ್ಲ ಅದು ನಮಗೆ ಮಾನದಂಡ. ನಮಗೆ ಮಾನದಂಡ ಏನೆಂದರೆ, ನಾವು ಹ್ಯುಮನ್ ಡೆವಲಪ್‌ಮೆಂಟ್‌ನಲ್ಲಿ ಯಾವ ಜಾಗಕ್ಕೆ ಹೋಗಿದ್ದೇವೆ 5ಕ್ಕೆ ಹೋದೆವಾ, 4ಕ್ಕೆ ಹೋದವಾ ಅಥವಾ 7ರಲ್ಲಿ ಇದ್ದೇವಾ? This is the yardstick. ಈ ಯೂರ್ಡ್‌ಸ್ಟಿಕ್ ಮೂಲಕ ನಾವು ಅಳೆಯಬೇಕು. "ನಾವು ಅಲ್ಲಿ ಸೈಕಲ್ ಕೊಟ್ಟಿದ್ದೇವೆ," ಎಂದು ಹೇಳುಬಹುದು ನಾವು ಮಾಡ ಬೇಡಿ ಎಂದು ಹೇಳುವುದಿಲ್ಲ, ಆ ಯಾವ ಪ್ರೂಗ್ರಾಂಗಳನ್ನು ಮಾಡಬೇಡಿ ಎಂದು ಹೇಳುವುದಿಲ್ಲ ನಾನು ಆ ಪ್ರೋಗ್ರಾಂಗಳನ್ನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. I don't say. That But, can we achieve literacy in a districts like Raichur, Gulbarga, Bidar, Chamarajanagar, Kolar, Bellary and Tumkur? Lowest is Raichur. ರಾಯಾಚೂರಿದ್ದು 49 ಪರ್ಸೆಂಟ್ ಹೆಣ್ಣು ಮಕ್ಕಳದು 33 ಪರ್ಸೆಂಟ್, ಒಟ್ಟು ಅವರೇಜ್ 49 ಪರ್ಸೆಂಟ್ ಅದು ಹೋಗಬೇಕಲ್ಲ, ಅದಕ್ಕೋಸ್ಕರ ನೀವು ಎಜ್ಯುಕೇಷನ್‌ಗೆ ಪ್ರಾಥಮಿಕ ಶಾಲೆಗಳನ್ನು ಎಲ್ಲಾ ಹಳ್ಳಿಗಳಲ್ಲಿ ತೆಗೆಯುವುದು, ಸೆಕೆಂಡರಿ ಶಾಲೆಗಳನ್ನು ಎಲ್ಲಾ ಕಡೆ ತೆಗೆಯತಕ್ಕಂಥದ್ದು, ಅವರು ಡ್ರಾಪ್ ಔಟ್ ಆಗದಂತೆ ನೋಡಿಕೊಳ್ಳುವುದಕ್ಕೆ ಏನೇನು ಪ್ರೋಗ್ರಾಮ್ ಆಗಬೇಕು ಅದನ್ನು ಮಾಡುವುದಕ್ಕೆ ಹೆಚ್ಚು ಹಣ ಖರ್ಚು ಮಾಡುವುದಕ್ಕೆ ಅವಕಾಶವಿತ್ತು, ಅದನ್ನು ಮಾಡಲಿಲ್ಲವೆಂಬುದು ನನ್ನ ವಾದ. ಖರ್ಚು ಕಡಿಮೆಯಾಗಿದೆ, ನನಗೆ ಸೈಕಲ್ ಕೊಡುವುದಕ್ಕು ವಿರೋಧವಿಲ್ಲ ಶವಸ್ಕಾರಕ್ಕೆ 1000 ರೂಪಾಯಿಗಳನ್ನು ಕೊಡುವುದಕ್ಕು ನನ್ನ ವಿರೋಧವಿಲ್ಲ, ಅವಕ್ಕು ಕೊಡಲಿ ಕೊಡುವುದು ಬೇಡವೆಂದು ಹೇಳುವುದಿಲ್ಲ, ಆದರೆ ಇದಕ್ಕೆ ಕೊಡುವುದಕ್ಕೆ ಇವೆಲ್ಲಾ ಮಾಡುವುದಕ್ಕೆ ನಿಮಗೆ ಅವಕಾಶವಿತ್ತು. ಈಗ ನಂಜುಡಪ್ಪನವರ ವರದಿಯ ಮೇಲೆ ಪ್ರತಿ ಸಾರಿ ಇಲ್ಲಿ ಚರ್ಚೆ ಮಾಡುತ್ತಲೇ ಇದ್ದೇವೆ ಅದರಲ್ಲಿ ಏನು ಹೇಳಿದ್ದಾರೆ, ಹಿಂದಿನ ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ನಾವು ಅದನ್ನು ಜಾರಿಕೊಡುತ್ತೇವೆಂದು ಹೇಳಿದರು, ನಾನು ಅದನ್ನು ಎರಡು ಸಾರಿ ಹೇಳಿದೆ ನಾನು ಕೂಡ ನಂಜುಡಪ್ಪ ವರದಿಯನ್ನು ಜಾರಿ ಮಾಡುವುದಕ್ಕಾಗಲಿಲ್ಲ, ನೀವು ಮಾಡಬಹುದಲ್ಲ, ನೀವು ಪ್ರಾರಂಭ ಮಾಡುವುದಕ್ಕೆ

ಆಯಿತಾ, ಸಾಧ್ಯತೆ ಇತ್ತು ನಾನು ಎರಡು ಆಯವ್ಯಯದಲ್ಲಿ ಆ ಕಡೆಗೆ ಗಮನಕೊಡುವುದಕ್ಕಾಗಲಿಲ್ಲ. ನಮಗೆ ಆ ಪರಿಸ್ಥಿತಿ ಇರಲಿಲ್ಲ. ಈಗ 114 ತಾಲ್ಲೂಕುಗಳಲ್ಲಿ ಮೋಸ್ಟ್ ಬ್ಯಾಕ್‌ವರ್ಡ್ ಮೋರೆ ಬ್ಯಾಕ್‌ವರ್ಡ್ ಎಂದು ಮಾಡಿದ್ದಾರೆ ಕೋಲಾರದಲ್ಲಿ 4–5 ತಾಲ್ಲೂಕುಗಳಿವೆ ತುಮಕೂರು ಜಿಲ್ಲೆನಲ್ಲಿದ್ದಾವೆ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿದ್ದಾವೆ 13–14 ತಾಲ್ಲೂಕುಗಳಿವೆ ಒಟ್ಟು 39 ತಾಲ್ಲೂಕುಗಳು ಮೋಸ್ಟ್ ಬ್ಯಾಕ್‌ವರ್ಡ್ ತಾಲ್ಲೂಕುಗಳು ಜೇವರ್ಗಿ, ಗುಲ್ಬರ್ಗಾ, ಹುಮ್ನಾಬಾದ್ ಕೂಡ ಸೇರಿದೆ. ಜೇವರ್ಗಿಯನ್ನು ನಾವು ಎಲ್ಲಾ ಸರ್ವಾಂಗೀಣ ಅಭಿವೃದ್ಧಿ ಮಾಡಿಬಿಟ್ಟು ಎಂತಹದ್ದೊ ಟೌನ್ ಮಾಡುತ್ತೇವೆಂದು ಹೇಳಿದ ತಕ್ಷಣ ಗುಲ್ಬರ್ಗದಲ್ಲಿ ಲಿಟ್ರಸಿ ಏನು ಚೇಂಜ್ ಆಗುವುದಿಲ್ಲ literacy percentage is not going to change ಮತ್ತೆ ಅದಕ್ಕೆ ಎಲ್ಲಿಕೂಡ ದುಡ್ಡು ಇಟ್ಟಂತೆ ಕಾಣುವುದಿಲ್ಲ. ರಾಮನಗರದಲ್ಲಿ ಸೆಟಲೈಟ್ ಟೌನ್ ಮಾಡುತ್ತೇವೆ ಶಿಕಾರಿಪುರ ಬೆಳೆಸುತ್ತೇವೆ ಜೇವರ್ಗಿ ಅಭಿವೃದ್ಧಿ ಮಾಡುತ್ತೇವೆ, but money is not provided anywhere in the budget.

ಶ್ರೀ ಕೆ. ಜಯಪ್ರಕಾಶ ಹೆಗಡೆ : ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾದಾಗ 300 ಕೋಟಿ ರೂಪಾಯಿಗಳ ಪ್ಯಾಕೇಜ್ ಅನ್ನು ಮಂಡ್ಯ ಜಿಲ್ಲೆಗೆ ಮಾಡಿದ್ದರು ಆ ಪ್ಯಾಕೇಜು ಬರಲಿಲ್ಲ, ಅದೆ ತರಹ ಆಗುತ್ತದೆ ಎಂದು ಕಾಣುತ್ತದೆ.

ಶ್ರೀ ಸಿದ್ಧರಾಮಯ್ಯ : ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಪ್ರಗ್ನೆಂಟ್ ಉಮನ್ ಎಷ್ಟುಜನ ಸಾಯುತ್ತಿದ್ದಾರೆ ಇನ್‌ಫ್ಯಾಂಟ್ ಮಾರ್ಟಲಿಟಿ ಅಂಡ್ ಮೆಟರ್ನಲ್ ಮಾರ್ಟಲಿಟಿ ಇದನ್ನು ಕಡಿಮೆ ಮಾಡುವುದಕ್ಕೆ ಏನು ಮಾಡಬೇಕೆನ್ನುವ ಪ್ರಯತ್ನವಾಗಬೇಕಲ್ಲ ಅದಕ್ಕೇನು ಕಾರ್ಯಕ್ರಮವಿದೆ? ಅದಕ್ಕೆ ಕಳೆದ ಸಾರಿ ನಾನು ಬಜೆಟ್‌ನಲ್ಲಿ ಪ್ರತಿಯೊಂದು ಜಿಲ್ಲಾ ಆಸ್ಪತ್ರೆಗೆ ಕನಿಷ್ಟ ರಸ್ತೆಗಳ ಮೇಲೆ ಒಡಾಡುವುದಕ್ಕೆ ಒಂದು ಆಬುಲೆನ್ಸ್ ಇರಲೇ ಬೇಕು ಎಂದು ಹೇಳಿದ್ದೆ ಅದು ಕಾರ್ಯಗತವಾಗಲಿಲ್ಲ. ಮೈಸೂರು ಮೆಡಿಕಲ್ ಕಾಲೇಜು ಒಂದರಲ್ಲೆ 40 ಪರ್ಸೆಂಟ್ ಸ್ಟಾಫ್ ಇಲ್ಲ. What about the colleges in Bellary, Hubballi and Bangalore? ಅದಕ್ಕೆ ನಾನು ಹೇಳುವುದು ಮೊದಲು ಅದಕ್ಕೆ ಹೆಚ್ಚು ದುಡ್ಡು ಖರ್ಚು ಮಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕಳೆದ ಸಾರಿ ಅದಕ್ಕೆ ನಾವು ನೀವು 5–6 ಕಾಲೇಜು ಸ್ಟಾರ್ಟ್ ಮಾಡುತ್ತೇವೆಂದಾಗ ಮೈಸೂರು ಮೆಡಿಕಲ್ ಕಾಲೇಜು ನೋಡಿರಪ್ಪ ಎಂದು ಹೇಳಿದ್ದು.

ಶ್ರೀ ಸಿದ್ಧರಾಮಯ್ಯ : ನೀವು ಹೇಳಿದ್ದೀರಿ ನಾನು ಇಲ್ಲವೆಂದು ಹೇಳುವುದಿಲ್ಲ ನೀವು ಸಜೆಸ್ಟ್ ಮಾಡಿದ್ದೀರಿ.

ಶ್ರಿ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿ): ನನಗೆ ಇಲ್ಲಿ ಅರ್ಥವಾಗದ ಸಂಗತಿ ಎಂದರೆ ನಾನು ಬಂದು 40–50 ದಿವಸವಾಯಿತು ಈ ರಾಜ್ಯದಲ್ಲಿ 7 ಬಜೆಟ್‌ಗಳನ್ನು ಮಂಡನೆ ಮಾಡುವಂತಹ ಅವಕಾಶ ಸನ್ಮಾನ್ಯ ಸಿದ್ದರಾಮಯ್ಯನವರಿಗೆ ಸಿಕ್ಕಿತು. ಈ ಎಲ್ಲ ಸಮಸ್ಯೆಗೆ ಉತ್ತರ ಹುಡುಕಬೇಕಾಗಿದ್ದವರು ನೀವು ಸವಲತ್ತು ಕೊಡಬೇಕಾಗಿದ್ದವರು ನೀವು. ನಾನು ಏನು ಹೇಳಲು ಇಚ್ಛೆಪಡುತ್ತೇನೆ, ನೀವೇನೇನು ಅಬ್ಸರ್ವೇಶನ್ ಮಾಡಿದ್ದೀರ, ನಾಳೆ ಮುಂದಿನ ಬಜೆಟನ್ನು ಮಂಡನೆ ಮಾಡುವ ಕಾಲದಲ್ಲಿ ನಿಮ್ಮೆಲ್ಲ ಸಲಹೆಗಳನ್ನು ಅನಿಷ್ಠಾನಕ್ಕೆ ತರಲು ನಮ್ಮ ಶಕ್ತಿಮಿರಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ, ಅದರ ಬಗ್ಗೆ ಎರಡು ಮಾತಿಲ್ಲ. ಆದರೆ ನಿಮಗೆ ಅವಕಾಶ ಸಿಕ್ಕಾಗ ಯಾಕೆ ಇದಕ್ಕೆ ಗಮನ ಕೊಡಲಿಲ್ಲ ಅನ್ನುವ ಚಿಂತೆ ನನಗೆ ಅಷ್ಟೇ.

ಶ್ರೀ ಜೆ.ಸಿ. ಮಾಧುಸ್ವಾಮಿ: Fund availability ಅವತ್ತಿರಲಿಲ್ಲ ಇವತ್ತಿತ್ತು ಮಾಡಬಹುದಾಗಿತ್ತಲ್ಲ ಅಂತ ಅವರ ವಾದ. ಅವತ್ತಿನ ಫಡ್ಸ್ ಲಿಮಿಟ್ ನೋಡಿಕೊಂಡು ಮಾತನಾಡಬೇಕಲ್ಲ, We have surplus funds.

ಶ್ರೀ ಸಿದ್ದರಾಮಯ್ಯ : ನೋಡಿ ಯಡಿಯೂರಪ್ಪನವರೇ, ಇವತ್ತು ನಿಮಗೆ ಸಿಕ್ಕಿದೆಯಲ್ಲ ಅವಕಾಶ ಅದು ನನಗೆ ಸಿಕ್ಕಿಲ್ಲ. ನಿಮ್ಮ ಜೇಬು ತುಂಬ ದುಡ್ಡು ಸಿಕ್ಕಿದೆ. ಆದರೆ ನನಗೆ ಜೇಬಿನಲ್ಲಿ ದುಡ್ಡಿರಲಿಲ್ಲ. I have inherited revenue deficit of Rs.2,100 crores whereas you are inheriting Rs. 854 crores surplus. That is the difference bteween you and me. ಮುಂದಿನ ವರ್ಷಕ್ಕೆ 1500 ಕೋಟಿ ಆಗುತ್ತದೆ ಅಂತ. ಮುಂದಿನ ವರ್ಷಕ್ಕೆ 1500 ಕೋಟಿ ರೆವಿನ್ಯೂ ಸರ್‌ಪ್ಲಸ್ ಸಿಕ್ತಾ ಇದೆ ನಿಮಗೆ. why can't you do? I was not in a position like you. ನಿಮ್ಮ ಪೊಜಿಶನ್ ತರಹ ನನಗಿರಲಿಲ್ಲ ಯಡಿಯೂರಪ್ಪನವರೇ. ಪಾಪ ನೀವು 45 ದಿವಸವಾಯ್ತು ಬಂದು, ನಿಮ್ಮ ಮೇಲೆ ನಾನು ಏನೂ ಆರೋಪ ಮಾಡ್ತಾ ಇಲ್ಲ. ಆದರೆ ನಿಮಗಿಂತಹ ಅವಕಾಶ ಇತ್ತು ಈಗ. ನೀವೇನು ರೈತರ ಪರವಾಗಿ ಅವರ ಇವರ ಪರವಾಗಿ ಅಂತ ಹೇಳ್ತಿದ್ದರಲ್ಲ, ಇದಕ್ಕೆಲ್ಲ ಸ್ವಲ್ಪ ಹೆಚ್ಚಿಗೆ ಗಮನ ಕೊಡಬಹುದಾಗಿತ್ತಲ್ಲ. ಆ ಅವಕಾಶ ನಿಮಗೆ ಸಿಕ್ಕಿತ್ತು. ಅದರಲ್ಲಿ ಸ್ವಲ್ಪ ಫೇಲಾಗಿದ್ದೀರಿ ಎಂಬುದು ನಿಮಗೆ ಸಲಹೆ ಅಂತ ತಿಳಿದುಕೊಳ್ತೀರೋ ಇಲ್ಲ ಮೆಚ್ಚುಗೆ ಅಂತ ತಿಳಿದುಕೊಳ್ತಿರೋ ಯಾವ ಥರಾನಾದ್ರೂ ತಿಳೊಳ್ಳಿ But it is not my allegatinat all ಯಾಕೆಂದರೆ ನೀವು ಒಂದೂವರೆ ತಿಂಗಳಾಗಿದೆ ಬಂದು ನಿಮಗೇನಂತ ಹೇಳೋದು ನಾನು. ಅದಕ್ಕೆ ನಾನು ಹೇಳಿದ್ದು, ಇವತ್ತು ಹಣಕಾಸು ಪರಿಸ್ಥಿತಿ ಚೆನ್ನಾಗಿರುವುದಕ್ಕೂ ನೀವು ಜವಾಬ್ದಾರರಲ್ಲ. how can he claim that he is responsible? ಹಾಗೇನೆ ಇವತ್ತೇನು ದೋಷಗಳಿವೆಯೋ ಅದಕ್ಕೂ ನೀವು ಕಾರಣಕರ್ತರಲ್ಲ. But at the same time. ನೀವೇನು ಭಾಷಣ ಮಾಡ್ತಾ ಇದ್ರಿ ಅವು ಇಲ್ಲಿ ರಿಫ್ಲೆಕ್ಟಾಗಿಲ್ಲ ಅನ್ನುವುದು ಅಷ್ಟೇ ನನ್ನವಾದ ರಿಫ್ಲೆಕ್ಟಾಗಿದೆಯಾ? ಬಾಗಲಕೋಟೆಗೆ ಹೋದರು, 1628 ಕೋಟಿ ಬಿಡುಗಡೆ ಮಾಡಿಲ್ಲ, ಎಂದು ಧರಣಿ ಕೂತಿರಿ, Where is the money for that? Here ನೀವೇ ಧರಣ ಕೂತಿದ್ದಿರಲ್ಲ, ಪ್ರಕಾಶ್ ಹೋಗಿ ನಿಮ್ಮನ್ನು ಎಬ್ಬಿಸಿಕೊಂಡು ಬಂದಿದ್ದರು. Where is the money provided? have you provided a single pai?

ಶ್ರೀ ಹಂಪನಗೌಡ ಬಾದರ್ಲಿ : ಚರಂತಿಮಠ ಅದರ ಬಗ್ಗೆ ಏನೂ ಮಾತನಾಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : "1628 ಕೋಟಿ ಪ್ಯಾಕೇಜ್ ಅನೌನ್ಸ್ ಮಾಡಿದ್ದಿರಲ್ಲ ಈಗ Where is it ಎಂದು ಕೇಳಿದ ಚರಂತಿಮಠ ಎಲ್ಲಿ? ನನಗೆ ನಿಮ್ಮಷ್ಟು ಜೋರಾಗಿ ಹೇಳಲು ಬರುವುದಿಲ್ಲ, ಅ ವಾಯ್ಸ್ ಇಲ್ಲ ನನಗೆ. ಮಿಸ್ಟರ್ ಚರಂತಿಮಠ ಪಾಪ ಹೊರಗಿನಿಂದ ಈಗ ಬರುತ್ತಾ ಇದ್ದಾರೆ. ಅಲ್ಲೀ ನಮ್ಮ ಎದುರಿಗೆ ಕೂತು, ಯಡಿಯೂರಪ್ಪನವರು 628 ಕೋಟಿಯಲ್ಲಿ ಒಂದು ರೂ ಇಟ್ಟಿಲ್ಲ ಅಂದಿದ್ದರು. ನೀವು ಏಕೆ ಇಡಲಿಲ್ಲ? ಬಾಗಲಕೋಟೆ ಮರೆತೋಯ್ತಾ? ನೀವೇ ಧರಣಿ ಕೂತಿದ್ರಿ. ನಾನ್ಯಾವತ್ತೂ ಅಲ್ಲಿ ಹೋಗಿ ಧರಣ ಕೂತುಕೊಂಡಿರಲಿಲ್ಲ. ಅಲ್ಲಿ ಅದಕ್ಕೊಂದು ಸಭೆಯನ್ನೂ ನಾವು ಕರೆದೆವು. ಧರಂಸಿಂಗರು ಒಂದು ಸಭೆ ಕರೆದು ಚರ್ಚೆಯ ಆಯ್ತು. ಏನು ಮಾಡಬೇಕು

ಅಂತ ಒಂದು ದೊಡ್ಡ ಚರ್ಚೆ. ಆದರೆ ನಿಮಗೇ ಅವಕಾಶ ಸಿಕ್ಕಾಗ. why you have not provided a single pie and you are presenting a budget with surplus money. A surplus budget and surplus budget is protected in two years. ಏಕೆ ಆಗಿಲ್ಲ? ಇದರ ಬಗ್ಗೆ ಮಾಡಬೇಕುಅಂತ ನಾನು ಹೇಳುವುದು ಈಗ ನಂಜುಂಡಪ್ಪನವರು ಏನು ಹೇಳಿದ್ದಾರೆ ಅಂದರೆ ರೀಜನಲ್ ಇಂಬ್ಯಾಲನ್ಸನ್ನು ನಾವು ತೆಗೆಯಬೇಕಾದರೆ 31 ಸಾವಿರ ಕೋಟಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಅದನ್ನು 8 ವರ್ಷದ ಅವಧಿಯಲ್ಲಿ ಖರ್ಚುಮಾಡಿ ಎಂದಿದ್ದಾರೆ. ಒಂದೇ ವರ್ಷದಲ್ಲಿ ಖರ್ಚು ಮಾಡುವುದಕ್ಕೆ ಆಗುವುದಿಲ್ಲ because we don't get the resources ಅದಕ್ಕೆ 31 ಸಾವಿರ ಕೋಟಿಗೆ, ಅವರು ಶಿಫಾರಸ್ ಏನು ಮಾಡಿದ್ದಾರೆ ಅಂದರೆ 15 ಸಾವಿರ ಕೋಟಿ ರೆಗ್ಯುಲರ್ ಕಾರ್ಯಕ್ರಮಗಳಡಿ 8 ವರ್ಷದಲ್ಲಿ ಬಂದು ಬಿಡುತ್ತದೆ; ಇನ್ನು 16 ಸಾವಿರ ಕೋಟಿ ವರ್ಷಕ್ಕೆ ಎರಡು ಸಾವಿರ ಕೋಟಿಯಂತೆ, ಆರೋಗ್ಯ, ಶಿಕ್ಷಣ ಸಂಪರ್ಕ ಗ್ರಾಮೀಣಾಭಿವೃದ್ಧಿಗೆ, ಕುಡಿಯುವ ನೀರಿಗೆ, ಖರ್ಚು ಮಾಡಿ ಎಂದಿದ್ದಾರೆ. ನೀವು ಅಲ್ಲಿ ಕೂತುಕೊಂಡು ಏನು ಹೇಳಿದಿರಿ? "ನಂಜುಂಡಪ್ಪನವರ ವರದಿ ಏನಾಯ್ತು" ನಾವು ಹೇಳಿದ್ದೆವು, "ನಾವು ಕೊಟ್ಟಿಲ್ಲ ನಿಜ ಅದಕ್ಕೆ, ಮುಂದಿನ ವರ್ಷದಿಂದ ಮಾಡೋಣ" ಎಂದು ಹೇಳಿದ್ದೆವು ಸಣ್ಣಮಟ್ಟ ಮಾಡಿದ್ದೆವು ನೀವೂ ಹಾಗೇ ತೇಪೆ ಕೆಲಸ ಮಾಡಿದ್ದೀರಿ. ಕೇಂದ್ರ ಸರ್ಕಾರಕ್ಕೆ ನಾವು ಎರಡು ಸಾರಿ ಹೋಗಿದ್ದೆವು, ಮಂತ್ರಿಗಳನ್ನು ಭೇಟಿ ಮಾಡಿದೆವು, ನಾವು 6400 ಕೋಟಿ ಹೇಗೋ 8 ವರ್ಷಗಳಲ್ಲಿ ಖರ್ಚು ಮಾಡುತ್ತೇವೆ ನಿವು 9600 ಕೋಟಿ ಕೊಡಿ ಅಂದೆವು 16,000 ಕೋಟಿಯಲ್ಲಿ ಹೇಗಾದರೂ ಮಾಡಿ 6400 ಕೋಟಿ ರಾಜ್ಯದ ಬೊಕ್ಕಸದಿಂದ ಕೊಡುತ್ತೇವೆ ಎಂದು ಹೇಳಿದೆವು. ಆದರೆ ತುಂಬಿಕೊಡಲಿಲ್ಲ. ನಮ್ಮ ವೈಜನಾಥ ಪಾಟೀಲರು 371 ತಿದ್ದುಪಡಿಯಾಗಿ, ಬರಬೇಕು ಅಂದರು ಅದೂ ಆಗಲಿಲ್ಲ. ಆದ್ದರಿಂದ ನಿಮ್ಮ ಕಾಲದಲ್ಲಾದರೂ ಆ 9600 ಕೋಟಿ ಬರುತ್ತದೆಯೇ? ಬರದೇ ಹೋದರೆ ನಾವೇ ಮಾಡಬೇಕಾಗುತ್ತದೆ. That responsibility is there on us. ನಾವು ಅದನ್ನು ಒಪ್ಪಿಕೊಂಡಿದ್ದೇವೆ. we are bound to implement. you have agreed to implement. The karnataka Government has agreed. we can't run away you can't go back from the promise made ಮಾಡಬೇಕಲ್ಲ, ಮತ್ತೆ regional imbalance ಹೇಗೆ ಹೋಗುತ್ತದೆ ಹೋಗುವ ಸಾಧ್ಯವೇ ಇಲ್ಲ. ಮತ್ತೆ 114 ತಾಲೂಕುಗಳು ಬರೀ ಉತ್ತರ ಕರ್ನಾಟಕದಲ್ಲಷ್ಟೇ ಇಲ್ಲ. ಬೆಂಗಳೂರು ಜಿಲ್ಲೆ, ಕೋಲಾರ, ತುಮಕೂರು ಚಾಮರಾಜನಗರ, ಜಿಲ್ಲೆಗಳಲ್ಲೂ ಇವೆ ಆದರೆ ಜಾಸ್ತಿ ಉತ್ತರ ಕರ್ನಾಟಕದ ಕಡೆ ಇವೆ. Because of the historical background ಅದೇನೇನೋ ಕಾರಣಗಳಿವೆ. ಅದಕ್ಕೆ ಮಾಡಬೇಕಲ್ಲ. ನಾನು ಏನು ಹೇಳುವುದು ಅಂದರೆ ನೀವೀಗ ಒಳ್ಳೆ ಪರಿಸ್ಥಿತಿಯಲ್ಲಿದ್ದೀರಿ No revenue deficit, no fiscal deficit Debt service ಇದೆಯಲ್ಲ sustainable level ಗೆ ಬಂದಿದೆ The total debt stock ಇದೆಯಲ್ಲ ಅದು ನಮ್ಮ revenue receipt ನ 300 ಪರ್ಸೆಂಟ್ ಅಂತ ಹೇಳುತ್ತೇವೆ ಅದಕ್ಕಿಂತ ಬಹಳ ಕಡಿಮೆ ಇದೆ. ಆದ್ದರಿಂದ ಎಲ್ಲ ಪ್ಯಾರಮಿಟರ್‌ಗಿಂತ ಚೆನ್ನಾಗಿ ಬಂದ ಮೇಲೆ ಮಾಡಬೇಕೋ ಬೇಡವೋ? ಈ ಬಜೆಟ್‌ನಲ್ಲೇ ಮಾಡಬೇಕಾಗಿತ್ತು ಮಾಡಬಹುದಾಗಿತ್ತು. ಮಾಡಲು ಅವಕಾಶ ಇತ್ತು ಈಗ ನೋಡಿ ಬರ್ಡನ್ ಹೇಗೆ

ಕಡಿಮೆಯಾಗುತ್ತಿದೆ 5643 ಕೋಟಿ debt swap ಮಾಡಿದ್ದೀರಿ Do you know the savings to the Karnataka Government? 2 ಸಾವಿರ ಕೋಟಿ ರೂ ಇದು ನಮಗೆ ಸಿಕ್ಕಿತಲ್ಲ. ಒಂದು ವೇಳೆ ನಾವು debt swap ಮಾಡಿಲ್ಲವೆಂದು ಇಟ್ಟುಕೊಳ್ಳಿ. ಅನೇಕ ರಾಜ್ಯಗಳು ಇವತ್ತಿಗೂ ಕೂಡ fiscal stress ನಿಂದ ಈಚೆಗೆ ಬಂದೇ ಇಲ್ಲ. There are so many states in the country, which have not come out from the fiscal stress Luckly Karnataka has come out ನಿಮಗೆ fiscal stress ಇಲ್ಲ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಶಕ್ತಿ ಇದೆ. ನಾನು ಬಜೆಟ್‌ನಲ್ಲಿ ಹೇಳಿದ್ದೆ. ಸಾಲ ಸಿಗುತ್ತದೆ ಎನ್ನುವುದು ಅವೈಲಬಿಲಿಟಿ ಅಲ್ಲ. Affordability ಅಂತ. ಈಗ affordability ಸ್ಥಿತಿಗೆ ತಂದಿದ್ದೇವೆ. ಈ ರೀತಿ ಇರುವಾಗ ಹೆಚ್ಚು ಹಣ ಒದಗಿಸಲು ಸಾಧ್ಯವಾಗುತ್ತಿತ್ತು. ಮತ್ತೆ ಇನ್ನು ಈಗ ಇಷ್ಟೆಲ್ಲಾ ಆಯಿತಲ್ಲ, ಟ್ಯಾಕ್ಸ್ ಬೇಸನ್ನು ಹೆಚ್ಚು ಮಾಡುವುದಕ್ಕೆ ಏನು ಪ್ರಯತ್ನವನ್ನು ಮಾಡಿದ್ದಾರೆ? ಎಕ್ಸೈಜ್‌ನಲ್ಲಿ ನಾವು ಬಂದ ತಕ್ಷಣ ಎಸ್.ಎಂ. ಕೃಷ್ಣಾ ಅವರ ಕಾಲದಲ್ಲಿ ಬ್ರಿವರೇಜ್ ಕಾರ್ಪೋರೇಷನ್ ಮಾಡಿದ ಮೇಲೆ ಐಎಂಎಲ್‌ನಲ್ಲಿ ಸೆಕೆಂಡ್ಸ್ ಕಡಿಮೆ ಆಯಿತು. ಇಂಡಿಯನ್ ಮೇಡ್ ಲಿಕ್ಕರ್ ಇದೆಯಲ್ಲ ಅದರಲ್ಲಿ ಸೆಕೆಂಡ್ಸ್ ಕಡಿಮೆಯಾಯಿತು. ಸುಮಾರು ಏಳು ಲಕ್ಷ ಬಲ್ಕ್ ಲೀಟರ್ಸ್ ಇದ್ದದ್ದು, ಇವತ್ತು 11 ಲಕ್ಷಕ್ಕಿಂತ ಜಾಸ್ತಿಯಾಯಿತು, Today the IML consumption is more than 11 lakhs ಈ 4 ಲಕ್ಷ ಇತ್ತಲ್ಲ ಇವೆಲ್ಲಾ ಸೆಕೆಂಡ್ಸ್‌ನಲ್ಲಿ ಹೋಗುತ್ತಿತ್ತು. That is what I am telling ಕನ್‌ಸಮ್ಸನ್ ಬಹಳ ಹೆಚ್ಚಾಗುವುದಿಲ್ಲ. ಅಷ್ಟೊಂದು ದೊಡ್ಡದಾಗಿ ಆಗುವುದಕ್ಕೆ ಸಾಧ್ಯವಿಲ್ಲ. ಒನ್ ಟು ಡಬಲ್ ಆಗುವುದಕ್ಕೆ ಸಾಧ್ಯವಿಲ್ಲ. ಅಷ್ಟೊಂದು ಹೆಚ್ಚು ಹೋಗಿ ಅದು ಕಡಿಮೆ ಆಯಿತು. ಸಿಎಲ್-1 ಎನ್ನುವುದು ಈ ಹೋಲ್‌ಸೇಲ್‌ಗೆ ಕೊಟ್ಟಿದ್ದೆವಲ್ಲ, ಅವರಿಗೆ 5 ಪರ್‌ಸೆಂಟ್ ಕಮಿಷನ್ ಹೋಗುತ್ತಿತ್ತು. ಆ 5 ಪರ್‌ಸೆಂಟ್ ಕಮಿಷನ್ ಉಳಿಯಿತು. ಆದರಿಂದ ನೂರು ಕೋಟಿ ರೂಪಾಯಿ ಉಳಿತಾಯವಾಗುತ್ತೆ. That is a different thing .ಬಹಳ ಜನರು ಬಹಳ ದಿನಗಳಿಂದ ಅದನ್ನು ಏಕೆ ಒತ್ತಾಯ ಮಾಡುತ್ತಿದ್ದರು ಎಂದರೆ " ನಾವು ಇನ್‌ವೆಸ್ಟ್ ಮಾಡಿಬಿಟ್ಟಿದ್ದೇವೆ ಕೆಲಸ ಕಳೆದು ಕೊಂಡುಬಿಡುತ್ತೇವೆ." ಬಹಳ ಜನರು ಕೆಲಸ ಮಾಡುತ್ತಿದ್ದಾರೆ ಅದರ ಮೇಲೆ" ಎಂದು ಹೇಳಿದ ಮೇಲೆ ನಾವು ಅದನ್ನು ತೆಗೆಯುವುದಕ್ಕೆ ಹೋಗಿರಲಿಲ್ಲ. ಆದರೆ ಅದರಿಂದ ಹೆಚ್ಚು ಆದಾಯ ಆದದ್ದಲ್ಲ. ಹೆಚ್ಚು ಆದಾಯ ಆದದ್ದು ಆ ಪಾನೀಯ ನಿಗಮವನ್ನು ಮಾಡಿ ಸೆಕೆಂಡ್ಸ್‌ಗಳನ್ನು ತಪ್ಪಿಸಲಿಕ್ಕೆ ಮಾಡಿದ್ದು ಒಂದು. ಮತ್ತೆ ಕಮರ್ಷಿಯಲ್ ಟ್ಯಾಕ್ಸ್‌ನ್ನು ಎಕ್ಸೈಜ್ ಡ್ಯೂಟಿ ಜೊತೆ ಮರ್ಜ್ ಮಾಡಿದ್ದು ಇದು ಎರಡನೆಯದು. ಮೂರನೆಯದು ಸಾರಾಯಿಯನ್ನು ಹೊಸ ಪಾಲಿಸಿಯನ್ನು 2004-05 ರಲ್ಲಿ ಮಾಡಿದ್ದು. ನಿಮಗೆ 70 ಕೋಟಿ ಇದ್ದದ್ದು ರೆಂಟಲ್ಸ್ 71 ಕೋಟಿ ಪರ್ ಮಂತ್ ಇತ್ತು Today it is Rs.146 crores renrals per month, because of the new policy. ಅದನ್ನು ಸೆಂಟ್ರಲೈಜ್ ಮಾಡಿ, ಚಾನಲೈಜ್ ಮಾಡಿದ ಮೇಲೆ ರೆಕ್ಟಿಫೈಡ್ ಸ್ಪಿರಿಟ್ ಎಲ್ಲಾ ಹೋಗುವುದಕ್ಕೆ ಶುರು ಮಾಡಿದ ಮೇಲೆ ಇವತ್ತು 2200 ಕೋಟಿ ಇದ್ದದ್ದು ಇವತ್ತು 3400 ಕೋಟಿ ಎಕ್ಸೈಜ್ ರೆವಿನ್ಯೂ ಬಂದಿರುವುದು, In two years. ಯಾವುದಾದರೂ ಪ್ರೀವಿಯಸ್ ಇಯರ್‌ನಲ್ಲಿ ಇಷ್ಟೊಂದು ಗ್ರೋಥ್ ಇತ್ತಾ? ಹೇಳಿ. ನೋಡೋಣ. ಏಕೆ ಇರಲಿಲ್ಲ? In any previous year, there was no growth to this extent ಹಾಗಾಗಿ ಅವರೇ

ಇವತ್ತು ಹೇಳಿದ್ದಾರೆ, 3375 ಕೋಟಿ ಇವತ್ತು ನಮಗೆ ತೆರಿಗೆ ಬರುತ್ತಿದೆ ಹಾಗೂ Now we are crossing the target, ಎಂದು ಯಡಿಯೂರಪ್ಪನವರು ಬಜೆಟ್‌ನಲ್ಲಿ ಹೇಳಿದ್ದಾರೆ. 3375 ಕೋಟಿ ಬರುತ್ತಿದೆ. ಬಹುಶ: ಮಧ್ಯದಲ್ಲಿ ಚುನಾವಣೆ ಡಿಸೆಂಬರ್‌ನಲ್ಲಿ ಬರದಿದ್ದರೆ it would have crossed Rs. 3500 crores ಮೂರುವರೆ ಸಾವಿರ ಕೋಟಿಯಷ್ಟು ಆಗುತ್ತಿತ್ತು There is a big jump in two years That is why financial comforts are available to Mr.Yediyurappa This is my point I am not criticizing the programmes or any other thing or the Government. ಇದರಿಂದ ಇವತ್ತು ಇಷ್ಟೆಲ್ಲಾ ಮಾಡಿರುವುದರಿಂದ ಇವತ್ತು ರಾಜ್ಯದಲ್ಲಿ robust ಆಗಿ ತೆರಿಗೆ ಆಗಿದೆ. ಇದಾದ ಮೇಲೆ ತೆರಿಗೆ I din't know. ಮುಂದಿನ ವರ್ಷ ಇದೇ ಪ್ರಮಾಣದಲ್ಲಿ ರಂಟಲ್ಸ್ ಹೆಚ್ಚಾಗುತ್ತದೋ ಇಲ್ಲವೋ ಹೇಳುವುದಕ್ಕೆ ಬರುವುದಿಲ್ಲ. ಆದರೆ ಸ್ಟ್ರಿಂಜೆಂಟ್ ಆಗಿ ಆ ಲೀಕೇಜಸ್ ಇದೆಯಲ್ಲ, ಆ ಲೀಕೇಜಸನ್ನು ತೆಗೆಯುವುದಕ್ಕೆ ಬಹಳ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಇನ್ನು ಅಲ್ಲಿ ಇಲ್ಲಿ ಲೀಕೇಜ್ ನಡೆಯುತ್ತಲೇ ಇದ್ದಾವೆ. ಭಟ್ಟಿ ಸಾರಾಯಿಗಳು ಅವು ಇವೆಲ್ಲಾ ಕೆಲವು ಕಡೆ ನಡೆಯುತ್ತಿರುತ್ತವೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಅದಕ್ಕಿಂತ ನೀವು ಮೊಲಾಸಿಸ್ ಲೆಕ್ಕ ತೆಗೆದುಕೊಳ್ಳಿ. ಷುಗರ್ ಫ್ಯಾಕ್ಟರೀಸ್ ನಲ್ಲಿ ಎಷ್ಟು ಹೊರಗೆ ಹೋಗುತ್ತದೆ ಎಂದು. ಇನ್ನೂ ಜಾಸ್ತಿ ರೆವಿನ್ಯೂ ಬರುತ್ತದೆ ನಿಮಗೆ. ಕ್ಯಾಟಲ್ ಫೀಡಿಂಗ್‌ಗೆ ಎಂದು ತೆಗೆದುಕೊಂಡು ಹೋಗುತ್ತಾರಲ್ಲ, ಅದನ್ನು ಸ್ವಲ್ಪ ಕಂಟ್ರೋಲ್‌ಗೆ ತನ್ನಿ ಇನ್ನೂ ಜಾಸ್ತಿ ರೆವಿನ್ಯೂ ಬರುತ್ತದೆ.

ಶ್ರೀ ಸಿದ್ದರಾಮಯ್ಯ : ಇವತ್ತು ಎಕ್ಸೈಸ್‌ನಲ್ಲಿ ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಸ್ಟಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ, ಮೋಟಾರ್ ವೆಹಿಕಲ್ ಟ್ಯಾಕ್ಸ್‌ನಲ್ಲಿ ಎಲ್ಲಾ ಕಡೆ ಜಾಸ್ತಿಯಾಗಿದೆ. ವ್ಯಾಟ್ ಬಗ್ಗೆ ಕೂಡ ಇಲ್ಲಿ ಹಿಂದೆ ಬಹಳ ಚರ್ಚೆಗಳಾಗಿದೆ. ಅನೇಕ ಸ್ಟೇಟ್‌ಮೆಂಟ್‌ಗಳನ್ನೆಲ್ಲ ಈ ವ್ಯಾಟ್ ಬಗ್ಗೆ ನೋಡಿದ್ದೇನೆ. ವ್ಯಾಟನ್ನು ದೇಶದಲ್ಲಿ 22 ರಾಜ್ಯಗಳು ಒಪ್ಪಿಕೊಂಡಿವೆ. ಜಾರಿ ಮಾಡಿವೆ. 2003–04 ರಲ್ಲಿ ಜಾರಿ ಮಾಡಬೇಕೆಂದು ಮಾಡಿ ಆ ಮೇಲೆ ಏಕೊ ಕೇಂದ್ರದಲ್ಲಿ ಎಲ್ಲಾ ರಾಜ್ಯಗಳಲ್ಲೂ ಒಮ್ಮತ ಬರಲಿಲ್ಲ ಎನ್ನತಕ್ಕ ಕಾರಣಕ್ಕೋಸ್ಕರವಾಗಿ, ಆ ಸರ್ಕಾರ ಇಂಪ್ಲಿಮೆಂಟ್ ಮಾಡಲಿಲ್ಲ. 2005–06ರಲ್ಲಿ ಕಳೆದ ಈ ವರ್ಷದ ಏಪ್ರಿಲ್ 1 ರಿಂದ ವ್ಯಾಟ್ ಜಾರಿ ಇದೆ. ವ್ಯಾಟ್ ಜಾರಿಯಾದರೆ ನಾನು ಹೇಳಿದೆ, 2160 ಕೋಟಿ ರೂಪಾಯಿಗಳ ನಷ್ಟವಾಗಬಹುದು ಎಂದು. ಮೊದಲನೇ ವರ್ಷ ಅಷ್ಟು ನಷ್ಟವಾಗ ಬಹುದು ಎಂದು ನಾವು ಸ್ವಲ್ಪ ಹೈಯರ್ ಸೈಡ್‌ನಲ್ಲಿ ಇಟ್ಟಿದ್ದೆವು. ಅದನ್ನು ಹೇಳುತ್ತಾ ಮಾಧುಸ್ವಾಮಿಯವರಿಗೆ ಹೇಳಿದ್ದೆ. ನಾನು ಜುಲೈನಲ್ಲಿ ಅಸೆಂಬ್ಲಿ ಸೇರಿದಾಗ ಹೇಳಿದ್ದೆ ನಾವು. ಮತ್ತೆ ಅಸೆಂಬ್ಲಿ ಬಜೆಟ್ ಚರ್ಚೆ ಮಾಡುವುದಕ್ಕೆ ಸೇರಿದಾಗ ಹೇಳಿದೆ. ನಾನು ಎರಡು–ಮೂರು ತಿಂಗಳದ್ದು ನೋಡಿದರೆ ನಮಗೆ ರೆವಿನ್ಯೂ ರೆಸಿಟ್‌ನಲ್ಲಿ ನಷ್ಟವಾಗುವುದಿಲ್ಲವೆಂದು ನಾನು ಹೇಳಿದ್ದೆ ವ್ಯಾಟ್ ಇಂಟ್ರಡ್ಯೂಸ್ ಮಾಡಿದರು ಕೂಡ ....ಕೇಂದ್ರ ಸರ್ಕಾರದವರು ನಮಗೆ ಮೊದಲನೇ ವರ್ಷ ಎಷ್ಟು ನಷ್ಟವಾಗುತ್ತದೋ, ಅಷ್ಟನ್ನು ತುಂಬಿ ಕೊಡುತ್ತೇವೆ ಎಂದು ಹೇಳಿದ್ದಾರೆ. 1041 ಕೋಟಿ ನಷ್ಟವಾಗಿದೆ ಎಂದು ಎಸ್ಟಿಮೇಟ್ ಈ ವರ್ಷಕ್ಕೆ ಮಾಡಿದ್ದಾರೆ. 1041 ಕೋಟಿ ನಷ್ಟವಾಗಿದೆಯೆಂದು ಹೇಳುತ್ತಾರೆ. ಈಗಾಗಲೇ 251 ಕೋಟಿ ಮೊದಲ ಕಂತು ಕೊಟ್ಟಿದ್ದಾರೆ. ಈ ವರ್ಷ ಇನ್ನು 790 ಕೋಟಿ ಕೇಂದ್ರ ಸರ್ಕಾರದಿಂದ ಬರಬೇಕಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಹಣಕಾಸು ಮಂತ್ರಿಗಳು) : ವ್ಯಾಟ್ ಹಣ ಪೂರ್ಣವಾಗಿ ಬಂದಿದೆ. ಪೂರ್ತಿ ಹಣ ಈಗಾಗಲೇ ಬಂದು ಸೇರಿದೆ. ಕೇಂದ್ರಸರ್ಕಾರದಿಂದ ಪೂರ್ತಿ ಬಂದಿದೆ ಎಂದು ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಪೂರ್ತಿ ಬಂದಿರುವುದು ಗೊತ್ತಿರಲಿಲ್ಲ. ನೀವು ಇಲ್ಲೇ ಬರೆದಿದ್ದೀರಲ್ಲ. ಫೈನ್ ಓ.ಕೆ. ಅದಕ್ಕೆ ನೀವು ಸಪ್ಲಿಮೆಂಟರಿ ಎಸ್ಟಿಮೇಟ್ 1600 ಕೋಟಿ ಎಂದು ಕೊಟ್ಟಿರುವುದು. ಹಾಗೆ ಬರೆದಿದ್ದರು. 1041 ಕೋಟಿಯಲ್ಲ 251 ಕೋಟಿ ಇದೆ, ಇನ್ನುಳಿಕೆ ಬರಬೇಕಾಗಿದೆ ಎಂದು ಬಜೆಟ್ ಸ್ಪೀಚ್‌ನಲ್ಲಿ ಬರೆದಿದ್ದೀರಿ. ಅದರಮೇಲೆ ನಾನು ಮಾತನಾಡಿದೆ. ಅವರು ಅದನ್ನು ಕೊಡಲೇಬೇಕು. Because it is a Commitment on the part of the Government of India. ಎಲ್ಲಾ ರಾಜ್ಯಗಳಿಗೂ ಏನೇನು ನಷ್ಟವಾಗಿದೆ ಅದನ್ನು ಕೊಡಲೇಬೇಕು. ಅದು ಎಂಪವರ್ ಕಮಿಟಿಯಲ್ಲಿ ಚಿದಂಬರಂ ಅವರು ಒಪ್ಪಿಕೊಂಡಿದ್ದಾರೆ. ಪ್ರಧಾನಮಂತ್ರಿಗಳೂ ಒಪ್ಪಿಕೊಂಡಿದ್ದಾರೆ. ಹಿಂದಕ್ಕೆ ಹೋಗುವುದಕ್ಕಾಗುವುದಿಲ್ಲ.oThey can't go back. ಅದನ್ನು ಕೊಡುತ್ತಾರೆ. ಮುಂದಿನವರ್ಷವೂ ಕೊಡುತ್ತಾರೆ. ಎಷ್ಟು ಕೊಡುತ್ತಾರೆ. not 100% 75 ಪರ್‌ಸೆಂಟ್ ಕೊಡುತ್ತಾರೆ. ಆಚೆ ವರ್ಷವೂ ಕೊಡುತ್ತಾರ. Not 100% 50 ಪರ್‌ಸೆಂಟ್ ಕೊಡುತ್ತಾರೆ. ಆಮೇಲೆ ಕೊಡುವುದಿಲ್ಲ. ಈ ಮೂರು ವರ್ಷಗಳಲ್ಲಿ ನೀವು ವ್ಯಾಟ್ ಟ್ಯಾಕ್ಸ್ ಇದೆಯಲ್ಲ ಅದನ್ನು ಸ್ಟೆಬಿಲೈಜ್ ಮಾಡಿಕೊಳ್ಳಬೇಕು. ಈ ಸ್ಟೆಬಿಲೈಜ್ ಮಾಡಿಕೊಳ್ಳುವುದಕ್ಕೆ ಯಾವ ಪ್ರಯತ್ನವನ್ನು ಈ ಬಜೆಟ್‌ನಲ್ಲಿ ಮಾಡಿಲ್ಲ. ನಾನು ನೋಡಿದೆ. ಹೊಸದಾಗಿ ಡೀಲರ್ಸ್‌ಗಳು ಸೇರಬೇಕಲ್ಲ. ಎಲ್ಲಾ ಕಮಾಡಿಟೀಸ್‌ಗಳು ಕವರ್ ಆಗಬೇಕಲ್ಲ. No fresh dealer is included. ಅದಕ್ಕೆಲ್ಲಾ ತಾಲ್ಲೂಕುಗಳಿಗೆ ಹೋಗಬೇಕು. ಹೋಬಳಿಗಳಿಗೆ. ಪಟ್ಟಣಗಳಿಗೆ ಎಲ್ಲಾ ಹೋಗಬೇಕು. ಯಾರ್ಯಾರು ಹೊಸದಾಗಿ ಶುರುಮಾಡಿದ್ದಾರೆ, ಅವೆಲ್ಲ ತೆಗೆದು ಕೊಳ್ಳಬೇಕು. ಅವರನ್ನೆಲ್ಲಾ ರಿಜಿಸ್ಟರ್ಡ್ ಡೀಲ್‌ನಲ್ಲಿ ಮಾಡಬೇಕು. ಇಲ್ಲಿ ಸೇರಿಸಬೇಕು. ಎರಡು ಲಕ್ಷಕ್ಕಿಂತ ಟರ್ನ್ ಓವರ್ ಯಾರಿಗೆ ಜಾಸ್ತಿ ಇದೆ, ಅವರುಗಳು ವ್ಯಾಟ್ ನೆಟ್‌ನಲ್ಲಿ ಬರಲೇಬೇಕು. ವ್ಯಾಟ್ ನೆಟ್‌ಗೆ ಹೊಸದಾಗಿ ಎಷ್ಟು ಜನರನ್ನು ಮಾಡುತ್ತೇವೆ ಎನ್ನುವುದು ಅಂದಾಜು ಬೇಕಾಗುತ್ತದೆ. ಆಗ ಮಾತ್ರ ನಿಮಗೆ ತೆರಿಗೆ ಬೇಸ್ ದೊಡ್ಡದಾಗುತ್ತದೆ. ಟ್ಯಾಕ್ಸ್ ಬೇಸ್ ದೊಡ್ಡದಾಗದೆ ನಾವು ಆರ್ಥಿಕ ಪ್ರಗತಿ ಮಾಡುವುದು ಕಷ್ಟವಾಗುತ್ತದೆ. ತೆರಿಗೆ ಬೇಸ್ ಅನ್ನು ವೈಡನ್ ಮಾಡುವುದಕ್ಕೆ ಅದರ ಬಗ್ಗೆ ಯಾವುದೇ ಚಿಂತನೆ ನಡೆದ ಹಾಗೆ ಕಾಣುವುದಿಲ್ಲ ಈ ಬಜೆಟ್‌ನಲ್ಲಿ. ಈಗಾಗಲೇ ನಿನ್ನೆ ಮಾನ್ಯ ಖರ್ಗೆಯವರು ಹೇಳುತ್ತಿದ್ದರು. ಇಲ್ಲಿ ರಾಜ್ಯದ ಫಿಫ್ತ್ ಪೇ ಕಮೀಷನ್ ಇದೆಯಲ್ಲಾ, ಈಗಾಗಲೇ ನಾವು ಇಂಟೀರಿಂ ರಿಪೋರ್ಟನ್ನು ಒಪ್ಪಿಕೊಳ್ಳುತ್ತೇವೆ ಎಂದು ಭರವಸೆ ಕೊಟ್ಟು ಬಿಟ್ಟಿದ್ದೀರಿ. ಅದನ್ನು ನೀವು ಇಲ್ಲಿ ಸೇರಿಸಿಲ್ಲ. ಸಪೋಸ್ ಫುಲ್ ರಿಪೋರ್ಟ್ ಬಂತು ಎಂದು ಇಟ್ಟುಕೊಳ್ಳೋಣ. It will go beyond Rs, 1,500 crores ನಾವು ಕೇಂದ್ರ ಸರ್ಕಾರದ ಫಿಫ್ತ್ ಪೇ ಕಮೀಷನ್ ಕೊಟ್ಟಾಗಲೇ ಸುಮಾರು 950 ಕೋಟಿ ಕೊಟ್ಟೆವು. ನಾವು 950 ಕೋಟಿ ರೂಪಾಯಿ ಕೊಟ್ಟಾಗಲೇ ಸರ್‌ಪ್ಲಸ್ ಇದ್ದುದು ರೆವಿನ್ಯೂ ಡೆಫಿಸಿಟ್‌ಗೆ ಆ ಸಾರಿ. ಹೊರಟು ಹೋಯಿತು 1996-97 ರಲ್ಲಿ ಇರಬೇಕು. ಇಲ್ಲಿ ಹಣಕಾಸಿನ ಮಂತ್ರಿಗಳೇ ಹೊರಟು ಹೋಗಿ ಬಿಟ್ಟರಲ್ಲ. ಮಾನ್ಯ ಅಧ್ಯಕ್ಷರೆ, ನಾಳೆ ನಾನು ಮಾತನಾಡಲಾ? ಇವರು ಒಬ್ಬರೂ ಇಲ್ಲ.

ಒಬ್ಬ ಮಾನ್ಯ ಸದಸ್ಯರು: ನೀವು ಹಾಗೆ ಹೇಳುತ್ತಿದ್ದರೆ ಹಣ ಎಲ್ಲಿದೆ ಎಂದು ಹುಡುಕಿಕೊಂಡು ಬರಲು ಹೋಗಿದ್ದಾರೆ.

ಶ್ರೀ ಸಿದ್ಧರಾಮಯ್ಯ : Shall I continue tommorow?

ಅಧ್ಯಕ್ಷರು : ಮಾತನಾಡಿ, ಬರುತ್ತಾರೆ.

ಒಬ್ಬ ಮಾನ್ಯ ಸದಸ್ಯರು : ಅವರು ಓಡಿ ಹೋದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : 9 ಕುರ್ಚಿಗಳು ಖಾಲಿ.

ಒಬ್ಬ ಮಾನ್ಯ ಸದಸ್ಯರು : ಮೊದಲು ಅಷ್ಟೂ ಇರಲಿಲ್ಲ.

ಅಧ್ಯಕ್ಷರು :- ಬರುತ್ತಾರೆ, ಮಾತನಾಡಿ ..... ಅವರು ಎಲ್ಲೂ ಹೋಗಬಾರದಾ?

ಶ್ರೀ ಸಿದ್ಧರಾಮಯ್ಯ : ಹೋಗಬೇಡಿ ಎಂದು ನಾನು ಹೇಳಲಿಲ್ಲ. ಫ್ರಂಟ್ ಬೆಂಚಿನಲ್ಲಿ ಯಾರಾದರೂ ಇರಲಿ ಎಂದು ನಾನು ಹೇಳುವುದು. ನೀವೇನಾದರೂ ಬರೆದು ಕೊಂಡಿದ್ದೀರಾ ಹೇಳಿ ಮಾನ್ಯ ಸುಬ್ರಹ್ಮಣ್ಯ ನಾಯುಡು ಅವರೇ. ಎಲ್ಲಿ ಏನು ಬರೆದು ಕೊಂಡಿದ್ದೀರಿ ಎಂದು ತೋರಿಸಿ.

ಶ್ರಿ ಮಲ್ಲಿಕಾರ್ಜುನ ಖರ್ಗೆ : ಬೇರೆಯವರಿಗೆ ಏನಾಗಿದೆ? ನಾವು ಹೋಗಲಿ ಬಿಡು ಎಂದರೆ ನಮ್ಮ ಮೇಲೆಯೇ ಬೀಳುತ್ತೀರಿ.

ಅಧ್ಯಕ್ಷರು : ಮಧ್ಯಾಹ್ನದಿಂದ ಇದ್ದಾರೆ. ನೇಚರ್ ಕಾಲ್‌ಗೆ ಹೋಗಿರಬಹುದು.

ಶ್ರಿ ಮಲ್ಲಿಕಾರ್ಜುನ ಖರ್ಗೆ : ಬೇರೆಯವರನ್ನೂ ಸ್ವಲ್ಪ ಹೆದರಿಸಿ.

ಶ್ರೀ ಸಿದ್ಧರಾಮಯ್ಯ : ಟ್ಯಾಕ್ಸ್ ಬೇಸ್‌ನಲ್ಲಿ ಹೆಚ್ಚು ಮಾಡಲಿಕ್ಕೆ ಏನು ಪ್ರಯತ್ನ ಮಾಡಿದ್ದೀರಿ? ಈ ಮೂರು ವರ್ಷವಾದ ಮೇಲೆ ಅದು ಸ್ಟೆಬಿಲೈಸ್ ಆಗಬೇಕಲ್ಲ. ಗ್ರೋತ್ ಮುಂದೆ ಹೋಗಬೇಕಲ್ಲ. ಗ್ರೋತ್ ತೆಗೆದುಕೊಂಡು ಮುಂದೆ ಹೋಗಬೇಕಲ್ಲ. ಅಷ್ಟಕ್ಕೇ ಅದು ನಿಲ್ಲುವುದಿಲ್ಲ. You have to achieve the growth also. ಗ್ರೋತ್ ಇಲ್ಲದೇ 5 ಪರ್ಸೆಂಟ್ ಇನ್‌ಫ್ಲೇಷನ್ ಎಂತಲೇ ಇಟ್ಟುಕೊಳ್ಳೋಣ. Every Year 5% inflation. ಅದರ ಜೊತೆಗೆ ಗ್ರೋತ್ ಆಗದೇ ಹೋದರೆ how can you meet the expenditure? ಹೇಳಿ ನೋಡೋಣ. ...ಅದಕ್ಕೆ ಹೆಚ್ಚು ಹೆಚ್ಚಾಗಿ ಮಾಡಬೇಕು. ಎಲ್ಲಾ ಚೆಕ್‌ಪೋಸ್ಟ್‌ಗಳನ್ನು ಕಂಪ್ಯೂಟರೈಸ್ ಮಾಡಬೇಕು. ಇನ್ನೂ ಅವು ಪೂರ್ಣ ಆಗಿಲ್ಲ. ಕಂಪ್ಯೂಟರೈಸ್ ಆಗಬೇಕು. ಆಮೇಲೆ ಟ್ಯಾಕ್ಸ್ ಎಲ್ಲೆಲ್ಲಿ ಹೋಗುತ್ತಿದೆ ಎಂದು ಹುಡುಕಿ. ಎಲ್ಲೆಲ್ಲಿ ಹೋಗುತ್ತಿದೆ ಎಂದು ಹುಡುಕಿ ವಸೂಲು ಮಾಡಬೇಕು. ಎಲ್ಲಿ ಸೋರಿ ಹೋಗುತ್ತಿದೆ ಎಂದು ಹುಡುಕಬೇಕು. ನನ್ನ ಪ್ರಕಾರ ಸರಿಯಾದ ರೀತಿಯಲ್ಲಿ ನಾವು ಬಿಗಿ ಗೊಳಿಸಿದರೆ, ಮಾನ್ಯ ಯಡಿಯೂರಪ್ಪನವರು ಪದೇ ಪದೇ ಹೇಳುತ್ತಾರೆ. ಅದು ಎಷ್ಟೊ ಕೋಟಿ ಇದೆಯಲ್ಲಾ ಸೋರಿ ಹೋಗುವುದು? ಅವರು ಎಲ್ಲೋ ಹೊರಗಡೆ ಹೇಳಿದ್ದರು. ಅದು ನನಗೆ ಗೊತ್ತಿಲ್ಲ. ಅದು ಯಾವುದೋ ಫೆಡರೇಶನ್‌ನಲ್ಲಿ ಹೇಳಿದಿರಿ ಎಂದು ಕಾಣುತ್ತದೆ. ಇಂಡಸ್ಟ್ರೀಸ್ ಫೆಡರೇಶನ್ ಅಥವಾ ಎಫ್‌ಕೆಸಿಸಿನಲ್ಲಿ ಹೇಳಿರಬಹುದು. In FKCC, you made a speech. ಎಂಟರ್‌ಪ್ರೀನರ್ಸ್ ಮೀಟಿಂಗ್‌ನಲ್ಲಿ ಹೇಳಿದ್ದಾರೆ. ಸುಮಾರು 10 ಸಾವಿರ ಕೋಟಿನೋ ಎಷ್ಟೋ ಕೋಟಿ ರೂಪಾಯಿ ಸೋರಿ ಹೋಗುತ್ತಿದೆ My first prior priority is to plug this leakage. This big leakage is going

on. where are the programmes to stop the leakages, plug the leakages? ಏನು ಮಾಡುತ್ತಿದ್ದಿರಿ? ಏನು ಹೇಳಿದ್ದೀರಿ? ಹೀಗೆ ಸುಮ್ಮ ಸುಮ್ಮನೇ ಪ್ಲಗ್ ಆಗಿ ಬಿಡುತ್ತದೋ? ನಮ್ಮ ಸಿಸ್ಟಂ ಎವೆರಿಡೇ ಕೆಟ್ಟು ಹೋಗುತ್ತಿದೆ. ಅಲ್ಲಿ ನಾನು ಇನ್ನೊಂದು ಸಲಹೆ ಕೊಡಲು ಬಯಸುತ್ತೇನೆ ಮಾನ್ಯ ಯಡಿಯೂರಪ್ಪನವರೇ. ಅಲ್ಲಿ ವ್ಯಾಟ್ ಅಂಡ್ ನಾನ್ ವ್ಯಾಟ್ ಎಂದು ಆಗಿ ಹೋಗಿ ಬಿಟ್ಟಿದೆ. ವ್ಯಾಟ್ ಟ್ಯಾಕ್ಸ್ ಹಾಗೂ ನಾನ್ ವ್ಯಾಟ್ ಟ್ಯಾಕ್ಸ್. ಅಲ್ಲಿ ಸ್ವಲ್ಪ ಅಧಿಕಾರಿಗಳಿಗೆ ಅಸಮಾಧಾನ ಆಗಿ ಬಿಟ್ಟಿದೆ. ಇದರ ಬಗ್ಗೆ ಸ್ವಲ್ಪ ಗಮನ ಕೊಡಿ. ಕೆಲವರು ಎಲ್ಲಿ ಸ್ವಲ್ಪ ಅನುಕೂಲಗಳು ಇಲ್ಲ ಅಂತಹ ಜಾಗಗಳಲ್ಲಿ ಅಸಮಾಧಾನ ಆಗಿದ್ದಾರೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯುಡು : ಅನುಕೂಲಗಳು ಜಾಗಗಳು ಯಾವುವು ಎಂದು ಹೇಳಿ.

ಶ್ರೀ ಸಿದ್ದರಾಮಯ್ಯ : ಅದನ್ನು ಪ್ರತ್ಯೇಕವಾಗಿ ಹೇಳುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯುಡು : ಎಲ್ಲಾ ಅನುಕೂಲ ಇರುವುದು ಯಾವುದು? ಇಲ್ಲದೇ ಇರುವುದು ಯಾವುದು ಎಂದು ಹೇಳಿದರೆ ಎಲ್ಲರಿಗೂ ಗೊತ್ತಾಗುತ್ತದೆ.

ಶ್ರೀ ಸಿದ್ದರಾಮಯ್ಯ : ನಾನು ಹೇಳುತ್ತೇನೆ ಕುಳಿತುಕೊಳ್ಳಿ ಮಾನ್ಯ ಸುಬ್ರಹ್ಮಣ್ಯ ನಾಯುಡು ಅವರೇ. ವಿಜಿಲೆನ್ಸ್ ನಂಬರ್ ಒನ್. ಇಂಟೆಲಿಜೆನ್ಸ್ ನಂಬರ್ ಟೂ. ಅಸೆಸ್‌ಮೆಂಟ್ ನಂಬರ್ 3 ಹೇಳಲಾ? ಕ್ರಾಸ್ ವೆರಿಫಿಕೇಶನ್ ನಂಬರ್ 4, ಇನ್ನು ಏನು ಹೇಳಬೇಕು? ಅಪೀಲ್ಸ್ ನಂಬರ್ 5. ಈ ತರಹ ಗ್ರೇಡ್‌ಗಳು ಇದ್ದಾವೆ. ಈಗ ವ್ಯಾಟ್ ಬಂದ ಮೇಲೆ ಛೇಂಜ್ ಆಗಿದೆ. ಈಗ ಗೊತ್ತಾಯಿತಲ್ಲ. ಆದ್ದರಿಂದ ಅಲ್ಲಿ ಅಧಿಕಾರಿಗಳಿಗೆ ಏನಾಗಿ ಬಿಟ್ಟಿದೆ? ಒಂದು ಗುಂಪಿಗೆ ಅಸಮಾಧಾನ ಇದೆ. ಅಸಮಾಧಾನ ಇರುವುದರಿಂದ ಏನಾಗಿದೆ? ಸರಿಯಾಗಿ ವ್ಯಾಟ್ ಇಂಪ್ಲಿಮೆಂಟ್ ಆಗುತ್ತಾ ಇಲ್ಲ. That is my information ವ್ಯಾಟ್‌ನಲ್ಲಿ ನನ್ನ ಪ್ರಕಾರ ಸ್ಟ್ರಿಕ್ಟ್ ಇಂಪ್ಲಿಮೇಂಟೇಷನ್ ಆಗಿದೆ. ಸ್ಟ್ರಿಕ್ಟ್ ವಿಜಿಲ್ ಇದ್ದಿದ್ದರೆ, ಇಂಟೆಲಿಜೆನ್ಸ್ ವರ್ಕ್ ಸರಿಯಾಗಿ ಆಗಿದ್ದರೆ ಈ 1040 ಕೋಟಿ ರೂಪಾಯಿ ನಷ್ಟ ಕೂಡ ಬರುತ್ತಿರಲಿಲ್ಲ. That is my firm belief. ಅದನ್ನು ತಡೆಗಟ್ಟಲಿಕ್ಕೆ ಕ್ರಮ ತೆಗೆದುಕೊಳ್ಳದೇ ಹೋದರೆ ಮತ್ತೆ ಹಿಂದಕ್ಕೆ ಹೋಗುವ ಛಾನ್ಸಸ್ ಇದೆ. ನಮ್ಮ ಆರ್ಥಿಕ ರಥ ಇದೆಯಲ್ಲಾ ಅದು ಹಿಂದಕ್ಕೆ ಹೋಗುವ ಸಾಧ್ಯತೆಗಳು ಇದ್ದಾವೆ. ಆದ್ದರಿಂದ ನಾನು ಈ ಸಲಹೆಗಳನ್ನು ಕೊಡುತ್ತಿದ್ದೇನೆ. ಆಮೇಲೆ ಇಲ್ಲಿ ಕೆಲವೆಲ್ಲಾ ಸಬ್ಸಿಡಿ ಕೊಡಬಾರದು ಎಂದು ಹೇಳೋಲ್ಲ. ಬಡವರಿಗೆ ಆಹಾರಕ್ಕೆ ಸಬ್ಸಿಡಿ ಕೊಡಬೇಕಾಗುತ್ತದೆ. ಎಜುಕೇಶನ್‌ಗೆ ಸಬ್ಸಿಡಿ ಕೊಡ ಬೇಕಾಗುತ್ತದೆ. ಬೇರೆ ಬೇರೆ ಕಡೆಗೆ, ಅಗ್ರಿಕಲ್ಚರ್‌ಗೆ ಸಬ್ಸಿಡಿ ಕೊಡಬೇಕಾಗುತ್ತದೆ. ಈಗ ಹೇಳಿದ್ದಾರೆ. ಪಾಪ ನೀವೆಲ್ಲಾ ಬೆನ್ನು ತಟ್ಟಿದ್ದೇ ತಟ್ಟಿದ್ದು. ನಾವು ಬೀಜಕ್ಕೆ 42 ಕೋಟಿ ರೂಪಾಯಿ ಕೊಡುತ್ತೇವೆ ಎಂದರೆ ಅದಕ್ಕೆ ಬೆನ್ನು ತಟ್ಟಿದ್ದು. ನಾವು 52 ಕೋಟಿ ರೂಪಾಯಿ ಕೊಟ್ಟಿದ್ದೇವೆ ಶ್ರೀನಿವಾಸಗೌಡರೆ. ಇವರು 42 ಕೋಟಿ ಕೊಟ್ಟಿದ್ದಾರೆ ಎಂದರೆ ಅದಕ್ಕೂ ಬೆನ್ನು ತಟ್ಟುವುದು. ನೋಡುವುದೇ ಇಲ್ಲವೋ?

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಬೀಜಕ್ಕೆ 50 ಪರ್ಸೆಂಟ್ ಸಬ್ಸಿಡಿ ಇಟ್ಟು 67 ಕೋಟಿ ರೂಪಾಯಿ 2004-05ರಲ್ಲಿ ಖರ್ಚಾಗಿದೆ. 2005-06ರಲ್ಲಿ ಮಾನ್ಯ ಧರ್ಮಸಿಂಗ್ ಅವರ ನೇತೃತ್ವದ ಸರ್ಕಾರದಲ್ಲಿ ಇವರು 42 ಕೋಟಿ ರೂಪಾಯಿ ಇಟ್ಟು ಬಿಟ್ಟು 75 ಪರ್ಸೆಂಟ್ ಸಬ್ಸಿಡಿ ಕೊಡತ್ತಾರಂತೆ. ಈ ತರಹ ಬಹಳಷ್ಟು ಕೃಷಿ ಮೇಲೆ ತಪ್ಪು ಮಾಹಿತಿಗಳನ್ನು ಒದಗಿಸಿದ್ದಾರೆ. ಅದನ್ನು ನಾನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಕೃಷಿ ಸಚಿವರು ಆಗಿದ್ದವರು.

ಶ್ರೀ ಕೆ. ಶ್ರೀನಿವಾಸ ಗೌಡ : ಅದಕ್ಕೇ ಹೇಳುತ್ತಿರುವುದು

ಶ್ರೀ ಬಿ.ಎಸ್. ಯಡಿಯೂರಪ್ಪ : 50 ಇಲ್ಲದಿದ್ದರೆ 100 ಕೋಟಿ ರೂಪಾಯಿ ಆದರೂ ನಾವು ಕೊಡಲು ಸಿದ್ಧರಾಗಿದ್ದೇವೆ.

ಶ್ರೀ ಕೆ. ಶ್ರೀನಿವಾಸ ಗೌಡ : ಇಟ್ಟಿರುವುದು 42 ಕೋಟಿ ರೂಪಾಯಿ ಸ್ವಾಮಿ

ಒಬ್ಬ ಮಾನ್ಯ ಸದಸ್ಯರು : ನಿಮ್ಮದು ಸರ್‌ಪ್ಲಸ್ ಬಜೆಟ್ ಅಲ್ಲ, ಡೆಫಿಸಿಟ್ ಬಜೆಟ್.

ಶ್ರೀ ಕೆ. ಶ್ರೀನಿವಾಸ ಗೌಡ : ಕೇವಲ 42 ಕೋಟಿ ರೂಪಾಯಿ ಕೊಟ್ಟು 75 ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆ ಎಂದು ಹೇಳಿದ್ದೀರಿ.

ಅಧ್ಯಕ್ಷರು : ಮಾನ್ಯ ಸದಸ್ಯರು ಮಾತನಾಡಲಿ.

ಶ್ರೀ ಸಿದ್ಧರಾಮಯ್ಯ : ಈಗ ನಾನು ಏಕೆ ಹೇಳುತ್ತಿದ್ದೇನೆ, ಎಂದರೆ 42 ಕೋಟಿ ರೂಪಾಯಿ ಕೊಟ್ಟು 75 ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಹೇಳಿದ್ದೀರಿ. ನಾವು 50 ಪರ್ಸೆಂಟ್ ಸಬ್ಸಿಡಿ ಕೊಟ್ಟಾಗ 52 ಕೋಟಿ ಆಯಿತು. 52 ಕೋಟಿ ಈ ವರ್ಷಕ್ಕೆ ಆಯಿತು. ಅದಕ್ಕೆ ಹಿಂದಿನ ವರ್ಷ 67 ಕೋಟಿ ಆಯಿತು. ಈ 42 ಕೋಟಿ ರೂಪಾಯಿ ಕೊಟ್ಟು ಬಿಟ್ಟು ನಾವು ರೈತರಿಗೆ ಬಹಳ ಕೊಟ್ಟು ಬಿಟ್ಟಿದ್ದೇವೆಂದರೆ ನಾವು ಒಪ್ಪಿಕೊಳ್ಳಲು ಆಗುವುದಿಲ್ಲ. ಈಗ ಬಜೆಟ್‌ನಲ್ಲಿ ಕೊಡದೇ ಮುಂದೆ ಕೊಡುತ್ತೇವೆ 100 ಕೋಟಿ ಅಂದರೆ ಹೇಗೆ ಕೋಡುತ್ತೀರಿ? ದುಡ್ಡು ಸಿಕ್ಕರೆ ನೀವು ಕೊಡುತ್ತೀರಿ. ಇಲ್ಲದೇ ಹೊದರೆ ಇನ್ನೂ ಏನಾದರೂ ಕಿತ್ತುಹಾಕಬೇಕಲ್ಲ. ಈಗ ರೆವಿನ್ಯೂ ರಿಸೀಟ್ಸ್ ಎಷ್ಟು ಬರುತ್ತದೆ? ಎಕ್ಸೈಜ್ ಎಷ್ಟು ಬರುತ್ತದೆ? ಕಮರ್ಷಿಯಲ್ ಟ್ಯಾಕ್ಸ್ ಎಷ್ಟು ಬರುತ್ತದೆ? ಮೋಟಾರ್ ವೆಹಿಕಲ್ ಟ್ಯಾಕ್ಸ್ ಎಷ್ಟು ಬರುತ್ತದೆ ಎಂದು ಲೆಕ್ಕ ಹಾಕಿಕೊಂಡು ಇಲ್ಲಿ ಹಾಕಿದ್ದೀರಿ. ಹಾಗಾದರೆ 13,555 ಕೋಟಿಯನ್ನೂ ಪ್ಲಾನ್‌ನಲ್ಲಿ ನಾವು ಖರ್ಚು ಮಾಡಿದ್ದೇವಾ? The Government could not achieve the entire plan size. Acoording to them, it is only Rs. 12,800 Crs. What is the remaining amount? Why the total plan size has not been fulfilled? ಇರಬಹುದು. ಕಾರಣ ಕೊಡುತ್ತಾರೆ. ಏನು ಕಾರಣ ಅಂದರೆ "ಎಕ್ಸಟರ್ನಲ್ ಏಡೆಡ್ ಪ್ರಾಜೆಕ್ಟ್‌ಗಳಿಂದ ಸರಿಯಾಗಿ ಕೆಲಸ ಆಗಲಿಲ್ಲ. ಅದಕ್ಕೋಸ್ಕರವಾಗಿ ನಾವು ಇಟ್ಟಿರುವಷ್ಟು ದುಡ್ಡನ್ನು ಖರ್ಚು ಮಾಡಲಿಲ್ಲ. ಪ್ಲಾನ್‌ನಲ್ಲಿ ಇಟ್ಟಿರುವ ದುಡ್ಡು ಖರ್ಚು ಮಾಡಲಿಲ್ಲ. ಆ ಕಾರಣಕ್ಕೋಸ್ಕರವಾಗಿ ಪ್ಲಾನ್‌ನಲ್ಲಿ ಸ್ವಲ್ಪ ದುಡ್ಡು ಕಡಿಮೆ ಆಗಿ ಹೋಯಿತು "ಎಂದು ಕಾರಣ ಕೊಡುತ್ತಾರೆ. ಒಪ್ಪಿಕೊಳ್ಳಬೇಕಾದ್ದೇ. It is also a fact ಎಕ್ಸಟರ್ನಲ್‌ಏಡೆಡ್ ಪ್ರಾಜೆಕ್ಟ್‌ಗಳಿಗೆ ಇಟ್ಟಂತಹ ಹಣ ಖರ್ಚಾಗುವುದಿಲ್ಲ. ನಬಾರ್ಡ್

ಇರಬಹುದು. ವರ್ಲ್ಡ್ ಬ್ಯಾಂಕ್‌ದು ಇರಬಹುದು, ಎಡಿಬಿದು ದುಡ್ಡು ಇರಬಹುದು. ಯಾವ್ಯಾವುದು ಎಕ್ಸಟರ್ನಲ್ ಏಡೆಡ್ ಪ್ರಾಜೆಕ್ಟ್‌ಗಳು ಇದ್ದಾವೆ, ಈ ರಾಜ್ಯದಲ್ಲಿ ಬೇರೆ ಬೇರೆ ಕಡೆಯಿಂದ ದುಡ್ಡುಗಳನ್ನು ನಾಇವು ಖರ್ಚು ಮಾಡುತ್ತಿದ್ದೇವಲ್ಲ. ಆದುದರಿಂದ ದುಡ್ಡ ನಾವು ಏನು ಇಟ್ಟುಕೊಂಡಿರುತ್ತೇವೆ, ಅಷ್ಟು ದುಡ್ಡು ಖರ್ಚಾಗುವುದಿಲ್ಲ. ಹಾಗಾಗಿ ಪ್ಲಾನ್ ಸೈಜ್ 13,555 ಕೋಟಿ ರೂಪಾಯಿ ಎಂದು ಇಟ್ಟುಕೊಂಡರು ನಾಳೆ ಯಾವ್ಯಾವುದೋ ಕಾರಣಕ್ಕೆ ಖರ್ಚಾಗುವುದಿಲ್ಲ. ಹಾಗೆನೇ ನಾವು ಮೆಟ್ರೋ ರೈಲಿಗೆ ದುಡ್ಡು ಇಟ್ಟಿದ್ದೆವು. 130 ಕೋಟಿನೋ ಎಷ್ಟೋ ಇಟ್ಟಿದ್ದರು. 109, 130 ಕೋಟಿನೋ ಬಜೆಟ್‌ನಲ್ಲಿ ಇಟ್ಟಿದ್ದರು. ಅದು ಖರ್ಚಾಗಿದೆಯಾ? ಒಂದು ರೂಪಾಯಿ ಹಣ ಕೂಡ ಖರ್ಚಾಗಿಲ್ಲ. Not a single pie is spent, ಖರ್ಚಾಗಿಲ್ಲ. ಬಸವಕಲ್ಯಾಣ ಅಭಿವೃದ್ಧಿಗೆ 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ, ಒಂದು ರೂಪಾಯಿಯಾದರೂ ಖರ್ಚಾಗಿದೆಯೇ? ಆಗಿಲ್ಲ ಕಾಗಿನೆಲೆಗೆ ಖರ್ಚು ಮಾಡುವುದಕ್ಕೆ ಇಟ್ಟಿದ್ದೀರಿ, ಖರ್ಚಾಗಿದೆಯೇ? ಆಗಿಲ್ಲ. I don't know Horticulture Mission ನಲ್ಲಿ ಎಷ್ಟು ಖರ್ಚಾಗಿದೆಯೋ ಗೊತ್ತಿಲ್ಲ, ಖರ್ಚಾಗಿಲ್ಲ. ಹೈಕೋರ್ಟ್ ಪೀಠಕ್ಕಾಗಿ 20 ಕೋಟಿ ಇಡಲಾಗಿತ್ತು. ಇವೊತ್ತಿನವರೆಗೂ ಒಂದು ರೂಪಾಯಿಯೂ ಖರ್ಚಾಗಿಲ್ಲ. ಮೆಡಿಕಲ್ ಕಾಲೇಜಿಗೆ 30 ಕೋಟಿ ಇಡಲಾಗಿತ್ತು ಖರ್ಚಾಗಿಲ್ಲ. ಈಗ ಯಡಿಯೂರಪ್ಪನವರು ಯಾವುದೋ ಲೆಕ್ಕ ಹೇಳಿದರು. 20 ಕೋಟಿ ಇನ್ನು ಯಾವುದೋ ಲೆಕ್ಕದಲ್ಲಿ, ಬಜೆಟ್‌ನಲ್ಲಿ ಕೊಟ್ಟಿದ್ದಾರೆ. ಇಲ್ಲೇ ಬಜೆಟ್‌ನಲ್ಲಿ ಬರೆಯಬೇಕಾಗಿತ್ತು. ಅಲ್ಲಿ ಬಿಲ್ಡಿಂಗ್ ಶುರುವಾಗಿದೆಯೇ? ಅಡಿಗಲ್ಲು ಹಾಕಿ ಬಂದಿರಾ? ಕಟ್ಟಡದ Work ಎಲ್ಲಿ ಶುರು ಆಗಿತ್ತು? ಮಾಡಿ, ಬೇಡವೆಂದು ಹೇಳಲಿಲ್ಲ. ಸುಮ್ಮನೆ, ಹೇಳುವುದು ಬೇರೆ. ರೈತರ ಬಗ್ಗೆ ಬಡವರ ಬಗ್ಗೆ, ದಲಿತರ ಬಗ್ಗೆ ಹಿಂದುಳಿದವರ ಬಗ್ಗೆ...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇವರೇ(ಆಲಂಗೂರು ಶ್ರೀನಿವಾಸ್) ಮಂತ್ರಿಗಳಾಗಿದ್ದರು. 85 ಕೋಟಿಗಳಷ್ಟು ಹಣ ಇಟ್ಟರು. ಒಂದು ರೂಪಾಯಿಯೂ ಖರ್ಚು ಮಾಡಲಿಲ್ಲ. ಸುಮಾರು ಒಂದು ವರ್ಷದಿಂದಲೂ 10 ತಾಲ್ಲೂಕುಗಳಿಗೆ 1 ರೂಪಾಯಿಯನ್ನೂ ಖರ್ಚು ಮಾಡಲಿಲ್ಲ.

ಅಧ್ಯಕ್ಷರುಃ ಶ್ರೀನಿವಾಸ್ ಕುಳಿತುಕೊಳ್ಳಿ, ಅವರು ಮಾತನಾಡಲಿ. ಸಿದ್ಧರಾಮಯ್ಯನವರೆ, ಮಾತನಾಡಿ.

ಶ್ರೀ ಸಿದ್ದರಾಮಯ್ಯಃ ಏನ್ ಶ್ರೀನಿವಾಸ್, ನೀವು ಮಂತ್ರಿಯಾಗಿದ್ದಾಗ, ಅದನ್ನೆಲ್ಲಾ ನಾನು ತರಿಸುತ್ತೇನೆಂದು ಹೇಳಿದಿರಿ. ಎಲ್ಲಿ ತರಿಸಿದಿರಿ? ಮಂತ್ರಿಯಾಗಿ ಏನೂ ಮಾಡಲಿಲ್ಲ.

ಶ್ರೀ ಆಲಂಗೂರು ಶ್ರೀನಿವಾಸ್: ಮಾಡುತ್ತೇವೆ.

ಸಿದ್ದರಾಮಯ್ಯ: ನೀವು ಈಗ ಎಂ.ಎಲ್.ಎ. ಆಗಿ ಹಿಂದೆ ಕುಳಿತುಕೊಂಡು ಏನು ಮಾಡುವುದು? ಅದೆಲ್ಲಾ ಆಗುವ ಕೆಲಸವೇ? ನಾವು ತರಿಸುತ್ತೇವೆಂದು ಸುಮ್ಮನೆ ಈ ತರಹ ಹೇಳಿದರೆ, ಅದನ್ನು ಯಾರಾದರೂ ನಂಬಿಕೊಳ್ಳಬಹುದೇ? ಹಾಗಾದರೆ, ಈ ಸಲ ಮಂತ್ರಿಯಾಗಿದ್ದಾಗ ಏಕೆ ತರಿಸಲಿಲ್ಲ? ಆದುದರಿಂದ, ಆ ತರಹ ಹೇಳುವುದಕ್ಕೆ ಹೋಗಬೇಡಿ. ಹಾಗೆ ಹೇಳಿದರೆ ಯಾರೂ ನಂಬಿಕೊಳ್ಳುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆಗಲೇ ಖರ್ಚು ಮಾಡಿಲ್ಲ ಈಗ ಏನು ಮಾಡುತ್ತೀರಿ ನೀವು? ನಮ್ಮ ಬಾಗೇಪಲ್ಲಿ ತಾಲ್ಲೂಕಿಗೆ 5 ಲಕ್ಷ ಬಂದರೆ, ಇವೊತ್ತಿಗೂ ಅದು ಜಾರಿಯಾಗಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ಈ ಸದನದೊಳಗೆ ಹಾಸನದ್ದು ಜಗಳ ನಡೆಯುತ್ತದೆ, ಇಲ್ಲವೇ, ಕೋಲಾರದ್ದು ಜಗಳ ನಡೆಯುತ್ತದೆ.

ಅಧ್ಯಕ್ಷರುಃ ಏನು ಮಾಡುವುದು ಸ್ವಾಮಿ? ಅವರು ಒಂದು ತರಹ militant ಆಗಿಬಿಟ್ಟಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ: ಹಿಂದೆ ಕೃಷ್ಣರವರ ಸರ್ಕಾರದಲ್ಲಿ ಮಂಡ್ಯದವರದ್ದು ನಡೆಯುತ್ತಿತ್ತು ಈಗ ಮಂಡ್ಯದವರದ್ದು ಇಲ್ಲ.

ಶ್ರೀ ಎ.ಟಿ.ರಾಮಸ್ವಾಮಿ: ಪ್ಲಾನಿಂಗ್ ಬೋರ್ಡ್ ಕೆಲಸ ಮಾಡುತ್ತಿದೆಯೇ? ಅದು ಇದೆಯೇ? State Planning Board ಇಲ್ಲವೇ? Monitoring Committee ಇದೆಯೇ? ಹೇಳುವವರು, ಕೇಳುವವರು ಯಾರಾದರೂ ಇದ್ದಾರೆಯೇ? ನಮ್ಮ ಉಪ ಮುಖ್ಯಮಂತ್ರಿಗಳನ್ನು ಕೇಳುತ್ತೇನೆಃ ಅದೇನಾದರೂ ಸತ್ತುಹೋಗಿದೆಯೇ? ರಚನೆ ಮಾಡಿಲ್ಲವೋ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಯಾರಿಗೆ ಕೇಳುತ್ತಿದ್ದೀರಿ?

ಶ್ರೀ ಎ.ಟಿ.ರಾಮಸ್ವಾಮಿ: ನಾನು ಸರ್ಕಾರವನ್ನು ಕೇಳುತ್ತಿದ್ದೇನೆ. 2007ಕ್ಕೆ 11th Five Year Plan ಪ್ರಾರಂಭವಾಗುತ್ತಿದೆ. State Planning Board ಎಲ್ಲಿದೆ? ಏನು ಮಾಡುತ್ತಿದೆ? ಅದಕ್ಕೊಂದು Monitoring Committee ಬೇಡವೇ?

ಶ್ರೀ ಎಂ.ಮಹದೇವ್: ರಾಮಸ್ವಾಮಿಯವರೆ, ಜಿಲ್ಲಾ ಪ್ಲಾನಿಂಗ್ ಬೋರ್ಡ್ ಇದ್ದು, ಶಾಸಕರಾದ ನಾವೆಲ್ಲರೂ ಅದರಲ್ಲೇನಾದರೂ function ಮಾಡಿದ್ದೇವೆಯೇ? ಕೆಳಮಟ್ಟದ್ದೇ ಮೇಲ್ಮಟ್ಟದ್ದು.

ಶ್ರೀ ಸಿದ್ದರಾಮಯ್ಯ: ಪ್ಲಾನಿಂಗ್ ಬೋರ್ಡ್‌ಗೂ ಇದಕ್ಕೂ ಸಂಬಂಧವಿಲ್ಲ. ಇದು Administrative Department ನವರು ಯಾರಿಗೆ ಹಣ ಕೊಡುತ್ತಾರೋ, ಆ ಡಿಪಾರ್ಟ್‌ಮೆಂಟ್‌ನವರು ಖರ್ಚು ಮಾಡಬೇಕು. ಹಣ ಬಿಡುಗಡೆ ಆಗಲಿಲ್ಲ. It is a different thing. ಕ್ಯಾಬಿನೆಟ್‌ನಲ್ಲಿ it is a joint responsibility ಯಾರೋ ಒಬ್ಬರ ಮೇಲೊಬ್ಬರು ಹೇಳುವುದಕ್ಕಾಗುವುದಿಲ್ಲ. ಕ್ಯಾಬಿನೆಟ್‌ನಲ್ಲಿ ಕುಳಿತುಕೊಂಡು ಅಲ್ಲಿ ಇವೆಲ್ಲವನ್ನೂ ಚರ್ಚೆ ಮಾಡಬೇಕು. "ನಮ್ಮದು ಈ ತರಹ ಇದೆ, ಈ ವರ್ಷ ಪ್ರೋಗ್ರಾಂಗಳಿವೆ, ಇದಕ್ಕೆ ಹಣ ಬಿಡುಗಡೆ ಆಗಿಲ್ಲವೆಂದು" ಅಲ್ಲಿ ಕುಳಿತುಕೊಂಡು ಚರ್ಚೆ ಮಾಡಬೇಕು. ಇನ್ನೊಂದು ಸಲ ನಾನು ಎಂ.ಎಲ್.ಎ. ಆದಾಗ ಮಾಡುತ್ತೇನೆಂದರೆ, ಶ್ರೀನಿವಾಸ್, ಅದು ಆಗುವುದಿಲ್ಲ. ಅದು ಇರಲಿ ಬಿಡಿ. ಈಗ ಪಾಪ ಅವರು ಚೀಫ್ ಮಿನಿಷ್ಟರ್ ಆಗಲಿ I am very happy. ನನಗೆ ಬಹಳ ಆತ್ಮೀಯ ಸ್ನೇಹಿತ. ಅವರು ಮಿನಿಸ್ಟರ್ ಆಗಲಿಲ್ಲ, ನನಗೆ ಬಹಳ ದುಃಖವಿದೆ.

ಶ್ರೀ ಬಿ.ಶಿವರಾಮು: ನೀವು ಹೇಳಿದ ನಂತರ ಅವರು ಮಂತ್ರಿಯಾಗಬೇಕೆಂದರೆ, ಅವರು ಆಗುವುದಿಲ್ಲ ನೀವು ಆಗಬಾರದೆಂದು ಹೇಳಿದರೆ, ಅವರು ಆಗುತ್ತಾರೆ.

ಶ್ರೀ ಸಿದ್ದರಾಮಯ್ಯ: ಆದುದರಿಂದ, ಇವರು tax base ಹೆಚ್ಚು ಮಾಡತಕ್ಕಂಥ ಕಾರ್ಯಕ್ರಮಗಳಾಗಲಿ, wasteful expenditure ಅನ್ನು cut down ಮಾಡತಕ್ಕಂಥದ್ದಾಗಲಿ, ಅದಕ್ಕೆ ಮುಂಗಡಪತ್ರದಲ್ಲಿ ಯೋಜನೆ ಹಮ್ಮಿಕೊಂಡಿರುವುದು ಏನೂ ಕಾಣಿಸುವುದಿಲ್ಲ. ಈ ಎರಡು

ವರ್ಷಗಳಲ್ಲಿ development expenditure is increased from 54% to 60% Non-development expenditure ಕಡಿಮೆಯಾಗಿದೆ. ನಾಳೆ ಇಷ್ಟು development expenditure ಹೆಚ್ಚಾಯಿತು, wasteful expenditureಇಷ್ಟು cut down ಆಯಿತು. Productive Expenditure ಇಷ್ಟು ಹೆಚ್ಚಾಯಿತು, Capital Investment .ಗೆ ಇಷ್ಟು ಹೆಚ್ಚು ಮಾಡಿದ್ದೇವೆ, assets ಇಷ್ಟು ಕ್ರಿಯೇಟ್ ಆಯಿತು, ಇವೆಲ್ಲಾ parameters ಈಗ ಘನತೆವೆತ್ತ ರಾಷ್ಟ್ರಪತಿಯವರು ಭಾಷಣ ಮಾಡಿದರೆ, ಅವರು 11 ಸೂತ್ರಗಳು ಕೊಟ್ಟಿದ್ದಾರೆಂದು 2–3 ಕಡೆಗಳಲ್ಲಿ 20–20 ಕೋಟಿ ರೂಪಾಯಿಗಳನ್ನು ಕೊಟ್ಟ ತಕ್ಷಣ ಆರ್ಥಿಕ ಪ್ರಗತಿ ಆಗುತ್ತದೆಯೇ? ಮಾಡಬೇಡಿ ಎಂದು ಹೇಳುವುದಿಲ್ಲ. ಅವರ ಪ್ರೋಗ್ರಾಂ ಒಪ್ಪಿಕೊಳ್ಳಬಾರದೆಂದು ಹೇಳುವುದಿಲ್ಲ. ಮಾಡಿದ ನಂತರ ಒಂದು Action Plan ಇರಬೇಕಲ್ಲ. "ಐದು ವರ್ಷದಲ್ಲಿ ಮಾಡುತ್ತೇವೆ, ಮುರು ವರ್ಷದಲ್ಲಿ ಮಾಡುತ್ತೇವೆ, ಇಷ್ಟು ದುಡ್ಡು ಇನ್‌ವೆಸ್ಟ್ ಮಾಡುತ್ತೇವೆಂದು"......ಅದಕ್ಕೋಸ್ಕರ, ಚಿದಂಬರಂರವರು ಏನು ಹೇಳುತ್ತಾರೆಂದರೆ, ನಾವು budget performance ನೋಡಬೇಕಾಗಿರುವುದು, not outlays. Outlays are always linked with outcome ನೀವು ಹೇಳುತ್ತಿದ್ದೀರಿ, ಅಲ್ಲವೇ? Outlays are always linked with Outcome ಅದು ಬಹಳ ಮುಖ್ಯ. ಈಗ ರಸ್ತೆಗಳಿಗೆ ಎಷ್ಟು ದುಡ್ಡು ಖರ್ಚು ಮಾಡಿದ್ದೇವೆಂಬುದು ಮುಖ್ಯವಲ್ಲ, ಈಗ 1 ಸಾವಿರ ಕೋಟಿ ರೂಪಾಯಿಗಳಷ್ಟು ಹಣವನ್ನು ರಸ್ತೆಗೆ ಖರ್ಚು ಮಾಡುತ್ತೇವೆಂದು ಇಟ್ಟುಕೊಳ್ಳೋಣ. ಅದಕ್ಕೆ ಎಷ್ಟು ಕಿಲೋಮೀಟರ್ ರಸ್ತೆಯಾಯಿತು ಎಂಬ ಬಗ್ಗೆ ನಮಗೆ ಲೆಕ್ಕ ಇರಬೇಕು. 10 ಲಕ್ಷಕ್ಕೆ ಒಂದು ಕಿಲೋಮೀಟರ್ ಆಯಿತು, 15 ಲಕ್ಷಕ್ಕೆ ಒಂದು ಕಿಲೋಮೀಟರ್ ಆಯಿತು, 60 ಲಕ್ಷಕ್ಕೆ ಒಂದು ಕಿಲೋಮೀಟರ್ ಆಯಿತು. ಆ ತರಹದಲ್ಲಿ ಎಷ್ಟು ಕಿಲೋಮೀಟರ್ ಮಾಡಿದ್ದೇವೆ? 2 ಸಾವಿರ ಕೋಟಿ ರೂಪಾಯಿ ಇಟ್ಟಿದ್ದಾರೆ. ಅಷ್ಟಕ್ಕೆ ಎಷ್ಟು ಕಿಲೋಮೀಟರ್ ರಸ್ತೆಯಾಯಿತು ಅಥವಾ ಅದರಲ್ಲಿ 500 ಕೋಟಿ ರೂಪಾಯಿಗಳನ್ನು ಮೇಂಟನೆನ್ಸ್‌ಗೆ ಇಟ್ಟಿದ್ದಾರೆ. ಒಂದೂವರೆ ಸಾವಿರ ಕೋಟಿ ರೂಪಾಯಿಗಳಿಗೆ ಒಂದು ಸಾವಿರ ಕಿಲೋಮೀಟರ್ ರಸ್ತೆಯಾಯಿತು, ಅಲ್ಲವೇ? ಅದನ್ನೇ Outlays are always linked with Outcome ಆ ದೃಷ್ಟಿಕೋನ ಇರಬೇಕು. ರೇವಣ್ಣನವರು ಭಾಷಣ ಮಾಡುವಾಗ ನಾನು ಕೇಳುತ್ತಿದ್ದೆ. 'ನನಗೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಅದು ಬರಲಿಲ್ಲ ಇದು ಬರಲಿಲ್ಲ' ಎಂದು ಹೇಳುತ್ತಿದ್ದರು ಕೆ.ಇ.ಬಿ. ಬಗ್ಗೆ ಒಂದು ಸಲ ಹೇಳಿದೆ. ನಾವು ಸಬ್ಸಿಡಿ ಕೊಡೋಣ. We don't say ಸಬ್ಸಿಡಿ ಕೊಡುವುದಿಲ್ಲವೆಂದಲ್ಲ, ಆದರೆ subsidy is always linked with the performance. Recover Percentage ಎಷ್ಟು ಹೆಚ್ಚಾಯಿತು? T&D loss ಎಷ್ಟು ಕಡಿಮೆಯಾಯಿತು? That is also very important ಅಲ್ಲವೇ? While giving more allocation and more subsidies to the Power Department...

(ಈ ಹಂತದಲ್ಲಿ ಸದಸ್ಯರಾದ ಶ್ರೀ ಹೆಚ್.ಡಿ.ರೇವಣ್ಣನವರು ಮಾತನಾಡಲು ಎದ್ದು ನಿಂತರು)

ಶ್ರೀ ಸಿದ್ದರಾಮಯ್ಯ: ಇನ್ನು ನಾನೇನೂ ಹೇಳಲೇ ಇಲ್ಲ. ಪವರ್ ಬಗ್ಗೆ ಏನೇನೂ ಹೇಳಲಿಲ್ಲ. ಕುಳಿತುಕೊಳ್ಳಿ. ನಾನು ಏನು ಹೇಳಿದೆನೆಂದರೆ, subsidy is linked with performance ಎಂದು ಹೇಳಿದೆ. Is it wrong? ಅದು ತಪ್ಪಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ನಾನು Energy Minister ಆಗಿದ್ದಾಗ ಬರೀ ಎಲೆಕ್ಟ್ರಿಸಿಟಿ ಖರೀದಿ ಒಂದರಲ್ಲೇ 500 ಕೋಟಿ ರೂಪಾಯಿಗಳನ್ನು ಒಂದು ವರ್ಷಕ್ಕೆ ಉಳಿಸುವಂಥ ಒಂದು ಕಾರ್ಯ ನಾನು ಮಾಡಿದ್ದೇನೆ. ಬೇಕಾದರೆ, ಕಡತ ತೆಗೆಸಿ ನೋಡಿ. ತಾವು ಸಹಕಾರ ಕೊಟ್ಟಿಲ್ಲವೆಂದು ನಾನು ಹೇಳುತ್ತಿಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ: ಆಯಿತು ಬಿಡಿ, ನಾನು ಏನೂ ಹೇಳಲಿಲ್ಲ I have not made any allegation against you. ಟೀಕೆ ಮಾಡಿದ್ದೇನೆಯೇ? ಟೀಕೆ ಮಾಡಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ: ಟೀಕೆ ಮಾಡಿದ್ದೀರೆಂದು ನಾನು ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ: I am not finding fault with you been the Officers, ಹತ್ತು ವರ್ಷ Power Minister ಅಲ್ಲub You were there for 20 months. ಹತ್ತು ವರ್ಷಗಳ ಹಿಂದೆ energy audit ಶುರು ಮಾಡಿ ಕಂಪ್ಲೀಟ್ ಮಾಡಿದ್ದೇವೆಯೇ? ಇವೊತ್ತಿನವರೆಗೂ ಮಾಡಿಲ್ಲ. On what basis subsidy is to be given? What is the base for it? ಎಲ್ಲಿ ಕೊಡುವುದು? ಏನು ಕೊಡುವುದು? ಸುಮ್ಮನೆ ಕೊಡುತ್ತಿರುವುದೇ? How long? But T& D Loss even today, is 30%. .ಒಬ್ಬೊಬ್ಬರು ಒಂದೊಂದು ತರಹ ಹೇಳುತ್ತಾರೆ. ಅಧಿಕಾರಿಗಳಿಗೇ ಸರಿಯಾಗಿ ಗೊತ್ತಿಲ್ಲ. ಎಷ್ಟು T&D loss ಇದೆ? theftಎಷ್ಟಿದೆ? ಎಷ್ಟಿದೆ Transmission loss ಎಷ್ಟಿದೆ ಎಂದು ಅಧಿಕಾರಿಗಳಿಗೇ ಗೊತ್ತಿಲ್ಲ, ಪವರ್ ಡಿಪಾರ್ಟ್‌ಮೆಂಟಿನಲ್ಲಿರುವ ಒಬ್ಬೊಬ್ಬರು ಒಂದೊಂದು ತರಹ ಹೇಳಿಬಿಡುತ್ತಾರೆ. Nobody funows ಒಂದನೆ ಕಾರಣ ಎಲ್ಲದಕ್ಕು ಮೀಟರ್ ಹಾಕದೆ ಇರತಕ್ಕದ್ದು. ಎರಡನೆಯದ್ದು efficency, recovery improve ಆಗಿದೆ ಇರತಕ್ಕದ್ದು ರೆಕವರಿ ಪರ್‌ಸೆಂಟೇಜ್ ಇನ್‌ಕ್ರೀಸ್ ಆಗಿಲ್ಲ. ಇದು ಆಗದೆ wasteful expenditure cut down ಆಗುವುದು ಹೇಗೆ? ಪವರ್ ಜನರೇಷನ್, ನಾವು ಈವತ್ತು ಹೈಡಲ್‌ನಲ್ಲಿ 7750 ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದನೆ ಮಾಡಲು ಸಾಧ್ಯತೆ ಇದೆ. ಆದರೆ ಈವತ್ತಿನವರೆಗೆ ನಾವು ಉತ್ಪಾದನೆ ಮಾಡಿರತಕ್ಕದ್ದು 3400 ಮೆಗಾವ್ಯಾಟ್. ಇನ್ನೂ ನಾಲ್ಕು ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಹೈಡಲ್‌ನಲ್ಲಿ ನಾವು ಮಾಡಲು ಆಗಿಲ್ಲ projects are linering That is also not correct. Power is the very very important input for the development of agriculture, for the development of industry it is a very important input. ಇನ್‌ಪುಟ್ ಮಾಡುವುದಕ್ಕಾಗದೆಯೆ, ಅದನ್ನೆ ಹೆಚ್ಚು ಮಾಡುವುದಕ್ಕಾಗದೆಯೇ ವೇಗವಾಗಿ ಬೆಳೆಯಬೇಕು, ಸಮಾನತೆ ತಂದು ಬಿಡುತ್ತೇವೆ, ರೈತರೆಲ್ಲ ಸಮಾನರಾಗಿಬಿಡುತ್ತಾರೆ ಎಂದರೆ ಎಲ್ಲಾಗುತ್ತದೆ? ನೀವು ಮೊನ್ನೆ ಎಲ್ಲೊ ಒಂದು ಕಡೆ ಭಾಷಣ ಮಾಡುವಾಗ, ನಿಮ್ಮ ಪಾರ್ಟಿ ಆಫೀಸ್‌ನಲ್ಲೊ ಎಲ್ಲೊ ನಿಮ್ಮ ಭಾಷಣವನ್ನು ನಾನು ಕೇಳಿದೆ. 24 ಗಂಟೆ ನಾವು ರೈತರಿಗೆ ಪವರ್‌ರನ್ನು ಕೊಡುತ್ತೇವೆಂದು Is it possible? I do not know which officer has advised you like this. I don't think it is possible with the available Power. ಸಾಧ್ಯವಾಗುತ್ತದೆಯೆ? ಏನು ಟೇಬಲ್‌ನ್ನು ತಟ್ಟಿದ್ದು.

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೆ, ಈಗ ಆರು ಗಂಟೆಯಾಯಿತು. ರಿಪ್ಲೈಯನ್ನು ಆರಂಭ ಮಾಡಬೇಕು. ಬೇಗ ಮುಗಿಸಿ ದಯಮಾಡಿ.

ಶ್ರೀ ಸಿದ್ದರಾಮಯ್ಯ: No. No. I am speaking only on budget. ನಾನು ಬಜೆಟ್ ಮೇಲೆಯೆ ಮಾತನಾಡುತ್ತಿದ್ದೇನೆ. ಇದೇಕೆ? ರೇವಣ್ಣ ಮಾತನಾಡುವಾಗ ಒಂದು ಸಲವೂ ಬೆಲ್ ಹೊಡೆಯಲಿಲ್ಲ, ನಾನು ಮಾತನಾಡುವಾಗ ಬೆಲ್‌ನ್ನು ಹೊಡೆಯುತ್ತಿರಲ್ಲ?

ಅಧ್ಯಕ್ಷರು: ರಿಪ್ಲೈ ಆರು ಗಂಟೆಗೆ ಪ್ರಾರಂಭ ಮಾಡಬೇಕು, ಆದ್ದರಿಂದ ಬೇಗ ಮುಗಿಸಿ ಎಂದು ಹೇಳಿದೆ.

ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ರಿಪ್ಲೈಯನ್ನು ಸಂಜೆ ಏಳು ಗಂಟೆಗೆ ಮಾಡಲಿ. ಏನು ಅರ್ಜೆಂಟ್ ಇಲ್ಲ. ಅವರು ಮಾತನಾಡಲಿ.

ಅಧ್ಯಕ್ಷರು: ಆರು ಗಂಟೆಗೆ ರಿಪ್ಲೈ ಯನ್ನು ಮಾಡುತ್ತಾರೆ.

ಶ್ರೀ ಸಿದ್ದರಾಮಯ್ಯ: ಈಗ ಮಾಡುತ್ತಾರೆಯೆ?

ಅಧ್ಯಕ್ಷರು: ಹೌದು.

ಶ್ರೀ ಸಿದ್ದರಾಮಯ್ಯ: ನಾಳೆ ಮಾಡಲಿ.

ಶ್ರೀ ಕೆ. ಶ್ರೀನಿವಾಸಗೌಡ: ಇದರ ಮೇಲೆ ಸಹ ಮಾತನಾಡಬಾರದೆ?

(ಗೊಂದಲ)

ಅಧ್ಯಕ್ಷರು: ಬಿ.ಎ.ಸಿ. ನಲ್ಲಿ ಮೂರು ಗಂಟೆಗೆ ಉತ್ತರ ನೀಡಬೇಕೆಂದು ತೀರ್ಮಾನವಾಗಿತ್ತು ಈಗ ಆರು ಗಂಟೆಯಾಗಿದೆ. ಇವತ್ತು ಮುಗಿಸಬೇಕು. ನಾಳೆ ಆ ಮನೆಗೆ ಹೋಗಬೇಕು. ದಯಮಾಡಿ ಸಹಕರಿಸಿ ಬಿ.ಎ.ಸಿ. ನಲ್ಲಿ ತೀರ್ಮಾನವಾಗಿದೆ. ಇದಲ್ಲದೆಯೆ ಆ ಕಡೆ ಎರಡು ಮೂರು ಜನರನ್ನು ಬಿಟ್ಟರೆ ಈ ಕಡೆಯವರೇ ಹೆಚ್ಚಾಗಿ ಮಾತನಾಡಿರುವುದು. ಇವತ್ತು ಆ ಮನೆಗೆ ಹೋಗಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಿನ್ನೆ ಬಿಸ್‌ನೆಸ್ ಅಡ್ವೈಸರಿ ಕಮಿಟಿ ಸೇರಿದಾಗ ಎರಡೂವರೆ ಗಂಟೆಗೆ ಉತ್ತರವನ್ನು ಪ್ರಾರಂಭ ಮಾಡಬೇಕೆಂದು ಹೇಳಿದ್ದಿರಿ. ನೀವು ಯಾವಾಗ ಹೇಳುತ್ತಿರೊ ಆಗ ನಾನು ಉತ್ತರ ಕೊಡಲು ಸಿದ್ದನಾಗಿದ್ದೇನೆ. ಆದರೆ ಇವತ್ತು ಇದು ಮುಗಿಯಬೇಕು. ರಾತ್ರಿ 12 ಗಂಟೆಯಾಗಲಿ ಇವತ್ತು ಉತ್ತರ ಮತ್ತು ಫೈನಾನ್ಸಿಯಲ್ ಬಿಲ್ಲುಗಳು ಪಾಸ್ ಮಾಡಿಸಬೇಕು. ನಾವು ಎಷ್ಟು ಹೊತ್ತು ಬೇಕಾದರು ಕುಳಿತುಕೊಳ್ಳಲು ಸಿದ್ದರಾಗಿದ್ದೇವೆ. ಏಕೆಂದರೆ ಒಂದು ಸಲ ಸಮಯ ನಿಗದಿಯಾದಮೇಲೆ ಈ ಕಡೆಯಿಂದ ಯಾರು ಮಾತನಾಡಿಲ್ಲ. ಆ ಕಡೆಯಿಂದ ಪಾಸ್ ಮಾಡಿಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ಎನ್.ಧರ್ಮ್‌ಸಿಂಗ್: ಒಪ್ಪಿಕೊಂಡಿರುವುದು ನಿಜ. ಬೆಳಿಗ್ಗೆ 9 ಗಂಟೆಗೆ ಸಭೆ ಕುಳಿತಿದ್ದೇವೆ. ಮಾನ್ಯ ಸಿದ್ದರಾಮಯ್ಯನವರು ಆದಮೇಲೆ ಶ್ರೀನಿವಾಸಗೌಡರು ಹತ್ತು ನಿಮಿಷ ಮಾತನಾಡುತ್ತಾರೆ. ಆದಾದಮೇಲೆ ನೀವು ಮಾತನಾಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಆದುದರಿಂದ ಎನರ್ಜಿ ಇಲಾಖೆ ಏನಿದೆ we are not generating ಅದಕ್ಕೆ ಸರಿಯಾದ ಪ್ಲಾನ್ ಇಲ್ಲ. ಅದಕ್ಕೆ ಇನ್‌ವೆಸ್ಟ್‌ಮೆಂಟ್ ಸಾಕಾಗುತ್ತಿಲ್ಲ. ಹಾಗಾಗಿ ನಾವು ಈ ಎಲ್ಲಾ, ಈ ವರ್ಷಕ್ಕೆ ಎಷ್ಟು ಮಾಡಿದ್ದೀರೆಂದರೆ ಹೋದ ವರ್ಷ ಮಾಡಿದ್ದ 110

ಮೆಗಾವ್ಯಾಟ್‌ನ್ನು ಈ ವರ್ಷ 110 ಮೆಗಾವ್ಯಾಟ್ ಮಾಡಿದ್ದೇವೆ, ನಾರಾಯಣಪುರ ಡ್ಯಾಂನಲ್ಲಿ 110 ಮೆಗಾವ್ಯಾಟ್ ಆಗಿದೆಯೆಂದು ಪದೆ ಪದೇ ರಿಪೀಟ್ ಮಾಡುವುದು. ತಿರುಗಿ ತಿರುಗಿ ಅದನ್ನೆ ಹೇಳುವುದು. ನೀರಾವರಿ ಯಲ್ಲಿ 39 ಯೋಜನೆಗಳನ್ನು ಪೂರ್ಣ ಮಾಡುತ್ತೇವೆಂದು ಹೇಳಿದ್ದಾರೆ. ಅದು ಯಾವ್ಯಾವಾಗ ಮಾಡುತ್ತಾರೊ? ಎಷ್ಟು ದುಡ್ಡು ಕೊಡಬೇಕೊ? ಏನೊ? ಒಂದೂ ಗೊತ್ತಿಲ್ಲ. ಇಂತಿಂಥ ಪ್ರಾಜೆಕ್ಟ್‌ಗಳಿಗೆ ಇಷ್ಟು ದುಡ್ಡನ್ನು ಕೊಡಬೇಕಾಗಿದೆ, ಇಷ್ಟು ದುಡ್ಡು ಉಳಿದಿದೆ, ಇದನ್ನು ಎಷ್ಟು ದಿವಸದಲ್ಲಿ ಮುಗಿಸಬಹುದು, ಈ ರೀತಿ ಏನನ್ನು ಮಾಡದೆಯೇ 39 projects are going to be completed How? ಯಾವ ಪ್ರಾಜೆಕ್ಟ್ ಇನ್ನು ಎಷ್ಟು ಉಳಿದುಕೊಂಡಿದೆ, ಎಷ್ಟು ದುಡ್ಡಿನ ಕೆಲಸವಿದೆ, ಕಾಂಟ್ರಾಕ್ಟರ್ ಏನೇನು ಮಾಡಿದ್ದಾರೆ, ಟೆಂಡರ್‌ಗಳನ್ನು ಕರೆದಿದ್ದಾರೆಯಾ ಇಲ್ಲವೋ, ಏನಾಗಿದೆ, ಈ ವಿವರಗಳು ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು): ತಾವು ಅರ್ಥ ಸಚಿವರಾಗಿದ್ದವರು, ಬಜೆಟ್‌ನಲ್ಲಿ ಯಾವಾಗಲು ಕೂಡ ಯಾವ್ಯಾವ ಯೋಜನೆಗಳನ್ನು ಇಷ್ಟಿಷ್ಟು ಹಣವನ್ನು ಇಟ್ಟು ಮುಗಿಸುತ್ತೇವೆಂದು ಹೇಳಿದ್ದಾರೊ ನನಗಂತು ಗೊತ್ತಿಲ್ಲ, ವಿವರ ಬೇಕು ಎಂದರೆ 39 ಯೋಜನೆಗಳು ಯಾವ್ಯಾವುದು, ಒಂದೊಂದು ಯೋಜನೆಗೆ ಹಣ ಎಷ್ಟು ಬೇಕು ಎಂಬ ಮಾಹಿತಿ ಕೊಡಲು ನಾವು ಸಿದ್ಧರಾಗಿದ್ದೇವೆ.

ಶ್ರೀ ಸಿದ್ದರಾಮಯ್ಯ: ನನ್ನ ಸಲಹೆ ಏನೆಂದರೆ, ಟೈಮ್ ಬೌಂಡ್ ಪ್ರೋಗ್ರಾಮ್‌ಗಳನ್ನು ನೀರಾವರಿ ಇಲಾಖೆಗಳಲ್ಲಿ ನೀವು ಮಾಡದೆ ಹೋದರೆ ಯೋಜನೆಗಳು ಮುಗಿಯುವುದಿಲ್ಲಾ ಅಮರ್ಜ ಎಷ್ಟು ವರ್ಷದಿಂದ ಮಾಡುತ್ತಿದ್ದೇವೆ? ಅದಕ್ಕೆ ಎಸ್ಟಿಮೆಂಟೆಡ್ ಕಾಸ್ಟ್ ಎಷ್ಟು? ಕಾರಂಜಿ ವರುಣಾ ಯೋಜನೆ 1978-79ರಲ್ಲಿ ಪ್ರಾರಂಭವಾದದ್ದು, ಇವತ್ತಿನವರೆಗೆ 230 ಕೋಟಿ ರೂಪಾಯಿ ಖರ್ಚಾಗಿದೆ, ಇನ್ನು 65 ಕೋಟಿ ಖರ್ಚಾಗಬೇಕೆಂದು ಇದೆ. ಆದ್ದರಿಂದ ಈ ರೀತಿಯ ಪ್ರಾಜೆಕ್ಟ್‌ಗಳಿದೆಯಲ್ಲ.....

ಶ್ರೀ ಎಸ್.ಎಸ್.ಪಾಟೀಲ್: ಅಪ್ಪರ್ ಕೃಷ್ಣ ನಿಜಲಿಂಗಪ್ಪನವರ ಕಾಲದಲ್ಲಿ 250 ಕೋಟಿಯಂತೆ.

ಶ್ರೀ ಸಿದ್ದರಾಮಯ್ಯ: ಅಪ್ಪರ್ ಕೃಷ್ಣವನ್ನು ಈ ಆರ್ಥಿಕ ವರ್ಷದಲ್ಲಿ ಸಂಪೂರ್ಣ ಮಾಡಬೇಕೆಂದು ಯೋಜನೆ ಇತ್ತು. ಅದು ಆಗಿದೆಯೊ ಇಲ್ಲವೋ ಎಂದು ಹೇಳಬೇಕಾಗಿತ್ತು. ಆದರೆ ಅದನ್ನು ಹೇಳಿಲ್ಲ. ಅದನ್ನು ನಾನು ಕೇಳುತ್ತಿರುವುದು. ಕಾಸ್ಟ್ ಇದೆಯಲ್ಲಾ, ಯಾವಾಗಲು ನಾವು ಸಾಲಗಾರರಿಂದ, ಸಾಲದಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ. ಎಷ್ಟು ಕೋಟಿ? ಇವತ್ತು ಎಲ್ಲೊ ಒಂದು ಕಡೆ ನೀರಾವರಿ ಮಂತ್ರಿಗಳು ಹೇಳಿದರು, ಹೋದ ಸಲ ಖರ್ಗೆಯವರಿದ್ದರು, ಅವರು ಹೇಳಿದರು, ಇನ್ನು ನಮ್ಮ ಎಲ್ಲಾ ನೀರಾವರಿ ಯೋಜನೆಗಳು ಮುಗಿಯಬೇಕಾಗಿದ್ದರೆ 25 ಸಾವಿರ ಕೋಟಿ ಹಣ as on today current prices ಮೇಲೆ ಬೇಕು ಎಂದು ಹೇಳಿದರು, 25 ಸಾವಿರ ಕೋಟಿ ರೂಪಾಯಿಗಳು ಬೇಕು to complete the on going projects ಎಂದು ಹೇಳಿದ್ದಾರೆ. ಇವತ್ತು 25 ಸಾವಿರ ಕೋಟಿಗೆ 15 ಪರ್‌ಸೆಂಟ್ ಇನ್‌ಫ್ಲೇಷನ್ ಸೇರಿಸುತ್ತ ಹೋದರೆ it will be

unimaginable ಅದಕ್ಕೆ ನಾನು ಏನು ಹೇಳುವುದು, ಸಬ್ಸಿಡಿ ಒಂದು ವಿಷಯ, ಪವರ್ ಇಲಾಖೆಯಲ್ಲಿ ನನ್ನ ಪ್ರಕಾರ ಮೂರು ಸಾವಿರ ಕೋಟಿಗಿಂತ ಹೆಚ್ಚು ನಷ್ಟವಾಗುತ್ತಿದೆ. There is loss of more than Rs.3,000 Crores every year. Education, Health, Drinking water ಅದನ್ನು ತಪ್ಪಿಸಲು ಸಾಧ್ಯವಾದರೆ. ಎಲ್ಲದ್ದಕ್ಕೂ ದುಡ್ಡು ಕೊಟ್ಟು ಬಿಡಬಹುದು ಅದನ್ನು ತಪ್ಪಿಸಲು ಸಾಧ್ಯವಾಗುತ್ತದೆಯೋ ಏನೋ ಗೊತ್ತಿಲ್ಲ ಆದರೆ ಸ್ಟ್ರಿಕ್ಟ್ ಆಗಿ ಈಗಲಾದರು from the inception of Karnataka Electricity Board till today . ರೈತರಿಗೆ ಎಷ್ಟು ಹೋಗುತ್ತದೋ ಗೊತ್ತಿಲ್ಲ. ಎಷ್ಟು ಪರ್‌ಸೆಂಟ್‌ಪವರ್ ರೈತರಿಗೆ ಹೋಗುತ್ತದೊ ಗೊತ್ತಿಲ್ಲ. ಇಂಡಸ್ಟ್ರೀಸ್‌ಗೆ, ಡೊಮ್ಯಾಸ್ಟಿಕ್ ಪರ್‌ಪಸ್‌ಗೆ ಎಷ್ಟು ಪರ್‌ಸೆಂಟ್ ಹೋಗುತ್ತದೊ ಗೊತ್ತಿಲ್ಲ. ಎಲ್ಲವನ್ನು ತೆಗೆದು ನಾವು ಮೀಟರ್ ಹಾಕಿಲ್ಲ ಆದ್ದರಿಂದ ಎಲ್ಲಾ ಅಗ್ರಿಕಲ್ಚರಲ್‌ಗೆ ಹೋಗುತ್ತದೆ, ಪಂಪುಸೆಟ್ಟುಗಳಿಗೆ ಹೋಗುತ್ತದೆ. ಎಂದು ಹೇಳುತ್ತಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ: ಎನರ್ಜಿ ಆಡಿಟ್ ಆಗುತ್ತಿಲ್ಲವಲ್ಲ.

ಶ್ರೀ ಸಿದ್ದರಾಮಯ್ಯ: ಅದನ್ನೆ that is what I am telling ಎನರ್ಜಿ ಆಡಿಟ್‌ಟೇ ಇಲ್ಲ. ಎನರ್ಜಿ ಅಡಿಟ್ ಮಾಡದೆ ಪಂಪುಸೆಟ್ಟುಗಳಿಗೆ ಎಷ್ಟು ಹೋಗುತ್ತದೆ, ಇಂಡಸ್ಟ್ರೀಸ್‌ಗೆ ಎಷ್ಟು ಹೋಗುತ್ತದೆ, ಡೊಮ್ಯಾಸ್ಟಿಕ್ಸ್‌ಗೆ, ಬೇರೆ ಬೇರೆಯದರಲ್ಲಿ ಎಷ್ಟು ಹೋಗುತ್ತದೆ ಎಂಬುದು ಗೊತ್ತಾಗುವುದು ಹೇಗೆ? ಇದನ್ನು ಕಂಟ್ರೋಲ್ ಮಾಡುವುದು ಹೇಗೆ? ಕಳ್ಳತನಕ್ಕೆ ಎಷ್ಟು ಹೋಗುತ್ತದೆ ಎಂಬುದನ್ನು ಯಾರಾದರು ಅಧಿಕಾರಗಳು ಈವತ್ತಿನವರೆಗೆ ಹೇಳಲಿ ನೊಡೋಣ?

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಸಿದ್ದರಾಮಯ್ಯನವರೆ, T&D loss, in 1990 it was 18%, todav it has reached 32%.

ಶ್ರೀ ಸಿದ್ದರಾಮಯ್ಯ : ಅದು ಶೇಕಡ 30ರಷ್ಟು ಎಂದು ಹೇಳುತ್ತಾರುb But, all the figures furnished by KPTCL are wrong figures according to me. Because, I was the Chairman of the sub committee for some time. When J.H.Patal was the Chief Minister ನಾನು sub committee chairman ಆಗಿದ್ದೆ. ಸ್ವಲ್ಪವೂ ಕೂಡ recovery .ಹೆಚ್ಚಾಗುವುದೇ ಇಲ್ಲ. Recovery ಹೆಚ್ಚಾಗದೆ, transmission loss ಕಡಿಮೆ ಮಾಡದೆ, theft ಕಡಿಮೆ ಮಾಡದೆ, ಹೇಗೆ ನೀವು loss ಅನ್ನು ಕಡಿಮೆ ಮಾಡುತ್ತೀರಿ? ಹೆಚ್ಚು ಹೆಚ್ಚಾಗಿ ದುಡ್ಡು ಕೊಟ್ಟರೆ ಆಗುತ್ತದೆಯೇ? ದುಡ್ಡು ಕೊಟ್ಟರೆ. improvement ಆಗಿ ಬಿಡುತ್ತದೆಯೇ? ಹೆಚ್ಚು ದುಡ್ಡು ಕೊಟ್ಟಷ್ಟೂ ಹೆಚ್ಚು loss ಗಳು ಆಗುತ್ತಿರುತ್ತದೆ. ಹೆಚ್ಚು ದುಡ್ಡು ಕೊಟ್ಟರೆ ಹೆಚ್ಚು loss ಆಗುತ್ತದೆ. ಈಗ sccording to me, Irrigation ಇರಬಹುದು, PWD ಇರಬಹುದು, I don't know, somebody may agree and somebody may not agree. ನನ್ನ ಪ್ರಕಾರ ಕೆಲಸದ ಮೇಲೆ 50 ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗುವುದಿಲ್ಲ, ಇನ್ನು 50 ರೂಪಾಯಿಗಳಲ್ಲಿ ಕಂಟ್ರಾಕ್ಟರ್ 20% ಎಂದು ಇಟ್ಟು ಬಿಡೋಣ, ಇನ್ನೊಂದು 5% ಬೇರೆ ಯಾರಿಗಾದರೂ ಎಂದು ಎತ್ತಿ ಬಿಡೋಣ, 60% ಆದರೂ ಕೆಲಸದ ಮೇಲೆ ಖರ್ಚಾಗಬೇಕಲ್ಲವೇ?.....

ಶ್ರೀ ಬಿ.ಶಿವರಾಂ : Engineer percentage 25ಸೇರಿಸಿಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಅದು ಇರಲಿ.Unless this is improved, ನೀವು " outlay ಹೆಚ್ಚು ಮಾಡಿಕೊಂಡು ಹೋಗುತ್ತೇವೆ," "ದುಡ್ಡು ಹೆಚ್ಚು ಕೊಡುತ್ತೇವೆ" ಎಂದರೆ ಆಗುವುದಿಲ್ಲ. ಇದರಿಂದ improvement ಏನಾಗುತ್ತದೆ? ರಸ್ತೆಗಳ ಅಭಿವೃದ್ಧಿ ಏನಾಗುತ್ತದೆ? ಎಲ್ಲಿ ನೀರಾವರಿ project ಗಳು ಮುಗಿಯುತ್ತವೆ? This is where exactly, leakage is there, high leakage. ನಾನು ಅದಕ್ಕಾಗಿಯೇ ಒಂದು ಸಾರಿ ಹೇಳಿದೆ. ಸಾಲ ಮಾಡಿ ಕೊಡ್ರಿ ಎಂದರು. ನಾನು ಹೇಳಿದೆ, ಸಾಲ ಮಾಡಿಕೊಂಡು ಬಂದಿದ್ದರೂ ಕೂಡ, ಅದಕ್ಕೂ ನಾವು ಅಸಲು, ಬಡ್ಡಿ ಕೊಡಬೇಕಲ್ಲವೇ? ಈಗ 1 ಸಾವಿರ ಕೋಟಿ ರೂಪಾಯಿಗಳನ್ನು ಸಾಲ ತೆಗೆದುಕೊಂಡು ಬಿಟ್ಟು, 500 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿಬಿಟ್ಟು ಇನ್ನು 500 ಕೋಟಿ ರೂಪಾಯಿಗಳನ್ನು ಗುಳಂ ಆಗಿ ಹೋದರೆ, 1 ಸಾವಿರ ಕೋಟಿ ರೂಪಾಯಿಗಳಿಗೆ ತಾನೇ ನಾವು ಅಸಲು ಮತ್ತು ಬಡ್ಡಿ ಕೊಡಬೇಕಾಗಿರುವುದು? ಬರೇ 500 ಕೋಟಿ ರೂಪಾಯಿಗಳಿಗೆ ಅಸಲು ಮತ್ತು ಬಡ್ಡಿಯನ್ನು ತೆಗೆದುಕೊಳ್ಳುತ್ತಾರೆಯೇ? ಇದು ಇವತ್ತು this is where we have to take serious action Serious ಆಗಿ ಇದನ್ನು ನೋಡಬೇಕು. ಅದೇನೋ Sugar factory ಬಗ್ಗೆ ಕೇಳುತ್ತಿದ್ದರಲ್ಲಾ, ಇಲ್ಲಿ ಇದು ಸರಿಪಡಿಸದೇ ನಾವು growth ಆಗಬೇಕು, rapid growth with equity ಆಗುವುದಿಲ್ಲ Imbalance ಮುಚ್ಚದೇ equity ಆಗುವುದಿಲ್ಲ. social justice ಆಗುವುದಿಲ್ಲ. Gender disparity ಇದೆಯಲ್ಲಾ ಅದು ಹೋಗುವುದಿಲ್ಲ. ಬಡತನ, ಶ್ರೀಮಂತಿಕೆ ಇವೆಲ್ಲಾ ಹೋಗುವುದಕ್ಕೆ ಕಷ್ಟವಾಗುತ್ತದೆ Education ಇಲಾಖೆಯಲ್ಲಿ ನಾವು grant-in-aid ಗಾಗಿ ಒಂದು ವರ್ಷಕ್ಕೆ 1100 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. Government Primary School ಗೆ ಖರ್ಚಾಗುವುದು 4 ಲಕ್ಷ ರೂಪಾಯಿಗಳಾದರೆ, ಅಲ್ಲಿ private school ಗೆ 8 ಲಕ್ಷ ರೂಪಾಯಿಗಳಾಗುತ್ತದೆ. High School ಗೆ 15 ಲಕ್ಷ ರೂಪಾಯಿಗಳಾದರೆ, ಅಲ್ಲಿ 17 ಲಕ್ಷ ರೂಪಾಯಿಗಳಾಗುತ್ತದೆ, ನಾವು grant-in-aid ಅನ್ನು ಅವರ salary ಗಳಿಗೆ link ಮಾಡಿಬಿಟ್ಟಿದ್ದೇವೆ. ಮಾನ್ಯ ಹೊರಟ್ಟಿಯವರು ಏನೋ ಹೇಳಲಿಕ್ಕೆ ಹೊರಟಿದ್ದಾರೆ. ಆದರೆ ಮಾನ್ಯ ಅರ್ಥ ಸಚಿವರು ಉತ್ತರ ಕೊಡುವಾಗ ಅದರ ಬಗ್ಗೆ ಏನಾದರೂ ಹೇಳಬೇಕೆಂದಿದ್ದರೆ ಹೇಳಲಿ. ನಿಮ್ಮ ಶಿಕ್ಷಣ ಇಲಾಖೆ ಮೇಲೆ ಚರ್ಚೆಯಾದಾಗ ಇದರ ಬಗ್ಗೆ ಎಷ್ಟೆಷ್ಟು ಆಗುತ್ತದೆ ಎಂದು ಬೇಕಾದರೆ ನೀವು ಉತ್ತರ ಕೊಡಿ.

ಶ್ರೀ ಎಸ್.ಎಸ್.ಪಾಟೀಲ್: ... ಇದು ಸರಿಯಲ್ಲ, ಇವರು ಬಜೆಟ್ಟಿನಲ್ಲಿ ಹೇಳಿದ್ದಾರೆ. ನಾವು ಮಾತನಾಡಬೇಕೆಂದರೆ ಟೈಮ್ ಇಲ್ಲ. Private School ಗೆ ಕೊಡಬೇಕಾಗಿರುವುದನ್ನು ಏನಾದರೂ ಮಾಡಿ ಕಟ್ ಮಾಡಬೇಕು ಎಂದು ಪ್ರಯತ್ನ ನಡೆಯುತ್ತಿದೆ. ಇದರಿಂದ ಉತ್ತರ ಕರ್ನಾಟಕ್ಕೆ ಅನ್ಯಾಯವಾಗುತ್ತದೆ. ಅದನ್ನು ಕಟ್ ಮಾಡಲಿಕ್ಕೆ ಹೊರಟರೆ ಒಂದು ದೊಡ್ಡ ಹೋರಾಟ ಮಾಡಬೇಕಾಗುತ್ತದೆ ಎಂದು ಖಂಡಿತವಾಗಿ ಹೇಳುತ್ತೇನೆ. ಇದನ್ನು ಯಾರೂ ಸಹ ಒಪ್ಪಲಿಕ್ಕೆ ಸಾಧ್ಯವಿಲ್ಲ.

ಶ್ರೀ ಸಿದ್ದರಾಮಯ್ಯ : ಮುಂದೆ ಶಿಕ್ಷಣ ಇಲಾಖೆ ಮೇಲೆ ಚರ್ಚೆ ನಡೆಯುವಂತಹ ಸಂದರ್ಭದಲ್ಲಿ ನಾವೆಲ್ಲಾ ಅದರ ಬಗ್ಗೆ ಡೀಟೈಲ್ಲಾಗಿ ಮಾತಾಡೋಣ. ಆಗ ಮಾನ್ಯ ಶಿಕ್ಷಣ ಸಚಿವರು ಆ ಚರ್ಚೆಯ ಮೇಲೆ ನಿಧಾನವಾಗಿ ಉತ್ತರ ಕೊಡಲಿ, ಈಗ ಬೇಡಿ. ಈಗ ನಾವು ಬರೀ general budget ಮೇಲೆ ಮಾತ್ರ ಚರ್ಚೆ ಮಾಡುತ್ತಿದ್ದೇವೆ. ಈ ಚರ್ಚೆಗೆ ಪ್ರತಿಯೊಬ್ಬ minister ಕೂಡ ಉತ್ತರ ಕೊಡಬೇಡಿ. ಮಾನ್ಯ ಯಡಿಯೂರಪ್ಪನವರು ಎಲ್ಲದಕ್ಕೂ ಉತ್ತರ ಕೊಡಲಿ. ಈ ಚರ್ಚೆಗೆ ಎಲ್ಲರೂ ಉತ್ತರ ಕೊಡುವುದಕ್ಕಾಗುವುದಿಲ್ಲ. It is the prerogative of the Finance Minister Mr. Yediyurappa to reply. ಇವೆಲ್ಲವನ್ನೂ ನಾವು change ಮಾಡದಿದ್ದರೆ, result ಎಷ್ಟು ಬರುತ್ತದೆ? ಎಂದು performance ನೋಡದೆ ಹೋದರೆ ಕಷ್ಟವಾಗುತ್ತಿದೆ. ನಾವು ಅದನ್ನು ಈಗ ನೋಡುತ್ತಿದ್ದೇವೆಯೇ? Private institutions ಗೆ grant-in-aid ಅನ್ನು ನಾವು ಕೊಡುತ್ತಿದ್ದೇವೆ. ಆದರೆ ಅವರು ವಿದ್ಯಾರ್ಥಿಗಳು ಕಾಪಿ ಹೊಡೆದು ಪಾಸಾಗುತ್ತಿದ್ದಾರೋ ಅಥವಾ ಇನ್ನೇನು ಆಗಿ ಪಾಸಾಗುತ್ತಿದ್ದಾರೋ ಎಂದು ನೋಡುತ್ತಿದ್ದೇವೆಯೇ?Government school ನಲಿ quality education ಯಾವ ತರಹ ಇದೆ? ಅಲ್ಲಿ ಯಾವ ತರಹ ಇದೆ? ಅಲ್ಲಿ results ಯಾವ ತರಹ ಬರುತ್ತಿದೆ ಎಂಬುದನ್ನೆಲ್ಲಾ ನೋಡಿಕೊಂಡು ನಾವು grant in aid ಕೊಡುತ್ತಿದ್ದೇವೆಯೇ? ಅಲ್ಲಿ reservation maintain ಆಗುತ್ತಿದೆಯೋ ಇಲ್ಲವೋ ಎಂಬುದನ್ನು ನಾವು ನೋಡುತ್ತಿದ್ದೇವೆಯೇ? We are not following all these things for social justice. ಈಗ ಸಾಲ ಕೊಡುವುದಕ್ಕಾಗಿ ನಾನು ಹೋದ ಸಾರಿ, ಮಾನ್ಯ ದೇಶಪಾಂಡೆಯವರು ಇಲ್ಲೇ ಇದ್ದಾರೆ, 5 ಲಕ್ಷ ಜನ ಪರಿಶಿಷ್ಟ ಜಾತಿಯವರು ፥ ಪರಿಶಿಷ್ಟ ವರ್ಗದವರು, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರನ್ನು ಸದಸ್ಯರನ್ನಾಗಿ ಮಾಡಬೇಕೆಂದು 2 ಕೋಟಿ ರೂಪಾಯಿಗಳನ್ನೋ ಅಥವಾ 3 ಕೋಟಿ ರೂಪಾಯಿಗಳನ್ನೋ ಇಟ್ಟಿದ್ದೆವು. ಆದರೆ Membership ಮಾಡಲಿಲ್ಲ. Co-oprative institutions ನಲ್ಲಿ reservations ತರಬೇಕೆಂದು ಮಾಡಿದ್ದೆವು, ಆದರೆ ಅದು ಇವತ್ತಿನವರೆಗೂ ಆಗಲಿಲ್ಲ. ಅದನ್ನು ತೆಗೆದುಕೊಂಡು ಬನ್ನಿ, social justice ಬಗ್ಗೆ ನೀವು ಮಾತನಾಡುತ್ತೀರಲ್ಲಾ? Bring reservation in Co-operative sector also. Social jusice ಎನ್ನುವ ಪದ ಬರೀ ಭಾಷಣ ಮಾಡುವುದಕ್ಕೆ ಇದೆಯೇ? ಅಲ್ಲೂ reservation ತೆಗೆದುಕೊಂಡು ಬನ್ನಿ. ಒಳ ಮೀಸಲಾತಿ ಮುಂತಾದವುಗಳೆಲ್ಲಾ ಅಲ್ಲೂ ಬರಬೇಕಲ್ಲವೇ? ಬರೇ ಭಾಷಣ ಮಾಡುವುದಕ್ಕಾಗಿಯೇ ಅವುಗಳೆಲ್ಲಾ ಇವೆಯೇ? Co-operative institutions ನಲ್ಲೂ ಬರಬೇಕು. ಎಷ್ಟು ಜನಕ್ಕೆ ಇವತ್ತು ಸಾಲ ಸಿಗುತ್ತಿದೆ? All right, ನಾವು ಬಡ್ಡಿ ಮನ್ನಾ ಮಾಡಿದ್ದೇವೆ. ರೈತರು ಕಷ್ಟದಲ್ಲಿದ್ದರು, ಆದ್ದರಿಂದ ನಾವು ಬಡ್ಡಿ ಮನ್ನಾ ಮಾಡಿದ್ದೇವೆ. ಎಷ್ಟೊಂದು ಜನ ಸಾಲ ತೆಗೆದುಕೊಂಡವರೇ ಮತ್ತೆ ಮತ್ತೆ ಸಾಲ ತೆಗೆದುಕೊಳ್ಳುತ್ತಿದ್ದಾರೆ. ಹೊ ಸದಸ್ಯರಿಗೆ ಎಷ್ಟು ಸಾಲ ಕೊಡುತ್ತಿದ್ದೇವೆ? ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರಿಗೆ ಇವತ್ತು ಯಶಿಸ್ವಿನಿ programme ಇದೆ. ಎಲ್ಲರಿಗೂ cover ಆಗುತ್ತಿದೆಯೇ? ಎಲ್ಲಿ ಆಗುತ್ತಿದೆ? ಅವರಿಗೇನು ಸಿಗುತ್ತದೆ? ಈಗ ಬಡ್ಡಿಯನ್ನು ಶೇಕಡ 4ಕ್ಕೆ ಇಳಿಸಿದ್ದೇವೆ ಎಂದಾಕ್ಷಣ, ಎಲ್ಲರೂ ಟೇಬಲ್ ಅನ್ನು ತಟ್ಟಿದ್ದೇ ತಟ್ಟಿದ್ದು.

131/2% long term loan, 12 1/2 % crop loan ಅದನ್ನು 6% ಗೆ ಹೇಗೆ ತಂದಿರಿ? ಅದಂರೆ ithe burden is on the Government. It is more than Rs.100 crores. ನೀವು ಕೇಂದ್ರ ಸರ್ಕಾರದಿಂದ ಕ್ರಾಪ್ ಲೋನ್‌ಗೆ 7% ಬಡ್ಡಿಗೆ ತೆಗೆದುಕೊಂಡು ಬರುತ್ತೀರಿ. ನಬಾರ್ಡ್‌ಗೂ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದಾದ ಮೇಲೆ ನಿಮಗೆ ನಿಮ್ಮ ಜೇಬಿನಿಂದ ಅಂದರೆ ಟ್ರೆಜರಿಯಿಂದ ಹೋಗುವುದು ಎಷ್ಟು?

ಶ್ರೀ ಆರಗ ಜ್ಞಾನೇಂದ್ರ : ನನಗೊಂದು clarification ಕೊಡಬೇಕು. ನನಗೆ ಇನ್ನೂ ಅರ್ಥವಾಗಲಿಲ್ಲ. NDA Central Government 9% ಮಾಡಿತ್ತು ತಾವು 6% ಮಾಡಿದಿರಿ. ಹೇಗೆ ಎಂದು ನನಗೆ ಸ್ವಲ್ಪ ಅರ್ಥವಾಗಲಿಲ್ಲ.

ಶ್ರೀ ಆರ್.ವಿ.ದೇಶಪಾಂಡೆ : ಆಗ crop loan upto to 50,000 rupees ಎಂದು ಮಾಡಿದ್ದರು. ಈಗ up to 3 lakhs 7% ಎಂದು ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : NDA ಸರ್ಕಾರದವರು 50 ಸಾವಿರ ರೂಪಾಯಿಗಳ ಕ್ಯಾಪ್ ಇಟ್ಟು ಬಿಟ್ಟಿದ್ದರು. Now UPA Government has increased it to Rs.3 lakhs. ಯಾವುದು ದೊಡ್ಡದು? 3 ಲಕ್ಷ ರೂಪಾಯಿಗಳು ದೊಡ್ಡದೋ ಅಥವಾ 50 ಸಾವಿರ ರೂಪಾಯಿಗಳು ದೊಡ್ಡದೋ? Crop loan ಮಾತ್ರ.iWhat about medium term loan? What about long term loan? ಅದರಿಂದ. evan assuming for arguments' sake 6 ರಿಂದ 4 ಮಾಡಿದ್ದೀರಿ ಎಂದಿಟ್ಟುಕೊಳ್ಳೋಣ. Co-oprative Society ಯಿಂದ ಒಂದೂವರೆ ಸಾವಿರ ರೂಪಾಯಿಗಳನ್ನು ಸಾಲ ಕೊಟ್ಟರು ಎಂದಿಟ್ಟುಕೊಳ್ಳೋಣ. What is the difference? Rs.30 crores. ಹೆಚ್ಚಾಗಿ 30 ಕೋಟಿ ರೂಪಾಯಿಗಳು burden ಆಗುತ್ತದೆ. ಈಗ ಅಷ್ಟೂ ಆಗುವುದಿಲ್ಲ. ಏಕೆಂದರೆ ಎಲ್ಲಾ 7%ಗೆ ಹೊರಟು ಹೋಗುತ್ತಾರೆ. ಆ ಕಡೆಗೆ ಹೊರಟು ಹೋಗುತ್ತಾರೆ. ನಿಮಗೆ co-operative society ಗಳಲ್ಲಿ credit flow ಕಡಿಮೆ ಆಗುತ್ತದೆ. ಮತ್ತೆ ಎಲ್ಲರಿಗೂ ಸಿಗುವುದಿಲ್ಲ. ಅದರಿಂದ Government ಗೆ ದೊಡ್ಡ burden ಏನೂ ಇಲ್ಲ for reducing from 6% to 4% Barden ಇನ್ನೂ ಕಡಿಮೆಯೇ ಆಯಿತು. ಅದನ್ನೇನು ದೊಡ್ಡ ಕ್ರಾಂತಿಕಾರಿ ಎಂದು ಹೇಳುವುದೇ? 4% ರೈತರಿಗೆ ಕೊಟ್ಟಿದ್ದೇವೆ; ನಾವು ರೈತ ಪರ ಎಂದು ಹೇಳುವುದೇ? All right, I welcome it. 4% ಗೆ ಕೊಡಬೇಕು. ರೈತರಿಗೆ 4% ನಲ್ಲಿ ಕೊಡಬೇಕೆಂದು ಸ್ವಾಮಿನಾಥನ್ ರಿಪೋರ್ಟ್‌ನಲ್ಲಿ ಶಿಫಾರಸ್ಸು ಇದೆ. ಅಷ್ಟೇ ಅಲ್ಲ, ನಾನು ಮಾನ್ಯ ಚಿದಂಬರಂರವರಿಗೆ ಮೂರು ಸಾರಿ ಭೇಟಿ ಮಾಡಿ ಹೇಳಿದ್ದೇನೆ. 6%ಗೆ Commercial Bank ಗಳಲ್ಲಿ ಬೇರೆ ಬೇರೆ ಗ್ರಾಮೀಣ ಬ್ಯಾಂಕುಗಳಲ್ಲಿ ತೆಗೆದುಕೊಂಡು ಬನ್ನಿ ಎಂದು ನಾನು ಅವರಿಗೆ ಹೇಳಿದ್ದೆ. ಇದರಿಂದ ರೈತರಿಗೆ ಕಡಿಮೆ ಪರ್ಸಂಟೇಜ್‌ನಲ್ಲಿ ಸಾಲ ಸಿಗುತ್ತದೆ ಎಂದು ಹೇಳಿದ್ದೆ. ಬರೀ ಶ್ರೀಮಂತರು ಮಾತ್ರ 7% ನಲ್ಲಿ ಬ್ಯಾಂಕುಗಳಲ್ಲಿ ಸಾಲ ಏಕೆ ತೆಗೆದುಕೊಳ್ಳಬೇಕು? ರೈತರಿಗೆ ಏಕೆ ಸಿಕ್ಕಬಾರದು ಈ agument ಅನ್ನೂ ಸಹ ನಾವು ಮಾಡಿದ್ದೇವೆ 6 ರಿಂದ 4% ಮಾಡಿದ್ದು OK, but burden is low. There is no burden on the Government exchequer. ನಾನು ಇನ್ನೂ ಬಹಳಷ್ಟು ವಿಚಾರಗಳನ್ನು ಮಾತನಾಡಬೇಕೆಂದು ಇದ್ದೇನೆ. ಮಾನ್ಯ ಅಧ್ಯಕ್ಷರೆ, ನಾನು ಇನ್ನೊಂದು ಅರ್ಧ ಗಂಟೆ ಮಾತನಾಡಲೇ?

ಅಧ್ಯಕ್ಷರು : ಮಾತನಾಡಿ.

ಶ್ರಿ ಸಿದ್ದರಾಮಯ್ಯ : ಏಕೆಂದರೆ, ಅವರು ಉತ್ತರ ಕೊಡಬೇಕೆಂದು ಹೇಳುತ್ತಿದ್ದರು, ಆದ್ದರಿಂದ ನಾನು ಕೇಳಿದೆ.

ಒಬ್ಬ ಮಾನ್ಯ ಸದಸ್ಯರು : ನೀವು ಬರೀ ಟೀಕೆ ಮಾಡುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ನಾನು ಇಲ್ಲಿ ಯಾವುದನ್ನೂ ಟೀಕೆ ಮಾಡುತ್ತಿಲ್ಲ. ನಾವು ಸಲಹೆ ಕೊಟ್ಟರೂ ಅದು ನಿಮಗೆ ಟೀಕೆ ತರಹ ಕಂಡರೆ ನಾನೇನು ಮಾಡಲಿಕ್ಕೆ ಸಾಧ್ಯವಿದೆ? ನಾನು ಟೀಕೆ ಮಾಡಿದೆನೇ? .. ಎಂದು ಮಾತ್ರ ನಾನು ಹೇಳಿದೆ.

ಶ್ರೀ ಕೆ.ಎನ್. ರಾಜಣ್ಣ: ತಾವು ರೇಟ್ ಆಫ್ ಇಂಟರೆಸ್ಟ್ ಬಗ್ಗೆ ಹೇಳುತ್ತಿದ್ದೀರಿ, ಬಹಳ ಒಳ್ಳೆಯದು. ಆದರೆ ಪ್ರಮುಖವಾಗಿ ಎಲ್ಲಾ ರೈತರಿಗೂ ಸಾಲ ಸಿಗುತ್ತಿದೆಯಾ ಎಂದು ನೋಡಬೇಕು. ಸುಮಾರು 70 ಲಕ್ಷ ಅಗ್ರಿಕಲ್ಚರ್ ಫ್ಯಾಮಿಲೀಸ್ ಇದೆ, ಎಂದು ನಮ್ಮಲ್ಲಿ ಅಂಕಿ ಸಂಖ್ಯೆ ಇದೆ. ಕೋ–ಆಪರೇಟಿವ್ ಇನ್ ಸ್ಟಿಟ್ಯೂಷನ್ಸ್‌ನಲ್ಲಿ ಸಿಗುತ್ತಿರತಕ್ಕಂಥದ್ದು ಸುಮಾರು 15–16 ಲಕ್ಷ ಅಗ್ರಿಕಲ್ಚರ್ ಫ್ಯಾಮಿಲೀಸ್. ನಿಮ್ಮ ಕಮರ್ಷಿಯಲ್ ಬ್ಯಾಂಕ್ ಎಲ್ಲ ಲೆಕ್ಕ ಹಾಕಿದರೆ ಸುಮಾರು 27 ಪರ್ಸೆಂಟ್‌ವರೆಗೆ ಇದೆ ಎಂದು ಲೆಕ್ಕ ಇದೆ. 70 ಲಕ್ಷ ಅಗ್ರಿಕಲ್ಚರ್ ಫ್ಯಾಮಿಲೀಸ್ ಇಟ್ಟುಕೊಂಡು ನಾವು .. 30 ಲಕ್ಷ ಫ್ಯಾಮಿಲೀಸ್ ಕವರೇಜ್ ಮಾಡಿರುವುದರಿಂದ 40 ಲಕ್ಷ ಫ್ಯಾಮಿಲೀಸ್ ಪ್ರೈವೇಟ್ ಮನಿ ಲಿಂಡರ್ಸ್ ಹತ್ತಿರವೇ ಹೋಗುತ್ತಿದ್ದಾರೆ. ಅದಕ್ಕೆ ಏನು ಮಾಡುತ್ತಿದ್ದೀರಿ ಎನ್ನತಕ್ಕಂಥದ್ದನ್ನು ಹೇಳಬೇಕು. ಒಂದು ಪರ್ಸೆಂಟ್ ಕಡಿಮೆ ಮಾಡುತ್ತೇವೆ, ಎರಡು ಪರ್ಸೆಂಟ್ ಕಡಿಮೆ ಮಾಡುತ್ತೇವೆ, ಅರ್ಧ ಪರ್ಸೆಂಟ್ ಕಡಿಮೆ ಮಾಡುತ್ತೇವೆ, ಎಂದು ಹೇಳುವುದು ಹೆಚ್ಚು ಮಹತ್ವದ್ದು ಅಲ್ಲ. ಆದರೆ ಅತಿ ಹೆಚ್ಚು ಜನ ಖಾಸಗಿ ಲೇವಾದೇವಿದಾರರ ಹತ್ತಿರ ಏನು ಸಾಲಕ್ಕೆ ಹೋಗುತ್ತಿದ್ದಾರೆ, ಅದನ್ನು ತಪ್ಪಿಸುವುದಕ್ಕೆ ಇನ್ನು ಹೆಚ್ಚು ಹಣವನ್ನು ಸಹಕಾರಿ ಸಂಸ್ಥೆಗಳು ಇರಬಹುದು, ಮತ್ತು ಬೇರೆ ಇರಬಹುದು, ಅವರಿಗೆ ಸಾಲ ದೊರಕುವ ರೀತಿಯಲ್ಲಿ ಕಾರ್ಯಕ್ರಮ ರೂಪಿಸಬೇಕೆಂದು ನನ್ನ ಸಲಹೆ.

ಶ್ರೀ ಕೆ.ಆರ್.ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ರಾಜಣ್ಣನವರು ಎತ್ತಿದ ವಿಷಯಕ್ಕೆ, ಇದು ಸಾಮಾಜಿಕ ಮತ್ತು ಆರ್ಥಿಕ ಜಂಟಿ ಸಮಸ್ಯೆ. ಈ ರಾಜ್ಯದಲ್ಲಿ ಕೃಷಿ ಯೋಗ್ಯವಾಗಿರತಕ್ಕಂತಹ ಒಟ್ಟು ಜಮೀನು ಒಡೆತನ ರಾಜ್ಯದ ಒಟ್ಟು ಜನಸಂಖ್ಯೆಯ ಎಷ್ಟು ಶೇಕಡಾವಾರು ಜನರಿಗೆ ಸೇರುತ್ತದೆ ಹೇಳಿ, ಮೇಜರ್ ಇರ್ರಿಗೇಷನ್‌ಗೆ ಇಷ್ಟು ದೊಡ್ಡ ಹಣ ಖರ್ಚುಮಾಡುತ್ತೇವೆ, ಟೋಟಲ್ ಎಕ್ಸ್‌ಟೆಂಟ್ ನಾವು ಏನು ಕಮಾಂಡ್ ಏರಿಯಾ ಕ್ರಿಯೇಟ್ ಮಾಡುತ್ತಿದ್ದೇವೆ, ಇದರ ಓನರ್‌ಶಿಪ್ ಎಷ್ಟು ಪರ್ಸೆಂಟ್ ಜನರ ಕೈಯಲ್ಲಿ ಇದೆ ಹೇಳಿ, ಅದಕ್ಕೆ ಕೋ ಆಪರೇಟಿವ್ ಸೊಸೈಟೀಸಲ್ಲಿ ಮೆಂಬರ್‌ಶಿಪ್ ಇನ್ನು ಎಷ್ಟು ಹೆಚ್ಚಿಗೆ ಮಾಡಿದರೂ ಕೂಡ ಪ್ರಯೋಜನವಾಗುವುದಿಲ್ಲ. ನಿಮ್ಮ ಲೋನಿಂಗ್ ಸಿಸ್ಟಮ್ ಹೇಗೆ ಇದೆ? ಶ್ಯೂರಿಟಿ ಇಲ್ಲದೆ ನೀವು ಲೋನ್ ಕೊಡುವುದಿಲ್ಲ. ಶ್ಯೂರಿಟಿ ಎಂದರೆ ಏನು ಭೂಮಿಕೆ. ಭೂಮಿಯ ಒಡೆತನದ ಹಕ್ಕು ಇರತಕ್ಕಂತಹವರು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ಎಷ್ಟು ಜನ ಇದ್ದಾರೆ? ಈಗ ನಾವು ಭೂ ಸುಧಾರಣೆಯನ್ನು ಜಾರಿಗೆ ತಂದ ಮೇಲೆ ಕೂಡ ರಾಜಣ್ಣನವರೇ ನಿಮಗೆ ಶಾಕ್ ಆಗಬಹುದು, 16 ಪರ್ಸೆಂಟ್‌ಗಿಂತ ಮೇಲೆ ಹೋಗುವುದಿಲ್ಲ. ಹೆಚ್ಚು ಎಂದರೆ 16 ಪರ್ಸೆಂಟ್‌ಗೆ ಬಂದು ನಿಲ್ಲುತ್ತದೆ. ಯಾರು ಕೃಷಿ ಕಾರ್ಮಿಕರಾಗಿ ಕೃಷಿಕನ ಮೇಲೆ ಜಮೀನ್ದಾರನ

ಮೇಲೆ ಆಧಾರಪಟ್ಟು ಜೀವನ ಮಾಡುತ್ತಿದ್ದಾರೆ, ಅವರು ಈಗ ಕ್ರಮೇಣ ಏನು ಮಾಡುತ್ತಿದ್ದಾರೆ, ಅಲ್ಲಿಯೂ ಜೀವನ ಗೌರವಯುತವಾಗಿ ನಡೆಯುತ್ತಿಲ್ಲವೆಂದು ಹೇಳಿ, ಹೊಸ ಪೀಳಿಗೆಗೆ ಜೀವನಕ್ಕಿಂತಲೂ ಸ್ವಾಭಿಮಾನದ ಕಡೆ ಹೆಚ್ಚು ಗಮನ ಇರುವುದರಿಂದ ಕೃಷಿ ಕಾರ್ಮಿಕರಾಗಿ ಬರುವುದಕ್ಕೆ ಒಪ್ಪುವುದಿಲ್ಲ. ಅವರು ಬೇರೆ ಕಸುಬುಗಳನ್ನು ಕಲಿತುಕೊಂಡು ಹೋಗುತ್ತಿದ್ದಾರೆ. ಕಾರ್ಪೆಂಟರಿ, ಮುಂತಾದ ಉದ್ಯೋಗ ನೋಡಿಕೊಂಡು ದೂರದ ಊರಿಗೆ ಹೋಗುತ್ತಿದ್ದಾರೆ. ಇದು ಬಹಳ ದೊಡ್ಡ ಸಮಸ್ಯೆ. ಇದಕ್ಕೆ ನಾವು ಹೆಚ್ಚಿಗೆ ಹಣವನ್ನು ಸಹಕಾರಿ ಕ್ಷೇತ್ರಕ್ಕೆ ಮೀಸಲಿಡುವುದರಿಂದ ಸಾಲ್ವ್ ಆಗುತ್ತದೆ ಎಂದು ನನಗನ್ನಿಸುವುದಿಲ್ಲ. ಕಾರಣ ಮೂಲಭೂತವಾಗಿರತಕ್ಕಂತಹ ಸಮಸ್ಯೆ ಇದೆ. ಮತ್ತೆ ಈ ಸಮಾಜ ಹೇಗೆ ಇದೆ ಎಂದರೆ, ಎಲ್ಲಿ ಸಾಮಾಜಿಕವಾದ ಹಿಂದುಳಿದಿರುವಿಕೆ ಹೆಚ್ಚು ಇದೆ, ಆರ್ಥಿಕವಾಗಿ ಹಿಂದುಳಿದಿರುವಿಕೆ ಕೂಡ ಅಲ್ಲಿಯೇ ಇದೆ. ಉದಾಹರಣೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ತೆಗೆದುಕೊಂಡರೆ, ಸೋಷಿಯಲೀ ಅಂಡರ್ ಪ್ರಿವಿಲೇಜ್ಡ್ ಕ್ಲಾಸೂ ಅವರೇ, ಎಕನಾಮಿಕಲಿ ಬಹಳ ವೀಕರ್ ಸೆಕ್ಷನ್ಸ್ ಕೂಡ ಅವರೇ. ಈ ಫ್ಯಾಕ್ಟನ್ನು ನಾವು ಮರೆಯುವುದಕ್ಕೆ ಸಾಧ್ಯವೇ ಇಲ್ಲ ಅವರಿಗೆ ಈಗ ಎಲ್ಲೋ ಅಲ್ಲಿ ಒಂದು ಚೂರು, ಇಲ್ಲಿ ಒಂದು ಚೂರು ಜಮೀನು ಕೊಡುತ್ತಿದ್ದೇವೆ. ಒಂದು ಊರಿಗೆಲ್ಲಾ ನೀವು ಸರ್ವೇ ಮಾಡಿ ನೋಡಿ ಪರಿಶಿಷ್ಟ ಜಾತಿಯ 100 ಕುಟುಂಬಗಳು ಇದ್ದರೆ, ಅರ್ಧ ಎಕರೆ, ಒಂದು ಎಕರೆ, ಒಂದುವರೆ ಎಕರೆ, ಎರಡು ಎಕರೆ ಇರವವರು ಎಲ್ಲಾ ಸೇರಿ ಒಂದು 10 ಜನ ಸಿಗುತ್ತಾರೆ. ಅಲ್ಲಿಗೆ ನೆಗೆದು ಬಿದ್ದು ಹೋಯಿತು. It is a different problem alttogether.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಈ ವಾದವನ್ನು ಒಪ್ಪಲಿಕ್ಕಾಗುವುದಿಲ್ಲ. ಓನರ್‌ಶಿಪ್ ಇದ್ದಾಕ್ಷಣಕ್ಕೆ ಅವನು ಒಬ್ಬನೇ ಬೆನಿಫಿಷರಿ ಆಗುವುದಿಲ್ಲ. ಕ್ರಿಯೇಷನ್ ಆಫ್ ಜಾಬ್ ಎಷ್ಟಾಗಿದೆ ಎಂದು ನೋಡ ಬೇಕಾಗುತ್ತದ By giving inputs ಅಗ್ರಿಕಲ್ಚರ್ ಆ್ಯಕ್ಟಿವಿಟೀಸ್ ಜಾಸ್ತಿ ಆದರೆ, ಜಾಬ್ ಕ್ರಿಯೇಷನ್ ಜಾಸ್ತಿಯಾಗುತ್ತದೆ. ಓನರ್ ಒಬ್ಬನೇ ಇವತ್ತು ಅಲ್ಲಿ ಎಂಪ್ಲಾಯಿ ಆಗುವುದಿಲ್ಲ. Production for the whole area ಆಗಬೇಕೆಂದರೆ, it involves job. ರೂರಲ್ ಏರಿಯಾಗೆ ನೀವು ಇಂಪುಟ್ ಕೊಡುವುದರಿಂದ ಮತ್ತು ಸಬ್ಸಿಡಿ ಕೊಡುವುದರಿಂದ ಉದ್ಯೋಗ ಸೃಷ್ಟಿಯಾಗುತ್ತದೆ. 28% ಇರುವ ಸಿಟಿ 12 ಪರ್ಸೆಂಟ್ ಗ್ರೋಥ್ ಇರುವ ಹಳ್ಳಿಗೆ ಏಕೆ ಹೋಲಿಕೆ ಆಗುತ್ತಿಲ್ಲ ಎಂದರೆ ಆ ಗ್ರೋಥ್ ಆಗುತ್ತಿಲ್ಲ. ಅಗ್ರಿಕಲ್ಚರ್ ಪ್ರೊಡಕ್ಷನ್ ರೆಡ್ಯೂಸ್ ಆಗಿರುವುದರಿಂದ ಈ ವಾದ ಸರಿಯಲ್ಲ. ಯಾರೂ 50 ಎಕರೆ ಜಮೀನು ಇರುವವನು ಒಬ್ಬನೇ ತಿನ್ನುವುದಕ್ಕಾಗುವುದಿಲ್ಲ He gives some employment. Rural employment is a must now.

(ಈ ಹಂತದಲ್ಲಿ ಶ್ರೀ ಎ.ಟಿ.ರಾಮಸ್ವಾಮಿ ಯವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಾನು ಎರಡು ಆ್ಯಸ್ಪೆಕ್ಟ್ಸ್ ಹೇಳಿದೆ. ಒಂದು ಅವನೇ ತಿನ್ನುತ್ತಾನೆ ಎಂದು ನಾನು ಹೇಳಲಿಲ್ಲ. ಒಂದು ಅವನು ಸ್ವಾಭಿಮಾನದಿಂದ ಬದುಕಬೇಕೆಂದು ಇಷ್ಟ ಪಡುತ್ತಾನೆ. ನೀವು ಕರೆದರೂ ಅವನು ಕೂಲಿಗೆ ಬರುತ್ತಿಲ್ಲ. ಅವನು ಬಡಗಿ ಆಗಿ, ಟೈಲರ್ ಆಗಿ, ಇನ್ನೊಂದು ಕೂಲಿ ಕೆಲಸ ಮಾಡಿಕೊಂಡು ಪಕ್ಕದ ಊರಿಗೆ ಹೋಗುವುದಕ್ಕೆ ಇಷ್ಟ ಪಡುತ್ತಾನೆ. ಅವನ ಸ್ವಂತ ಗ್ರಾಮದಲ್ಲಿ ಬಂದು ಬಾರೋ ಹೋಗೋ ಎಂದು ಅನ್ನಿಸಿಕೊಳ್ಳುವುದಕ್ಕೆ ಅವನು

ತಯಾರಿಲ್ಲ. ಈ ಪ್ರಶ್ನೆ ಅವರಲ್ಲಿ ಪ್ರಾರಂಭವಾಗಿದೆ. ಕೃಷಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದ ಪ.ರ್ ಏನಿತ್ತು, ಅದು ಒಂದು ಕಾರಣ. ಎರಡನೆಯದು ಮೆಕನೈಸ್ ಅಗ್ರಿಕಲ್ಚರ್ ನಾವು ಮೊದಲು ಒಂದು ಟ್ರಂಚ್ ಹೊಡೆಯಬೇಕಾದರೆ 20 ಜನರಿಗೆ ಕೂಲಿಗೆ ಕರೆದರೆ 30 ದಿವಸ ಕೆಲಸ ಮಾಡುತ್ತಿದ್ದರು. ಈಗ ಜೆಸಿಬಿ ಯಂತ್ರದಲ್ಲಿ ಬೆಳಿಗ್ಗೆ ಬಂದರೆ ನಾಲ್ಕು ನಾಲ್ಕುವರೆ ಗಂಟೆಗೆ ಕೆಲಸ ಮುಗಿಸಿ ಹೋಗುತ್ತಾರೆ. ಟ್ರ್ಯಾಕ್ಟರ್ ಬಂದಿದೆ, ಜೆಸಿಬಿ ಬಂದಿದೆ, ಪವರ್ ಟ್ರಿಲ್ಲರ್ ಬಂದಿದೆ, ಬುಲ್ಡೋಜರ್ ಬಂದಿದೆ, you should appreciate this also. They have sufficiently been disengaged.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಶೇಕಡಾವಾರು ಕೃಷಿಗೆ ಇವರು ಕೊಡುವುದು 20.3 ಪರ್ಸೆಂಟ್ 66.6 ಪರ್ಸೆಂಟ್ ಉದ್ಯೋಗವನ್ನು ನಾವು ಹಳ್ಳಿ ಕಡೆ ಸೃಷ್ಟಿ ಮಾಡಿದ್ದೇವೆ. ಇವತ್ತು ನೀವು ಸಹಕಾರ ಸಂಘಗಳಿಗೆ ಹಣ ಕೊಡದೆ ಇದ್ದುದಕ್ಕೆ ಪ್ಯಾರಲಲ್ ಆಗಿ ನಾವು ಏನು ಡೆವಲಪ್ ಮಾಡಿದ್ದೇವೆ? ಕಮರ್ಷಿಯಲ್ ಬ್ಯಾಂಕ್‌ಗಳಲ್ಲಿ ಹೋಗಿ ಕ್ಯೂ ನಿಂತುಕೊಂಡು ನೀವು ಕೇಳಿದರೆ, ನಾನು ಜಮೀನು ಇಡುತ್ತೇನೆಂದು ಹೇಳಿದರೆ ದುಡ್ಡು ಕೊಡುತ್ತಾರಾ? ನಿಮಗೆ ಇವತ್ತೂ ನೇರವಾಗಿ ಒಂದು 10,000 ರೂಪಾಯಿ ಸಾಲ ಬಡವರಿಗೆ ಸಿಗಬೇಕಾದರೆ ಯಾವುದಾದರೂ ಸಹಕಾರಿ ಸಂಘಗಳಲ್ಲಿಯೇ ಅವಕಾಶ ಇರುವುದು. ಯಾವುದೇ ಕಮರ್ಷಿಯಲ್ ಬ್ಯಾಂಕುಗಳಲ್ಲಿ ಸಿಗುವುದಿಲ್ಲ. ಇವುಗಳನ್ನು ಇದಕ್ಕೆ ಪ್ಯಾರಲಲ್ ಆಗಿ ಬೆಳೆಸಿದ್ದೇ ಹೊರತು, ಸಹಕಾರಿ ಸಂಘಗಳ ಮೇಲೆ ಹೆಚ್ಚಿಗೆ ಮಾತನಾಡುವುದು ಒಳ್ಳೆಯದಲ್ಲ ಎಂದು ನನ್ನ ಅನಿಸಿಕೆ.

ಶ್ರೀ ಎಸ್. ಸಿದ್ದರಾಮಯ್ಯ : ಈಗ ನಾನು ಅದನ್ನೇ ಹೇಳುತ್ತಿದ್ದೆ. ರಾಜಣ್ಣನವರು ಎಲ್ಲರಿಗೂ ಸಾಲ ಸಿಗುವುದಿಲ್ಲ ಎಂದು ಹೇಳಿದರು ಎಲ್ಲರಿಗೂ ಕವರ್ ಮಾಡಬೇಕು, ಕ್ರೆಡಿಟ್ ಫ್ಲೋ ಹೆಚ್ಚಿಗೆ ಮಾಡುವುದಕ್ಕೆ ಅವಕಾಶ ಮಾಡಬೇಕು. ಕ್ರೆಡಿಟ್ ಫ್ಲೋ ಅಗ್ರಿಕಲ್ಚರ್ ಸೆಕ್ಟಾರ್‌ಗೆ ಹೆಚ್ಚಿಗೆ ಬರದೇ ಹೋದರೆ, ಯಾವಾಗ ಅವಶ್ಯಕತೆ ಇದೆ, ಆಗ ಎಲ್ಲರಿಗೂ ಸಾಲ ಸಿಕ್ಕದೆ ಹೋದರೆ, ಅವರು ನ್ಯಾಚುರಲಿ ಏನು ಮಾಡುತ್ತಾರೆ, ಎಲ್ಲೋ ಬಡ್ಡಿ ಕೊಡುವವರ ಹತ್ತಿರ ಹೋಗುತ್ತಾರೆ. ತಿಂಗಳ ಬಡ್ಡಿ ವಾರದ ಬಡ್ಡಿ ದಿನದ ಬಡ್ಡಿ ಈ ತರಹ ಕೊಡುವವರ ಬಳಿ ಹೋಗುತ್ತಾರೆ. ಇದಕ್ಕಿಂತ ಹೆಚ್ಚು ಅಲ್ಲಿ ಸಾಲ ಮಾಡುತ್ತಾರೆ. ಸಾಲಗಾರರಾಗುತ್ತಾರೆ. ನಾನು ಹೋದ ಸಾರಿ ಹೇಳಿದ್ದೆ. ಯಾರಿಗೆ ಶೇರು ಹಣ ಕಟ್ಟುವುದಕ್ಕಾಗುವುದಿಲ್ಲ, ದಲಿತರು, ಹಿಂದುಳಿದವರು, ಮತ್ತು ಅಲ್ಪ ಸಂಖ್ಯಾತರು ಇವರನ್ನು ಸದಸ್ಯರನ್ನಾಗಿ ಮಾಡಬೇಕು ಕನಿಷ್ಟ 10 ಲಕ್ಷ ಸದಸ್ಯರನ್ನು ಮಾಡಬೇಕು. ಹೀಗೆ ಮಾಡುವುದರಿಂದ ಯಶಸ್ವಿನಿ ಕಾರ್ಯಕ್ರಮ ಉಪಯೋಗಸಿಗುತ್ತದೆ.

ಶ್ರೀ ಶಿವಾನಂದ ಪಾಟೀಲ್ : ಸಿದ್ದರಾಮಯ್ಯನವರೇ ಒಂದು ನಿಮಿಷ. ಶೇ ಮೆಂಬರ್ ಹೆಚ್ಚಿಗೆ ಮಾಡಿದರೆ ಕ್ಯಾಪಿಟಲ್ ಎಲ್ಲಿಂದ ತರುತ್ತೀರಿ?

ಶ್ರೀ ಸಿದ್ದರಾಮಯ್ಯ : ಗವರ್ನಮೆಂಟ್ ಕೊಡಬೇಕು.

ಶ್ರೀ ಶಿವಾನಂದ ಪಾಟೀಲ್ : ನೀವೇ ಕೊಡಬೇಕು ಅದು ಹೇಳಿ. ನೀವು ರೀ ಇಂಟರೆಸ್ಟ್ ಇನ್‌ಸೆಂಟೀವ್ ಕೊಟ್ಟರೆ ಆಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಗವರ್ನಮೆಂಟ್ ಕೊಡುತ್ತದೆ. ಗವರ್ನಮೆಂಟ್ ಷೇರ್ ಎಷ್ಟು ಕೊಡಬೇಕೋ ಅದನ್ನು ಕೊಡೋಣ.

ಶ್ರೀ ಶಿವಾನಂದ ಪಾಟೀಲ್ : ನಬಾರ್ಡ್‌ನವರು ಎಷ್ಟು ಕೊಡುತ್ತಾರೆಂದು ನೀವು ವಿಚಾರ ಮಾಡಿದ್ದೀರಾ?

ಶ್ರೀ ಸಿದ್ಧರಾಮಯ್ಯ : ಅದನ್ನು ಅವರ ಜೊತೆ ಮಾತನಾಡಬೇಕು.

ಶ್ರೀ ಶಿವಾನಂದ ಪಾಟೀಲ್ : You suggest t

ಶ್ರೀ ಸಿದ್ಧರಾಮಯ್ಯ : ರಿಸರ್ವ್ ಬ್ಯಾಂಕ್‌ನವರ ಜೊತೆ ಮಾಡನಾಡಬೇಕು, ನಬಾರ್ಡ್‌ನವರ ಜೊತೆ ಮಾತನಾಡಬೇಕು, ಕೇಂದ್ರ ಸರ್ಕಾರದವರ ಜೊತೆ ಮಾತನಾಡಬೇಕು. ಸುಮ್ಮನೆ ಬರುತ್ತದಾ? ಒಂದು ವೇಳೆ ಕರ್ನಾಟಕದಲ್ಲಿ ನಾವು ಆರು ಪರ್ಸೆಂಟ್ ಬಡ್ಡಿ ಮಾಡದೇ ಹೋಗಿದ್ದರೆ, ಮಾನ್ಯ ಚಿದಂಬರಂರವರು ಈ ಸಾರಿ ಏಳು ಪರ್ಸೆಂಟ್‌ಗೆ ಬೆಳೆ ಸಾಲ ಕೊಡುತ್ತಿದ್ದರೋ ಇಲ್ಲವೋ ಗೊತ್ತಿಲ್ಲ. ಅದರ ಬಗ್ಗೆ ಯೋಚನೆ ಮಾಡುತ್ತಿದ್ದರೋ ಇಲ್ಲವೋ ಗೊತ್ತಿಲ್ಲ. ಬಹುಶ: ಅವರಿಗೆ ಇದೂ ಒಂದು ಪ್ರೇರಣೆ ಇರಬಹುದು. ನಾವು ಹೋಗಿ ಅವರಿಗೆ ಒತ್ತಾಯ ಮಾಡಿದ್ದು, ಇದು ಒಂದು ಪ್ರೇರಣೆ ಇರಬಹುದು. ... ಎಲ್ಲಾದರೂ ಒಂದು ಕಡೆ ಪ್ರಾರಂಭ ಆಗಬೇಕು. ಅದಕ್ಕೋಸ್ಕರವಾಗಿ ಸದಸ್ಯರನ್ನು ನೀವು ....

ಶ್ರೀ ಅರಗ ಜ್ಞಾನೇಂದ್ರ : ಪ್ರೇರಣೆ ಕೊಟ್ಟಿದ್ದು, ಏನಾದರೂ ಇದ್ದರೆ ಎನ್‌ಡಿಎ ಗವರ್ನಮೆಂಟ್ 50,000 ಕ್ಕೆ ಕಡಿಮೆ ಮಾಡಿ, ಮುಂದಿನ ಭವಿಷ್ಯಕ್ಕೆ ಕಣ್ಣು ತರೆಸಿದ್ದು.

ಶ್ರೀಬಿ.ಎ. ಜೀವಿಜಯ : ಎನ್‌ಡಿಎ ಗವರ್ನಮೆಂಟ್ ಏನು ಮಾಡಿದೆ?

ಶ್ರೀ ಸಿದ್ಧರಾಮಯ್ಯ : ಎನ್‌ಡಿಎ ಗವರ್ನಮೆಂಟ್ ರೈತರಿಗೆಲ್ಲಾ ಉದ್ದಾರ ಮಾಡಿದೆ ಸರಿಯಾ? ನಾನು ಎನ್‌ಡಿಎ ಗವರ್ನಮೆಂಟ್ ಬೈಯಲಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಹಾಗಲ್ಲ ಸಾರ್, ಪ್ರೇರಣೆ ಬಗ್ಗೆ ನಾನು ಹೇಳಿದ್ದು.

ಶ್ರೀ ಸಿದ್ಧರಾಮಯ್ಯ : ನಾನು ನನ್ನ ಪ್ರೇರಣೆ ಬಗ್ಗೆ ಹೇಳಿದೆ, ನೀವು ಭಾಷಣ ಮಾಡುವಾಗ ನಿಮ್ಮ ಪ್ರೇರಣೆ ಬಗ್ಗೆ ಹೇಳಿ.

ಒಬ್ಬ ಮಾನ್ಯ ಸದಸ್ಯರು : ಅರಗ ಜ್ಞಾನೇಂದ್ರರವರು ಮಾತನಾಡಿದ್ದು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಜ್ಞಾನೇಂದ್ರರವರೇ, ಎನ್‌ಡಿಎ ಸರ್ಕಾರ ಏನೇನು ಕೊಟ್ಟಿದೆ ಎಂದು ಒಂದು ಪಟ್ಟಿ ಹೇಳಿ, ನಾವು ಬರೆದುಕೊಂಡು ಆ ಮೇಲೆ ನಾವು ಹೇಳುತ್ತೇವೆ. ಮಾತನಾಡಿದರೆ, ಏನೋ ಕೊಟ್ಟಿದೆ ಎಂದು ಹೇಳುತ್ತೀರಿ. ರೈತರಿಗೆ ಹಾಳು ಮಾಡಿದ್ದೇ ಎನ್‌ಡಿಎ ಸರ್ಕಾರ.

ಶ್ರೀ ಅರಗ ಜ್ಞಾನೇಂದ್ರ : ನೀವು ಆರು ಪರ್ಸೆಂಟ್ ಮಾಡಿದ್ದರ ಬಗ್ಗೆ ನಾವು ಅವತ್ತು ಅಪ್ರಿಷಿಯೇಟ್ ಮಾಡಿದ್ದೇವೆ. ರೈತ ಕುಟುಂಬದವರು ಅಪ್ರಿಷಿಯೇಟ್ ಮಾಡಿದ್ದಾರೆ. ಈ ದೇಶದಲ್ಲಿ ಮೊದಲು ಪ್ರೇರಣೆ ಕೊಟ್ಟಿದ್ದು ಎನ್‌ಡಿಎ ಸರ್ಕಾರ.

ಶ್ರೀ ಸಿದ್ದರಾಮಯ್ಯ : 9 ಪರ್ಸೆಂಟ್‌ನಲ್ಲಿ ಬೆಳೆ ಸಾಲ ಕೊಡಲಿಕ್ಕೆ ಮಾಡಿದರು. ಆದರೆ 50,000 ರೂಪಾಯಿಯವರೆಗೆ ನಿಗದಿ ಮಾಡಿದರು. ಏನಾದರೂ ತಪ್ಪು ಇದೆಯಾ? ಇದರಲ್ಲಿ? ನಾವು ಆರು ಪರ್ಸೆಂಟ್ ಮಾಡಿದಾಗ ಎನ್‌ಡಿಎ ಸರ್ಕಾರದಿಂದ ನನಗೆ ಪ್ರೇರಣೆ ಬಂದಿತು ನಾನೂ ಆರು ಪರ್ಸೆಂಟ್ ಮಾಡಿದೆ. ಎನ್‌ಡಿಎ ಸರ್ಕಾರದಿಂದ ಮಧ್ಯಪ್ರದೇಶದ ಮುಖ್ಯ ಮಂತ್ರಿಗಳಿಗೆ ಏಕೆ ಪ್ರೇರಣೆ ಬರಲಿಲ್ಲ? ಗುಜರಾತ್‌ನಲ್ಲಿರುವ ಮುಖ್ಯಮಂತ್ರಿಗಳಿಗೆ ಏಕೆ ಬರಲಿಲ್ಲ? ಆ ತರಹ ನಾವು ನೀವು ಒಂದಕ್ಕೊಂದು ಹೇಳುವುದು ಬೇಡ. it is not so. ಯಡಿಯೂರಪ್ಪನವರು ನಾಲ್ಕು ಪರ್ಸೆಂಟ್‌ಗೆ ಬಂದಿದ್ದಾರೆ. ಅಲ್ಲಿ ಮೋದಿಯವರು ಏಕೆ ಮಾಡಲಿಲ್ಲ? ನಮ್ಮ ಹೆಣ್ಣು ಮಗಳು ವಸುಂದರ ರಾಜೇ ಅರಸ್ ಮುಖ್ಯಮಂತ್ರಿಗಳಾಗಿರುವ ಕಡೆ ಏಕೆ ಇದನ್ನು ಮಾಡಲಿಲ್ಲ? ಈಗ ನೀವು ಅವರಿಗೆ ಪ್ರೇರಣೆ ಮಾಡಿಸಿ.

ಮಾನ್ಯ ಸದಸ್ಯರು: ಸಿದ್ದರಾಮಣ್ಣನವರೆ, ಅದು ಕಾಂಗ್ರೆಸ್‌ನವರು ಇದಲ್ಲೂ ಆಗಿಲ್ಲ. ಬಿ.ಜೆ.ಪಿ. ಯವರು ಇದ್ದಲ್ಲೂ ಆಗಿಲ್ಲ. ಜೆ.ಡಿ.(ಎಸ್) ಸಮ್ಮಿಶ್ರ ಇದ್ದಲ್ಲಿ ಮಾತ್ರ ಆಗಿದೆ.

(ಗೊಂದಲ)

ಶ್ರೀ ಡಿ.ಆರ್.ಪಾಟೀಲ್ : ಹಿಂದಕ್ಕೆ ಜೆ.ಡಿ.(ಎಸ್) ನವರೂ ಇದ್ದರಲ್ಲಾ, ಆಗೇನು ಮಾಡಿದ್ರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾನೇನು ಹೇಳಿದ್ದು ಎಂದರೆ, ಸುಮ್ಮನೆ ನಿಮ್ಮ ಬೆನ್ನನ್ನು ತಟ್ಟಿಕೊಳ್ಳುವುದಕ್ಕೆ ಹೋಗಬೇಡಿ. "ರೈತರ ಪರ ಇದ್ದೇವೆ" ಎಂದು ಬಾರಿ ಬೆನ್ನು ತಟ್ಟಿಕೊಳ್ಳುವುದಕ್ಕೆ ಹೋಗಬೇಡಿ. ಆ ರೀತಿ ಆಗಿಲ್ಲ ಇನ್ನು ಕೆಲವು ಹೆಸರುಗಳನ್ನು ಬೇರೆ ಬೇರೆ ಬದಲಾಯಿಸಿದ್ದೀರಿ. "ಸುರಕ್ಷಾ" ನಾವು ಇದ್ದಾಗ ಅಗ್ರಿಕಲ್ಚರಲ್ ಲೇಬರ್ಸ್‌ಗಳಿಗೆಲ್ಲಾ ಹೆಲ್ತ್ ಸ್ಕೀಂ ಕವರ್ ಮಾಡಬೇಕು, ಆ 348 ಕೋಟಿ ರೂಪಾಯಿಗಳನ್ನು ಏನು ಕೇಂದ್ರ ಸರ್ಕಾರ ಕೊಟ್ಟಿದೆ, ಇದು ಭಾರತ ಸರ್ಕಾರದ ಕಾರ್ಯಕ್ರಮ. ಇದಕ್ಕೆ ನಾವಿಷ್ಟು ಕೊಡಬೇಕು. ಮೆಂಬರ್‌ಗಳನ್ನು ಮಾಡಬೇಕು. ಯೋಜನೆಗಳನ್ನು ಮಾಡಿದೆವು. ನೀವು ಅದರ ಹೆಸರನ್ನು ಚೇಂಜ್ ಮಾಡಿಬಿಟ್ಟಿದ್ದೀರಿ. ಅದನ್ನು ಹೊಸ ಪ್ರೋಗ್ರಾಂ ಎಂದು ನಾವು ಕರೆದುಕೊಳ್ಳುವುದೇ? ಎಂತದೋ "ಸುರಕ್ಷಾ" ಎನ್ನುವ ಹೆಸರನ್ನಿಟ್ಟಿದ್ದಾರೆ. ಹಿಂದೆ 1996–97ರ ಬಜೆಟ್‌ನಲ್ಲಿ ನಮ್ಮ ಶಕ್ತಿ ನಮ್ಮ ಮಗಳು ಎನ್ನುವ ಕಾರ್ಯಕ್ರಮ ಇತ್ತು. ಆ ಕಾರ್ಯಕ್ರಮದಲ್ಲೂ ಕೂಡ ಹೆಣ್ಣು ಮಗಳಿಗೆ 10 ಸಾವಿರ ರೂಪಾಯಿಗಳನ್ನು ಇಡಬೇಕು. ಈಗ ಇವರೂ ಬಜೆಟ್‌ನಲ್ಲಿ ಹಣವನ್ನು ತೋರಿಸಿದ್ದಾರೆ. ತೋರಿಸಿದರೆ ಮಾತ್ರ ಆಗುವುದಿಲ್ಲ. ಈ ಬಾಬ್ತಿನಲ್ಲಿ ಎಷ್ಟು ಜನರಿಗೆ ಕೊಟ್ಟಿದ್ದಾರೆಂಬುದು ಮುಂದಿನ ವರ್ಷ ಗೊತ್ತಾಗುವುದು. ಇದನ್ನು ಎಷ್ಟು ಜನರಿಗೆ ಕೊಟ್ಟಿದ್ದೀರಿ ಎಂಬುದು ಗೊತ್ತಾಗುವುದು ಯಾವಾಗ ಗೊತ್ತೇ? ಮುಂದಿನ ವರ್ಷ ಮಾತ್ರ.

ಶ್ರೀ ಬಿ.ಶಿವರಾಮು : ಎನ್.ಡಿ.ಎ. ಸರ್ಕಾರ ಇದ್ದಾಗ ......

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಹಿಂದೆ ಮಾಡಿದ್ದ "ನಮ್ಮ ಮಗಳು ನಮ್ಮ ಶಕ್ತಿ" ಎನ್ನುವ ಕಾರ್ಯಕ್ರಮವನ್ನೇ ಈಗ "ಭಾಗ್ಯದ ಲಕ್ಷ್ಮೀ ಬಾರಮ್ಮ" ಎಂದು ಹೆಸರು ಬದಲಾವಣೆ ಮಾಡಿದ್ದೀರಿ. ಇನ್ನು ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಎರಡೂವರೆ ಲಕ್ಷ, ಎರಡೂವರೆ ಲಕ್ಷ ಅಗ್ರಿಕಲ್ಚರಲ್ ಲೇಬರರ್ಸ್‌ಗಳನ್ನು ಹೆಲ್ತ್ ಸ್ಕೀಂನಲ್ಲಿ ಕವರ್ ಮಾಡಬೇಕು ಎನ್ನುವ ಕಾರಣಕ್ಕೋಸ್ಕರವಾಗಿ ಒಂದು ಸ್ಕೀಂ ಕೇಂದ್ರ ಸರ್ಕಾರದಿಂದ ಬಂದಿದೆ. ಆ ಸ್ಕೀಂಗೆ ನಾನು ಏನೂ ಹೆಸರು ಇಟ್ಟಿರಲಿಲ್ಲ. ಇವರು ಬೇರೆ ಒಂದು ಹೆಸರು ಇಟ್ಟು 'ಸುರಕ್ಷಾ' ಎನ್ನುವ ಹೆಸರನ್ನು ಇಟ್ಟಿದ್ದಾರೆ. ಈ ಹೆಸರು ಇಟ್ಟು ಇದನ್ನು ಒಂದು ಹೊಸ ಕಾರ್ಯಕ್ರಮ ಎಂದು ಹೇಳಿದ್ದಾರೆ. ಕಳೆದ ಸಲ 5 ಕೋಟಿ ರೂಪಾಯಿಗಳನ್ನು ಇಟ್ಟಿತ್ತು. ಆಗ ಕಾರ್ಯಕ್ರಮ ಶುರುವಾಗಿತ್ತು. ಈ ಸಾರಿ 30 ಕೋಟಿಯನ್ನೊ, ಎಷ್ಟೋ ಇಟ್ಟಿದ್ದಾರೆ. ಕಳೆದ ಬಾರಿ ಇದು ಎಷ್ಟು ಉಪಯೋಗಿವಾಗದೆಯೋ ನಮಗೆ ಗೊತ್ತಿಲ್ಲ. 5 ಕೋಟಿಯಲ್ಲಿ ಎಷ್ಟು ಖರ್ಚಾಯಿತೋ ಗೊತ್ತಿಲ್ಲ ನಮಗೆ. ಹಾಗೆಯೇ ಈ ತರಹ ಕಾರ್ಯಕ್ರಮಗಳೇ. ಅದ್ದರಿಂದ ನಾವು ಕೆಲವು ಕಾರ್ಯಕ್ರಮಗಳಿಗೆ ಸ್ವಲ್ಪ ಸ್ವಲ್ಪ ಹೆಚ್ಚು ಮಾಡಿಬಿಟ್ಟಿದ್ದೇವೆ. ಅರಿಂದ ರಾಜ್ಯದ ಆರ್ಥಿಕ ಬೆಳವಣಿಗೆ ಆಗಿಬಿಡುತ್ತದೆ. ಬಡತನ ಹೋಗಿ ಬಿಡುತ್ತದೆ, ಸಮಾನತೆ ಬಂದು ಬಿಡುತ್ತದೆ, ಸಾಮಾಜಿಕ ನ್ಯಾಯ ಸಿಕ್ಕಿಬಿಡುತ್ತದೆ ಎಂದು ಹೇಳುವುದು ಇದೆಯಲ್ಲಾ ಅದು ಭ್ರಮೆಯಾಗುತ್ತದೆ. ನಾನು ಇವೊತ್ತು ಕೂಡ ಸರ್ಕಾರಕ್ಕೆ ಕೊಸ್ಚನ್ ಮಾಡುತ್ತಿದ್ದೇನೆ. ಮುಂದೆ ನೀವು 5ನೇ ವೇತನ ಆಯೋಗದ ರಿಪೋರ್ಟ್ ಬಂದ ಮೇಲೆ ಮುಂದಿನ ವರ್ಷ ಜಾರಿ ಮಾಡಬೇಕಾಗುತ್ತದೆ. ಟ್ಯಾಕ್ಸ್ ಬೇಸ್ ಹೆಚ್ಚು ಮಾಡಿಕೊಳ್ಳದೇ ಹೋದರೆ, ಇದೇ ರೀತಿ ಫಿಸಿಕಲ್ ಡಿಫಿಸಿಟ್‌ನ್ನು 3 ಪರ್ಸೆಂಟ್‌ನಲ್ಲಿಯೇ ಕಾಪಾಡಿಕೊಳ್ಳದೇ ಹೋದರೆ ಮುಂದೆ ಮತ್ತೆ Government will go back to Revenue Deficit. ಆದ್ದರಿಂದ ಈಗಿನಿಂದಲೇ ಎಚ್ಚರಿಕೆಯಿಂದ ಹೋಗಬೇಕು. ಆದರೆ ಟ್ಯಾಕ್ಸ್ base ಹೆಚ್ಚು ಮಾಡಿಕೊಳ್ಳುವುದಕ್ಕೆ ಏನೂ ಕಾರ್ಯಕ್ರಮ ಇದರಲ್ಲಿ ಇಲ್ಲ. ಇದನ್ನು ನೋಡಿ ನಾವು ಖುಷಿ ಪಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಬಹಳ ಕಷ್ಟಪಟ್ಟು ಇವೊತ್ತು ಈ ರಾಜ್ಯದ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ನಾವು ತಂದಿದ್ದೇವೆ. ಮುಂದೆ ಬೆಳವಣಿಗೆ ಬಹಳ ವೇಗವಾಗಿ ಹೋಗುವುದಕ್ಕೆ ಅವಕಾಶಗಳಿವೆ. ಅದಕ್ಕೆ ಬೇಕಾದಂಥ ಪೂರಕವಾದಂಥ ಎಜುಕೇಶನ್, ಹೆಲ್ತ್, ಇರಿಗೇಶನ್, ಡ್ರಿಂಕಿಂಗ್ ವಾಟರ್, ರೂರಲ್ ಡೆವಲಪ್‌ಮೆಂಟ್ ಹೀಗೆ, ಇವುಗಳ ಬಗ್ಗೆ ಹೆಚ್ಚಿನ ಗಮನ ಕೊಡದೇ ಹೋದರೆ, ಅವುಗಳಲ್ಲಿ ಬೆಳವಣಿಗೆಗಳನ್ನು ಕಾಣದೇ ಹೋದರೆ, ಒಟ್ಟಾರೆ ಜಿ.ಡಿ.ಪಿ. ಬೆಳವಣಿಗೆ ಆಗುವುದಿಲ್ಲ. ನಾವು ಮುಂದಿನ ವರ್ಷಕ್ಕೆ 10 ಪರ್ಸೆಂಟ್‌ಗೆ ತಲುಪುತ್ತೇವೆ ಜಿ.ಡಿ.ಪಿ. ಅದರ ನಂತರ ಗ್ರೋತ್‌ನ್ನು 11 ಪರ್ಸೆಂಟ್‌ಗೆ ತಲುಪುತ್ತೇವೆ, ನೆಕ್ಸ್ಟ್ ಈಯರ್, ಈ ವರ್ಷ ಅಲ್ಲ, ಮುಂದಿನ ವರ್ಷವೇ 10.1 ಪರ್ಸೆಂಟ್ ಜಿ.ಡಿ.ಪಿ. ಗ್ರೋತ್ ಆಗಬೇಕು. ಎಕನಾಮಿಕ್ ಬೆಳವಣಿಗೆ 10.1 ಪರ್ಸೆಂಟ್ ಗ್ರೋತ್ ಆಗಬೇಕು. ಅದರ ಜೊತೆ ಜೊತೆಯಲ್ಲಿಯೇ ರೀಜನಲ್ ಇಂಬ್ಯಾಲಿನ್ಸ್ ಹೋಗಬೇಕು. ಜೆಂಡರ್ ಇಂಬ್ಯಾಲಿನ್ಸ್ ಹೋಗಬೇಕು, ಬಡವ ಬಲ್ಲಿದ ಎನ್ನುವುದು ಹೋಗಬೇಕು, ಲಿಟರಸಿ ಪರ್ಸೆಂಟೇಜ್ ಜಾಸ್ತಿ ಆಗಬೇಕು, ಎಲ್ಲರಿಗೂ ಹೆಲ್ತ್ ಕವರೇಜ್ ಆಗಬೇಕು, ಇದಕ್ಕೆ ಒತ್ತು ಕೊಡುವುದಕ್ಕೆ ಯಡಿಯೂರಪ್ಪನವರಿಗೆ ವಿಪುಲವಾದಂಥ ಅವಕಾಶ ಇತ್ತು. ಅದನ್ನು ಬಳಸಿಕೊಳ್ಳುವುದಕ್ಕೆ ಆಗಲಿಲ್ಲ. ಬಳಸಿಕೊಳ್ಳಬಹುದಾಗಿತ್ತು. ಆ ಧಿಕ್ಕಿನಲ್ಲಿ ಈ ಬಜೆಟ್ ಇಲ್ಲ. ಆ ಧಿಕ್ಕಿನಲ್ಲಿ

ಮುಂಗಡಪತ್ರದಲ್ಲಿ ಅಂಶಗಳಿಲ್ಲ. ಆ ದೃಷ್ಟಿಕೋನ ಇಲ್ಲ. ಆ ವಿಶನ್ ಇಲ Tihs is my point. ಆ ಕಾರಣದಿಂದ ಕೆಲವು ಪ್ರೋಗ್ರಾಂಗಳನ್ನು ನಾವು ಅಲ್ಲಿ Jetropa ಬೆಳೆಯುತ್ತೇವೆ, 20 ಕೋಟಿ ರೂಪಾಯಿಗಳನ್ನು ಕೊಟ್ಟುಬಿಟ್ಟು ಹೊಂಗೆ ಬೆಳೆಯುತ್ತೇವೆ ಎಂದು ಹೇಳುತ್ತಾರೆ. ಅದೇನು ಬೆಳೆಯುತ್ತಾರೋ, ಗಿಡಗಳು ಸತ್ತುಹೋಗುತ್ತವೋ ಗೊತ್ತಿಲ್ಲ. ಕೋಟ್ಯಾಂತರ ಗಿಡಗಳನ್ನು ಬೆಳೆಸಿದ್ದೇವೆ, ಕಾಡಿನಲ್ಲಿ ಆ ಗಿಡಗಳೆಲ್ಲಾ ಇವೆಯೇ? ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಹೇಳಿರಿ, ಈಗ ಅನಿಮಲ್ ಹಸ್ಬೆಂಡರಿಯಲ್ಲಿ ಹೇಳುತ್ತಾರೆ, ಮಾಧುಸ್ವಾಮಿಯವರಿಗೂ ಗೊತ್ತು, "ಎಷ್ಟು ಪರ್ಸೆಂಟ್ ಸಕ್ಸಸ್ ಈ Artificial Insemination ನಲ್ಲಿ "ಎಂದರೆ" ಸಾರ್ 60 ಪರ್ಸೆಂಟ್ ಸಾರ್ ಎನ್ನುತ್ತಾರೆ." ಯಾವ ಊರಿನಲ್ಲಿ ಮಾಡಿದ್ದೀರಿ 60 ಪರ್ಸೆಂಟ್? ಇಷ್ಟು ವರ್ಷದಿಂದ ಈ Artificial Insemination ಮಾಡುತ್ತಾಲೇ ಇದ್ದಾರೆ, ಎಲ್ಲಾದರೂ ಮಿಶ್ರ ತಳಿಗಳು 5 ಪರ್ಸೆಂಟ್ ಆಗಿದೆಯಾ? ದುಡ್ಡೆಲ್ಲಾ? ಎಲ್ಲಿಗೆ ಹೋಯಿತು Artificial Insemination ಮಿಶ್ರತಳಿಗಳನ್ನು ತಯಾರು ಮಾಡುತ್ತಿದ್ದೇವೆ, ಎಲ್ಲಿ ಹೋಯಿತು ಹಣ?

ಶ್ರೀ ಜೆ.ಸಿ.ಮಾಧುಸ್ವಾಮಿ: ಸಿದ್ದರಾಮಯ್ಯನವರೆ, ನಾವು 1969 ರಲ್ಲಿಯೇ Artificial Insemination ನನ್ನು ಸ್ಟಾರ್ಟ್ ಮಾಡಿದ್ದು. ಇವೊತ್ತು ಸೇಲಂ, ಕೊಯಮತ್ತೂರು, ಊಟಿಯಿಂದಲೇ ಹಸುಗಳನ್ನು ಕೊಂಡುಕೊಂಡು ಬರುವುದು, ಬ್ಯಾಂಕ್‌ನಲ್ಲಿ ನಾವು ಸಾಲ ಮಾಡುತ್ತಲೇ ಇರಬೇಕು ಕರುಗಳು ಎಲ್ಲಿ ಹೋಯಿತು? ದುಡ್ಡು ಎಲ್ಲಿ ಹೋಯಿತು?

ಶ್ರೀ ಸಿದ್ದರಾಮಯ್ಯ: My point is, ನೀವು ಬೇಕಾದರೆ ಒಂದು ರಿವ್ಯೂ ಮಾಡಿ ಡಾಕ್ಟರ್‌ನ್ನು ನೀವು ಕೇಳಿMwhat is the percentage of succes. "ತೋರಿಸು ನಡೆಯಪ್ಪಾ ಯಾವ ಊರಿನಲ್ಲಿ ಎನ್ನಿ" "ಇಲ್ಲಾ ಸಾರ್ 35 ಪರ್ಸೆಂಟ್ ಆಯಿತು" ಎನ್ನುತ್ತಾರೆ. "35 ಪರ್ಸೆಂಟ್‌ನ್ನು ಯಾವ ಊರಿನಲ್ಲಿ ಮಾಡಲಾಗಿದೆ ತೋರಿಸಪ್ಪಾ" ಎಂದರೆ "ಇಲ್ಲಾ ಸಾರ್ 20 ಪರ್ಸೆಂಟ್ ಆಗಬಹುದು ಸಾರ್" ಎನ್ನುತ್ತಾರೆ. ಇಪ್ಪತ್ತು ಇಲ್ಲ, ಐದು ಇಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಸಚಿವರೆ, ನಿಮ್ಮ ಇಲಾಖೆಯಲ್ಲಿ ಕೆಲವು ಬುಲ್ಸ್‌ಗಳುಇವೆ ಅವುಗಳಿಗೆಲ್ಲಾ castration ಮಾಡಿ. ಇವೆಲ್ಲಾ ಸರಿಹೋಗುತ್ತದೆ.

ಶ್ರೀ ಸಿದ್ಧರಾಮಯ್ಯ : ನಾನು ಹಿಂದೆ ಒಂದು ಬಾರಿ ಪಶು ಸಂಗೋಪನಾ ಮಂತ್ರಿಯಾಗಿದ್ದೆ. ನಮ್ಮ ಡಾಕ್ಟರ್‌ಗಳು ಹೇಗಿರುತ್ತಾರೆಂದರೆ, ಕುರಿ ತಳಿಗಳನ್ನು ಸಾಕುವುದಕ್ಕೋಸ್ಕರ ಕೊಡುತ್ತೇವೆ. ಚಳ್ಳಕೆರೆಯಲ್ಲಿ ಕುರಿ ಸಾಕುತ್ತಾರೆ. ಅಲ್ಲಿಗೆ 3500 ಕುರಿಗಳನ್ನು ಸಾಕಿ ಎಂದು ಕೊಟ್ಟಿದ್ದೆವು. ನಾವು ಹೋಗಿ ನೋಡುತ್ತೇವೆ 1500 ಕುರಿಗಳಾಗಿಬಿಟ್ಟಿವೆ. ಮಿಕ್ಕಿದ್ದು ಏನಾದವು ಎಂದು ನಾನು ಕೇಳಿದೆ. ಒಂದು ವರ್ಷಕ್ಕೆ ಎಷ್ಟು ಬರುತ್ತವೆ ಎಂದರೆ, "80 ಪರ್ಸೆಂಟ್ ಇದೆ ಸಾರ್" ಎಂದರು. ಅಂದರೆ 100 ಕುರಿ ಇದ್ದರೆ ಹೆಣ್ಣು ಕುರಿಗಳು 80 ಬರುತ್ತವೆ. 40 ಹೆಣ್ಣು 40 ಗಂಡು ಬರಬೇಕು ಡಾಕ್ಟೇ. 40 ಹೆಣ್ಣು 40 ಗಂಡು ಬರಬೇಕು ತಾನೇ. ಗಂಡು ಕುರಿಗಳನ್ನು ಮಾರಿಕೊಂಡರೂ ಎಂದುಕೊಳ್ಳೋಣ. ಹೆಣ್ಣು ಕುರಿಗಳೆಲ್ಲಾ ಎಲ್ಲಿಗೆ ಹೋದವು? ಕುರಿಗಳ ಸಂಖ್ಯೆ ಹೆಚ್ಚಾಗಬೇಕೋ, ಕಡಿಮೆಯಾಗಬೇಕೋ? ಅಲ್ಲಿ ನೋಡಿದರೆ 3500 ಇದ್ದದ್ದು 5 ವರ್ಷಗಳಲ್ಲಿ 1500 ಆಗಿಬಿಟ್ಟಿದೆ. ಇದೇನಪ್ಪಾ ಎಂದುಕೊಂಡು" ಆ ಡಾಕ್ಟನ್ನು ನೀನು ಏನಪ್ಪಾ ಓದಿದೆಯಾ" ಎಂದು ಕೇಳಿದೆ. ಅದಕ್ಕೆ ಅವರು " ನಾನು ಎಂ.ವಿ.ಎಸ್‌ಸಿ ಮಾಡಿದ್ದೇನೆ ಸಾರ್" ಎಂದ "ನಿನ್ನ ಎಂ.ವಿ.ಎಸ್‌ಸಿಗೆ ಏನಪ್ಪಾ ಬೆಲೆ? ಎಂದು ಕೇಳಿದೆ.

(ಗೊಂದಲ)

ಉಪಾಧ್ಯಕ್ಷರು: ಸಿದ್ದರಾಮಯ್ಯನವರೆ ಬೇಗ ಮುಗಿಸಿ.

ಶ್ರೀ ಸಿದ್ದರಾಮಯ್ಯ: ಇನ್ನು ಅರ್ಧ ಗಂಟೆಯಲ್ಲಿ ಮುಗಿಸಿಬಿಡುತ್ತೇನೆ.

ಉಪಾಧ್ಯಕ್ಷರು: ಈಗಾಗಲೇ ಎರಡೂವರೆ ಗಂಟೆ ತೆಗೆದುಕೊಂಡಿದ್ದೀರಿ. ಬೇಗ ಮುಗಿಸಿ. ಇನ್ನೂ ಉತ್ತರ ಕೊಡಬೇಕು.

ಶ್ರೀ ಎಸ್.ಎಸ್. ಪಾಟೀಲ್: ಆಯಿತು ಬಿಡಿ, ಮಾತಾಡಲಿ. ಈಗ ನಾನು ಹೇಳುವುದು, ಈಗ ಸಿದ್ಧರಾಮಯ್ಯನವರು ಕುರಿ ಬಗ್ಗೆ ಹೇಳಿದರು. ಬಹುಶ: ಇನ್ನು ಸ್ವಲ್ಪ ದಿವಸದಲ್ಲಿ ಈಗೇನು ನೀವು ಕಸಾಯಿಖಾನೆಗೆ ಕಳುಹಿಸುತ್ತಿದ್ದೀರಿ, ಇದು ಹೀಗೆ ಮುಂದುವರಿದರೆ, ಕರುಗಳು ಸಿಗುವುದಿಲ್ಲ. ನಿಮ್ಮ ಡಾಕ್ಟರ್ ಮಂದಿ ಸಣ್ಣ ಸಣ್ಣ ಕರುಗಳನ್ನು ತೋರಿಸುತ್ತಾರೆ. ಆ ಸರ್ಟಿಫಿಕೇಟ್ ಕೊಡಬೇಕು, ಎಷ್ಟು ವರ್ಷಗಳ ಕರುಗಳನ್ನು ಕಸಾಯಿ ಖಾನೆಗೆ ಕಳುಹಿಸಬೇಕು ಎಂದು ಕೇಳಿದರೆ ಯಾರಿಗೂ ಗೊತ್ತಿಲ್ಲ.

ಉಪಾಧ್ಯಕ್ಷರು: ಆ ಇಲಾಖೆ ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಹೇಳುವಿರಂತೆ.

ಶ್ರೀ ಸಿದ್ಧರಾಮಯ್ಯ: ನಾನು ಹೇಳುವುದೇನೆಂದರೆ Food production is stagnant since 20 years. ನಾವಿಷ್ಟೆಲ್ಲಾ ರೈತರ ಪರ ಮಾತನಾಡಿದರೂ, ಕೂಡ ಅಲ್ಲೇ ಸುತ್ತುತ್ತದೆ, 100 ಲಕ್ಷ ಟನ್‌ನಲ್ಲಿಯೇ ಸುತ್ತುತ್ತದೆ. ಏನ್ರಿ ಶ್ರೀನಿವಾಸಗೌಡ್ರೆ, ಕೇಳಿ 100 ಲಕ್ಷ ಟನ್ ಒಳಗೇ ಸುತ್ತುತ್ತದೆ. ಈ ವರ್ಷ ಫುಡ್ ಪ್ರೊಡಕ್ಷನ್ 110 ಲಕ್ಷ ಟನ್ಸ್ ಎಂದು ಹೇಳಿದ್ದಾರೆ I don't think we will reach. ಅಷ್ಟೆ ನಾನು 20 ವರ್ಷದಿಂದ ನೋಡುತ್ತಿದ್ದೇನೆ. ಅದು ಹಾಗೆಯೇ ಇದೆ. ತಳಿಗಳು ಏನಾಯಿತು? ಬೀಜಕ್ಕೆ ಕೊಟ್ಟಿದ್ದು ಏನಾಯಿತು? ಅದಕ್ಕೆ ಪ್ರೊಡಕ್ಟಿವಿಟಿ ಕ್ವಾಲಿಟಿ ನಾವು ಹೆಚ್ಚು ಮಾಡುವುದಕ್ಕೆ ಗಮನ ಕೊಡದೇ ಸುಮ್ಮನೆ "ಕೃಷಿಗೆ ನೂರು ಕೋಟಿ ರೂಪಾಯಿ ಹೆಚ್ಚು ಮಾಡಿದ್ದೇವೆ" "ಹತ್ತು ಕೋಟಿ ರೂಪಾಯಿ ಹೆಚ್ಚು ಮಾಡಿದ್ದೇವೆ" ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಮಾರ್ಕೆಟಿಂಗ್‌ಗೆ ನಾನು ಮೊದಲು 1995-96 ರಲ್ಲಿ 20 ಕೋಟಿ ರೂಪಾಯಿ ಇಟ್ಟಿದ್ದೆ, ಅಷ್ಟು ಇದ್ದದ್ದು ಕುಂಟುತ್ತಾ ಕುಂಟುತ್ತಾ 200 ಕೋಟಿ ರೂಪಾಯಿಗೆ ಹೋದ ವರ್ಷ ಬಂದಿತು. ಈ ಬಾರಿ 40 ಕೋಟಿ ರೂಪಾಯಿ ಕೊಟ್ಟಿದ್ದೀರಿ. You make it Rs. 500 crore stfraightaway. 40 ಕೋಟಿ ರೂಪಾಯಿ ಏಕೆ ಹೆಚ್ಚು ಮಾಡಬೇಕು? ಹೋದವರ್ಷ 160 ಇದ್ದದ್ದು 200 ಕೋಟಿ ರೂಪಾಯಿಯಾಯಿತು. ಅವರು ಈಗ 200 ರಿಂದ 240 ಕೋಟಿ ರೂಪಾಯಿಗೆ ಮಾಡಿದಿರಿ. Why Rs. 240 crore? Ypu enhance it to Rs 500 crore. ಹೋದವರ್ಷ ನಾವು ನೇಕಾರರಿಗೆ 6 ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲ ಕೊಟ್ಟಿದ್ದೆವು. 10 ಹೆಚ್‌ಪಿ ಯವರೆಗೆ ಒಂದು ರೂಪಾಯಿ 25 ಪೈಸೆಯಂತೆ ಕೊಡುತ್ತೇವೆಂದು ಹೇಳಿದ್ದೆವು. ಈಗ 20 ಹೆಚ್‌ಪಿಗೆ ಮಾಡಿದ್ದೀರಿ. ಫೈನ್ 10 ಪರ್ಸೆಂಟ್ ನಾವು ಏಕೆ ಮಾಡಿದೆವು ಎಂದರೆ 10 ಪರ್ಸೆಂಟ್ ಹೆಚ್‌ಪಿ ಯಲ್ಲೆ ಬಡವರಿಗೆಲ್ಲಾ ಕವರ್ ಆಗುತ್ತದೆ ಎಂದು ಹೇಳಿದ್ದರಿಂದ 10 ಪರ್ಸೆಂಟ್‌ವರೆಗೂ ನಾವು ನಿಲ್ಲಿಸಿದ್ದೆವು ನೀವು 20 ಪರ್ಸೆಂಟ್‌ವರೆಗೆ ಮಾಡಿದ್ದೀರಿ. ಮೀನುಗಾರರಿಗೆ 55 ಸಾವಿರ ಲೀಟರ್‌ವರೆಗೆ ಟ್ಯಾಕ್ಸ್ ಎಕ್ಸಂಪ್ಷನ್ ಮಾಡಿದ್ದೆವು ಅದನ್ನು 70 ಸಾವಿರ ಲೀಟರ್‌ವರೆಗೆ ಮಾಡಿದ್ದೀರಿ. ಈಗ ನೀವು 15 ಸಾವಿರ ಲೀಟರ್‌ಗೆ ಹೆಚ್ಚು ಮಾಡಿದ್ದೀರಿ.

ನಾನು ಇರುವಾಗ 55 ಸಾವಿರ ಲೀಟರ್ ಡೀಸೆಲ್‌ಗೆ ಟ್ಯಾಕ್ಸ್ ಎಗ್ಸಂಪೆಷನ್ ಇತ್ತು. ನಿಮ್ಮದು ಲೆಕ್ಕ ಬರುವುದು ಮುಂದಿನ ವರ್ಷಕ್ಕೆ ಯಡಿಯೂರಪ್ಪನವರಿಗೆ ಸರ್ಟಿಫಿಕೇಟ್ ಕೊಡುವುದು ಮುಂದಿನ ವರ್ಷಕ್ಕೆ ಈಗ ಅಲ್ಲ ಟೇಬಲ್ ತಟ್ಟುವುದು. ನೇಕಾರರು, ಮೀನುಗಾರರು ಇವರಿಗೆಲ್ಲಾ ಪ್ರೋಗ್ರಾಂಗಳನ್ನು ಮಾಡಿದ್ದೆವು. ಅದನ್ನು ಸ್ವಲ್ಪ ಹೆಚ್ಚು ಮಾಡಿದ್ದೀರಿ, ಸಂತೋಷ. ಸೋಷಿಯಲ್ ವೆಲ್‌ಫೇರ್‌ನಲ್ಲೆ ಸ್ವಲ್ಪ ಹೆಚ್ಚು ಮಾಡಿದ್ದಿರಿ. Alright ಕರೆಕ್ಟ್ ಅಲ್ಲ, ಈಗ ನಾವು 2004–05ರಲ್ಲಿ ಬಡವರ ಮನೆಗಳನ್ನು ಬಾಕಿ ಕೊಟ್ಟು ಬಿಡೋಣ ಹೊಸದಾಗಿ ಹಂಚುವುದು ಬೇಡ ಎಂದು ಹೇಳಿದೆವು. ಹೋದ ಸಲ ದುಡ್ಡು ಕೊಟ್ಟರು, ಅದರೆ ಇಲ್ಲಿಯವರೆಗೂ ಒಂದು ರೂಪಾಯಿ ಕೂಡ ಖರ್ಚಾಗಲಿಲ್ಲ. ಮನೆಗೆಂದು ಕೊಟ್ಟಿರುವ ದುಡ್ಡು ಒಂದು ರೂಪಾಯಿ ಕೂಡ ಖರ್ಚಾಗಿಲ್ಲ. ಅದು ಈಗ ಸೇರಿಕೊಂಡಿದೆ.

ಶ್ರಿ ಬಿ.ಶಿವರಾಂ: ಖರ್ಚಾಗುವುದಕ್ಕೆ ಅದು ಬಿಡುಗಡೆಯ ಆಗಲಿಲ್ಲವಲ್ಲ.

ಶ್ರಿ ಸಿದ್ಧರಾಮಯ್ಯ : ಬಿಡುಗಡೆಯಾಗಲಿಲ್ಲ, ಕರೆಕ್ಟ್ ಮನೆಗೆ ಹಣಾನೆ ಬಿಡುಗಡೆಯಾಗಲಿಲ್ಲ ಮನೆಗೆ.

(ಗೊಂದಲ)

ಶ್ರೀ ಬಿ.ಶಿವರಾಂ : ನಾನು ಅದನ್ನು ಅಲ್ಲಗಳೆಯುತ್ತಿಲ್ಲ, ಏನೆಂದು ಅರ್ಥ ಮಾಡಿಕೊಳ್ಳಿ ಬಿಡುಗಡೆ ಮಾಡಲಿಲ್ಲವೆಂದು ಹೇಳಿದ್ದು.

ಶ್ರೀ ಸಿದ್ಧರಾಮಯ್ಯ : ಮತ್ತೆ ಸ್ಲಂ ನಲ್ಲೆ ಇರುವಂತಹ ಬಡವರಿಗೆ ಹಣ ಹೆಚ್ಚು ಮಾಡಿ ಅವರಿಗೆ ಪುನರ್‌ವಸತಿ ಮಾಡುವಂತಹ ಕಾರ್ಯಕ್ರಮ ಇದರಲ್ಲಿ ಇಲ್ಲ. ಆದರೆ ನಾನು ಹೇಳುವುದೇನೆಂದರೆ, ನಿಮಗೆ ಖರ್ಚು ಮಾಡುವುದಕ್ಕೆ ... ಇತ್ತು ಬಹಳ ಒಳ್ಳೆಯ ಪರಿಸ್ಥಿತಿಯಲ್ಲಿದ್ದಿರಿ. ಎಂಎಲ್‌ಎ ಫಂಡ್ ಕೂಡ 50 ಲಕ್ಷ ರೂಪಾಯಿ ಇತ್ತು ಅದನ್ನು ಏನು ಮಾಡಿದ್ದಾರೆ ಎಂದರೆ 5054 ಇದೆಯಲ್ಲ, ಆ ದುಡ್ಡನ್ನೆ ತೆಗೆದು ಪ್ರತಿಯೊಬ್ಬರಿಗೆ ಎಂಎಲ್‌ಎ ಗೆ ಮೇಂಟೆನೆನ್ಸ್ ಎಂದು 50 ಲಕ್ಷಕೊಡುತ್ತೇವೆ ಎಂದು ಮಾಡಿರುವುದು. ಅದಕ್ಕೆ ಸಪರೇಟ್ ಆಗಿ ದುಡ್ಡು ಇಟ್ಟಿದ್ದೇವೆ ಎಂದು ಎಲ್ಲಾದರೂ ತೋರಿಸಿದ್ದಾರಾ? ಎಲ್ಲಿದೆ? ಯಾವ ಹೆಡ್‌ನಲ್ಲಿದೆ? ಅವರು ಏನು ಹೇಳಿದ್ದಾರಲ್ಲ, ಕಮ್ಯುನಿಕೇಷನ್‌ಗೆ ದುಡ್ಡು ಇಟ್ಟಿದ್ದಾರಲ್ಲ ಅದರೊಳಗೆ ಇದು ಕೂಡ ಸೇರುತ್ತದೆ. ಅದಕ್ಕೆ ಸಪರೇಟಾಗಿ ಹಣ ಇಟ್ಟಿಲ್ಲ. ಒಟ್ಟಾರೆಯಾಗಿ ನಾವೇನು ರ್‍ಯಾಪಿಡ್ ಗ್ರೋಥ್ ವಿತ್ ಈಕ್ವಿಟಿ ಡೈರೆಕ್ಷನ್‌ನಲ್ಲೆ ಹೋಗಬೇಕೆಂದು ಕಳೆದ ಎರಡು ವರ್ಷದಿಂದ ಫೈನಾನ್ಸಿಯಲ್ ಪೊಶಿಷನ್ ಇಂಪ್ರೂವ್ ಮಾಡಿ ಸುಸ್ಥಿತಿಗೆ ತೆಗೆದುಕೊಂಡು ಬಂದಿದ್ದೇವೆ ಇವತ್ತೇನು ಇದನ್ನೆಲ್ಲಾ ಮಾಡುವುದಕ್ಕೆ ಅವಕಾಶ ಇತ್ತು ಆ ನಡೆಯುವಂತಹ ವಿಚಾರದಲ್ಲಿ ಮಾನ್ಯ ಯಡಿಯೂರಪ್ಪನವರು ಎಡವಿದ್ದಾರೆ. ಆದುದರಿಂದ ನಾವು ನಿರೀಕ್ಷೆ ಮಾಡಿದಂತಹ ರೀತಿಯಲ್ಲೆ ಈ ಬಜೆಟ್ ಇದು ಇಲ್ಲ. ಆ ಕಾರಣದಿಂದ ಸರ್ವರಿಗೂ ಸಮಪಾಲು ಸಮಬಾಳು ಎಂದು ಏನು ಹೇಳಿದ್ದಾರೆ, ಅದರ ಜೊತೆಗೆ ಎಲ್ಲಾ ವಚನಗಳನ್ನು ಹೇಳಿದ್ದಾರೆ. “ ಇವನಾರವ, ಇವನಾರವ ಎನ್ನುವುದಿಲ್ಲ, ಎಲ್ಲಾ ನಮ್ಮವ, ಎಲ್ಲಾ ನಮ್ಮವ ಎಂದು ಹೇಳಿ ಯಾವುದನ್ನು ಬಿಟ್ಟಿಲ್ಲ ಎಲ್ಲವನ್ನೂ ಹೇಳಿದ್ದಾರೆ ಈ ತರಹ ಮಾಡಿದ್ದರೆ. ಅನುಕೂಲವಾಗುತ್ತಿತ್ತು. ಆದರೆ ಆ ತರಹ ಮಾಡಿಲ್ಲ. ನಾನು ಇಷ್ಟು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಒಂದು ವಿನಂತಿ, ರಾಷ್ಟ್ರಾಧ್ಯಕ್ಷರ ಭಾಷಣ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಅವಕಾಶವನ್ನು ಕೇಳಿದಾಗ ತಾವು ಬಜೆಟ್ ಮೇಲೆ ಮಾತನಾಡುವಾಗ ಅವಕಾಶ ಕೊಡುತ್ತೇನೆ ಎಂದು ಹೇಳಿದಿರಿ. ದಯವಿಟ್ಟು ನಮಗೆ ಅವಕಾಶ ಕೊಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಹೊಸ ಸದಸ್ಯರಿಗೆ ತಾವು ಅವಕಾಶ ಮಾಡುವುದಿಲ್ಲವೇ?

ಶ್ರೀ ನೆ.ಲ. ನರೇಂದ್ರಬಾಬು : ನಮಗೆ ಅವಕಾಶ ಕೊಡಿ, ಕಳೆದ 2 ಬಾರಿ ಕೂಡ ನಮಗೆ ಅವಕಾಶ ಸಿಗಲಿಲ್ಲ. ದಯಮಾಡಿ ನಮಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಒಬ್ಬರು ಮಾನ್ಯ ಸದಸ್ಯರು:- ಇಲ್ಲದೆ ಇದ್ದರೆ ಹೇಳಿಬಿಡಿ, ನೀವು ಬರಬೇಡಿ ಎಂದು. ನೀವು ಮಾತನಾಡುವುದು ಬೇಡ, ನೀವು ಹೇಳಿದ್ದೆಲ್ಲಾ ಮಾಡಿಕೊಡುತ್ತೇವೆ ಎಂದು ಹೇಳಿಬಿಡಿ. ನಾವು ಇಲ್ಲಿ ರಾತ್ರಿ 9 ಗಂಟೆವರೆಗೂ ಕಾಯುತ್ತಿರುತ್ತೇವೆ.

(ಗೊಂದಲ)

ಚೇರ್‌ಮೆನ್: ಮಾನ್ಯ ಶ್ರೀನಿವಾಸ ಗೌಡರೆ ತಾವು ಐದು ನಿಮಿಷದಲ್ಲೆ ಮುಗಿಸಿ. ಆಮೇಲೆ ಇಲಾಖಾವಾರು ಬೇಡಿಕೆ ಮೇಲೆ ಚರ್ಚೆ ಬಂದಾಗ ಮಾತನಾಡುವಿರಂತೆ. ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಕೆ. ಶ್ರೀನಿವಾಸ ಗೌಡ(ಕೋಲಾರ) :- ಮಾನ್ಯ ಅಧ್ಯಕ್ಷರೆ, ಈ ವರ್ಷದ ಬಜೆಟ್ ಅನ್ನು ಮಾನ್ಯ ಯಡಿಯೂರಪ್ಪನವರು ಮಂಡಿಸಿದ್ದಾರೆ. ಅವರು ಈ ಕಡೆ ಇದ್ದಾಗ ಅನೇಕ ವಿಷಯಗಳ ಮೇಲೆ ಹೆಚ್ಚು ಹೆಚ್ಚಿಗೆ ಮಾತನಾಡುತ್ತಿದ್ದರು. ಒಂದು ಸಾರಿ ಅವರು ಮಾತನಾಡುತ್ತಾ ಹೇಳುತ್ತಿದ್ದರು ಲೇಖಾನುದಾನವನ್ನು ಮೂರು ತಿಂಗಳೊಳಗಾಗಿ ನೀವು ತೆಗೆದುಕೊಳ್ಳಬೇಕು, ಅದರ ಮೇಲೆ ತೆಗೆದುಕೊಳ್ಳಬಾರದು ಎಂದು ಅವರು ಹೇಳಿದ ಮಾತುಗಳನ್ನೆ ನಾನು ಇಲ್ಲೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಆದರೆ ಅವರೂ ಕೂಡ ಲೇಖಾನುದಾನಕ್ಕೆ ನಾಲ್ಕು ತಿಂಗಳ ಕಾಲಾವಕಾಶವನ್ನು ಕೇಳಿದ್ದಾರೆ. ಹೀಗೆ ಅನೇಕ ವಿಷಯಗಳು ಹೇಳಿದ್ದಾರೆ. ಹೆಚ್ಚಿಗೆ ಸಮಯ ಇಲ್ಲದ ಕಾರಣ ನಾನು ಹೆಚ್ಚಿಗೆ ಪ್ರಸ್ತಾಪ ಮಾಡಲು ಹೋಗುವುದಿಲ್ಲ. ಅವರು ಮಾತನಾಡಿರುವಂತಹ ಮಾತುಗಳ ಬಗ್ಗೆಯೇ ಹೇಳುವುದಾದರೆ, "ಈ ನಾಡಿನ 5.50 ಕೋಟಿ ಜನರಿಗೆ ಶೂನ್ಯವೆಂದು ನಾನು ಹೆಳಲೆ" ಎಂದು ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿದ ಬಜೆಟ್ ಮೇಲೆ ಅವರು ಹಿಂದೆ ಹೇಳಿದ್ದರು, ಅವರು ಮಾತನಾಡಿದ ಕೆಲವು ಮಾತುಗಳನ್ನು ಇಲ್ಲಿ ಹೇಳುವುದಾದರೆ "ರೈತರ ಸಾಲ ಮನ್ನಾ ಆಗಲೇಬೇಕು" ಎಂಬುದು ಮಾನ್ಯ ಯಡಿಯೂರಪ್ಪನವರು ಇಲ್ಲೆ ಕುಳಿತುಕೊಂಡು ಮಾತನಾಡಿದ ಮಾತುಗಳು ಅಲ್ಲೆ ಹೋದಮೇಲೆ ಏನಾಗಿದೆ ಎನ್ನುವುದಕ್ಕೆ ಇದು ಉದಾಹರಣೆ. "ಅವರು ರೈತರ ಸಾಲ ಮನ್ನಾ ಅಗಲೇಬೇಕು" ಹಾಗೂ ನಿರುದ್ಯೋಗಿಗಳ ಬಗ್ಗೆ ಹೇಳುತ್ತಾ "ಅವರಿಗೆ ಭತ್ಯೆ ಕೊಡಲೇಬೇಕು," ಹೀಗೆ ಅನೇಕ ವಿಷಯಗಳನ್ನು ಅವರು ಹಿಂದೆ ಹೇಳಿದ್ದರು. ನನಗೆ ಒಂದು ಕತೆಯ ಜ್ಞಾಪಕ ಬರುತ್ತದೆ. ಒಂದು ಹಳ್ಳಿಯಲ್ಲಿ ಊರಿನ ಗೌಡರ ಮನೆತನದಲ್ಲಿ ಒಬ್ಬರು ಮೇಕೆಯನ್ನು ಮೇಯಿಸುವುದಕ್ಕೆ ಹೋಗುತ್ತಿದ್ದರಂತೆ. ಅಲ್ಲಿಗೆ ಪಕ್ಕದ ಹಳ್ಳಿಯಲ್ಲಿ ಇರುವ ಒಬ್ಬ ಹೆಂಗಸು ಕೂಡ ಮೇಕೆ ಮೇಯಿಸುವುದಕ್ಕೆ ಬರುತ್ತಿದ್ದಳಂತೆ. ಇವರು ಅಲ್ಲೆ ಒಂದು ಹುತ್ತದ ಹತ್ತಿರ ಕುಳಿತುಕೊಳ್ಳುವುದು, ಅಡಿಕೆ ಎಲೆ ಹಾಕಿಕೊಳ್ಳುವುದು ಮಾಡುತ್ತಿದ್ದರು. ತೆಲುಗಿನಲ್ಲಿ ಹುತ್ತವನ್ನು ಪುಟ್ಟು ಎಂದು ಹೇಳುತ್ತಾರೆ. ನಮ್ಮ ಕಡೆಯಲ್ಲಿ ರಾಗಿಯನ್ನು

ನೆಲದಲ್ಲಿ ಹಾಕಿರುತ್ತಾರೆ ಅದಕ್ಕೆ ಹಗೇವು ಎಂದು ಹೇಳುತ್ತಾರೆ. ಅವನು ತೆಲುಗಿನಲ್ಲಿ ನೀನು ನಾಳೆ ಬಂದು ಬಿಡುಗಂಪೆ ಹಿಡಿದುಕೂಂಡು ನಿನಗೆ ಮೊತ್ತಮು ರಾಗಲು ಇಚ್ಛೇಸ್ತಾನು. ಎಂದು ಹೇಳಿದ. ಪಾಪ ಆ ಹೆಂಗಸು ಗಂಪೆ ಹಿಡಿದುಕೊಂಡು ಬೆಳಿಗ್ಗೆ ಆ ಊರಿಗೆ ಹೋದಳು. ನಮ್ಮಂತಹ ಕುಡುವನಹಳ್ಳಿ ಎಂದು ಅಂದಕೊಳ್ಳೋಣ. ಆ ಗೌಡ ಏನು ಮಾಡಿದ, ಹಗೇವು ತೆಗೆದಿದ್ದರು, ಅಲ್ಲೆ ಇಳಿದು ರಾಗಿ ಕೊಡಬೇಕಾದರೆ ಹಿಂದು ಮುಂದು ನೋಡಿ ನಿನಗೆ ಯಾವಾಗ ಹೇಳಿದ್ದೆ ಎಂದು ಕೇಳುತ್ತಾನೆ. ಅದಕ್ಕೆ ಆಕೆ ಏನು ಹೇಳುತ್ತಾರೆ ಎಂದರೆ ಪುಟ್ಟತಾವ ಚೆಪ್ಪಲೀದಾ? "ಮುಟ್ಟುತಾವ ಚೆಪ್ಪಿನಮಾಟ ಪಾತರಪಾವ ಲೇದು ಎಂದು ಹೇಳುತ್ತಾಳೆ" ಹಾಗೆ ಇಲ್ಲೆ ಕುಳಿತು ಮಾತನಾಡಿದ ಮಾತುಗಳು ಹುತ್ತದ ಹತ್ತಿರ ಮಾತನಾಡಿ ಮಾತು ಕೊಟ್ಟಂತಹ ಮಾತುಗಳು, ಹಗೇವು ತೆಗೆದು ರಾಗಿ ಹಂಚುವಾಗ ಮರೆತುಹೋದರು. ಹಾಗೆ ಮಾನ್ಯ ಯಡಿಯೂರಪ್ಪನವರು ಇಲ್ಲೆ ಕುಳಿತು ಮಾತನಾಡಿದಂತಹ ಮಾತುಗಳು ಅಲ್ಲಿಗೆ ಹೋದಮೇಲೆ ಅವರಿಗೆ ಮರೆತು ಹೋಯಿತು. ಎನ್ನುವ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಇವರು ಬಜೆಟ್ ಮೇಲೆ ಏನು ಹೇಳಿದ್ದಾರೆ ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ :- ಅದು ಸ್ಥಳದ ಮಹಿಮೆ ಇರಬಹುದು, ಇಲ್ಲೆ ಕುಳಿತಾಗ ಮಾಡುವುದಕ್ಕೆ ಆಗದೇ ಅಲ್ಲೆ ಮಾತನಾಡುತ್ತಿದ್ದೀರಿ.

ಶ್ರೀ ಕೆ. ಶ್ರೀನಿವಾಸ ಗೌಡ :- ಮಾಡುತ್ತೇವೆ, ಇವತ್ತು ಕೃಷಿ ಬಗ್ಗೆ ಹೇಳುವುದಾದರೆ ಈ ರಾಜ್ಯದಲ್ಲಿ ಜನಸಂಖ್ಯೆ 528.51 ಲಕ್ಷ ಜನರಿದ್ದಾರೆ. ಅದರಲ್ಲಿ ರೂರಲ್ ಪಾಪ್ಯುಲೇಷನ್ 348.89 ಲಕ್ಷ ಜನ ಇದ್ದಾರೆ. ಅರ್ಬನ್ ಪಾಪ್ಯುಲೇಷನ್ 179.62 ಲಕ್ಷ ಜನ ಇದ್ದಾರೆ. ಕಲ್ಟಿವೇಟರ್ಸ್ 69.36 ಲಕ್ಷ ಜನ ಇದ್ದಾರೆ. ಅಗ್ರಿಕಲ್ಚರ್ ಲೇಬರರ್ಸ್ 62.09 ಲಕ್ಷ ಜನ ಇದ್ದಾರೆ. ಇವತ್ತು ಈ ಬಜೆಟ್ ಅನ್ನು ಹಳ್ಳಿಗಾಡಿನ ಬಜೆಟ್ ಅಥವಾ "ರೈತರ ಪರವಾದ ಬಜೆಟ್" ಎಂದು ಇವರು ಹೇಳುತ್ತಾರೆ. ಇವತ್ತು 348.89 ಲಕ್ಷ ಜನರಿಗೆ ಈ ಬಜೆಟ್‌ನಲ್ಲಿ ಏನು ಏನು ಮಾಡಿದ್ದಾರೆ ಎನ್ನುವಂಥಾದ್ದನ್ನು ನಾನು ಮೂಲತ: ಕೇಳುವುದಕ್ಕೆ ಇಚ್ಛಿಸುತ್ತೇನೆ. ನಮ್ಮ ರಾಜ್ಯದಲ್ಲಿ ಟೋಟಲ್ ಹೋಲ್ಡಿಂಗ್ ಇರುವುದು 70.79ಲಕ್ಷ ಹೆಕ್ಟಾರ್ ಇರುವಂಥಾದ್ದು. ಮಾರ್ಜಿನಲ್ ಫಾರ್ಮರ್ಸ್ 32.52 ಲಕ್ಷ ಜನರು ಇದ್ದಾರೆ, ಸ್ಮಾಲ್ ಫಾರ್ಮರ್ಸ್ 19.09 ಲಕ್ಷ ಜನರು ಇದ್ದಾರೆ. ಸೆಮಿ ಮೀಡಿಯಮ್ 12.59 ಲಕ್ಷ ಜನರು ಇದ್ದಾರೆ, ದೊಡ್ಡ ರೈತರು 0.9 ಲಕ್ಷ ಜನರು ಇದ್ದಾರೆ. ಅವರೇಜ್ ಸೈಜ್ ಆಫ್ ಹೋಲ್ಡಿಂಗ್ 1.74 ಹೆಕ್ಟಾರ್ ಮಾತ್ರ ಇದೆ. ಇವತ್ತು ಯಾವ ಬಡವನು ಇದ್ದಾನೆ ಒಂದು ಹೆಕ್ಟಾರ್‌ಗೂ ಹೆಚ್ಚಿಗೆ ಜಮೀನು ಇಲ್ಲದಂಥವನು, ಎರಡು ಹೆಕ್ಟಾರ್ ಜಮೀನು ಇಲ್ಲದಂಥವರಿಗೆ ಬಜೆಟ್‌ನಲ್ಲಿ, ನಾವು ಏನು ಮಾಡಿದ್ದೇವೆಂಬುದನ್ನು ನೋಡಬೇಕು. ಇವತ್ತು ಇರಿಗೇಷನ್‌ಗೆ ಸ್ವಾತಂತ್ರ್ಯ ಬಂದ ಮೇಲೆ ಬೃಹತ್ ನೀರಾವರಿಯಲ್ಲಿ ಇದುವರೆಗೂ ನಮಗೆ ಎಷ್ಟು ಜಮೀನಿಗೆ ನೀರನ್ನು ಕೊಟ್ಟಿದ್ದಾರೆಂದರೆ 15.49ಲಕ್ಷ ಹೆಕ್ಟಾರ್ ಮಾತ್ರ ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ 9,75 ಲಕ್ಷ ಹೆಕ್ಟಾರ್‌ಗೆ ಜಮೀನು ನಮ್ಮ ರಾಜ್ಯದಲ್ಲಿ ಇದೆ. ಕೊಳವೆ ಬಾವಿಗಳು 10.19 ಲಕ್ಷ ಹೆಕ್ಟಾರ್‌ಇದೆ. ತೆರೆದ ಬಾವಿಗಳು 5.60 ಲಕ್ಷ ಹೆಕ್ಟಾರ್‌ಗಳು ಇವೆ. ಇವತ್ತು ಬೃಹತ್ ನೀರಾವರಿಗೆ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ನೀರಾವರಿ ಟ್ಯಾಕ್ಸ್ ನೀವು 300 ರೂಪಾಯಿಗಳನ್ನು ಮಾತ್ರ ಕಲೆಕ್ಟ್ ಮಾಡುತ್ತೀರಿ. ನಾವು ಬಯಲು ಸೀಮೆಯ ಜನರು, ನಮ್ಮಲ್ಲೂ ಕೂಡ 70 ಕ್ಷೇತ್ರಗಳು ಬಯಲು ಸೀಮೆಗೆ ಬರುತ್ತವೆ. ನಾವು 300 ರೂಪಾಯಿಗಳನ್ನು ಕೊಡುತ್ತೇವೆ. ನಮಗೆ ಫ್ರೀ ಕರೆಂಟ್ ಕೊಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ :- ತಾವು ನೇತ್ರಾವತಿ ತಿರುವಿನ ಬಗ್ಗೆ ಮೀಟಿಂಗ್ ಅನ್ನು ಕರೆದಿರಿ. ಅದು ಆಗಲೇ ಇಲ್ಲ, ಅದನ್ನು ಮುಂದಕ್ಕೆ ಯಾರು ಮುಂದುವರಿಸಲಿಲ್ಲ. ದಯಮಾಡಿ ಅದರ ಬಗ್ಗೆಯೂ ಸ್ವಲ್ಪ ಬೆಳಕನ್ನು ಚೆಲ್ಲಬೇಕು.

ಚೇರ್ಮನ್ : ಮಾನ್ಯ ಬಾಲಕೃಷ್ಣರವರೆ, ದಯಮಾಡಿ ಕುಳಿತುಕೊಳ್ಳಿ, ಅವರು ಭಾಷಣವನ್ನು ಮುಗಿಸಲಿ, ಸರ್ಕಾರದಿಂದ ಉತ್ತರ ಕೊಡಬೇಕು.

ಶ್ರೀ ಕೆ.ಶ್ರೀನಿವಾಸ ಗೌಡ : ಮಾನ್ಯ ಚೇರ್ಮನ್‌ರವರೆ, ನಾನು ಅದನ್ನು ಮಾತನಾಡುತ್ತೇನೆ. ಇವತ್ತು ಅವರ ಹತ್ತಿರ 300 ರೂಪಾಯಿಗಳನ್ನು ಕಲೆಕ್ಟ್ ಮಾಡುತ್ತಿದ್ದಾರೆ. ನಾವು ಬಯಲು ಸೀಮೆಯ ಜನರು, ನಾವೇ ಬೋರ್‌ವೆಲ್‌ಗಳನ್ನು ಹಾಕಿಕೊಳ್ಳುತ್ತಿದ್ದೇವೆ. ನಾವೇ ಕರೆಂಟ್ ತೆಗೆದು ಕೊಳ್ಳುತ್ತೇವೆ. ನಾವೇ 10.19 ಲಕ್ಷ ಹೆಕ್ಟಾರ್ ಭೂಮಿಯನ್ನು ನೀರಾವರಿ ಮಾಡಿಕೊಂಡಿದ್ದೇವೆ, ಅಂದರೆ ಸ್ವತ: ರೈತರೆ ಮಾಡಿಕೊಂಡಿದ್ದೇವೆ. ನಿಮ್ಮಿಂದ ಏನು, ನಾನು ಈ ಬಗ್ಗೆ ಆ ಸರ್ಕಾರ, ಈ ಸರ್ಕಾರವೆಂದು ಹೇಳುವುದಿಲ್ಲ, ಈ ಬಯಲು ಸೀಮೆಯಲ್ಲಿ ಬದುಕುವಂತಹ ರೈತರಿಗೆ ನೀವು ಇವತ್ತು ಬೃಹತ್ ನೀರಾವರಿಗೆ ಮಾಡಬಾರದೆಂದು ಹೇಳಿಲ್ಲ, ಅದಕ್ಕೂ ಕೂಡ ಮಾಡಬೇಕು. ಆದರೆ, ಅವರಿಗೆ 300 ರೂಪಾಯಿಗಳು ತೆಗೆದುಕೊಳ್ಳುತ್ತೀರಿ, ನಾವು 300 ರೂಪಾಯಿಗಳನ್ನು ಕೊಡುತ್ತೇವೆ, ನಮಗೂ ಫ್ರೀಯಾಗಿ ನೀರು ಕೂಡಿ, ಕರೆಂಟ್ ಕೊಡಿ. ಇವತ್ತು ವಾಸ್ತವವಾಗಿರುವಂತಹ ಸಂಗತಿಗಳು ನಡೆದಿವೆ. ಇದನ್ನು ಇವತ್ತು ನಾವು ಯೋಚನೆ ಮಾಡಬೇಕಾದಂತಹ ಪರಿಸ್ಥಿತಿ ಇದೆ. ಇವತ್ತು ಮಾನ್ಯ ಸಿದ್ದರಾಮಯ್ಯನವರು ಮಾತನಾಡಬೇಕಾದರೆ ಮಾನ್ಯ ಉಪಮುಖ್ಯಮಂತ್ರಿಯವರು ಸ್ವಲ್ಪ ಸಿಟ್ಟಿಗೆದ್ದರು. ಆವತ್ತು ಶೇ.50ರಷ್ಟು ಸಬ್ಸಿಡಿಯನ್ನು ಇಟ್ಟು, 67.20ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದರಿಂದ 17.50ಲಕ್ಷ ಜನರು ಅದರ ಬೆನಿಫಿಟ್ ಅನ್ನು ಪಡೆದುಕೊಂಡಿದ್ದಾರೆ. ಕಳೆದ ವರ್ಷ 2005–06ರಲ್ಲಿ 52 ಲೋಟಿ ರೂಪಾಯಿಗಳನ್ನು ಇಟ್ಟಿದ್ದೇನೆ 10.50ಲಕ್ಷ ರೈತರು ಅದರ ಪ್ರಯೋಜವನ್ನು ಪಡೆದಿದ್ದಾರೆ. ಆದರೆ ಇವತ್ತುನೀವುಕೇವಲ 45 ಕೋಟಿ ರೂಪಾಯಿಗಳನ್ನು ಇಟ್ಟು ಶೇ 75ರಷ್ಟು ಸಬ್ಸಿಡಿಯನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಿ, ಇದು ಯಾವ ಲೆಕ್ಕ? ಹೀಗೆ ನೀವು ರೈತರಿಗೆ ಸುಳ್ಳು ಎಂದು ಹೇಳುವುದಕ್ಕಿಂತ, ನೀವು ತಪ್ಪು ಮಾಹಿತಿಯನ್ನು ಕೊಟ್ಟಿದ್ದೀರಿ, ಎಂದು ನಾನು ಹೇಳಲು ಬಯಸುತ್ತೇನೆ. ಇನ್ನು ಎರಡನೆಯಾದಾಗಿ ಒಂದೊಂದು ಕ್ಷೇತ್ರಕ್ಕೆ 10 ಟ್ರಾಕ್ಟರ್, 10, ಮಿನಿ ಟ್ರಾಕ್ಟರ್‌ಗಳು, 20 ಟಿಲ್ಲರ್‌ಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಇವರು ಹೇಳಿದ ಹಾಗೆ ಒಂದೊಂದುಕ್ಷೇತ್ರಕ್ಕೆ ಶೇ. 50ರಷ್ಟು ಸಬ್ಸಿಡಿಯನ್ನು ಕೊಟ್ಟರೆ, ಸುಮಾರು 34ಲಕ್ಷ 20 ಸಾವಿರ ರೂಪಾಯಿಯಂತೆ ಒಂದು ಕ್ಷೇತ್ರಕ್ಕೆ ಸಬ್ಸಿಡಿಯನ್ನು ಕೊಡಬೇಕಾಗುತ್ತದೆ. 224 ಕ್ಷೇತ್ರಗಳಲ್ಲಿ 175 ತಾಲ್ಲೂಕುಗಳು ಬರುತ್ತದೆ, ಇದಕ್ಕೆ ಎಷ್ಟು ಹಣವನ್ನು ಇಟ್ಟಿದ್ದಾರೆಂಬುದನ್ನು ಕ್ಷೇತ್ರಗಳಲ್ಲಿ 175 ತಾಲ್ಲೂಕುಗಳು ಬರುತ್ತದೆ, ಇದಕ್ಕೆ ಎಷ್ಟು ಹಣವನ್ನು ಇಟ್ಟಿದ್ದಾರೆಂಬುದನ್ನು ಹೇಳಬೇಕಾಗುತ್ತದೆ. ಒಂದುಕ್ಷೇತ್ರಕ್ಕೆ 34 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಆಗುತ್ತದೆಯೇ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ, ನಾವು ಕಳೆದ ಸಾರಿ ಆಧುನೀಕರಣಕ್ಕೆ 44.18 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ನೀವು ಎಷ್ಟು ಹಣವನ್ನು ಒದಗಿಸಿದ್ದೀರಿ ಎಂದು ತೋರಿಸಿಲ್ಲ. ನಾವು ಇಂಡಿಯಾ ಆರ್ಗ್ಯಾನಿಕ್ 2005 ಎಂದು ಮಾಡಿದ್ದೆವು. ಇವತ್ತು ಕೃಷಿಯಲ್ಲಿ ಕೇವಲ ಮಾಹಿತಿಗಳನ್ನು ಕೊಟ್ಟು,

ಬೆಂಚ್‌ಗಳನ್ನು ಹೊಡೆದುಕೊಳ್ಳುವುದು ಬಿಟ್ಟಿ ಇಲ್ಲಿ ಏನು ಆಗಿಲ್ಲವೆಂಬುದನ್ನು ನಾನು ಹೇಳುತ್ತೇನೆ. ಇವತ್ತು ಸಮಗ್ರ ಕೃಷಿ ಅಭಿವೃದ್ಧಿಗೆ ಏನೇನು ಕ್ರಮಗಳನ್ನು ಜರುಗಿಸಿದ್ದೀರೆಂಬುದನ್ನು ಕೂಡ, ನಾವು ಇವತ್ತು ಯೋಚನೆ ಮಾಡಬೇಕಾಗಿದೆ. ಇವತ್ತು ನಮ್ಮಲ್ಲಿ ಧವಸ ಧಾನ್ಯಗಳ ವಿಸ್ತೀರ್ಣ 56.30ಹೆಕ್ಟಾರ್‌ಗಳಲ್ಲಿ ಬೆಳೆಯುತ್ತೇವೆ, ಉತ್ಪಾದನೆ 91.16 ಲಕ್ಷ ಟನ್‌ಗಳು ಆಗುತ್ತದೆ. ಎಣ್ಣೆಕಾಳುಗಳು 20. 3ಲಕ್ಷ ಹೆಕ್ಟಾರ್‌ಗಳಲ್ಲಿ ಬೆಳೆಯುತ್ತೇವೆ. 14.2 ಲಕ್ಷ ಟನ್ ಉತ್ಪಾದನೆ ಆಗುತ್ತದೆ. ಹೀಗೆ ಅನೇಕ ಬೆಳೆಗಳನ್ನು ಬೆಳೆದರೂ ಕೂಡ, ಈ ಬೆಳೆಗಳಿಗೆ ನೀವು ಇಟ್ಟಿರುವ ಅವರ್ತನಿಧಿ ಕೇವಲ 240 ಕೋಟಿ ರೂಪಾಯಿಗಳನ್ನು ಮಾತ್ರ ಇದಕ್ಕೆ ಏನೋ ಹೇಳುತ್ತಾರೆ, "ಆನೆ ಹೊಟ್ಟೆಗೆ ಮೂರು ಕಾಸಿನ ಮಜ್ಜಿಗೆ ಎನ್ನುವ ಹಾಗೆ ನೀವು ಇಟ್ಟಿರುವ ಹಣ ಇದೆ. ನೀವು ಬಹಳ ಹೆಚ್ಚಿಗೆ ಇಟ್ಟುಬಿಟ್ಟಿದ್ದೇವೆಂದು ಹೇಳುವುದಕ್ಕೆ ಹೊರಟ್ಟಿದ್ದೀರಿ, ಇವತ್ತು ತೋಟಗಾರಿಕೆಗೆ ಕೆಪೆಕ್‌ಗೆ 10 ಕೋಟ ರೂಪಾಯಿಗಳನ್ನು ಕೊಟ್ಟಿದ್ದೀರಿ, ಬಹಳ ಸಂತೋಷ, ಇವತ್ತು ಕೃಷಿ ಮತ್ತು ತೋಟಗಾರಿಕೆಗೆ ಬಹಳ ಅಡಚಣೆಗಳು ಇವೆ, ಇವತ್ತು ಕೋಲಾರದಲ್ಲಿ ಈರುಳ್ಳಿಯನ್ನು ಹೆಚ್ಚಿಗೆ ಬೆಳೆಯುತ್ತೇವೆ. ಟಮೊಟೊ ಬಗ್ಗೆ ಈಗ ಹೇಳುವುದಾದರೆ ನಾನು ಅಸೆಂಬ್ಲಿಗೆ ಬರುವಾಗ ಕೆಲವು ರೈತರು ಅಡ್ಡ ಹಾಕಿದರು, ಆಗ ಹಾಪ್‌ಕಾಮ್ಸ್‌ನವರು ಪರ್ಚೇಸ್ ಮಾಡುವಂತೆ ಪೋನ್ ಮಾಡಿ ಏರ್ಪಾಡು ಮಾಡಿದೆವು. ಇವತ್ತು ನೂರಾರು ಲೋಡ್ ಪ್ರತಿದಿವಸ ಕೋಲಾರ, ಮುಳಬಾಗಿಲು, ಶ್ರಿನಿವಾಸ ಪುರ, ಚಿಂತಾಮಣಿ, ಚಿಕ್ಕಬಳ್ಳಾಪುರ, ಈ ಭಾಗಗಳಲ್ಲಿ, ಇವತ್ತು ನಷ್ಟವಾಗುತ್ತಿದೆ ಇವತ್ತು ಆವರ್ತನಿಧಿ ಎಂದು ಹೇಳುತ್ತಿದ್ದೀರಿ. ಇವತ್ತು ಅಲ್ಲಿ ಹಣವನ್ನು ಕೊಡುತ್ತಾ ಇಲ್ಲ. ರೈತರು ಪ್ರತಿದಿವಸ ಸ್ಟ್ರೈಕ್ ಮಾಡುತ್ತಿದ್ದಾರೆ. ಆವತ್ತಿನ ದಿವಸ ಕಾರ್ಯಕ್ರಮಗಳಿಗೆ ನೀವು ಸ್ಪಂದಿಸದೇ ಇದ್ದರೆ, ರೈತರ ಮುಂದಿನ ಪರಿಸ್ಥಿತಿ ಏನು? ಇವತ್ತು ನಮ್ಮ ದೇಶದಲ್ಲಿ ಎಕರೆವಾರು ಉತ್ಪಾದನೆ ಮಾಡುವುದಕ್ಕೆ ಬಜೆಟ್‌ನಲ್ಲಿ ಏನೇನು ಮಾಡಿದ್ದೀರಿ? ಇವತ್ತು ಚೈನಾದೇಶದಲ್ಲಿ ಈರುಳ್ಳಿ 61.750 ಟನ್ ಒಂದು ಎಕರೆಗೆ ಬೆಳೆಯುತ್ತಾರೆ. ಆಸ್ಟ್ರೇಲಿಯಾ ದೇಶದಲ್ಲಿ 44.510 ಟನ್ ಬೆಳೆಯುತ್ತಾರೆ, ಭಾರತ ದೇಶದಲ್ಲಿ 10.620 ಟನ್ ಒಂದು ಎಕರೆಗೆ ಬೆಳೆಯುತ್ತಾರೆ, ಟಮೋಟೊ ವಿಶ್ವದಲ್ಲಿ ಸರಾಸರಿ 28.343, ನೆದರ್‌ಲ್ಯಾಂಡ್‌ನಲ್ಲಿ 466 ಟನ್ ಬೆಳೆಯುತ್ತಾರೆ. ಭಾರತ ದೇಶದಲ್ಲಿ ಕೇವಲ 15 ಟನ್ ಬೆಳೆಯುತ್ತೇವೆ. ಇದಕ್ಕೆತಾವು ಏನೇನು ಮಾಡಲಿಕ್ಕೆ ಅವಕಾಶವನ್ನು ಮಾಡಿ ಕೊಟ್ಟಿದ್ದೀರಿ, ಸಂಶೋಧನೆಗೆ ಎಷ್ಟು ಹಣವನ್ನು ಇಟ್ಟಿದ್ದೀರಿ, ಎಂಬುದನ್ನು ಕೂಡ ಹೇಳಿಲ್ಲ.

ಚೇರ್ಮನ್: ತಾವು ಮಾತನಾಡಲು ಶುರು ಮಾಡಿ 15 ನಿಮಿಷಗಳು ಆಯಿತು, ಬೇಗ ಮುಗಿಸಿ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಚೇರ್ಮನ್‌ರವರೆ, ನನಗೆ ಕನಿಷ್ಟ ಅರ್ಧ ಗಂಟೆಯನ್ನು ಕೊಡುತ್ತಿದ್ದರೆ ಹೇಗೆ?

ಚೇರ್ಮನ್ : ತಾವು ದಯಮಡಿ ಭಾಷಣವನ್ನು ಬೇಗ ಮುಗಿಸಿ, ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರವನ್ನುಕೊಡಬೇಕು.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಚೇರ್ಮನ್‌ರವರೆ, ಹೀಗೆ ಇದ್ದರೆ ಮಾತನಾಡುವುದಕ್ಕೆ ಆಗುವುದಿಲ್ಲ

ಶ್ರೀ ಕೆ.ಆರ್. ರಮೇಶ್ ಕುಮಾರ್: ಈಗ ಮಾನ್ಯ ಶ್ರೀನಿವಾಸ ಗೌಡರು ನೆದರ್‌ಲ್ಯಾಂಡ್ ನಲ್ಲಿ ಇದ್ದಾರೆ. ಅವರು ಬೆಂಗಳೂರಿಗೆ ಬರುವವರೆಗೆ ಟೈಮ್ ಕೊಡಿ, ಅವರು ಇಲ್ಲಿ ಲ್ಯಾಂಡ್ ಆದ ತಕ್ಷಣ ಕ್ಲೋಸ್ ಮಾಡಿಸಿ.

ಚೇರ್ಮನ್: ಅವರು ಮಾತನಾಡಲು ಶುರು ಮಾಡಿ ಕಾಲು ಗಂಟೆಯಾಯಿತು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಅವರು ಬಂದು ಬಿಡುತ್ತಾರೆ, ಬೇಗ ಬರುತ್ತಾರೆ. ತಾವು ಇಮಿಡಿಯಟ್ ಆಗಿ ಫ್ಲೈಟ್ ಕ್ಯಾಚ್ ಮಾಡಿ, ಬೆಂಗಳೂರಿಗೆ ಬಂದುಬಿಡಿ.

ಶ್ರೀ ಕೆ. ಶ್ರೀನಿವಾಸ ಗೌಡ : ಬೆಂಗಳೂರಿಗೆ ಬಂದು ಬಿಡಲಾ.. ಮಾನ್ಯ ಚೇರ್ಮನ್‌ರವರೆ, ನಮ್ಮಲ್ಲಿ ಎಕ್ಸ್‌ಪೋರ್ಟ್ ಫರ್ ಪಾರ್ಮೆನ್ಸ್ ಏನಿದೆಯೆಂದರೆ ವ್ಯಾಲ್ಯುನಲ್ಲಿ ಕಾಫಿ ಪ್ರಾಡಕ್ಟ್ 1183.93 ಕೋಟಿ ಉತ್ಪಾದನೆಯನ್ನು ಮಾಡುತ್ತಿದ್ದೇವೆ. ಇವತ್ತು ಸಿಲ್ಕ್ ಪ್ರಾಡಕ್ಟ್ಸ್ 521.24 ಎಕ್ಸ್‌ಪೋರ್ಟ್ ಪರಫಾರ್ಮೆನ್ಸ್. ಇದು ನಮ್ಮ ರಾಜ್ಯದ್ದು, ಕ್ಯಾಷ್ಯೂ ಇವತ್ತು ಇದರಲ್ಲಿ 251.55 ಆಗ್ರಿಕಲ್ಚರ್ ಪ್ರೊಸೆಸೆ ಫುಡ್ 195, ಸ್ಪೆಸಿಸ್ 61, ಟೊಬ್ಯಾಕೊ 16.25 ಫ್ಲವರ್ಸ್ 40.66, ಇದು 1999–2000ದಲ್ಲಿ ಇದ್ದದ್ದು ಇವತ್ತು 2004–05ರಲ್ಲಿ ಟೋಟಲ್ ಎಕ್ಸ್‌ಪೋರ್ಟ್ಸ್ 62, 638.53 ಕೋಟಿ ಟನ್‌ಗಳನ್ನು ನಾವು ರಫ್ತು ಮಾಡುತ್ತಿದ್ದೇವೆ. ಇವತ್ತು ಆಗ್ರಿಕಲ್ಚರ್ ಕಮಾಡಿಟ್ಸ್‌ನಲ್ಲಿ ಗ್ಲೋಬಲ್ ಎಕ್ಸ್‌ಪೋರ್ಟ್‌ನಲ್ಲಿ 5,00 ಬಿಲಿಯನ್ ಡಾಲರ್‌ಗಳು ಇದೆ. Agriculture commodities ನಲ್ಲಿ 300 million dollars ನಮ್ಮದ್ದು 6 ಪರ್ಸೆಂಟ್ ಎಂದರೆ 13 ಲಕ್ಷದ 5 ಸಾವಿರ ಕೋಟಿ ರೂಪಾಯಿಗಳ ಮೌಲ್ಯದ ಕೃಷಿ ಉತ್ಪಾದನೆಗಳನ್ನು ನಾವು export ಮಾಡುತ್ತಿದ್ದೇವೆ. ಎನ್ನುವುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ.

ಛೇರ್ಮನ್: ನೀವೀಗ ಒಳ್ಳೊಳೆಯ ಸಲಹೆಗಳನ್ನು ಕೊಟ್ಟಿದ್ದೀರಿ ಇಲಾಖಾವಾರು ಚರ್ಚೆ ಬಂದಾಗ ತಾವು ಆ ಸಲಹೆಗಳನ್ನು ದಯವಿಟ್ಟು ಕೊಡಿ.

ಶ್ರೀ ಕೆ. ಶ್ರೀನಿವಾಸಗೌಡ: ಇವತ್ತು ಕೊಡುವುದು ಬೇಡ ಎಂದು ಹೇಳುತ್ತೀರಾ? ನೀವು ಹೀಗೆ ಹೇಳಿದರೆ ನಾವೇನು ಮಾಡುವುದು? ನೀವು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮೇಲೆ ಕನಿಷ್ಟ ಅರ್ಧ ಗಂಟೆಯಾದರೂ ಕೊಡದಿದರೆ ಹೇಗೆ ಮಾನ್ಯ ಛೇರ್ಮನ್‌ರವರೇ?

ಛೇರ್ಮನ್ : ಇಲ್ಲ, ತಾವು ಹವತ್ತು ನಿಮಿಷ ಅವಕಾಶ ಕೊಡಿ ಎಂದು ಕೇಳಿದ್ದಿರಿ.

ಶ್ರೀ ಕೆ. ಶ್ರೀನಿವಾಸಗೌಡ: ನಮಗೆ ಈ ತರಹ ನೀವು ಮಾಡಬಾರದು ಮಾನ್ಯ ಛೇರ್ಮನ್‌ರವರೇ, ಸ್ವಲ್ಪ ಹೊತ್ತು ಮಾತನಾಡಿ ನನ್ನ ಮಾತನ್ನು ಮುಗಿಸುತ್ತೇನೆ ನೀವು ಮಧ್ಯೆ ಮಧ್ಯೆ bell ಹೊಡೆದರೆ ನನಗೆ ಬೇಜಾರುಗುತ್ತದೆ.

ಛೇರ್ಮನ್ : ಸರ್ಕಾರದ ಕಷ್ಟವನ್ನೂಸಹ ನೀವು ಅರ್ಥಮಾಡಿಕೊಳ್ಳಬೇಕು. ತಾವು ಹಿಂದೆ ಮಂತ್ರಿಗಳಾಗಿದ್ದವರು.

ಶ್ರೀ ಕೆ. ಶ್ರೀನಿವಾಸಗೌಡ : ಹೌದು ಸ್ವಾಮಿ. ನೀವು ನನಗೆ ಅವಕಾಶ ಕೊಟ್ಟು ಐದು ನಿಮಿಷದಲ್ಲಿಯೇ ಮುಗಿಸಿ, ಹತ್ತುನಿಮಿಷಗಳಲ್ಲಿಯೇ ಮುಗಿಸಿ ಎಂದು ಹೇಳಿದರೆ ಹೇಗೆ? ಮಾನ್ಯ ಛೇರ್ಮನ್‌ರವರೇ ಕೋಲಾರದಲ್ಲಿ ಎರಗೋಳು, ನಾಲ್ಕೈದು ಪಟ್ಟಣಗಳಲ್ಲಿ ನೀರಿನ ತೊಂದರೆ ಬಹಳ ಇದೆ. ಮಾಲೂರು, ಬಂಗಾರಪೇಟೆ, ಕೋಲಾರ ಮುಳುಬಾಗಿಲು ಕೆ.ಜಿ.ಎಫ್. ನಾನುಮಂತ್ರಿಯಾಗಿದ್ದಾಗ ಈ ಪಟ್ಟಣಗಳಲ್ಲಿ ತೊಂದರೆ ಇದೆ. ಸ್ವತಃ ಅಲ್ಲಿಗೆ ಹೋಗಿ ನಮ್ಮ ಎಂ.ಎಲ್.ಎ ಕೋಟಾದಿಂದ ಹಣ

ಕೊಟ್ಟು ಅದನ್ನು ನಾವು survey ಮಾಡಿಸಿದ್ದೇವೆ. ಇವತ್ತು ನಾನು ಮಾನ್ಯ ಉಪ ಮುಖ್ಯಮಂತ್ರಿಗಳ ಹತ್ತಿರ ಪ್ರಾರ್ಥನೆ ಮಾಡುತ್ತೇನೆ, ಈ ಎರಗೋಳುಗೆ ಯೋಜನೆ ಆದರೆ ನಮಗೆ ಬೇಸಿಗೆಯಲ್ಲಿ ಕೂಡ ನಿಜವಾಗಿ ಬಹಳ ಅನುಕೂಲವಾಗುತ್ತದೆ. ನೀವು t.m.c ನೀರು ಸಿಗುವಂತೆ ಮಾಡಲು 20 ಕೋಟಿ ರೂಪಾಯಿಗಳನ್ನು ಈಗ saction ಮಾಡಿದರೆ dam ಅನ್ನು ಕಟ್ಟುತ್ತಾರೆ. ಅಲ್ಲಿಂದಾಚೆಗೆ ನೀರೆಲ್ಲ ತಮಿಳುನಾಡಿಗೆ ಹರಿದುಹೋಗುತ್ತಾದೆ. ..ನಾನು ಯಾರಿಗೂ yield ಆಗಿಲ್ಲ

(ಗೊಂದಲ)

ಛೇರ್ಮನ್ : ಯಾರನ್ನೂ ಕರೆದಿಲ್ಲ. ದಯಮಾಡಿ ಎಲ್ಲ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಶ್ರೀನಿವಾಸಗೌಡ : ಈ ಎರಗೋಳು project ಮಾಡಿ ಈ ನಾಲ್ಕು ಪಟ್ಟಣಗಳಿಗೆ ನೀರು ಒದಗಿಸುವ ಕೆಲಸವನ್ನು ಮಾಡಬೇಕೆಂದು ಹೇಳಿ, ಇವತ್ತು ಏನು ನೀವು ಬಜೆಟ್‌ನ್ನು ಮಂಡಿಸಿ ಎಲ್ಲಾ ವಿಧದಲ್ಲೂ ಕೂಡ ಜನರಿಗೆ ಒಪ್ಪಿಸಿಬಿಡಬೇಕು, ಜನರನ್ನು ನಂಬಿಸುವಂಥ ಕೆಲಸಗಳನ್ನು ಮಾಡಿದಿರೇ ವಿನಃ ಬೇರೆ ಏನೇನು ಆಗಿಲ್ಲ ಎನ್ನುವಂಥದ್ದನ್ನು ನಾನುಮೊದಲನೆಯದಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಎಲ್ಲಾ ವಿವಿಧದಲ್ಲಿಯೂ ಕೂಡ ನೀವು ಈಕೃಷಿಯಲ್ಲಿ ಉತ್ಪಾದನೆ ಕಡೆಗೆ ಗಮನಕೊಟ್ಟಿಲ್ಲ. ನೀವು ಮಾಡಿದಂಥ ಈ ಆರ್ಥಿಕ ಪ್ರಸ್ತಾವನೆ ಮತ್ತು ಏನು ಇವತ್ತು ನೀವು ಇಟ್ಟಂಥ ಹಣ ಏನೇನೂ ಸಾಲದಾಗಿರುವುದರಿಂದ ಇದನ್ನು ಮತ್ತೆ ಮರುಪರಿಶೀಲನೆ ಮಾಡಬೇಕಾಗುತ್ತದೆ ಎನ್ನುವಂಥ ಮಾತನ್ನು ನಾನು ಮೊದಲನೆಯದಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ 'ಕೃಷಿ ಭೀಮಾ' ಯೋಜನೆಯನ್ನ 943 ಕೋಟಿ ರೂಪಾಯಿಗಳನ್ನು ನಮ್ಮ ಮಾನ್ಯ ಧರ್ಮಸಿಂಗ್‌ರವರು ಇದ್ದಾಗ ನಾವು release ಮಾಡಿದ್ದೆವು. ಇವತ್ತು ಅದಕ್ಕೆ ನೀವು ಹಣವನ್ನು ಹೆಚ್ಚಿಗೆ ಇಟ್ಟಿಲ್ಲ. ಈ ವರ್ಷ ಯಾವ ತರಹ ಮಳೆ ಬರುತ್ತದೋ ಗೊತ್ತಿಲ್ಲ. ಇದಕ್ಕೆ ನೀವು ಏಕೆ ಹಣ ಇಟ್ಟಿಲ್ಲವೆನ್ನುವುದನ್ನು ಕೇಳುತ್ತಾ ಇದರಲ್ಲಿ ಸೇರಿಸಬೇಕೆನ್ನುವುದನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಕೃಷಿ ಇಲಾಖೆಯಲ್ಲಿ, ನೀವು ಕೃಷಿಗೆ ಬಹಳ ಆದ್ಯತೆಯನ್ನು ಕೊಟ್ಟಿದ್ದೇವೆಂದು ಬಜೆಟ್‌ನಲ್ಲಿ ಹೇಳಿದರೂ ಕೂಡ, ನೀವು ಅದಕ್ಕೆ ಸರಿಯಾಗಿ ಸ್ಪಂದಿಸಿಲ್ಲ ಎನ್ನುವಂಥದ್ದೇ ನನ್ನ ಮೊದಲನೇ ಆರೋಪ ಎನ್ನುವುದಕ್ಕಿಂತ ನಿಮ್ಮ ಮೊದಲ ಆದ್ಯ ಕರ್ತವ್ಯ ಎಂದು ನಾನು ಹೇಳುತ್ತೇನೆ.

(ಗೊಂದಲ)

on going projects ಗೆ ....

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ದಯಮಾಡಿ ನೇತ್ರಾವತಿ ತಿರುವು ಬಗ್ಗೆ ಬೆಳಕು ಚೆಲ್ಲಬೇಕು.

(ಗೊಂದಲ)

ಶ್ರೀ ಆಲಂಗೂರು ಶ್ರೀನಿವಾಸ್: ಇದುವರೆಗೂ ಬಯಲುಸೀಮೆಗೆ ಏನು ಮಾಡಿದ್ದಾರೆ ಇನ್ನೇನು ಮಾಡಬೇಕು ಎನ್ನುವುದರ ಬಗ್ಗೆ ತಾವು ಮಾತನಾಡಿ.

ಶ್ರೀ ಕೆ. ಶ್ರೀನಿವಾಸಗೌಡ : ಮಾತನಾಡುತ್ತೇನೆ. ನೀವು ಮಾತನಾಡ್ರಿ. ನಾನು ಮಾತನಾಡುವುದನ್ನು ಮಾತನಾಡುತ್ತೇನೆ. ಹಿಂದಿನ ಸರ್ಕಾರ ಮಾಡಿದಂಥ ಫಲ ನಮ್ಮಲ್ಲಿ 'ಸೊಮ್ಮು ಒಗರದಿ, ಸೋಕಿ ಒಗರದಿ' ಅಂದರೆ ಆಸ್ತಿ ಒಬ್ಬರು, ಸೋಕಿ ಮಾಡುವವರು ಬೇರೆಯವರು ಎಂದು. ಮಾನ್ಯ ಧರ್ಮಸಿಂಗ್‌ರವರ ನೇತೃತ್ವದ ಸರ್ಕಾರದಲ್ಲಿ ಮಾನ್ಯ ಸಿದ್ದರಾಮಯ್ಯನವರು ಆ ಹಣವನ್ನು ಕೊಡಿಟ್ಟಿದ್ದರಿಂದ, ಇವತ್ತು "ನಾವು ಇದೆಲ್ಲಾ ಮಾಡುತ್ತಿದ್ದೇವೆ" ಎನ್ನುವುದನ್ನು ಇವರು ಹೇಳಿದ್ದಾರೆ. ಇವತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಕೂಡ, ರಾಷ್ಟ್ರದ G.D.P 8.1 ವೃದ್ಧಿಯಾಗಿದ್ದರೆ ಇವರು ಹೇಳುವ ಪ್ರಕಾರವೇ ಕರ್ನಾಟಕದಲ್ಲಿ 8.7 ಆಗಿದೆ. ಇನ್ನು ಪ್ರಾಥಮಿಕ ವಲಯ 6.3, ಉತ್ಪಾದನಾ ವಲಯ 5.7 ಆಗಿದೆ ಹಣದುಬ್ಬರ ಕೂಡ ನಮ್ಮಲ್ಲಿ 4.7 ಇದೆ ಇವೆಲ್ಲಕ್ಕೂ ಕೂಡ ಹಿಂದಿನ ಸರ್ಕಾರ ಏನು ಹಣವನ್ನು ಕೂಡಿಟ್ಟಿತ್ತು ಅದರಿಂದ ಇನ್ನಷ್ಟು ಒಳ್ಳೆಯ ಬಜೆಟ್ ಅನ್ನು ಕೊಡಬಹುದಾಗಿತ್ತು. ಇದನ್ನು ಮಾಡಲಿಲ್ಲ ಎಂಬುದು ನನ್ನ ಅನಿಸಿಕೆ. ಇದರಲ್ಲಿ ಏನು ಮಾಡಬೇಕೆನ್ನುವುದನ್ನು ನೀವು ಮುಂದಿನ ದಿನಗಳಲ್ಲಿ ನೋಡಬೇಕು. ಹಾಗೆಯೇ, ಬಿತ್ತನೇ ಬೀಜ, ಸುಸ್ಥಿರ ಬೇಸಾಯಕ್ಕೆ ಸಾವಯವ ಕೃಷಿಗೆ 8 ಕೋಟಿ ರೂಪಾಯಿಗಳು ಏನೇನೂ ಸಾಲದು. ನಿಮ್ಮ ಕೃಷಿ ಮಂತ್ರಿಗಳು ತಾಲ್ಲೂಕನ್ನು ಸಹ ತೆಗೆದುಕೊಳ್ಳುತ್ತೇವೆಂದು ಹೇಳಿದರೆ 8 ಕೋಟಿ ರೂಪಾಯಿಗಳು ಸಾಲುವುದಿಲ್ಲ. ಇದಕ್ಕೆ ಹೆಚ್ಚಿಗೆ ಹಣ ಇಡಬೇಕಾಗುತ್ತದೆ. ಹಲವಾರು ಸಣ್ಣ ಮತ್ತು ಅತಿ ಸಣ್ಣ ಕೃಷಿ ಚಟುವಟಿಕೆಗಳಿಗೆ 50 ಪರ್ಸೆಂಟ್ ಸಹಾಯಧನವೆಂದು 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಇದು ಕೂಡ ಏನೇನೂ ಸಾಲದು. ಜಲ ಅಭಿವೃದ್ಧಿಗೆ 50 ಸಾವಿರ ಸುವರ್ಣ ಕೃಷಿ ಹೊಂಡಗಳನ್ನು ಮಾಡಬೇಕೆಂದು ನೀವು ಹೇಳಿದ್ದೀರಿ. 25 ಸಾವಿರ ರೂಪಾಯಿಗಳನ್ನು ಒಂದು ಕೃಷಿ ಹೊಂಡಕ್ಕೆ ನೀವು labour oriented ಮಾಡಬೇಕೆಂದರೆ ನೀವು ಒದಗಿಸಿರುವ ಹಣದಲ್ಲಿ ಆಗುವುದು ಕೇವಲ 20 ಸಾವಿರ ಹೊಂಡಗಳು ವಿನಃ, ಇದು 50 ಸಾವಿರ ಹೊಂಡಗಳು ಆಗುವುದಿಲ್ಲ. ಇದನ್ನು ಸಹ ಗಮನಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ದ್ರಾಕ್ಷಿ ರಸ ಉತ್ಪಾದನೆ, ಬಗ್ಗೆ ಮಹಾರಾಷ್ಟ್ರದಲ್ಲಿ ಚರ್ಚೆಯಾಗುತ್ತಿದೆ. ದ್ರಾಕ್ಷಿ ರಸವನ್ನು ಅಂದರೆ wine ಅನ್ನು liquor ಜೊತೆಯಲ್ಲಿ ಸೇರಿಸಬಾರದೆನ್ನುವ ಚಿಂತನೆಗಳು ನಡೆಯುತ್ತಿವೆ. ನಮ್ಮಲ್ಲೂ ಕೂಡ ಯಾರು ದ್ರಾಕ್ಷಿಯನ್ನು ಬೆಳೆದು ಅದಕ್ಕೆ wine product ಅನ್ನು ಮಾಡುತ್ತಾರೆ, ಅದರಲ್ಲಿ alchohol percentage 4 or 2 ಏನೋ ಇರಬಹುದು. ನನಗೆ ಅದರ ಬಗ್ಗೆ ಅಷ್ಟು ಸರಿಯಾದ ಮಾಹಿತಿ ಇಲ್ಲ. ಅದನ್ನು .. ನಲ್ಲಿ ಬೆರೆಸದೇ, ಅದನ್ನು ದ್ರಾಕ್ಷಿ ರಸವಾಗಿಯೇ ಮಾಡಬೇಕು wine ಅನ್ನು liquor ಜೊತೆಗೆ ಸೇರಿಸದೇ ಮಾಡಬೇಕು, ಅದು ಎಲ್ಲಾ ಕಡೆಯೂ ಸಿಗುವ ಹಾಗೆ ಮಾಡಿದರೆ ರೈತರಿಗೆ ಲಾಭ ಬರುತ್ತದೆ.

ಶ್ರೀ ಆಲಂಗೂರು ಶ್ರೀನಿವಾಸ್ :- ಮಾನ್ಯ ಛೇರ್ಮನ್‌ರವರೆ, ನಮ್ಮಲ್ಲಿ excise duty ಇದೆ, ಆದ್ದರಿಂದ ಆ ದ್ರಾಕ್ಷಿ ಎಲ್ಲಾ ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಆ excise duty ಅನ್ನು ತೆಗೆದಾಗ ಮಾತ್ರ ಅದು ಸರಿಹೋಗಬಹುದು. ಆ wine policy ಬಗ್ಗೆ ನಾವೊಂದು proposal ಕೊಟ್ಟಿದ್ದೇವೆ. ದಯವಿಟ್ಟು ಆ wine ಅನ್ನು ನಾವು excise ಗೆ ತೆಗೆದುಕೊಂಡಾಗ ಇಲ್ಲಿ ಬೆಳೆಯತಕ್ಕಂಥ ಉತ್ಪಾದಕರಿಗೆ ಬಹಳ ಅನುಕೂಲವಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ :- ಗೋಸಂರಕ್ಷಣೆಗೆ 20 ಎಕರೆ ಜಮಿನಿನಲ್ಲಿ 2.70 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಗೋತಳಿ ಅಭಿವೃದ್ಧಿಯಾಗುತ್ತಿದೆ ಎನ್ನುವುದಕ್ಕಿಂತ ಹೆಚ್ಚಿಗೆ, ಈಗಾಗಲೇ ಮಾನ್ಯ ರೇವಣ್ಣನವರು ಮಾತನಾಡಿದ ಪ್ರಕಾರ ಒಂದು ದಿವಸಕ್ಕೆ ನಮ್ಮ ಜಿಲ್ಲೆಯಲ್ಲಿ 7 ಲಕ್ಷ 20 ಸಾವಿರ ಲೀಟರ್ ಹಾಲನ್ನು ಉತ್ಪಾದನೆ ಮಾಡುತ್ತಿದ್ದೇವೆ. ನಾವು ಅಲ್ಲಿ ಮಾರಲಿಕ್ಕೆ ಜಾಗ ಇಲ್ಲದೆ ಬಹಳ ಕಷ್ಟವಾಗಿದೆ. ಬೆಂಗಳೂರಿನಲ್ಲಿ ಕೇವಲ ಒಂದು ಲಕ್ಷ ಲೀಟರ್ ಹಾಲನ್ನು ಮಾತ್ರ ಮಾರಲಿಕ್ಕೆ ಅವಕಾಶವಿದೆ. ಉಳಿದ ಪ್ರಮಾಣವನ್ನು ಮಾರಲು ಕೂಡ ಅವಕಾಶ ಮಾಡಿಕೊಡುವಂಥದ್ದನ್ನು ನೀವು ಮಾಡಿಕೊಡಬೇಕು. ಕೋಳಿ ಜ್ವರದ ಬಗ್ಗೆ ಹೇಳುವುದಾದರೆ ಇವತ್ತು ಮಾಂಸ ತಿನ್ನುವವರಿಗೆ, ಮಾನ್ಯ ಯಡಿಯೂರಪ್ಪನವರು ತಿನ್ನುತ್ತೀರೋ ಇಲ್ಲವೋ ಹೇಗಾಗಿದೆ ಎಂದರೆ ಕೋಳಿ ಎಂದರೆ ಎಲ್ಲರೂ ಹೆದರಿಕೊಳ್ಳುವಂಥ ಪರಿಸ್ಥಿತಿ ಆಗಿಬಿಟ್ಟಿದೆ. ನಮ್ಮ ರಾಜ್ಯದಲ್ಲಿ ಕೋಳಿ ಜ್ವರಕ್ಕೆ ಏನಾದರೂ ನೀವು ಕ್ರಮ ಜರುಗಿಸಿದ್ದೀರಾ? ಇದಕ್ಕೆ ಹಣವನ್ನು ಯಾವುದಾದರೂ head ನಲ್ಲಿ ಇಟ್ಟು ಏನಾದರೂ ಮಾಡಬಹುದೇ ಎನ್ನುವಂಥದ್ದನ್ನು ನೀವು ಚಿಂತನೆ ಮಾಡಬೇಕು.

(ಗೊಂದಲ)

ಹಾಲು ಉತ್ಪಾದನೆಯಲ್ಲಿ 11 ಕೋಟಿ ಬೇರೆ ಉತ್ತರ ಕರ್ನಾಟಕದಲ್ಲಿ ಅದು ಆಗಬೇಕು. ಏಕೆಂದರೆ, ನನಗೊಂದು ಸಾರಿ ಮಾನ್ಯ ದೇವೇಗೌಡರು ಒಂದು ಭಾಷಣದಲ್ಲಿ ಹೇಳಿರುವಂಥದ್ದು ಜ್ಞಾಪಕಕ್ಕೆ ಬಂತು. ಮಾನ್ಯ ಎಂ.ವಿ. ಕೃಷ್ಣಪ್ಪನವರು ಇಲ್ಲಿ ಕಂದಾಯ ಮಂತ್ರಿಗಳಾಗಿದ್ದರಂತೆ. ಅವರು ಆಗ ತಾನೇ 1962ನೇ ಇಸವಿಯಲ್ಲಿ ಎಂ.ಎಲ್.ಎ. ಆಗಿದ್ದರಂತೆ. ನಮ್ಮ ಹೊಳೆನರಸೀಪುರದಲ್ಲಿ ಆವಾಗ ನೀರು ಬಂದಿರಲಿಲ್ಲ. ಆಗ, ಇದೇನು ಬಹಳ ಬಡತನ ಇದೆ, ಏನು ಮಾಡಬೇಕೆಂದು ಮಾನ್ಯ ದೇವೇಗೌಡರು ಮಾನ್ಯ ಎಂ.ವಿ.ಕೃಷ್ಣಪ್ಪನವರನ್ನು ಕೇಳಿದಾಗ, ಎಂ.ವಿ.ಕೃಷ್ಣಪ್ಪನವರು ಒಂದು ಮಾತು ಹೇಳಿದರಂತೆ. ಅವರೇ ಹೇಳಿದ ಭಾಷಣವನ್ನು ತಮಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. "ನೀವೇನು ಮಾಡಬೇಡಿ, ಊರಿಗೊಂದೊಂದು milk society ಮಾಡಿ. ಬಡತನ ರೇಖೆಗಿಂತಲೂ ಕಡಿಮೆ ಇರುವ ಜನ ಚೆನ್ನಾಗಿ ಬದುಕುತ್ತಾರೆ " ಎನ್ನುವ ಮಾತನ್ನು ಹೇಳಿದ್ದಾರೆ. ಇದಕ್ಕೆ ಇಡೀ ರಾಜ್ಯದಲ್ಲಿ ಒತ್ತು ಕೊಡಬೇಕಾಗುತ್ತದೆ. ನಾವು ಇವತ್ತು ಯಾವ ಕಾರ್ಡ್ಸ್ ಅನ್ನು ಕೊಟ್ಟು 3 ರೂಪಾಯಿಗಳಿಗೆ ಅಕ್ಕಿ ಕೊಡುತ್ತಿದ್ದೇವೆ, ಇದನ್ನು ನೀವು ಕಡಿಮೆ ಮಾಡಬಹುದು. ಪ್ರತಿ ಹಳ್ಳಿಯಲ್ಲೂ ಕೂಡ ಮಿಲ್ಕ ಸೊಸೈಟಿಗಳನ್ನು ಮಾಡಿ ಹಾಲು ಉತ್ಪಾದನೆ ಹೆಚ್ಚು ಮಾಡಬೇಕು. ಎಂ.ವಿ.ಕೃಷ್ಣಪ್ಪನವರು ಮಾಡಿದ ಒಳ್ಳೆಯ ಕಾರ್ಯಕ್ರಮವನ್ನು ನೀವು ಮಾಡಬೇಕು. ಇವತ್ತು ಎಂ.ವಿ.ಕೃಷ್ಣಪ್ಪನವರ ಹೆಸರಿನಲ್ಲಿ, ಹಾಲು ಒಕ್ಕೂಟಗಳ ಒಂದು ಫೆಡರೇಷನ್ ಇದೆ, ಅದನ್ನು ಎಂ.ವಿ.ಕೃಷ್ಣಪ್ಪನವರ ಒಕ್ಕೂಟ ಎಂದು ಮಾಡಬೇಕು ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ಎಲ್ಲಾ ವಿಷಯಗಳಲ್ಲೂ ಕೂಡ ಹೆಚ್ಚಿಗೆ ಹೇಳಿಬಿಟ್ಟಿರುವುದರಿಂದ ನಾನು ಹೆಚ್ಚು ಮಾತನಾಡಲು ಬಯಸುವುದಿಲ್ಲ. ಅವರು ಬಹಳ ಹೆಚ್ಚಿಗೆ ಹೇಳಿದ್ದರಿಂದ, ಅದರ ಮೇಲೆ ಮತ್ತೆ ಮತ್ತೆ ಹೇಳಲು ಇಷ್ಟಾಪಡುವುದಿಲ್ಲ. ಇವತ್ತು ಕೃಷಿಯಲ್ಲಿ ನೀವು ಹೇಳಿದ ಹಾಗೆ, ಎಲ್ಲಾ ಫಿಗರ್‌ಗಳೂ ಕೂಡ ತಪ್ಪು ಮಾಹಿತಿ ಇದೆ. ಸತ್ಯಕ್ಕೆ ದೂರವಾದಂಥ ಮಾಹಿತಿಯನ್ನು ಕೊಟ್ಟಿದ್ದೀರಿ. ನಾನು 2-3 ವಿಷಯಗಳನ್ನು ಹೇಳಿದ್ದೇನೆ. ನಿಮ್ಮ ಅಧಿಕಾರಿಗಳು ಯಾವ ಆಧಾರದ ಮೇಲೆ ನಿಮಗೆ ಈ ಲೆಕ್ಕವನ್ನು ಕೊಟ್ಟರೋ ನನಗೆ ಗೊತ್ತಿಲ್ಲ.

ಇದನ್ನು ನೀವು ಸರಿ ಮಾಡಬೇಕೆನ್ನುವಂಥದ್ದನ್ನು ಹೇಳುತ್ತೇನೆ. ನಾನು ಮೊನ್ನೆ ಒಂದು ಪೇಪರ್‌ನಲ್ಲಿ ನೋಡಿದೆ. ಲಿಕ್ಕರ್ ಅಂಡ್ ವೈನ್ ಮರ್ಚೆಂಟ್ಸ್ ಅಂಡ್ ಎಂಪ್ಲಾಯೀಸ್ ಡಿಮಾಂಡ್ ರಿವರ್ಸಲ್ ಆಫ್ ಲಿಕ್ಕರ್ ಪಾಲಿಸಿ ಈ ಹೋಲ್‌ಸೇಲ್ 184, 180 ಏನೋ ಇದೆಯಂತೆ. ಅವರಿಗೆ ನೀವು ಇದ್ದಕ್ಕಿದ್ದ ಹಾಗೇ " ಏಪ್ರಿಲ್ 1ನೇ ತಾರೀಖಿನಿಂದ ನಿಮ್ಮ ಬಾಗಿಲು ಹಾಕುತ್ತೇವೆಂದು" ಎಂದು ಹೇಳಿದರೆ ಅಲ್ಲಿನ ಎಂಪ್ಲಾಯೀಸ್‌ಗೆ ಬಹಳ ತೊಂದರೆಯಾಗುತ್ತದೆ. ಅವರು ಸಾಲ-ಸೋಲ ಮಾಡಿರುತ್ತಾರೆ. ನೀವು ಅವರಿಗೊಂದು ಟೈಂ-ಬಾಂಡ್ ಪ್ರೋಗ್ರಾಂ ಕೊಡಿ. ನಾನು ಅವರಿಗೆ ಪೂರ್ತಿ ಇವತ್ತೇ ಮಾಡಿ ಎಂದು ಹೇಳುವುದಿಲ್ಲ. ಅವರಿಗೊಂದು 6 ತಿಂಗಳೋ ಒಂದು ವರ್ಷವೋ ಸಮಯ ಕೊಟ್ಟು ನೀವು ಇಂಥ ದಿವಸದಿಂದ ಮಾಡಬೇಕೆನ್ನುವಂಥದ್ದನ್ನು ನೀವು ಮಾಡದೇ ಇದ್ದರೆ, ಅವರಿಗೆ ಬಹಳ ಕಷ್ಟವಾಗುತ್ತದೆ ಸಾವಿರಾರು ಜನ ಆ ದಂಧೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ನೀವು ಹೇಗೆ ಲಿಕ್ಕರ್ ಕಾರ್ಪೋರೇಷನ್ ಮಾಡಿ ಇವತ್ತು ಸೆಕೆಂಡ್ಸ್ ಅನ್ನು ನಿಲ್ಲಿಸಿದ್ದೀರಿ, ಆ ರೀತಿಯ ಸೆಕೆಂಡ್ಸ್ ದಂಧೆ ಇಲ್ಲಿ ಇಲ್ಲ. ನನಗನಿಸುತ್ತದೆ, ಇಲ್ಲೇನಾಗುತ್ತದೆ, ಈ ಹೋಲ್‌ಸೇಲ್‌ಗೂ ಸರ್ಕಾರದ್ದೇ ವ್ಯಾಪ್ತಿ. ಬಂದರೆ, ಯಾವ ವ್ಯಕ್ತಿ ಲಿಕ್ಕರ್ ಇಂಡಸ್ಟ್ರಿಯಲ್ಲಿ ಸ್ಟ್ರಾಂಗ್ ಇರುತ್ತಾನೋ ಅವನ ಮೂಲಕ, ಅವನ ಪ್ರಾಡಕ್ಟ್ಸ್ ಅನ್ನು ಮಾರುವಂಥ ಕೆಲಸವಾಗುತ್ತದೆ. ಇದರಿಂದ ಜನಕ್ಕೆ ಬೇಕಾದಂಥ ಲಿಕ್ಕರ್ ಸಿಗುವುದಿಲ್ಲ ಎಂಬುದನ್ನು ಕೂಡ ನೀವು ಅರಿಯಬೇಕಾಗುತ್ತದೆ. ಆದ್ದರಿಂದ ಅವರಿಗೊಂದು ಟೈಂ-ಬಾಂಡ್ ಪ್ರೋಗ್ರಾಂ ಕೊಡಿ. ಅದು 6 ತಿಂಗಳೋ ಒಂದು ವರ್ಷವೋ ಆಗಿರಬಹುದು, ನೀವೇನು ಇವತ್ತು 100 ಕೋಟಿ ಆದಾಯ ಬರುತ್ತದೆ ಎಂದು ಹೇಳುತ್ತೀರಿ, ಕೆಲವರು ಹೇಳುವ ಪ್ರಕಾರ 100 ಕೋಟಿ ರೂಪಾಯಿ ಬರುವುದಿಲ್ಲ, ಕೇವಲ 20 ಕೋಟಿ ರೂಪಾಯಿ ಬರುತ್ತದೆಂದು ಹೇಳುತ್ತಾರೆ. 8 ಸಾವಿರದಿಂದ 9 ಸಾವಿರ ಜನ ಇವತ್ತು ಇದರಿಂದ ಬದುಕುತ್ತಿದ್ದಾರೆ. ಈ ಬಗ್ಗೆ ಏನಾದರೂ ಒಂದು ಚಿಂತನೆ ಮಾಡಬೇಕು ಎನ್ನುವಂಥದ್ದನ್ನು ಈ ಸಮಯದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ಬೆಲ್ ಹೊಡೆದಿದ್ದೂ. ನಾನು ಬಹಳ ಚೆನ್ನಾಗಿ ತಯಾರಾಗಿ ಬಂದಿದ್ದೆ. ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್:- ನೆದರ್‌ಲ್ಯಾಂಡ್‌ನಿಂದ ಇಂಡಿಯಾಕ್ಕೆ ಬಂದಿರಿ. ಬಿಡಿ. ನೆದರ್‌ಲ್ಯಾಂಡ್‌ನಿಂದ ಇಂಡಿಯಾಕ್ಕೆ ಬಂದರು. ಥ್ಯಾಂಕ್ಯೂ. ಈಗ ಆಯವ್ಯಯದ ಮೇಲಿನ ಚರ್ಚೆ-ಮುಗಿದಿದೆ.

(ಗೊಂದಲ)

ಈಗ ಚರ್ಚೆಗೆ ಹಣಕಾಸಿನ ಮಂತ್ರಿಗಳಾಗಿರತಕ್ಕಂಥ ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಮಂತ್ರಿಗಳು) :- ನಾನು ಉತ್ತರ ಕೊಡುತ್ತಿದ್ದೇನೆ ಸಾರ್.

(ಗೊಂದಲ)

ಛೇರ್ಮನ್:- ಈಗ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಮೀಟಿಂಗ್‌ನಲ್ಲಿ ತಾವುಗಳೇ ಎಲ್ಲ ಸೇರಿಕೊಂಡು ತೀರ್ಮಾನ ಮಾಡಿದ್ದೀರಿ.

(ಗೊಂದಲ)

ಇವತ್ತು ಚರ್ಚೆ ಮತ್ತು ಉತ್ತರ ಮುಗಿಯಬೇಕೆಂದು ಹೇಳಿ ತೀರ್ಮಾನ ಆಗಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ನಾನು ಅರ್ಧ ಗಂಟೆಯಲ್ಲಿ ಮುಗಿಸುತ್ತೇನೆ. (ಗೊಂದಲ) ನನಗೇನೂ ಹೆಚ್ಚು ಸಮಯ ಬೇಕಿಲ್ಲ.

ಛೇರ್ಮನ್ :- ಸಪ್ಲಿಮೆಂಟರಿ ಕೇಳಿ. ಸಪ್ಲಿಮೆಂಟರಿ ಬಜೆಟ್ ಮೇಲಿನ ಚರ್ಚೆಯಲ್ಲಿ ಅವಶ್ಯಕ ಇರುವಂಥದ್ದನ್ನು ಸಪ್ಲಿಮೆಂಟರಿಯಲ್ಲಿ ಕೇಳಿ.

(ಗೊಂದಲ)

ಇಲ್ಲಿ ಆಗಬೇಕು ಮತ್ತೆ ಅಲ್ಲಿಯೂ ಆಗಬೇಕೆಂದು ಹೇಳುತ್ತಿದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಯವರನ್ನು ಕರೆದಾಗಿದೆ. ದಯಮಾಡಿ ಸಹಕರಿಸಿ.

(ಗೊಂದಲ)

ಸಪ್ಲಿಮೆಂಟರಿ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾರ್ ಇದು ಸದನದ ಎಲ್ಲಾ ಸದಸ್ಯರಿಗೂ ಯುಗಾದಿಯ ಸಂದರ್ಭದಲ್ಲಿ.

(ಗೊಂದಲ)

ಶ್ರೀ ಧರ್ಮಸಿಂಗ್ : ಯಡಿಯೂರಪ್ಪ ನವರೆ ಬೇಡಿ, ಏಕೆ ತರಾತುರಿ? ನೀವು ಉಪ ಮುಖ್ಯಮಂತ್ರಿಗಳಾಗಿದ್ದೀರಿ. ಇಲ್ಲಿಯ ಹಾಗಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತು ಕೊಂಡು ಇದನ್ನು ಮುಗಿಸಬೇಕೆಂದು ಹೇಳಿದ್ದಿರಲ್ಲ.

ಶ್ರೀ ಧರ್ಮಸಿಂಗ್ : ಆಯಿತು, ಮುಂಜಾನೆ 9 ಗಂಟೆಗೇ ಕುಳಿತಿದ್ದೇವೆ, ಸಾಕಷ್ಟು ಶಾಸಕರು ಕೂಡ ಮಾತನಾಡುವವರಿದ್ದಾರೆ. ಅವರಿಗೆ ಅವಕಾಶ ಕೊಡಿರಿ, ಏಕೆ ತರಾತುರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾಕಷ್ಟು ಕೊಟ್ಟಿದ್ದೇವೆ.

ಶ್ರೀ ಧರ್ಮಸಿಂಗ್ : ಇವತ್ತು ಅವರದೆಲ್ಲ ಕೇಳಿ ನಾಳೆ ಮುಂಜಾನೆ ಉತ್ತರ ಕೊಡಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒಂದು ಗಂಟೆಯಲ್ಲಿ ನನ್ನ ಉತ್ತರವನ್ನು ಮುಗಿಸುತ್ತೇನೆ, ಆಯಿತೆ?

(ಗೊಂದಲ)

ದಯಮಾಡಿ, ನಾನು ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಡಿ ಸಾರ್.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಯಡಿಯೂರಪ್ಪನವರೆ ನಾಳೆ ಬೆಳಿಗ್ಗೆ ಉತ್ತರ ಕೊಡಿ ಸಾರ್. 9 ಗಂಟೆಗೆ ಶುರು ಮಾಡಿ ಸಾರ್. ಬೆಳಿಗ್ಗೆ 9 ಕ್ಕೆ ಬಂದು ಬಿಡೋಣ ಸಾರ್. ನೀವೆ ಫ್ರೆಷ್ ಆಗಿ ಕೊಡಬಹುದು ನಾಳೆ 9 ಗಂಟೆಗೆ ಮತ್ತೆ ಸೇರೋಣ.

(ಗೊಂದಲ)

ಛೇರ್ಮನ್ : ಈಗ ನಿಮಗೆ ಕ್ಲಾರಿಫಿಕೇಷನ್ ಕೇಳಲಿಕ್ಕೆ ಅವಕಾಶ ಮಾಡಿಕೊಡುತ್ತೇವೆ.

(ಗೊಂದಲ)

ಯಾರು ಮಾತನಾಡಿಲ್ಲ ಅವರಿಗೆ ಕ್ಲಾರಿಫಿಕೇಷನ್ ಕೇಳಲಿಕ್ಕೆ ಅವಕಾಶ ಮಾಡಿಕೊಡುತ್ತೇವೆ. ದಯಮಾಡಿ, ಸಹಕರಿಸಿ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಾರ್ ಇವತ್ತು ಚುನಾವಣೆ ಇದ್ದ ಕಾರಣ ನಾವೆಲ್ಲರೂ ಕೂಡ 8.30ಕ್ಕೆ ಬಂದಿದ್ದೇವೆ. 8.30 ರಿಂದ 3.30, 4 ಗಂಟೆ ತನಕ ಅಲ್ಲೇ ಇದ್ದೇವೆ. ಅಲ್ಲಿಂದಿಲ್ಲಿ ಮಧ್ಯದಲ್ಲಿ ಕೆಲವು ಡಿಸ್ಕಷನ್ ನಡೆದಾಗ ಇಲ್ಲಿ ಬಂದೆವು. ಇಷ್ಟು ಹೊತ್ತು ಇಲ್ಲಿ ಡಿಸ್ಕಷನ್ ನಡೆದಿದೆ. ಇನ್ನು 3–4 ಜನ, ಹತ್ತು–ಹತ್ತು ನಿಮಿಷ, 5–5 ನಿಮಿಷ ಮಾತನಾಡಲಿ. ಮಾತನಾಡಿದ ಮೇಲೆ ಅಂಥದ್ದೇನೂ ಆಕಾಶ ಕಡಿದು ಬೀಳುವುದಿಲ್ಲ. ನಾಳೆ ಉತ್ತರ ಸಹ ಕೊಡಲಿ. ಬೇರೆ ಎಷ್ಟು ಸಲ ಈ ಸದನದಲ್ಲಿ ಆಗಿಲ್ಲ? ರಾತ್ರಿ 2 ಗಂಟೆ ತನಕ ಉತ್ತರ ಕೊಟ್ಟಿದ್ದ ಉದಾಹರಣೆಗಳಿವೆ. ಮತ್ತು ಸಿದ್ಧರಾಮಯ್ಯನವರು ಹೇಳಿದ ಹಾಗೆ, 2 ಸಲ ಬಡ್ಜೆಟ್ ಮೇಲೆ ಅವರೇ ಉತ್ತರ ಕೊಡುವಾಗ ಮುಂಜಾನೆಯೇ 9 ಗಂಟೆಗೆ ಕೊಟ್ಟಿದ್ದಾರೆ. ನಿಮಗೂ ಫ್ರೆಷ್ ಆಗಿಇರುತ್ತದೆ. ಚೆನ್ನಾಗಿ, ಆರಾಮವಾಗಿ ಸ್ವಲ್ಪ ನಿದ್ರೆ ಮಾಡಿ ಇನ್ನೂ ಸ್ವಲ್ಪ ಯೋಚನೆ ಮಾಡಿ, ಇನ್ನೂ ಕೆಲವು ಹೆಣ್ಣು ಮಕ್ಕಳಿಗೆ ಏನಾದರೂ ಪ್ರೋಗ್ರಾಮ್ಸ್ ಇದ್ದರೆ ಅದರ ಬಗ್ಗೆಯೂ ಕೂಡ ಚಿಂತನೆ ಮಾಡಿ ಅನೌನ್ಸ್ ಮಾಡಿ. ನಾಳೆ ಹೆಣ್ಣು ಮಕ್ಕಳ ಬಗ್ಗೆ ಮಕ್ಕಳ ಬಗ್ಗೆ ಏನಾದರೂ ಇನ್ನೂ ಕೆಲವು ಯೋಜನೆಗಳಿದ್ದರೆ ನಾಳೆ ಅದನ್ನು ಚಿಂತನೆ ಮಾಡಿ ಹೊಸದಾಗಿ ಅನೌನ್ಸ್ ಮಾಡಿ

ಛೇರ್ಮನ್:– ಜೆಂಡರ್ ಈಕ್ವಿಟಿ ಬಗ್ಗೆ ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಅದಕ್ಕೇ ಅವರು ನಾಳೆ ಆದರೆ ಫ್ರೆಷ್ ಇರುತ್ತಾರೆ, ನಾವು ಕೇಳುವುದಕ್ಕೂ ಸಂತೋಷವಾಗುತ್ತದೆ. ಮತ್ತೇನಾದರೂ ನಾಳೆ ಕ್ಲಾರಿಫಿಕೇಷನ್ ಇದ್ದರೂ ಕೂಡ ಕೇಳಬಹುದು ಮಾರ್ನಿಂಗ್ 9 ಗಂಟೆಗೆ ಬೇಕಾದರೆ ಶುರು ಮಾಡಿ. ಬಂದ ಕೂಡಲೇ ಅವದರೇ ದಾಳಿ ನಡೆಯಬಹುದು. ಈಗ 3–4 ಜನ ಮಾತನಾಡಿ ಮುಗಿಸಿದ ಮೇಲೆ ನಾಳೆ ಮುಂಜಾನೆ ಮಾತನಾಡಿ.

ಛೇರ್ಮನ್:– ಅದಕ್ಕೆ ಸರ್ಕಾರದವರೇನು ಹೇಳುತ್ತಾರೆ ಹೇಳಲಿ. ಏನು ಹೇಳುತ್ತೀರಿ ತಾವು ಹೇಳಿ. ಸರ್ಕಾರದ ಅಭಿಪ್ರಾಯವನ್ನೂ ಇಲ್ಲಿ ಕೇಳುತ್ತಿದ್ದೇವೆ. (ಗೊಂದಲ) ಕೇಳೋಣ. ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಏನು ಹೇಳುತ್ತಾರೋ ಕೇಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಈ ಸದನದಲ್ಲಿ ಅನೇಕ ನಿರ್ಣಯಗಳನ್ನು ನೀವೇ ಬದಲಾವಣೆ ಮಾಡಿದ್ದೀರಿ. ಈ ಸಾರಿ ಬದಲಾವಣೆ ಮಾಡುವುದಕ್ಕೆ ನಮಗೆ ಛಾನ್ಸು ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಏನು ಮಾಡಬೇಕು ಹೇಳಿ ಸಾರ್?

ಶ್ರೀ ಮಲ್ಲಿಕಾರ್ಜುನ ಖರ್ಗೆ:– ನೀವು ನಾಳೆ ಉತ್ತರ ಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ನಾಳೆ ಬೆಳಿಗ್ಗೆ 9 ಗಂಟೆಗೆ ಬಂದ ತಕ್ಷಣ ಉತ್ತರ ಕೊಡಬಹುದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಆಗಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಯಾರು ಮಾತನಾಡುತ್ತಾರೋ ಮಾತನಾಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಅದಕ್ಕೆ ಮಾತನಾಡುವುದಕ್ಕೆ ಅವರಿಗೆ ಅವಕಾಶ ಕೊಡಿ. ನಾಲ್ಕು ಜನ ಇದ್ದಾರೆ. ನಾಲ್ಕು ಯುವಕರಿಗೆಲ್ಲ ಮಾತನಾಡುವುದಕ್ಕೆ ಅವಕಾಶ ಕೊಡಿ.

ಛೇರ್ಮನ್:– ಈಗ ಆ ಕಡೆಯಲ್ಲೂ ಅವಕಾಶ ಕೇಳುತ್ತಿದ್ದಾರೆ.

(ಗೊಂದಲ)

ಅಲ್ಲ, ಚರ್ಚೆ ಇವತ್ತು ಮುಗಿಯಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:– ಬೆಳಿಗ್ಗೆ 9 ಗಂಟೆಗೆ ಸೇರಿ ಉತ್ತರ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಯಡಿಯೂರಪ್ಪನವರೆ, ನಿಮಗೆ ಅರ್ಥವಾಗಲಿಲ್ಲವೆಂದು ಕಾಣುತ್ತದೆ.

(ಗೊಂದಲ)

ಛೇರ್ಮನ್:– ನೀವು ಕುಳಿತುಕೊಳ್ಳಿ. ಈಗ ಚರ್ಚೆ ಇವತ್ತು ಮುಗಿಯಬೇಕು. ಐದು–ಐದು ನಿಮಿಷ ಅವಕಾಶ ಮಾಡಿಕೊಡುತ್ತೇವೆ. ಎರಡೂ ಕಡೆಇ ಮಾತನಾಡಲಿಕ್ಕೆ ಸದಸ್ಯರುಗಳು ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ, ದಯವಿಟ್ಟು ಕುಳಿತುಕೊಳ್ಳಿ. ಕುಮಾರ್ ಬಂಗಾರಪ್ಪನವರೆ ಮಾತನಾಡಿ. ಐದೈದು ನಿಮಿಷದಲ್ಲಿ ಮುಗಿಸಿ. (ಗೊಂದಲ) ಆಯಿತು, ಕುಳಿತುಕೊಳ್ಳಿ. ಗಮನಿಸಿದ್ದೇನೆ.

ಶ್ರೀ ಹೆಚ್.ಡಿ. ಬಸವರಾಜು:– ಛೇರ್ಮನ್‌ರವರೆ ನಾನು ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತಿದ್ದೇನೆ, ಬಹಳಷ್ಟು ವಿಷಯವಾಗಿ ಬೆಳಿಗ್ಗೆಯಿಂದಲೂ ಆ ಭಾಗದಲ್ಲಿ ಮಾತನಾಡಿದ್ದಾರೆ.

ಛೇರ್ಮನ್:– ಆಯಿತು, ನೆಕ್ಸ್ಟ್ ಕರೆಯುತ್ತೇನೆ, ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಬಸವರಾಜು:– ಎಳೆ ಎಳೆಯಾಗಿ ಬಿಡಿಸಿದ್ದಾರೆ, ಅವರ ವಿಚಾರವನ್ನೂ ನಾವು ಕೇಳಿದ್ದೇವೆ. ನಮಗೂ ಅವಕಾಶ ಮಾಡಿಕೊಡಿ.

ಛೇರ್ಮನ್:– ದಯಮಾಡಿ ಕುಳಿತುಕೊಳ್ಳಿ ಬಸವರಾಜುರವರೆ.

ಶ್ರೀ ಹೆಚ್.ಡಿ. ಬಸವರಾಜು:– ನಮಗೂ ಕೂಡ ಅವಕಾಶವನ್ನು ಕೊಡಿ ನಾವೂ ಕೂಡ ಮಾತನಾಡುತ್ತೇವೆ.

ಛೇರ್ಮನ್:– ಆಯಿತು ಕುಮಾರ್ ಬಂಗಾರಪ್ಪನವರೆ ಮಾತನಾಡಿ.

ಶ್ರೀ ಹೆಚ್.ಡಿ. ಬಸವರಾಜು:– ಈ ಮನೆ ಸಂಪ್ರದಾಯವಿದೆ. ತಮಗೆ ಗೊತ್ತಿದೆ. ಆ ಭಾಗದವರು ಮಾತನಾಡಿದ ಮೇಲೆ ಈ ಭಾಗದವರಿಗೆ ಕೊಡಬೇಕಲ್ಲವೆ? ತಾವು ದಯವಿಟ್ಟು ಈ ಭಾಗದವರಿಗೆ ಅವಕಾಶವನ್ನು ಕೊಡಿ. ಮತ್ತೆ ಅವರಿಗೆ ಕೊಡಿ ಬೇಡವೆಂದು ಹೇಳುವುದಿಲ್ಲ.

ಛೇರ್ಮನ್:– ಆಯಿತು, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಬಸವರಾಜು:- ಅಲ್ಲ, ಈ ಭಾಗದವರು ನಾವು ಪ್ರಾರಂಭ ಮಾಡಬಹುದೇ

ಛೇರ್ಮನ್:- ಈಗ ಅವರನ್ನು ಕರೆದಿದ್ದೇನೆ. ದಯವಿಟ್ಟು ತಾವು ಕುಳಿತುಕೊಳ್ಳಿ. ಕುಮಾರ್ ಬಂಗಾರಪ್ಪನವರನ್ನು ಕರೆದಿದ್ದೇವೆ ನೀವು ಕುಳಿತುಕೊಳ್ಳಿ

ಶ್ರೀ ಕುಮಾರ್ ಬಂಗಾರಪ್ಪ ಎಸ್ (ಸೊರಬ) :- ಮಾನ್ಯ ಛೇರ್ಮನ್‌ರವರೆ, ಈ ಒಂದು ಮುಂಗಡ ಪತ್ರದ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನಾಲ್ಕು ಮಾತುಗಳನ್ನು ಹೇಳಲು ಇಚ್ಚಿಸುತ್ತೇನೆ. ಈಗಾಗಲೇ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಮುಂಗಡ ಪತ್ರದಲ್ಲಿ ಹತ್ತಾರು ವಿಚಾರಗಳನ್ನು ಅದರಲ್ಲೂ ವಿಶೇಷವಾಗಿ ಕರ್ನಾಟಕ ಅಭಿವೃದ್ಧಿ ರಂಗ ಎಂಬ ಒಂದು ಹೆಸರಿನ ಮೇಲೆ ವಾದವನ್ನು ಮಾಡತಕ್ಕಂಥದು ಅಥವಾ ಈ ಒಂದು ಹೆಸರಿನ ಮೇಲೆ ಅಭಿವೃದ್ಧಿಯನ್ನು ಸಾಧಿಸುತ್ತೇವೆ ಎನ್ನತಕ್ಕಂಥ ವಿಚಾರದಲ್ಲಿ, ಬಹಳಷ್ಟು ಹಿರಿಯ ಸದಸ್ಯರುಗಳು ತಮ್ಮ ಅನಿಸಿಕೆಗಳ ಮುಖೇನ ಹೇಗೆ ಸರ್ಕಾರ ಆರ್ಥಿಕ ಪರಿಸ್ಥಿತಿಯಲ್ಲಿ ಉತ್ತಮವಾಗಿದ್ದರೂ ಕೂಡ ಸತತವಾಗಿ ಎಡವಿರುವುದನ್ನು ತಮ್ಮ ಗಮನಕ್ಕೆ ತರತಕ್ಕಂಥ ಕೆಲಸಗಳನ್ನು ಮಾಡಿದ್ದಾರೆ. ನಾನು ಬಹಳಷ್ಟು ವಿಚಾರಗಳಿಗೆ ಹೋಗುವುದಿಲ್ಲ, ವಿಶೇಷವಾಗಿ ನಾನು ಸುಧಾರಣೆ ವಿಚಾರದಲ್ಲಿ ಅದರಲ್ಲೂ, ನಮ್ಮ ಈ ರೆವಿನ್ಯೂ ಡಿಪಾರ್ಟ್‌ಮೆಂಟ್ ಮೇಲೆ ಮಾತನಾಡಲು ಇಷ್ಟಪಡುತ್ತೇನೆ. ನಾವು ಮೂಲಭೂತವಾಗಿ ಚರ್ಚೆ ಮಾಡುತ್ತಾ ಇರತಕ್ಕಂಥದ್ದೆ ನಮ್ಮ ನೆಲದ ವಿಸ್ತರಣೆ, ಹಾಗೂ ನಮ್ಮ ಜಲ ಎಷ್ಟರ ಮಟ್ಟಿಗೆ ನಮಗೆ ಇದೆ ಎನ್ನತಕ್ಕಂಥದ್ದರ ಮೇಲೆ ನಾವು ಚರ್ಚೆ ಮಾಡುತ್ತಿದ್ದೇವೆ. ಇದರ ಮೇಲೆ ಮೂಲಭೂತವಾಗಿ ನಮ್ಮ ಅಭಿವೃದ್ಧಿಯನ್ನು ಕಾಣತಕ್ಕಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇವತ್ತು 1965--70ರಲ್ಲಿ ಸರ್ವೇ ಆಗಿರುವುದು ಬಿಟ್ಟರೆ, ರೆವಿನ್ಯೂ ಇಲಾಖೆಯಿಂದ ಮ್ಯಾಂಡೇಟರಿಯಾಗಿ ನಮಗೆ ಯಾವತ್ತು ಸರ್ವೇ ಆಗಬೇಕಾಗಿತ್ತು, ಆ ಸರ್ವೇ ಇವತ್ತಿನವರೆವಿಗೂ ಅಗಿಲ್ಲ. ಈ ಸರ್ವೇ ಅಗದಿರುವ ಕಾರಣಕ್ಕಾಗಿ ಹತ್ತಾರು ಸಮಸ್ಯೆಗಳು ನಮಗೆ ಪ್ರತಿ ಬಾರಿಯೂ ಕೂಡ ಎದುರಾಗುತ್ತಿದೆ. ನಮ್ಮ ಜನಸಂಖ್ಯೆಗನುಗುಣವಾಗಿ ನಾವೇನು ಸಾಧನೆ ಮಾಡಬೇಕೊಸ ಆ ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಂದಾಯ ಇಲಾಖೆಗೆ ವಿಶೇಷವಾಗಿ ನಾವು ಯಾವ ಒತ್ತನ್ನು ಕೊಡಬೇಕಾಗಿತ್ತೋ ಆ ಒತ್ತನ್ನು ತತ್‌ಕ್ಷಣ ಕಂದಾಯ ಇಲಾಖೆ ಪೋಡಿಯನ್ನು ಮಾಡುವುದರಲ್ಲಿ ಕೊಟ್ಟಿಲ್ಲ. ನಾನು ಸನ್ಮಾನ್ಯ ರೆವಿನ್ಯೂ ಸಚಿವರಲ್ಲಿ ಕೇಳುವುದೇನೆಂದರೆ, ಇದಕ್ಕಿಂತ ಮುಂಚೆ ಅವರು ವಿರೋಧ ಪಕ್ಷದ ನಾಯಕರು ಆಗಿದ್ದರು. ವಿರೋಧ ಪಕ್ಷದ ನಾಯಕರಾಗಿದ್ದಂಥ ಸಂದರ್ಭದಲ್ಲಿ ಕೆಲವು ಪತ್ರಗಳನ್ನು ಬರೆದು ಅವರು ನಮ್ಮ ಅಂದಿನ ಅರ್‌ಡಿಪಿಆರ್ ಸಚಿವರಿಗೆ ಮಾಹಿತಿ ಕೊಟ್ಟಿದ್ದಾರೆ. ಆ ಮಾಹಿತಿ ಏನೆಂದು ಕೊಟ್ಟಿದ್ದಾರೆಂದರೆ, ನಾನು ಅರ್‌ಡಿಪಿಅರ್ ನಲ್ಲಿರುವ ಕೆಲವು ವ್ಯವಸ್ಥೆಗಳು ಅದರಲ್ಲೂ ವಿಶೇಷವಾಗಿ ಡಿಪಿಎಆರ್ ವ್ಯವಸ್ಥೆಗೆ ನಾನು ಅನುಗುಣವಾಗಿ ಬರುತ್ತೇನೆ. ಬಹಳಷ್ಟು ಜನ ನಮ್ಮ ಸಚಿವಾಲಯದಲ್ಲಿರತಕ್ಕಂಥವರು ಅದರಲ್ಲೂ ವಿಶೇಷವಾಗಿ ವಿಧಾನ ಸೌಧದಲ್ಲಿ ಮತ್ತೆ ಎಂಎಸ್ ಬಿಲ್ಡಿಂಗ್‌ನಲ್ಲಿರತಕ್ಕಂಥವರು, ಸಚಿವಾಲಯದ ಶಾಖಾಧಿಕಾರಿಗಳು ಇವರು ಯಾರು ಕೂಡ ಹೋಗಿ ತಹಸೀಲ್ದಾರ್ ಅಗಿ ಇರಬಾರದೆಂದು ಇದೆ. ತಹಸೀಲ್ದಾರ್ ಆಗಿ ಇರತಕ್ಕಂಥವರು ಆಯಾಯ ವ್ಯವಸ್ಥಿತವಾಗಿರತಕ್ಕಂಥ ಸಂಬಂಧಪಟ್ಟಿರತಕ್ಕಂಥ ಪರೀಕ್ಷೆಗಳನ್ನು ಪಾಸ್ ಮಾಡಿ ಅದರಲ್ಲೂ ಮುಂದಾಗಿ

ಬಿಟ್ಟು ಅವರು ಆ ಸ್ಥಾನಕ್ಕೆ ಹೋಗಬೇಕಾಗುತ್ತದೆ. ಇವತ್ತು ಸುಮಾರು 16 ಜನ ರೆವಿನ್ಯೂ ಇಲಾಖೆಯಲ್ಲಿ ಇರತಕ್ಕಂಥವರು ಅವರಿಗೆ ಅರ್ಹತೆ ಇಲ್ಲದಿದ್ದರೂ ಕೂಡ ಅವರು ಇವತ್ತು ಬೇರೆ ಕಡೆಗೆ ತಹಸೀಲ್ದಾರ್‌ಗಳಾಗಿ ಕೆಲಸ ಮಾಡುತ್ತಿದ್ದಾರೆ. ಅಂದರೆ ಇವರು ಏಕೆ ಈ ರೀತಿಯಾಗಿ ಮಾಡುತ್ತಾರೆ? ಇಲ್ಲಿ ಡೆಪ್ಯೂಟೇಷನ್ ಇಲ್ಲವೆಂದು ಹೇಳುತ್ತೇವೆ. ಮತ್ತೊಂದು ರೀತಿಯಲ್ಲಿ ಅವರಿಗೆ ಡೆಪ್ಯೂಟೇಷನ್ ಕೊಟ್ಟು ನಾನಾ ರೀತಿಯ ವಾತಾವರಣವನ್ನು ಸೃಷ್ಟಿ ಮಾಡುತ್ತೇವೆ. ನಿಮಗೆ ಆಡಳಿತ ಸುಧಾರಣೆ ಮಾಡಬೇಕೆನ್ನುವ ವಾದ ಇದ್ದರೆ ತಾವು ಯಾವ್ಯಾವ ಹೋರಾಟವನ್ನು ಯಾವ್ಯಾವ ವಾದವನ್ನು ನೀವು ವಿರೋಧ ಪಕ್ಷದಲ್ಲಿದ್ದಾಗ ಮಂಡನೆ ಮಾಡಿದ್ದರೊ, ಆ ವಾದಕ್ಕೆ ತಾವು ಸೂಕ್ತವಾಗಿ ಈಗ ಸ್ಪಂದಿಸಬೇಕಾದುದು ಮೊದಲನೇ ಕರ್ತವ್ಯವಾಗುತ್ತದೆ. ಈಗಾಗಲೇ ತಾವು ಬಂದು ಸುಮಾರು 40, 45 ದಿವಸಗಳಾಯಿತು ಎಂದು ಹೇಳುತ್ತೀರಿ. ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಸಂದರ್ಭದಲ್ಲಿ ಮಾಡಿರತಕ್ಕಂಥ ಏನು ಹೇಳಿಕೆಗಳು ಇವೆ, ಬರೆದಿರತಕ್ಕಂಥ ಏನು ಪತ್ರಗಳು ಇವೆ, ಇದನ್ನು ಮೊದಲನೇ ದಿನವೇ ತಾವು ನಿಂತುಕೊಂಡು ಮಾಡಬೇಕಾಗಿರತಕ್ಕಂಥ ಅವಶ್ಯಕತೆ ಇತ್ತು, ನಿಮಗೆ ಆಡಳಿತ ಸುಧಾರಣೆಯಾಗಬೇಕು ಎನ್ನುವುದಿದ್ದರೆ ಆ ರೀತಿ ಮಾಡಬೇಕಾಗಿತ್ತು. ಅದನ್ನು ಇವತ್ತು ನೀವು ಬಿಟ್ಟು ಬಿಟ್ಟು, ಆ ಇಲಾಖೆಯನ್ನು ನೀವು ತೆಗೆದುಕೊಂಡ ಮೇಲೆ ಇವತ್ತಿನವರೆವಿಗೂ ಅದರ ಬಗ್ಗೆ ಒಂದೇ ಒಂದು ಪದವನ್ನು ಅದರ ಮೇಲೆ ಚಕಾರ ಎತ್ತಿದಂಥ ಸಂದರ್ಭವಿಲ್ಲ. ಹೀಗಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದಿಷ್ಟೆ ನಮ್ಮ ಕಂದಾಯ ಇಲಾಖೆಯಲ್ಲಿ. ಅವರು ಮೊದಲು ಯಾವ್ಯಾವವಾದಗಳಲ್ಲಿ ಪತ್ರಗಳಲ್ಲಿ ಮಂಡಣೆ ಮಾಡಿದ್ದಾರೆ, ಅವುಗಳಿಗೆ ತಕ್ಷಣ ಸ್ಪಂದಿಸಿ ತಹಸೀಲ್ದಾರ್ ನೇಮಕಾತಿ ವಿಷಯದಲ್ಲಿ ಎಲ್ಲೆಲ್ಲಿ ಲೋಪದೋಷಗಳಾಗಿವೆ, ಅವುಗಳನ್ನು ಸರಿಪಡಿಸಿಬೇಕೆಂದು ಏನು ಇದೆ, ಅದನ್ನು ತಕ್ಷಣ ಮಾಡಿ ಅದಕ್ಕೆ ಯಾವ ರೀತಿ ಕೇಡರ್ ಬೇಸ್ ಮ್ಯಾನೆಜ್‌ಮೆಂಟ್ ಆಗಿ ಮಾಡಬೇಕಾಗಿತ್ತು ಅದಕ್ಕೆ ಹೆಚ್ಚಿನ ಒತ್ತನ್ನೂ ಕೊಡಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ವಿಶೇಷವಾಗಿ ನಾನು ಪಶುಸಂಗೋಪನಾ ಇಲಾಖೆಯ ಬಗ್ಗೆ ನಾಲ್ಕು ಮಾತುಗಳನ್ನು ಹೆಚ್ಚಿಗೆ ಆಡುವುದಕ್ಕೆ ಇಚ್ಚೆಪಡುತ್ತೇನೆ. ಇವತ್ತು ಈ ಒಂದು ಇಲಾಖೆಯಲ್ಲಿ ನಮ್ಮ ಸಿದ್ದರಾಮಣ್ಣ ನವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಪಶುಸಂಗೋಪನಾ ಇಲಾಖೆಯಲ್ಲಿರುವ ತಳಿಗಳ ಬಗ್ಗೆ ಪ್ರಸ್ತಾಪಿಸಿದರು. ಅಮೃತ್ ಮಹಲ್ ಮತ್ತು ಹಳ್ಳಿಕಾರ್. ಈ ಎರಡು ಯೋಜನೆಗಳು ವಿಶೇಷವಾಗಿ ಜಿಲ್ಲಾವಾರು ಅಭಿವೃದ್ಧಿ ಹೊಂದುವುದಕ್ಕೆ ಸಹಾಯ ಮಾಡಿದ್ದಾರೆ. ದೇಶಿಯ ತಳಿಗಳು ಪ್ರತಿ ವರ್ಷ ಕೂಡ ಕಡಿಮೆಯಾಗುತ್ತಲೇ ಬಂದಿದೆಯೇ ಹೊರತು ಅವು ಇಂಪ್ರೂವ್‌ಮೆಂಟ್ ಅಗಿಲ್ಲ, ಅವತ್ತಿನಿಂದ ಹಿಡಿದು ಇವತ್ತಿನವರೆಗೂ ಅಗಿಲ್ಲ. ನಿಮಗೆ ಅಂಕಿ ಅಂಶಗಳನ್ನು ಹೇಳಬೇಕು ಎನ್ನುವುದಾದರೆ, ದೇಶಿಯ ತಳಿಗಳು ಇವತ್ತು ಸುಮಾರು 16 ಪರ್ಸೆಂಟ್‌ಗಿಂತಲೂ ಕಡಿಮೆಯಾಗಿದೆ, ಪ್ರತಿ ವರ್ಷ ಇದು ಕಡಿಮೆಯಾಗುತ್ತಲೇ ಬರುತ್ತಿದೆ. ಮಿಶ್ರತಳಿ ಇರಬಹುದು, ನಮ್ಮ ಎಮ್ಮೆ ಇರಬಹುದು, ಕುರಿ ಇರಬಹುದು, ಮೇಕೆಗಳು ಇರಬಹುದು, ಪೌಲ್ಟ್ರಿ ಒಂದು ಸಂದರ್ಭದಲ್ಲಿ ಒಳ್ಳೆಯ ಮಟ್ಟಕ್ಕೆ ಏರಿತ್ತು, ಅದರೆ ಈಗ ಮೊನ್ನೆ ಕೋಳಿ ಜ್ವರ ಬಂದ ಮೇಲೆ ಸಂಪೂರ್ಣವಾಗಿ ಬಿದ್ದು ಹೋಗಿದ್ದನ್ನು ಕಾಣುತ್ತಿದ್ದೇವೆ. ವಿಶೇಷವಾಗಿ ತಮ್ಮ ಗಮನಕ್ಕೆ ತರುವುದೇನೆಂದರೆ, ದೇಶಿಯ ತಳಿಗಳನ್ನು ನೀವು ಅಭಿವೃದ್ಧಿ ಬೇಕು

ಎನ್ನುವ ಉದ್ದೇಶ ಏನೀದೆ, ಇದು ಸ್ವಾಗತಾರ್ಹ ಅದರೆ ಬೇಸಿಕ್ ಆಗಿ ಇದು ಈಗಾಗಲೇ ಆಗಿರತಕ್ಕಂಥದ್ದೆ. ಅಂದಿನ ಕಾಲದಲ್ಲಿ ಕಾವಲು ಎನ್ನತಕ್ಕಂಥ ಏನು ನಮ್ಮ ಮೈಸೂರು ಮಹಾರಾಜರ ಕಾಲದಿಂದ ಅದನ್ನು ಉಳಿಸಿಕೊಂಡು ಬಂದಿದ್ದರು, ಇವತ್ತು ಅದರ ವಿಸ್ತೀರ್ಣನೇ ಅಂದರೆ ಸುಮಾರು ಲಕ್ಷಾಂತರ ಎಕರೆಗಳಷ್ಟು ಇವತ್ತು ಸಂಪೂರ್ಣವಾಗಿ ಸರ್ಕಾರದ ಕೈ ಬಿಟ್ಟು ಹೋಗಿದೆ. ಎಲ್ಲಾ ಒತ್ತುವರಿಯಾಗಿದೆ, ಇಲ್ಲಾಂದ್ರೆ ಬಗರ್‌ಹುಕುಂ ಸಾಗುವಳಿದಾರರಿಗೆ ಕೊಟ್ಟಿದ್ದೇವೆ. ಇದನ್ನು ನೀವು ಮುಂದಾಲೋಚನೆ ಇಟ್ಟುಕೊಂಡು ಯಾವ್ಯಾವ ಫಾರಂಹೌಸ್‌ಸ್ ಯ್ಯಾವ್ಯಾವ ಕಾವಲುನಲ್ಲಿ ನಮಗೆ ಇವತ್ತು ಇದೆಯೋ ಅವುಗಳಿಗೆ ಮುಖ್ಯವಾಗಿ ನಾವು ಒತ್ತು ಕೊಟ್ಟರೆ, ಇರತಕ್ಕಂಥ ಫಾರಂಹೌಸಸ್ ಕಾವಲುಗಳು ಏನು ಇವೆ ಅದಕ್ಕೆ ನಾವು ಒತ್ತು ಕೊಟ್ಟರೆ, ನಮ್ಮ ಮೂಲಭೂತವಾಗಿಇರತಕ್ಕಂಥ ತಳಿಗಳು ಏನು ಇವೆ ಅವುಗಳು ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ನಮ್ಮ ದೇಶಿಯ ತಳಿಗಳನ್ನು ರಕ್ಷಣೆ ಮಾಡಿಕೊಳ್ಳಲಿಲ್ಲವೆಂದರೆ, ನಾವು ಆ ತಳಿಗಳ ಮೂಲವನ್ನು ತರಬೇಕು ಎನ್ನುವುದಾದರೆ, ಇವತ್ತು ಅಮೇರಿಕಾಕ್ಕೆ ಹೋಗಿ ತರಬೇಕಾಗುತ್ತದೆ. ಅಮೇರಿಕಾ ದವರು ನಮ್ಮ ತಳಿಗಳನ್ನು ತೆಗೆದು ಕೊಂಡು ಹೋಗಿ ಅಲ್ಲಿ ಸಂರಕ್ಷಣೆ ಮಾಡಿಕೊಂಡು, ಕ್ರಾಸ್ ಬಿಡ್ ಮಾಡಿಕೊಂಡು ಅಮೃತ್ ಮಹಲ್‌ನ್ನು ಅವರು ಇವತ್ತು ಅಲ್ಲಿ ಮಾರುತ್ತಿದ್ದಾರೆಯೇ ಹೊರತು ನಮಗೆ ನಮ್ಮ ತಳಿಗಳು ಸಿಗುತ್ತಿಲ್ಲ. ಮೊನ್ನೆ ನಾವು ಮಾತನಾಡಿದಂಥ ಸಂದರ್ಭದಲ್ಲಿ ಒಂದು ಜೋಡಿ ಅಮೃತ್‌ಮಹಲ್ ಎತ್ತು ಎಷ್ಟು ಕ್ರಯಕ್ಕೆ ಹೋಗಿದೆ ಎಂದರೆ ಒಂದೂವರೆ ಲಕ್ಷಕ್ಕೆ, ಒಂದು ಲಕ್ಷದ ಆರವತ್ತು ಸಾವಿರಕ್ಕೆ ಮಾರಾಟವಾಗಿರುವುದನ್ನೂ ಕಾಣುತ್ತೇವೆ. ಇವತ್ತು ಪಶುಸಂಗೋಪನಾ ಇಲಾಖೆ ಏನು ಇದೆ ಇದು ಕೇವಲ ಒಂದು ಇಲಾಖೆಯಾಗಿ ಬರಿ ಜಾನುವಾರುಗಳಿಗೆ, ಕುರಿಗೆ, ಕೋಳಿಗೆ, ಸೀಮಿತವಾಗಿರತಕ್ಕಂಥದ್ದು ಅಲ್ಲ, ಇವತ್ತು ಸಾಮಾಜಿಕವಾಗಿ ಆರ್ಥಿಕವಾಗಿ, ನಾವು ಅದರ ಮೇಲೆ ಬಿಡಿಪಿ ಗ್ರೋಥ್‌ನ್ನು ಕಾಣಬೇಕಾಗಿತ್ತು. 2000-2001 ರಲ್ಲಿ ಅದು 4.9 ಪರ್ಸೆಂಟ್ ಇದ್ದದ್ದು, 2004-2005 ರಲ್ಲಿ ಇಳಿದು 3.9ಕ್ಕೆ ಬಂದಿದೆ ಅಂದರೆ 3.9 ಕ್ಕೆ ಇದು ಇಳಿದು ಹೋಗಿದೆ. ಇದನ್ನು ಮತ್ತೆ ಮೇಲೆ ತೆಗೆದುಕೊಂಡು ಬರಬೇಕಾದರೆ ಸಾಮಾಜಿಕ ವಾದಂಥ ನಮ್ಮ ಉತ್ಪಾದನೆ ಏನು ಇದೆ, ಇದನ್ನು ನಾವು ಸತತವಾಗಿ ಮೇಲೆ ಏರಿಸತಕ್ಕಂತಹ ಪ್ರಯತ್ನ ಮಾಡಬೇಕಾದರೆ, ನಮ್ಮ ತಳಿಗಳು ಏನು ಇವೆ, ನಮ್ಮ ಕ್ರಾಸ್‌ಬಿಡ್ ತಳಿಗಳನ್ನು ಮಾತ್ರ ಅಲ್ಲದೆ ನಾವು ಬೇರೆ ತಳಿಗಳನ್ನು ಕೂಡ ಅಭಿವೃದ್ಧಿ ಪಡಿಸಬೇಕಾಗಿದೆ. ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಹೇಳುವುದಾದರೆ, ನಮ್ಮ ಕಡೆ ಮಲೆನಾಡು ಗಿಡ್ಡ ತಳಿಗಳನ್ನು ಎಲ್ಲಿಯಾದರು ಒಂದು ಕಡೆ ಅಭಿವೃದ್ಧಿ ಮಾಡಿ ಉಳಿಸುವುದಕ್ಕೆ ಸಾಧ್ಯವಾಗುತ್ತದೆಯೆ? ಇವತ್ತಿನ ದಿವಸ ಮಲೆನಾಡು ಗಿಡ್ಡ ತಳಿಗಳನ್ನು ಉಳಿಸುವುದಕ್ಕೆ ನಮ್ಮ ರೈತರು ತಯಾರು ಇಲ್ಲ. ಏಕೆಂದರೆ ಈ ತಳಿಗಳಿಂದ ಹಾಲು ಉತ್ಪಾದನೆ ಬಹಳ ಕಡಿಮೆ. ಹಾಲು ಉತ್ಪಾದನೆ ಯಾವುದರಲ್ಲಿ ಬರುವುದಿಲ್ಲವೋ ಅಂಥವುಗಳನ್ನು ನಾವು ತಕ್ಷಣವೇ ಕಸಾಯಿಖಾನೆಗೆ ಕಳುಹಿಸುವಂಥ ಪರಿಸ್ಥಿತಿ ಇದೆ. ಅಮೃತ್ ಮಹಲ್ ತಳಿಗಳಲ್ಲಿ ಗಂಡು ಕರುವನ್ನು ಹಸು ಹಾಕಿದರೆ ಅದನ್ನು 6 ದಿನ ಇಟ್ಟುಕೊಂಡು ಆನಂತರ ಕೊಟ್ಟುಬಿಡುತ್ತೇವೆ. ಏಕೆಂದರೆ ಮೊದಲ 6 ದಿನ ಹಸುವಿನಲ್ಲಿ ಗಿಣ್ಣು ಹಾಲು ಪಡೆದುಕೊಳ್ಳುತ್ತಾರೆ ಮತ್ತೆ ಈ ಹಾಲನ್ನು ಡೈರಿಗೂ ಕೂಡ ಹಾಕುವುದಿಲ್ಲ. ಮತ್ತೆ 6 ದಿವಸದವರೆಗೆ ಕರು ಇಟ್ಟುಕೊಂಡು 7ನೇ ದಿವಸಕ್ಕೆ ಅದು ಎಲ್ಲಿಗೆ ಹೋಗುತ್ತದೆಂಬುದು ಕೂಡ ಗೊತ್ತಾಗುವುದಿಲ್ಲ.

ಇದರಿಂದ ಏನಾಗುತ್ತದೆಂದರೆ ಜೆನಿಟಿಕ್ ಆಗಿ ನಮ್ಮಲ್ಲಿರತಕ್ಕಂಥ ತಳಿಗಳನ್ನು ನಾವು ಪ್ರತಿ ಸಾರಿ ಕೊಲ್ಲತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಅಂದರೆ, ವಿಶೇಷವಾಗಿ ಗಂಡು ಕರುವನ್ನು ಕೊಲ್ಲತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಪಟ್ಟಣ ಪ್ರದೇಶಗಳಲ್ಲಿ ಹಸುಗಳನ್ನು ಸಾಕಾಣಿಕೆ ಮಾಡುವುದಕ್ಕೆ ಒಂದು ಮೂಲಭೂತವಾದ ಸೌಲಭ್ಯ ಕೂಡ ಇಲ್ಲ. ಇಲ್ಲಿ ಜಾಗ ಕೂಡ ಇಲ್ಲ. ಆದ್ದರಿಂದ ಅವುಗಳನ್ನು ಒಂದೇ ಕೋಣೆಯಲ್ಲಿಟ್ಟು ಅಲ್ಲಿಯೇ ನಿಂತುಕೊಂಡು ಅಲ್ಲೇ ಕರು ಹಾಕುವುದಿಲ್ಲದೆ ಜೀವನ ಪರ್ಯಂತ ಒಂದು ಕತ್ತಲು ಕೋಣೆಯಲ್ಲಿ ಕಳೆಯತಕ್ಕಂಥ ಪರಿಸ್ಥಿತಿ, ಬೆಂಗಳೂರಿನ ಚಿಕ್ಕಪೇಟೆ ಮತ್ತು ಇನ್ನು ಇತರೇ ಜಾಗಗಳಲ್ಲಿ ಇದೆ. ಆದ್ದರಿಂದ, ತಾವು ಈಗ ಒಂದು ಜಿಲ್ಲೆಗೆ 20 ಎಕರೆ ಜಮೀನು ಕೊಟ್ಟು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ, ಇದನ್ನು ದಯಮಾಡಿ ಮುಂದುವರಿಸುವುದಕ್ಕೆ ಹೋಗಬೇಡಿ. ಒಂದು ವೇಳೆ ನೀವೇನಾದರೂ ಮುಂದುವರಿಸ ಬೇಕೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 11 ಫಾರ್ಮ್‌ಗಳಿವೆ. ನಮ್ಮಲ್ಲಿರುವ ತರಿಕೆರೆ ಮತ್ತು ಅಜ್ಜನಪುರ ಫಾರ್ಮ್ ಬಗ್ಗೆ ತಮಗೆ ತಿಳಿದಿದೆ. ಇದು ನಮ್ಮ ಅಮೃತ್ ಮಹಲ್ ಟ್ರ್ಯಾಕ್. ಇಲ್ಲಿಂದ ಹಾಸನ, ಕುಣಿಗಲ್ ಮತ್ತು ಇತರೇ ಕಡೆಯಲ್ಲ ನಮ್ಮ ಟ್ರ್ಯಾಕ್ ಇದೆ. ಆದ್ದರಿಂದ ಈ ಒಂದು ಫಾರ್ಮ್‌ಗಳನ್ನು ನಾವು ಉಳಿಸಿಕೊಂಡು ಹೋದರೆ ಈ ಒಂದು ತಳಿ ಬದುಕುತ್ತದೆ. ತಾವು ಫಾರ್ಮ್‌ನ್ನು ಅಭಿವೃದ್ಧಿ ಮಾಡಬೇಕೆಂದರೆ, ಎಲ್ಲೋ ಒಂದು ಕಡೆ ಹೋಗಿ ಫಾರ್ಮ್ ಹಾಕಿದರೆ ಬರುವುದಿಲ್ಲ. ಏಕೆಂದರೆ ಇವತ್ತಿನ ದಿವಸ ಒಂದು ಫಾರ್ಮ್‌ನ್ನು ಮಾಡಬೇಕೆಂದರೆ, ಬೆಟ್ಟ ಇರಬೇಕು ಮತ್ತೆ ಬೆಟ್ಟದ ಹಿಂದೆ ಒಂದು ಕೆರೆ ಇರಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ :- ವಾಲಂಟರಿಯಾಗಿ ಮುಂದೆ ಬರತಕ್ಕಂಥ ಸರ್ಕಾರೇತರ ಸಂಸ್ಥೆಗಳಿಗೆ ಕೆಲವು ಕಂಡಿಷನ್ ಹಾಕಿ ಲೀಜ್ ಮೇಲೆ ಲ್ಯಾಂಡ್ ಕೊಟ್ಟು ಅದನ್ನು ಅಭಿವೃದ್ಧಿಪಡಿಸುವ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ :- ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರೆ ಇದೇನು ಆಗುತ್ತದೆಂದರೆ it leads to just a land grabing process. Let me explain it.

ಡಾ: ವಿ.ಎಸ್. ಆಚಾರ್ಯ :- ಲ್ಯಾಂಡ್ ಗ್ರ್ಯಾಬಿಂಗ್ ಎಂದು ತೋರಿದರೆ ಅಥವಾ ಗೋ ತಳಿ ಅಭಿವೃದ್ಧಿಗೆ ಅದು ಉಪಯೋಗವಾಗುತ್ತಿಲ್ಲವೆಂದು ತೋರಿದರೆ 24 ಗಂಟೆಯೊಳಗೆ ರದ್ದು ಮಾಡಿ ಪಶುಸಂಗೋಪನ ಇಲಾಖೆಯವರು ಅಲ್ಲಿಗೆ ಬರುವಂಥ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ :- ಮಾನ್ಯ ಸಚಿವರೆ, ಒಂದು ಕಡೆ ಒಂದು ಕಾವಲು ಆಗಬೇಕಾದರೆ basic features are there. You cannot just give a plain land and ask them to develop the land. I am just telling . ಏಕೆಂದರೆ, ಇವತ್ತಿನ ದಿವಸ ನಮಗೆ ಜಾಗ ಎಲ್ಲಿವೆ?

ಶ್ರೀ ಬಿ.ಎಸ್. ಯಡಿಯೂರಪ್ಪ :- ನೀವು ಅದನ್ನು ತೆಗೆದು ಸರಿಯಾಗಿ ನೋಡಿಲ್ಲವೆಂದು ಕಾಣುತ್ತದೆ. ದಯಮಾಡಿ ನೋಡಿ. ಯಾವುದಾದರೊಂದು ತಾಲ್ಲೂಕು ಅಥವಾ ಜಿಲ್ಲೆಯಲ್ಲಿ ಯಾವುದಾದರೂ ವಾಲೆಂಟರಿ ಆರ್ಗನೈಜೇಷನ್ ರವರು ಈ ರೀತಿ ಮುಂದೆ ಬಂದರೆ ಅವರಿಗೆ ಕೆಲವು ಕಂಡಿಷನ್ ಮೇಲೆ ಲ್ಯಾಂಡ್ ಕೊಡುತ್ತೇವೆ. ಕಂಡಿಷನ್‌ನ್ನು ವೈಲೇಟ್ ಮಾಡಿದರೆ 25 ಗಂಟೆಯೊಳಗೆ ಅದನ್ನು ವಜಾ ಮಾಡುತ್ತೇವೆ. ಯಾರಾದರು ವಾಲೆಂಟರಿಯಾಗಿ ಮುಂದೆ ಬಂದರೆ ಕೊಡುತ್ತೇವೆ. ಇದೊಂದು ಹೊಸ ಪ್ರಯೋಗ ಈಗ ಎಲ್ಲಾ ಜಿಲ್ಲೆಯಲ್ಲಿ ಒಂದೊಂದು ಕೇಂದ್ರವೆಂದು ತೆಗೆದುಕೊಂಡಿದ್ದೇವೆ, ಮುಂದೆ ನೋಡೋಣ. ಇದಕ್ಕೆ ಸಂಬಂಧಪಟ್ಟಂತೆ ಏನಾದರು ಸಲಹೆ ಕೊಡಿ.

ಶ್ರೀ ಎಸ್.ಕುಮಾರ್ ಬಂಗಾರಪ್ಪ :- ಮಾನ್ಯ ಉಪ ಮುಖ್ಯಮಂತ್ರಿಗಳೆ, ನಾನು ಹೇಳುವುದು ಏನೆಂದರೆ, ಹೊಸ ಪ್ರಯೋಗ ಮಾಡುವುದಕ್ಕಿಂತ ಈಗಾಗಲೇ ನಮ್ಮಲ್ಲಿರತಕ್ಕಂಥ ಫಾರ್ಮ್‌ಗಳು ಅಂದರೆ ಅಮೃತ್ ಮಹಲ್ ಮತ್ತು ಹಳ್ಳಿಕಾರ್‌ತಳಿಗೆ ಸಂಬಂಧಪಟಂತೆ ಫಾರ್ಮ್‌ಗಳಿಗೆ ಹೆಚ್ಚಿನ ಫಂಡ್ಸ್ ಕೊಡಿ ಏಕೆಂದರೆ, ಈ ತಳಿಗಳನ್ನು ಎಲ್ಲಿ ಬೇಕೋ ಅಲ್ಲೆಲ್ಲ ಮಾಡುವುದಕ್ಕೆ ಆಗುವುದಿಲ್ಲ. ಇದು ತಮಗೂ ಸಹ ಗೊತ್ತಿದೆ. ಎಲ್ಲ ಕಡೆ ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೆ? ಖಂಡಿತ ಇದು ಸಾಧ್ಯವಾಗುವುದಿಲ್ಲ. ಏಕೆಂದರೆ ... ಇದೆ ಇದಕ್ಕೆ ಆದ್ದರಿಂದ ಇರತಕ್ಕಂಥ ಟ್ರ್ಯಾಕ್ ಬಿಟ್ಟು ನಾವು ಎಲ್ಲಿಗೋ ಹೋಗಿ ಇದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಈ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಮತ್ತೊಂದು ವಿಚಾರ ಹೇಳುವುದಾದರೆ....

ಶ್ರೀ ಶಿವಾನಂದ ಎಸ್.ಪಾಟೀಲ್:- ಇವತ್ತಿನ ಪ್ರಶ್ನೋತ್ತರಗಳನ್ನು ಡ್ರಾಪ್ ಮಾಡುತ್ತೀರಾ ಅಥವಾ ತೆಗೆದುಕೊಳ್ಳುತ್ತೀರಾ? ಅಥವಾ ನೆಕ್ಸ್ಟ್ ಯಾವಾಗಲಾದರು ತೆಗೆದುಕೊಳ್ಳುತ್ತೀರಾ?

ಛೇರ್ಮನ್:- ಬಹುಶ ಸೋಮವಾರ ತೆಗೆದುಕೊಳ್ಳಬಹುದು.

ಶ್ರೀ ಎಸ್.ಕುಮಾರ್ ಬಂಗಾರಪ್ಪ :- ಇವತ್ತಿನ ದಿವಸ ಪಶುಸಂಗೋಪನ ಇಲಾಖೆ ವಿಶೇಷವಾಗಿ ಹೈನುಗಾರಿಕೆ ಕೆಲಸಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿದೆ. ಈ ಒಂದು ಕ್ಷೇತ್ರದಲ್ಲಿ ಹಾಲಿನ ಉತ್ಪಾದನೆ ಮ್ಯಾಸಿವ್ ಆಗಿದೆ. ಇದರಿಂದ ಪ್ರತಿದಿವಸ ಸುಮಾರು 653 ಕೋಟಿ ರೂಪಾಯಿಗಳಷ್ಟು ಕಾಂಟ್ರಿಬ್ಯೂಷನ್ ಇದೆ. ಇವತ್ತಿನ ಅಂಕಿ-ಅಂಶಗಳ ಪ್ರಕಾರ ನಾವು ಸುಮಾರು 96 ಮಿಲಿಯನ್ ಟನ್‌ನಷ್ಟು ಹಾಲು ಉತ್ಪಾದನೆ ಮಾಡುತ್ತಿದ್ದೇವೆ. ನಮ್ಮ ದೇಶದಲ್ಲಿ ಹಾಲು ಉತ್ಪಾದನೆಯಲ್ಲಿ ಪಂಜಾಬ್ ಮೊದಲನೇ ಸ್ಥಾನದಲ್ಲಿದೆ. ನಮ್ಮ ರಾಜ್ಯ ನಾಲ್ಕನೇ ಸ್ಥಾನದಲ್ಲಿದೆ. ಬೇರೆ ಬೇರೆ ವಿಚಾರಗಳಿಗೆ ನಾನು ಡೀಟೇಲ್ ಆಗಿ ಹೋಗುವುದಿಲ್ಲ. ಏಕೆಂದರೆ ಮಾನ್ಯ ಛೇರ್ಮನ್‌ರವರು ಎರಡೆರಡು ಸಾರಿ ಈಗಾಗಲೇ ಗಂಟೆ ಹೊಡೆಯತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಈ ಸಂದರ್ಭದಲ್ಲಿ ಒಂದೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಹಾಲು ಉತ್ಪಾದನೆ ಪ್ರೋಸಸ್‌ನಲ್ಲಿ ಅಂದರೆ ಹಾಲು ಉತ್ಪಾದನೆ ಮಾಡಿ ಡೈರಿಗೆ ಹಾಕುವ ವಿಚಾರದಲ್ಲಿ ಇವತ್ತಿನ ದಿವಸ ಬಹಳ ಜನರು ಇದರ ಮೇಲೆ ಅವಲಂಬಿತರಾಗಿದ್ದಾರೆ. ಆದ್ದರಿಂದ ಇದಕ್ಕೆ ಉತ್ತಮವಾದ ಮಾರ್ಕೆಟಿಂಗ್‌ಗೆ ಹೆಚ್ಚು ವ್ಯವಸ್ಥೆ ಮಾಡಬೇಕಾಗುತ್ತದೆ. ನಮಗೆ ಫ್ಲೆಶಿಂಗ್ ಸೀಜನ್ಸ್‌ನಲ್ಲಿ ಉತ್ಪಾದನೆ ಹೈಯಸ್ಟ್ ಇರುವಾಗ ನಾವು ರೇಟ್ಸ್‌ನ್ನು ಕಂಪ್ಲೀಟ್ ಆಗಿ ಬಿಟ್ಟು ಬಿಡುತ್ತೇವೆ. ಮತ್ತೆ ಮಳೆಗಾಲ ಬಂದ ತಕ್ಷಣ ಯಾವಾಗ ಹಸಿರು

ಬರುತ್ತದೆಯೋ ಆ ಸಂದರ್ಭದಲ್ಲಿ ಅಷ್ಟೇ ಪ್ರಮಾಣದಲ್ಲಿ ಹಾಲಿನ ಪ್ರಮಾಣ ಕೂಡ ಹೆಚ್ಚಾಗುತ್ತದೆ. ಹಾಲು ಉತ್ಪಾದನೆ ಹೆಚ್ಚಾದಂಥ ಸಂದರ್ಭದಲ್ಲಿ ಬೈ ಪ್ರಾಡೆಕ್ಟ್ಸ್ ಮಾಡುವುದಕ್ಕೆ ನಮಗೆ ಯಾವುದೇ ರೀತಿಯಾದ ಅನುಕೂಲಗಳು ಫುಲ್ ಪ್ಲೆಜ್ಡ್ ಆಗಿ ಆಗಿಲ್ಲ. ಇವತ್ತಿನ ದಿವಸ ಕೆ.ಎಂ.ಎಫ್. ಒಳ್ಳೆಯ ಕೆಲಸವನ್ನು ಮಾಡುತ್ತಿದೆ. ... ಇವತ್ತು ಅಮೂಲ್ ಪ್ರಾಡ್‌ಕ್ಟ್‌ರವರು ಇಡೀ ಇಂಡಿಯಾ ದೇಶದಲ್ಲಿ ಪಾಪ್ಯುಲಾರಿಟಿ ತೆಗೆದುಕೊಂಡು ಏನೊಂದು ಉತ್ಪಾದನೆ ಮಾಡುತ್ತಿದೆಯೋ, ಆ ಮಟ್ಟದಲ್ಲಿ ನಾವು ಹೋಗಬೇಕಾದರೆ ಇದಕ್ಕೆ ಹೆಚ್ಚಿನ ಗಮನ ಕೊಡತಕ್ಕಂಥ ಅವಶ್ಯಕತೆ ಇದೆ. ನಮ್ಮ ರೈತರಿಗೆ ನೀರಾವರಿ ಸೌಲಭ್ಯ ಮತ್ತು ಕೂಲಿ ಮಾಡತಕ್ಕಂಥ ಜನರಿಗೆ ಬೇಕಾಗಿರತಕ್ಕಂಥ ಮೂಲ ಭೂತ ಸೌಕರ್ಯವನ್ನು ಯಾವ ರೀತಿ ದಿನನಿತ್ಯ ಒದಗಿಸಿಕೊಡುತ್ತಿದ್ದೇವೆಯೋ ಅದರ ಬದಲು ಹಾಲಿನಲ್ಲಿ ಉತ್ಪಾದನೆ ಮಾಡತಕ್ಕಂಥ ಬೈ ಪ್ರಾಡೆಕ್ಟ್ಸ್‌ಗೆ ಹೆಚ್ಚಿನ ಒತ್ತನ್ನು ಕೊಟ್ಟರೆ, ಇದರಿಂದ ಸಬ್ಸಿಟ್ಯೂಟ್ ಆಗುತ್ತೆ ಮತ್ತು ಅದರಿಂದ ಅನುಕೂಲವಾಗುತ್ತದೆ ಎನ್ನತಕ್ಕಂಥದನ್ನು ತಮ್ಮ ಗಮನಕ್ಕೆ ತರತಕ್ಕಂಥ ಕೆಲಸವನ್ನು ನಾನು ಮಾಡುತ್ತೇನೆ. ಮತ್ತೆ ಇದಲ್ಲದೆ, ಇವತ್ತು ನಾವು ಪ್ರೈಮರಿ ವೆಟರಿನರಿ ಸೆಂಟರ್ಸ್ ಬಗ್ಗೆ ಹೇಳುವುದಾದರೆ ಮೊನ್ನೆದಿವಸ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತಂದಿದ್ದೆವು. ಇಲ್ಲಿ ಖಾಲಿ ಹುದ್ದೆಗಳು ಜಾಸ್ತಿ ಇವೆ. ನಮ್ಮ ಹೆಲ್ತ್ ಆಸ್ಪತ್ರೆಗಳು ಆದ ಮೇಲೆ ಸನ್ಮಾನ್ಯ ನಾಗೇಗೌಡರು ಇದ್ದಂಥ ಸಂದರ್ಭದಲ್ಲಿ ಕೆಲವು ದೊಡ್ಡ ದೊಡ್ಡ ಪಾಲಿಕ್ಲಿನಿಕ್‌ಗಳನ್ನು ಪ್ರತಿಯೊಂದು ತಾಲ್ಲೂಕುಗಳಲ್ಲಿ ಮಾಡಿದ್ದಾರೆ. ನಮ್ಮಲ್ಲಿರತಕ್ಕಂಥ ಕ್ವಾಲಿಫೈಡ್ ಡಾಕ್ಟರ್ಸ್ ಪ್ರೊಫೆಸರ್ ಆಗಿರತಕ್ಕಂಥವರು. ಆದರೆ ಇವರೆಲ್ಲರನ್ನು ಬೇರೆ ಬೇರೆ ಕಡೆಗೆ ಡೆಪ್ಯುಟೇಶನ್ ಮೇಲೆ ಹಾಕಿದ್ದೇವೆ. ಈಗ ನಮ್ಮಲ್ಲಿ ಏನು ಪಾಲಿ ಕ್ಲಿನಿಕ್‌ಗಳಿವೆ ಅಲ್ಲಿ ಅನಸ್ಥಿಸೀಯಾ ಕೊಡುವುದಕ್ಕೆ ಅಥವಾ ಸರ್ಜರಿ ಮಾಡುವುದಕ್ಕೆ ಬೇಕಾಗಿರತಕ್ಕಂಥ ಅರ್ಹತೆ ಹೊಂದಿದ ಡಾಕ್ಟರ್‌ಗಳು ಅಲ್ಲಿ ಇಲ್ಲ. ಆದ್ದರಿಂದ ಬೇರೆ ಬೇರೆ ಕಡೆ ಡೆಪ್ಯುಟೇಶನ್ ಆಗಿರತಕ್ಕಂಥದ್ದನ್ನು ವಿತ್‌ಡ್ರಾ ಮಾಡಿ ಇಲಾಖೆ ಮತ್ತೆ ಪಡೆದುಕೊಂಡರೆ ಈ ಒಂದು ಸಂಸ್ಥೆಯಲ್ಲಿ ಪೂರಕವಾದಂಥ ಒಳ್ಳೆಯ ಕೆಲಸಗಳು ಆಗುತ್ತವೆ. ಇಲ್ಲದಿದ್ದರೆ ಪ್ರತಿ ಸಲವೂ ಕೂಡ ಪಿ.ವಿ.ಸಿ. ಮತ್ತು ವಿ.ಡಿ. ವಿ.ಹೆಚ್. ಸೆಂಟರ್‌ಗಳಲ್ಲಿ ಬೇರೆ ಕಾಯಿಲೆ ಬಗ್ಗೆ ನೋಡುವುದಿಲ್ಲ. ಕೇವಲ ಗರ್ಭಧಾರಣೆ ಮಾಡಿಸುವುದು ಬಿಟ್ಟರೆ ಉಳಿದ ಎಲ್ಲ ಕೆಲಸಗಳು ಅಷ್ಟಕ್ಕೆ ಅಷ್ಟೆ ಆಗಿ ಹೋಗುಬಿಡುತ್ತವೆ. ಆದ್ದರಿಂದ, ದಯಮಾಡಿ ಪಿ.ವಿ.ಸಿ. ಕಾನ್‌ಸೆಪ್ಟ್ ಏನಿದೆ ಅದನ್ನು ಬಿಟ್ಟುಬಿಡಿ. ಇದನ್ನು ಬಿಟ್ಟು ಮುಂದೆ ವೆಟರ್ನರಿ ಡಿಸ್‌ಪೆನ್ಸರಿಯಿಂದ ವೆಟರ್ನರಿ ಹಾಸ್ಪಿಟಲ್ ಕಾನ್ಸೆಪ್ಟ್ಗೆ ಹೋಗತಕ್ಕಂಥದ್ದು ಬಹಳ ಸೂಕ್ತ ಎಂದು ನಾನು ತಮಗೆ ಸಲಹೆ ಮಾಡಲು ಬಯಸುತ್ತೇನೆ. "ಬೇರೆಯವರು ಮಾತನಾಡುವುದಕ್ಕೆ ಅನುಕೂಲವಾಗಲಿ ತಾವು ಬೇಗ ಮುಗಿಸಿ ಎಂದು ನಮ್ಮ ವಿರೋಧಪಕ್ಷದ ನಾಯಕರು ಹೇಳುತ್ತಿದ್ದಾರೆ. ಸಾಕಷ್ಟು ವಿಚಾರಗಳ ಬಗ್ಗೆ ಮಾತನಾಡಬೇಕಾಗಿದ್ದರೂ ಕೂಡ ಅರಣ್ಯ ಇಲಾಖೆಗೆ ಸಂಬಂಧಪಟ್ಟಂಥ ಒಂದೇ ಒಂದು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮತ್ತೆ ಎಕ್ಸ್‌ಟೆನ್‌ಷನ್ ತೆಗೆದುಕೊಳ್ಳುವುದಿಲ್ಲ. ಈಗ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ನಮಗೆ throughut the world ನಮಗೆ ಇರತಕ್ಕಂಥದ್ದೇ ಎರಡು ಜಾಗಗಳು. ಟ್ರಾಫಿಕಲ್ ಕಂಟ್ರಿ ಆಗಿರುವಂಥದ್ದು ನಮಗೆ ಆಫ್ರಿಕಾ ಮತ್ತು ಇಂಡಿಯಾ. ಎರಡರಲ್ಲಿ ನಾವು ಟ್ರಾಫಿಕಲ್ ಫಾರೆಸ್ಟ್‌ನ್ನು ಕಾಣುತ್ತೇವೆ. ಇಡೀ ನಮ್ಮ ಪ್ರಪಂಚದಲ್ಲಿ ಏನೆಲ್ಲ ಪ್ರೊಡಕ್ಷನ್‌ನ್ನು

ಮಾಡುತ್ತೇವೆ. ಅದನ್ನು ಮತ್ತೆ ನಾವು ಸೆಟ್ ಮಾಡಿ ಬಿಟ್ಟು ಕಂಪ್ಲೀಟಾಗಿ ನಾವು ರೀಜನರೇಟ್ ಮಾಡಿಬಿಟ್ಟು ... ಮಾಡತಕ್ಕಂಥದ್ದು ಓನ್ಲಿ ಟು. ಅದರಲ್ಲಿ ಡ್ರಾಸ್ಟಿಕ್ ಆಗಿ ಟ್ರಾಫಿಕಲ್ ಕಂಟ್ರೀಸ್ ಏನಿದೆ, ಫಾರೆಸ್ಟ್ ಏನಿದೆ, ಅವು ಸಂಪೂರ್ಣವಾಗಿ ಅಲ್ಲಿಂದ ಕೈ ತಪ್ಪುವಂತಹ ಕೆಲಸವಾಗಿದೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಸೋಷಿಯಲ್ ಫಾರೆಸ್ಟ್ ಕಾನ್ಸೆಫ್ಟ್ ಬಗ್ಗೆ ನಮ್ಮ ಶ್ರೀಮತಿ ಇಂದಿರಾಗಾಂಧಿಯವರ ಕಾಲದಿಂದ ಫಾರೆಸ್ಟ್‌ನ್ನು ಜಾಸ್ತಿ ಮಾಡಬೇಕು ಎಂಬ ವಾದ ಏನು ಬಂತು, ಅಲ್ಲಿಂದ ಸೋಷಿಯಲ್ ಫಾರೆಸ್ಟಿನಲ್ಲಿ ನಾವು ಸುಮ್ಮನೆ ಅಕೇಶಿಯಾ ಹಾಕುವುದು, ಮತ್ತೊಂದು ಮಾಡುವುದನ್ನು ಮಾಡುತ್ತೇವೆ. We shoul come for word for the wild plants. ನಾವು ಸಂಪೂರ್ಣವಾಗಿ ಬೇರೆ ಬೇರೆ ತಳಿಯ, ಫಾರಸ್ಟ್‌ನ್ನು ಡೆವೆಲಪ್ ಮಾಡತಕ್ಕಂತಹ ಕೆಲಸ ಮಾಡಿದ್ದೇವೆ. ಈಗ ನಮ್ಮ ಸಮಸ್ಯೆಗಳು ಇವೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಬಗರ್ ಹುಕುಂ ಬಗ್ಗೆ ಅನೇಕ ಸಮಸ್ಯೆಗಳು ಇದ್ದಾವೆ, ಅಲ್ಲಿ ಫಾರೆಸ್ಟ್‌ನ ಸಮಸ್ಯೆಗಳು ಇವೆ, ನಾವು ಯಾರೂ ಕೂಡ ರೈತರ ಜೊತೆಗೆ ಹೊಡೆದಾಟಕ್ಕೆ ನಿಂತಿರುವುದಿಲ್ಲ. ರೈತರು ಕೂಡ ಇವತ್ತು ಅದನ್ನು ಅರ್ಥ ಮಾಡಿಕೊಂಡಿದ್ದಾರೆ. ನಾವು ಇಷ್ಟಿಷ್ಟು ಜಾಗವನ್ನು ಬಿಟ್ಟುಕೊಡುತ್ತೇವೆ. ಈ ಜಾಗದಲ್ಲಿ ನಮಗೆ ಸಾಗುವಳಿ ಮಾಡಿಕೊಳ್ಳಲು ನಮಗೆ ಅನುಕೂಲ ಮಾಡಿಕೊಡಿ. ಈಗ ಏನು ಬಗರ್‌ಹುಕುಂ ಸಮಿತಿಯನ್ನು ಮಾಡಿದ್ದೇವೆ. ಇವತ್ತು ಎಲ್ಲಿಯೂ ಕೂಡ ನಮ್ಮ ಜಿಲ್ಲೆಯಲ್ಲಿ ಕ್ರಿಮಿನಲ್ ಕೇಸ್ ಹಾಕಿರುವುದಿಲ್ಲ. ಏನು ಸುಪ್ರಿಂ ಕೋರ್ಟ್ ಜಡ್ಜ್‌ಮೆಂಟ್ ಹಾಗೂ ಫಾರೆಸ್ಟ್ ಕನ್ಸರ್‌ವೇಷನ್ ಆ್ಯಕ್ಟ್ ಬಂದ ನಂತರ ನಾವು ರೈತರನ್ನು ಏನು ಮಾಡಿರುವುದಿಲ್ಲ. ಇನ್ನು ಹಲವಾರು ವಿಚಾರಗಳು ಇದ್ದರೂ ಕೂಡ ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳದೆ, ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್: ಮಹಿಳೆಯರು ಒಬ್ಬರು ಮಾತನಾಡಿಲ್ಲ, ಶ್ರೀಮತಿ ಶಕುಂತಲಾ ಶೆಟ್ಟಿಯವರೇ ತಾವು ಮಾತನಾಡಿ.

ಒಬ್ಬ ಮಾನ್ಯ ಸದಸ್ಯರು : ಅವರು ಡೈರೆಕ್ಟಾಗಿ ಮಂತ್ರಿಗಳಿಗೆ ಸಲಹೆಯನ್ನು ಕೊಡಬಹುದು. ನಮಗೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಹೆಚ್.ಡಿ. ಬಸವರಾಜು: ಅವರದು ಮುಗಿದ ತಕ್ಷಣ ನಮಗೆ ಮಾತನಾಡಲು ಕೊಡುತ್ತೇವೆಂದು ಹೇಳಿದ್ದಿರಿ.

ಛೇರ್ಮನ್: ಶ್ರೀಮತಿ ಶಕುಂತಲಾ ಶೆಟ್ಟಿಯವರು ....

ಶ್ರೀ ಹೆಚ್.ಡಿ. ಬಸವರಾಜು: ದಯವಿಟ್ಟು ಎರಡೇ ಎರಡು ನಿಮಿಷ ಮಾತನಾಡುತ್ತೇನೆ. ಏಕೆಂದರೆ, ಬಂದವರೆಲ್ಲರು ಕೇಳುತ್ತಾರೆ, "ನಿಮ್ಮದು ಲಾಟರಿಯನ್ನು ಎತ್ತುವುದಿಲ್ಲವೆಂದು" ಕೇಳುತ್ತಾರೆ. ಆಮಟ್ಟಕ್ಕೆ ನಮ್ಮ ಪರಿಸ್ಥಿತಿ ಹೋಗಿಬಿಟ್ಟಿದೆ. ದಯವಿಟ್ಟು ನೀವು ನಮ್ಮ ರಕ್ಷಣೆಗೆ ಬರಬೇಕು. ರಕ್ಷಣೆಗೆ ತಾವು ಬರಲೇಬೇಕು. ಬಂದವರೆಲ್ಲರು ಏನು ಕೇಳುತ್ತಾರೆಂದರೆ, "ಲಾಟರಿಯನ್ನು ಎತ್ತುವುದಿಲ್ಲವೇ" ಕೇಳುತ್ತಾರೆ. ದಯವಿಟ್ಟು ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಛೇರ್ಮನ್: ಬಸವರಾಜುರವರೆ ತಾವು ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ಬಸವರಾಜು: ಅವರು ಮಾತನಾಡಿದ ನಂತರ ನನಗೆ ಅವಕಾಶವನ್ನು ಕೊಡುತ್ತೀರಾ?

ಛೇರ್ಮನ್: ಈಗ ಇಬ್ಬರು ಮಾತನಾಡಿದ್ದಾರಲ್ಲಾ ಸಾರ್. ಮಹಿಳೆಯರು ಯಾರು ಕೂಡ ಮಾತನಾಡಿರುವುದಿಲ್ಲ. ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದ್ದಾರೆ. ಅವರಿಗೂ ಕೂಡ ಅವಕಾಶವನ್ನು ಮಾಡಿಕೊಡೋಣ.

ಶ್ರೀ ಎನ್.ಧರ್ಮಸಿಂಗ್: ನಾಳೇ ಮುಂಜಾನೆ 9 ಗಂಟೆಗೆ ಅವಕಾಶವನ್ನು ಕೊಡಿ.

ಛೇರ್ಮನ್:– ಇವತ್ತು ಚರ್ಚೆ ಮುಗಿಯಬೇಕಲ್ಲವೇ?

ಶ್ರೀ ಎನ್.ಧರ್ಮಸಿಂಗ್: ಯಾರು ಪ್ರೆಸ್‌ನವರು ಇಲ್ಲಾ.

ಛೇರ್ಮನ್: ಶ್ರೀಮತಿ ಶಕುಂತಲಾ ಶೆಟ್ಟಿಯವರೇ ಮಾತನಾಡಿ.

ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಛೇರ್ಮನ್‌ರವರೆ ಅವರೆಲ್ಲಾರೂ ರೂಲಿಂಗ್ ಪಾರ್ಟಿಯ ಸದಸ್ಯರು ಮಂತ್ರಿಗಳಿಗೆ ನೇರವಾಗಿ ಸಲಹೆಯನ್ನು ಕೊಡಬಹುದು. ನಾವು ಸಲಹೆಯನ್ನು ಕೊಡುವ ಬಗ್ಗೆ ನೀವು ನಮಗೆ ಅವಕಾಶವನ್ನು ಮಾಡಿಕೊಡಬೇಕು.

ಛೇರ್ಮನ್: ಶ್ರೀಮತಿ ಶಕುಂತಲಾ ಶೆಟ್ಟಿಯವರೇ ಮಾತನಾಡಿ.

ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಂತ್ರಿಗಳು ನಮಗೆ ಪರಿಚಯವಿಲ್ಲ. ನಾವು ಅವರಿಗೆ ಅಡ್ರೆಸ್ ಕೊಡುವುದಕ್ಕಾಗುವುದಿಲ್ಲ. ನಮಗೆ ಅವರು ಪರಿಚಯವಿಲ್ಲ. ಅವರು ಬೇಕಾದರೆ ಸಲಿಗೆಯಿಂದ ಕೆಲಸ ಮಾಡಿಸಿಕೊಳ್ಳಬಹುದು.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಆಡಳಿತ ಪಕ್ಷದ ಕಡೆಯಿಂದ ಎರಡು ಜನರು ಮಾತನಾಡಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು : ನನ್ನ ಪರಿಸ್ಥಿತಿ ಏನಾಗಿದೆ ಎಂದರೆ, ನನ್ನ ಪರಿಸ್ಥಿತಿಯ ಬಗ್ಗೆ ತಾವು ಒಂದು ನಿಮಿಷ ಕೇಳಬೇಕು. ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ನಾನು ಬೇಡವೆಂದು ಹೇಳುವುದಿಲ್ಲ. ಈಗ ಆ ಕಡೆಯಿಂದ ಬಂದವರು ಕೇಳಿದರು, "ಈಗಲೂ ನೀವು ಲಾಟರಿಯನ್ನು ಎತ್ತುವುದಿಲ್ಲವೇ" ಎಂದು ಕೇಳಿದರು.

(ಗೊಂದಲ)

ಮಾನ್ಯ ಛೇರ್ಮನ್‌ರವರು ನಮ್ಮ ರಕ್ಷಣೆಗೆ ಬರಬೇಕು.

ಛೇರ್ಮನ್: ದಯಮಾಡಿ ಕುಳಿತುಕೊಳ್ಳಿ. ರಾತ್ರಿ ಲೇಟಾಗಿ ಕುಳಿತುಕೊಳ್ಳೋಣ. ಅವರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡೋಣ.

ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಅವರದು ಆದ ಮೇಲೆ ನಮಗೂ ಕೂಡ ಅವಕಾಶವನ್ನು ಮಾಡಿಕೊಡಬೇಕು. ನಾನು ಒಂದು ಸಾರಿಯೂ ಸದನದಲ್ಲಿ ಮಾತನಾಡಿರುವುದಿಲ್ಲ. ನನಗೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿರುವುದಿಲ್ಲ.

ಛೇರ್ಮನ್: ತಾವು ಪ್ರಾರಂಭಿಸಿ.

ಶ್ರೀಮತಿ ಶಕುಂತಲಾ ಶೆಟ್ಟಿ (ಪುತ್ತೂರು) : ಮಾನ್ಯ ಛೇರ್ಮನ್‌ರವರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ವಂದಿಸುತ್ತೇನೆ.

ಶ್ರೀ ಛೇರ್ಮನ್: ಆರೋಗ್ಯ ಸಚಿವರು ಒಂದು ಸ್ಪಷ್ಟೀಕರಣ ನೀಡಲು ಬಯಸುತ್ತಾರೆ.

9. ಮಂತ್ರಿಗಳ ಹೇಳಿಕೆ.

ವಿಷಯ: ಕರ್ನಾಟಕದಲ್ಲಿ ಕೋಳಿ ಜ್ವರದಿಂದ ತೊಂದರೆಯಾಗಿರುವ ಬಗ್ಗೆ.

ಶ್ರೀ ಆರ್.ಅಶೋಕ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಛೇರ್ಮನ್‌ರವರೆ, ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಕುಮಾರ ಬಂಗಾರಪ್ಪನವರು ಕೋಳಿ ಜ್ವರದ ಬಗ್ಗೆ ಪ್ರಸ್ತಾವ ಮಾಡಿದರು. ಕೋಳಿ ಜ್ವರ ಕರ್ನಾಟಕದಲ್ಲಿದೆ ಅದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿಲ್ಲ ಎಂದು ಹೇಳಿದರು. ಅದು ಪತ್ರಿಕೆಗಳಿಗೆ ನಾಳೇ ಹೋಗುವುದರಿಂದ ನಾನು ಸ್ಪಷ್ಟೀಕರಣ ನೀಡಬೇಕಾಗಿದೆ. ಬೇರೆ 5 ರಿಂದ 10 ಲಕ್ಷ ಜನರು ಇದನ್ನು ನಂಬಿಕೊಂಡಿದ್ದಾರೆ. ಅವರು ಬಹಳ ಸಂಕಷ್ಟದಲ್ಲಿದ್ದಾರೆ. ಕೋಳಿ ಮಾಂಸ 5 ರೂಪಾಯಿಗೆ ಒಂದು ಕೆಜಿ ಗೆ ಸೇಲ್ ಮಾಡಬೇಕು. ಅವರೆಲ್ಲರೂ ಆಂಧ್ರಪ್ರದೇಶದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅದು ಅಗಬಾರದು ಎಂಬ ದೃಷ್ಟಿಯಿಂದ ನಾನು ಕ್ಲಾರಿಫೈ ಮಾಡುತ್ತಿದ್ದೇನೆ.

ಶ್ರೀ ಆರ್.ವಿ.ದೇಶಪಾಂಡೆ : ಸರ್ಕಾರದವರು ಬಡ್ಡಿ ಎಲ್ಲವನ್ನು ಕಡಿಮೆ ಮಾಡಿದ್ದಾರೆ.

ಶ್ರೀ ಆರ್.ಅಶೋಕ್: ಮಾಧ್ಯಮದ ಮುಖಾಂತರ ತಪ್ಪು ಸಂದೇಶ ಈ ಸದನದಿಂದ ಹೋಗಬಾರದು. ಕರ್ನಾಟಕದಲ್ಲಿ ಆ ರೀತಿಯ ಕೋಳಿ ಜ್ವರ ಯಾವುದು ಇಲ್ಲ. ಮಾನ್ಯ ವಿರೋಧ ಪಕ್ಷಗ ನಾಯಕರಾದ ಗೌರವಾನ್ವಿತ ಧರ್ಮಸಿಂಗ್‌ರವರು ಬೆಳಿಗ್ಗೆ ಪ್ರಸ್ತಾವ ಮಾಡಿದ್ದಾರೆ. ಜೇವರ್ಗಿಯಲ್ಲಿ ಈ ರೀತಿಯ ಕೋಳಿ ಜ್ವರದ ಕಾಯಿಲೆಯಿಂದ ಸತ್ತಿದ್ದಾರೆಂದು ಹೇಳಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕೋಳಿ ಜ್ವರ ಇಲ್ಲವೆಂಬುದರ ಬಗ್ಗೆ ಪ್ರೂಫ್ ಮಾಡಬೇಕಾದರೆ ಪಬ್ಲಿಕ್‌ನಲ್ಲಿ ಹೆಲ್ತ್ ಮಿನಿಸ್ಟರ್ ತಿಂದು ತೋರಿಸಬೇಕು. ನೀವು ಕೋಳಿಯನ್ನು ತಿನ್ನುತ್ತಿರುವ ಫೋಟೋ ಬರಬೇಕು.

ಶ್ರೀ ಆರ್.ಅಶೋಕ್: ನಾನು ದಿನಾಗಲೂ ಕೋಳಿ ಮಾಂಸವನ್ನೆ ತಿನ್ನುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೋ ನೋ, ಅದನ್ನು ಪತ್ರಿಕೆಯಲ್ಲಿ ತೋರಿಸಬೇ. ಅದು ಪತ್ರಿಕೆಯಲ್ಲಿ ಬಂದರೆ ಒಳ್ಳೆಯದಾಗುತ್ತದೆ.

ಶ್ರೀ ಆರ್.ಅಶೋಕ್: ಬೇರೆ ಎಲ್ಲಾ ಕಾರ್ಯಕ್ರಮಗಳನ್ನು ಕೂಡ ಮಾಡಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಬೇರೆ ರಾಜ್ಯದಲ್ಲಿ ಕಾರ್ಯಕ್ರಮಗಳನ್ನು ಮಾಡಿದ್ದಾರೆ. ನೀವು ನೋಡಿ.

ಶ್ರೀ ಆರ್.ಅಶೋಕ್: ನಾವು ಆ ರೀತಿಯಾದ ಕಾರ್ಯಕ್ರಮಗಳನ್ನು ಮಾಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದು ನಿಮ್ಮಿಂದಲೇ ಪ್ರಾರಂಭವಾಗಲಿ. ನಿಮಗೆ ಪಬ್ಲಿಸಿಟಿ ಚೆನ್ನಾಗಿ ಬರುತ್ತದೆ.